# ಕರ್ನಾಟಕ ವಿಧಾನ ಪರಿಷತ್ತು

## ಸೋಮವಾರ, 07ನೇ ಮಾರ್ಚ್ 2011

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಮಧ್ಯಾಹ್ನ 12 ಗಂಟೆ 19 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು**

**ಪೀಠದಲ್ಲಿ ಉಪಸ್ಥಿತರಿದ್ದರು.**

**(ಈ ಹಂತದಲ್ಲಿ ವಿರೋಧ ಪಕ್ಷದ ಎಲ್ಲ ಸದಸ್ಯರು ಸದನದ ಬಾವಿಯೊಳಗೆ ಧರಣಿ ಕುಳಿತಿದ್ದರು.)**

**ಸಭಾಪತಿಯವರು:–** ವಿರೋಧ ಪಕ್ಷದ ಎಲ್ಲ ಗೌರವಾನ್ವಿತ ಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ, ಮೊದಲನೆಯದಾಗಿ ಪ್ರಶ್ನೋತ್ತರ ವೇಳೆಯನ್ನು ನಡೆಸೋಣ. ನಂತರ ತಾವುಗಳು ಏನಾದರೂ ಹೇಳುವುದಿದ್ದರೆ, ಅದಕ್ಕೆ ಖಂಡಿತವಾಗಿಯೂ ನಾನು ಅವಕಾಶವನ್ನು ನೀಡುತ್ತೇನೆ. ಪ್ರಶ್ನೋತ್ತರ ವೇಳೆ ಮುಗಿದ ನಂತರ ಬೇರೆ ವಿಷಯಗಳಿಗೆ ಹೋಗೋಣ. ಪ್ರಶ್ನೋತ್ತರದ ಗಾಂಭೀರ್ಯತೆಯನ್ನು ಕಾಪಾಡುವುದಕ್ಕಾಗಿ ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ, ದಯಮಾಡಿ ತಾವು ತಮ್ಮ ತಮ್ಮ ಸ್ಥಾನಗಳಿಗೆ ಮರಳಿ ಬನ್ನಿ, ಪ್ರಶ್ನೋತ್ತರ ವೇಳೆಯನ್ನು ಮುಗಿಸೋಣ. ನಂತರ ತಾವು ಯಾವ ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ಆಸೆಪಡುತ್ತೀರ ಅದಕ್ಕೆ ನಾನು ಅವಕಾಶವನ್ನು ನೀಡುತ್ತೇನೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಮರಳಿದರು.)**

**ಶ್ರೀ ಎಂ.ಸಿ. ನಾಣಯ್ಯ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ದಿನ ಸದನವನ್ನು ಮುಂದೂಡುವುದಕ್ಕೂ ಮೊದಲು ತಾವು ಅವಕಾಶವನ್ನು ಕೊಟ್ಟಿದ್ದೀರಿ. ಆದರೆ, ಆ ಅವಕಾಶವನ್ನು ಬಳಸಿಕೊಳ್ಳುವುದಕ್ಕೆ ಸಾಧ್ಯಾವಾಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾದ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ನಾವು ಸದನದ ಬಾವಿಗೆ ಹೋಗಬೇಕಾದಂತಹ ಪರಿಸ್ಥಿತಿ ಬಂತು. ಪ್ರಶ್ನೋತ್ತರ ಆದ ಮೇಲೆ ಚರ್ಚೆಗೆ ಅವಕಾಶವನ್ನು ನೀಡುತ್ತೇವೆಂದು ತಾವು ಮೊನ್ನೆ ಏನು ಹೇಳಿದ್ದೀರಿ ಅದನ್ನೇ ಪುನಃ ಇವತ್ತು ಹೇಳುತ್ತಿದ್ದೀರಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಸಮನ್ವಯ ಮಾಡಿಕೊಂಡು ಹೋದರೆ ಮಾತ್ರ ಪ್ರಜಾಪ್ರಭುತ್ವ ಎನ್ನುವುದಕ್ಕೆ ಅರ್ಥ ಬರುವುದು ಮತ್ತು ನಾವು ಈ ಸದನದಲ್ಲಿ ಸುಲಲಿತವಾಗಿ ಕೆಲಸ ಮಾಡಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಆ ಹಿನ್ನೆಲೆಯಲ್ಲಿ ಸ್ವಲ್ಪ

ಮಟ್ಟಿಗೆ ಅದರಲ್ಲೂ ಮಾನ್ಯ ಸಚಿವರುಗಳಿಗೆ ಮತ್ತು ಆಡಳಿತ ಪಕ್ಷದ ಸದಸ್ಯರಿಗೆ ಹೇಳುತ್ತಿದ್ದೇನೆ. ದಯವಿಟ್ಟು ಇಂತಹ ಸಂದರ್ಭಗಳು ಬಂದಾಗ, ನೀವೂ yield ಆಗಬೇಕಾಗುತ್ತದೆಯೇ ಹೊರತು, ವಿರೋಧ ಪಕ್ಷದವರು ಅಲ್ಲ. ಏಕೆಂದರೆ, ಪ್ರಜಾಪ್ರಭುತ್ವದಲ್ಲಿ ಕೆಲಸ ಮಾಡುವಂತಹ ಸಂದರ್ಭದಲ್ಲಿ ಆಡಳಿತ ಪಕ್ಷದವರ ಜವಾಬ್ದಾರಿ ಮೊದಲನೆಯದು ವಿರೋಧ ಪಕ್ಷದವರ ಜವಾಬ್ದಾರಿ ಎರಡನೆಯದು. ಇದನ್ನು ಅರಿತುಕೊಂಡು ನಾವು ಸದನದಲ್ಲಿ ಕೆಲಸ ಮಾಡಬೇಕಾಗುತ್ತದೆ. ಸನ್ಮಾನ್ಯ ಸಭಾಪತಿಯವರ ಆದೇಶಕ್ಕೆ ಗೌರವವನ್ನು ಕೊಟ್ಟು ಕೆಲಸವನ್ನು ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಲಿ ಎನ್ನುವುದು ನನ್ನ ಆಶಯವಾಗಿದೆ. ಮಾನ್ಯ ಸಭಾಪತಿಯವರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ, ನನಗೆ ನೆನಪಿರುವಂತೆ ಹಿಂದೆ, ಒಂದು ಗಂಟೆಗಳ ಕಾಲದ ಪ್ರಶ್ನೋತ್ತರ ಅವಧಿಯಲ್ಲಿ 20 ಪ್ರಶ್ನೆಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ನೀಡಲಾಗುತ್ತಿತ್ತು. ಒಂದು ಗಂಟೆಯಲ್ಲಿ 20 ಪ್ರಶ್ನೆಗಳನ್ನು ಪ್ರಸ್ತಾಪ ಮಾಡುವುದಾದರೆ, ಒಂದು ಪ್ರಶ್ನೆಗೆ ಕೇವಲ 3 ನಿಮಿಷಗಳು ಮಾತ್ರ ದೊರೆಯುತ್ತಿತ್ತು. ಪ್ರಶ್ನೆ ಕೇಳಿ ಉತ್ತರವನ್ನು ಪಡೆದುಕೊಳ್ಳುವುದಕ್ಕೆ ಈ ಸಮಯ ಸಾಕಾಗುತ್ತಿರಲಿಲ್ಲ. ಆದ್ದರಿಂದ "Question Hour" ಎನ್ನುವುದನ್ನು "Question Hours" ಎಂದು ಮಾಡಬೇಕಾಯಿತು. "Question Hours" ಎನ್ನುವುದು ಸರಿಯಲ್ಲ ಎಂದು ಹಿರಿಯರೆಲ್ಲರೂ ಕುಳಿತುಕೊಂಡು ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಪ್ರಶ್ನೆಗಳ ಸಂಖ್ಯೆಯನ್ನು 15ಕ್ಕೆ ಇಳಿಸಿದರೆ ಒಂದು ಪ್ರಶ್ನೆಗೆ 4 ನಿಮಿಷಗಳ ಕಾಲಾವಕಾಶ ದೊರೆಯುತ್ತದೆ ಎನ್ನುವ ಹಿನ್ನೆಲೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ 15 ಚುಕ್ಕೆ ಗುರುತಿನ ಪ್ರಶ್ನೆಗಳನ್ನು ಸದನದಲ್ಲಿ ಉತ್ತರಿಸಲು ತೆಗೆದುಕೊಳ್ಳಬೇಕೆನ್ನುವ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಒಂದು ಗಂಟೆಯ ಅವಧಿಯಲ್ಲಿ 15 ಪ್ರಶ್ನೆಗಳನ್ನು ಚರ್ಚೆಗೆ ತೆಗೆದುಕೊಳ್ಳಬಹುದು ಎನ್ನುವುದನ್ನು ಬಹಳಷ್ಟು ಬಾರಿ ಮಾಡಿ ತೋರಿಸಿದ್ದೇವೆ. ಬಹಳಷ್ಟು ಬಾರಿ ಮೊದಲು ಪ್ರಶ್ನೆಯನ್ನು ಕೇಳಿದಂತಹ

ಸದಸ್ಯರಿಗೆ ಸ್ವಲ್ಪ ಹೆಚ್ಚು ಸಮಯಾವಕಾಶ ದೊರೆಯುತ್ತದೆ. ಏಕೆಂದರೆ, ಬೇರೆ ಸದಸ್ಯರು ಮಧ್ಯೆ ಬಾಯಿ ಹಾಕಿ ಉಪ ಪ್ರಶ್ನೆಗಳನ್ನು ಕೇಳುವುದರಿಂದ 4 ನಿಮಿಷಗಳಿಗಿಂತ ಹೆಚ್ಚು ಸಮಯ ಬೇಕಾಗುತ್ತದೆ. ಆದರೆ, ಕೊನೆಯಲ್ಲಿ ಬರುವಂತಹ ಪ್ರಶ್ನೆಗಳನ್ನು ಕೇಳುವಂತಹ ಸದಸ್ಯರಿಗೆ ಸಮಯದ ಅಭಾವದಿಂದ ನಾನು ಅನಿವಾರ್ಯವಾಗಿ 'ಸಮಯವಾಗಿದೆ' ಎಂದು ಹೇಳಲೇ ಬೇಕಾಗುತ್ತದೆ. ನಾನು ಆ ರೀತಿ ಹೇಳಿದಾಗ ಸ್ವಾಭಾವಿಕವಾಗಿ ಆ ಸದಸ್ಯರ ಮನಸ್ಸಿಗೆ ನೋವು ಉಂಟಾಗುತ್ತದೆ. ಇಂತಹ ಹಲವಾರು ಘಟನೆಗಳು ನಮ್ಮ ಸದನದಲ್ಲಿ  ನಡೆದಿವೆ. ಅದಕ್ಕಾಗಿ ನಾನು ಮತ್ತೊಮ್ಮೆ ಮಾನ್ಯ ಸದಸ್ಯರಲ್ಲಿ ವಿನಂತಿಸುತ್ತೇನೆ, 4 ನಿಮಿಷದೊಳಗೆ ಒಂದು ಪ್ರಶ್ನೆ ಮುಗಿಯಬೇಕು. ದಯವಿಟ್ಟು ಸಮಯದ ಕಡೆಗೆ ಗಮನವನ್ನು ನೀಡಿ. ಪ್ರತಿ ಪ್ರಶ್ನೆಗಳಿಗೆ ತೆಗೆದುಕೊಳ್ಳಲಾಗುವ ಕಾಲವನ್ನು ನಾನು ಗಂಟೆ ನೋಡಿ ಸಮಯವನ್ನು ನಮೂದು ಮಾಡಿಕೊಳ್ಳುತ್ತಿದ್ದೇನೆ. ಒಂದು ಪ್ರಶ್ನೆಯನ್ನು ಕೇಳಿ ಸಚಿವರಿಂದ ಉತ್ತರವನ್ನು ಪಡೆದುಕೊಳ್ಳುವುದಕ್ಕೆ 4 ನಿಮಿಷಗಳವರೆಗೆ ಅವಕಾಶವನ್ನು ನೀಡುತ್ತೇನೆ. ಹಾಗೆಯೇ ಸಚಿವರು ಸಹ ವಿಷಯಕ್ಕೆ ಸಂಬಂಧ ಪಟ್ಟಿರುವ ಮಾಹಿತಿಗಳನ್ನು ಮಾತ್ರ ನೀಡಿದರೆ ಒಳ್ಳೆಯದಾಗುತ್ತದೆ. ಉತ್ತರವನ್ನು ಬಹಳ ಉದ್ದವಾಗಿ ನೀಡಿದರೆ ಸಮಯ ಹೆಚ್ಚು ಬೇಕಾಗುತ್ತದೆ. ಮೊನ್ನೆ ಮಾನ್ಯ ಮರಿತಿಬ್ಬೇಗೌಡರ ಪ್ರಶ್ನೆಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೇ ಇರುವಾಗ, ಮಾನ್ಯ ಮರಿತಿಬ್ಬೇಗೌಡರು, 'ನಾನು ಏನು ತಪ್ಪು ಮಾಡಿದ್ದೆ? ನಾನೇನು ತಪ್ಪು ಮಾಡದೇ ಇದ್ದರೂ ಸಹ ನನ್ನ ಪ್ರಶ್ನೆಗೆ ಸರ್ಕಾರದಿಂದ ಸದನದಲ್ಲಿ ಉತ್ತರ ದೊರೆಯದೇ ಹೋಯಿತು' ಎಂದು  ಹೇಳಿದರು. ನಿಜ, ಅವರು ಯಾವ ತಪ್ಪೂ ಮಾಡಲಿಲ್ಲ. ಆದರೂ, ಸಹ ಅವರು ಪ್ರಶ್ನೆಯನ್ನು ಕೇಳುವುದಕ್ಕೆ ಸಮಯಾವಕಾಶ ದೊರೆಯಲಿಲ್ಲ. ಆದ್ದರಿಂದ ಎಲ್ಲರೂ ಈ ನಿಟ್ಟಿನಲ್ಲಿ ಸಹಕರಿಸಬೇಕೆಂದು ಹೇಳುತ್ತಾ, ಪ್ರಶ್ನೋತ್ತರ ವೇಳೆಯನ್ನು ಪ್ರಾರಂಭ ಮಾಡುತ್ತಿದ್ದೇನೆ.

# 1. ಪ್ರಶ್ನೋತ್ತರಗಳು

## (ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

### ವಕ್ಫ್ ಡೆವಲಪ್‌ಮೆಂಟ್ ಕೌನ್ಸಿಲ್ ಕುರಿತು

**563; ಶ್ರೀ ಖಾಜಿ ಅರಶದ ಆಲಿ (ವಿಧಾನಸಭಾ ಕ್ಷೇತ್ರ)**

**ಅ)** ರಾಜ್ಯದ ವಕ್ಫ್ ಆಸ್ತಿಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶಕ್ಕಾಗಿ ರಚಿಸಲಾದ ವಕ್ಫ್ ಅಭಿವೃದ್ಧಿ ಕೌನ್ಸಿಲ್, ಕಾರ್ಯ ಪ್ರವೃತ್ತವಾಗಿದೆಯೇ;

**ಆ)** ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಈ ಕೌನ್ಸಿಲ್ ವತಿಯಿಂದ ನೀಡಲಾದ ಸಾಲದ ಮೊತ್ತ. ಎಷ್ಟು? (ವರ್ಷಾವಾರು, ಜಿಲ್ಲಾವಾರು ವಿವರ ನೀಡುವುದು)

**ಪ್ರೋ: ಡಾ॥ ಮಮ್ತಾಜ್ ಆಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)**

**ಅ)** ಹೌದು.

**ಆ)** ಅನುಬಂಧದಲ್ಲಿ ಲಗತ್ತಿಸಿದೆ.

**ಅನುಬಂಧ**

**₹. ಲಕ್ಷಗಳಲ್ಲಿ**

| ಕ್ರ. ಸಂ | ಜಿಲ್ಲೆಯ ಹೆಸರು | 2008–09 ರಲ್ಲಿ ಬಿಡುಗಡೆಯಾದ ಮೊತ್ತ | 2009–10 ರಲ್ಲಿ ಬಿಡುಗಡೆಯಾದ ಮೊತ್ತ | 2010–11 ರಲ್ಲಿ ಬಿಡುಗಡೆಯಾದ ಮೊತ್ತ |
|---|---|---|---|---|
| 1 | ಬೆಂಗಳೂರು ನಗರ | – | – | 32.50 |
| 2 | ಬೆಂಗಳೂರು ಗ್ರಾಮಾಂತರ | – | – | 10.00 |
| 3 | ಬೆಳಗಾಂ | 10.00 | 30.00 | 10.00 |

| | | | | |
|---|---|---|---|---|
| 4 | ಬಳ್ಳಾರಿ | 3.25 | – | – |
| 5 | ಬಿಜಾಪುರ | 30.70 | 130.65 | 150.50 |
| 6 | ಬಾಗಲಕೋಟೆ | 5.00 | – | 15.00 |
| 7 | ಚಿಕ್ಕಬಳ್ಳಾಪುರ | – | – | 25.00 |
| 8 | ಚಿಕ್ಕಮಗಳೂರು | 47.50 | 38.50 | – |
| 9 | ಚಿತ್ರದುರ್ಗಾ | 5.00 | 5.00 | 10.00 |
| 10 | ಚಾಮರಾಜ ನಗರ | 5.00 | 5.00 | – |
| 11 | ದಕ್ಷಿಣ ಕನ್ನಡ | 10.00 | – | 10.00 |
| 12 | ಧಾರವಾಡ | – | 20.00 | – |
| 13 | ದಾವಣಗೆರೆ | 16.00 | – | 32.00 |
| 14 | ಗುಲ್ಬರ್ಗಾ | 22.50 | 20.00 | – |
| 15 | ಗದಗ್ | 15.00 | 30.00 | 15.00 |
| 16 | ಹಾವೇರಿ | 5.00 | 5.00 | – |
| 17 | ಕೋಲಾರ | 15.00 | 5.00 | 10.00 |
| 18 | ಮಂಡ್ಯ | – | – | 5.00 |
| 19 | ಮೈಸೂರು | 4.50 | 15.00 | 25.00 |
| 20 | ರಾಯಚೂರು | 5.00 | 5.00 | 5.00 |
| 21 | ಶಿವಮೊಗ್ಗ | 10.00 | – | – |
| 22 | ಉತ್ತರ ಕನ್ನಡ | 18.00 | 15.00 | 30.00 |
| **ಒಟ್ಟು** | | **227.45** | **324.15** | **385.00** |

**ಶ್ರೀ ಖಾಜಿ ಅರಶದ ಅಲಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದ ವಕ್ಫ್ ಅಭಿವೃದ್ಧಿ ಕೌನ್ಸಿಲ್ ಸರಿಯಾಗಿ ಕಾರ್ಯಪ್ರವೃತ್ತವಾಗಿದೆಯೇ ಎನ್ನುವಂತಹ ನನ್ನ ಪ್ರಶ್ನೆಗೆ **'ಹೌದು'** ಎನ್ನುವಂತಹ ಉತ್ತರವನ್ನು ನೀಡಿದ್ದಾರೆ. ಆದರೆ, ನನಗೆ ತಿಳಿದ ಮಟ್ಟಿಗೆ ಈ ಕೌನ್ಸಿಲ್ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಕಳೆದ ಮೂರು ವರ್ಷಗಳಲ್ಲಿ ಈ ಕೌನ್ಸಿಲ್ ವತಿಯಿಂದ ನೀಡಲಾಗಿರುವಂತಹ ಸಾಲದ ಮೊತ್ತವೆಷ್ಟು? ಜಿಲ್ಲಾವಾರು ವಿವರವನ್ನು ನೀಡುವುದು ಎನ್ನುವಂತಹ ನನ್ನ ಪ್ರಶ್ನೆಗೆ 22

ಜಿಲ್ಲೆಗಳ ವಿವರಗಳನ್ನು ಮಾತ್ರ ಕೊಟ್ಟಿದ್ದಾರೆ. ಬೀದರ್ ಜಿಲ್ಲೆ ಮತ್ತು ಉಳಿದಿರುವಂತಹ 8 ಜಿಲ್ಲೆಗಳ ಮಾಹಿತಿಯನ್ನು ನೀಡಿಲ್ಲ,. ಏತಕ್ಕಾಗಿ ಆ 8 ಜಿಲ್ಲೆಗಳ ಮಾಹಿತಿಯನ್ನು ನೀಡಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಮಾನ್ಯ ಸಚಿವರು ಅದಕ್ಕೆ ಉತ್ತರವನ್ನು ನೀಡಬೇಕಾಗಿದೆ.

**ಡಾ: ಮುಮ್ತಾಜ್ ಅಲಿ ಖಾನ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಸರಿಯಾಗಿ ಮಾಹಿತಿ ದೊರೆತಿಲ್ಲವೆಂದು ಕಾಣುತ್ತಿದೆ. ವಕ್ಫ್ ಅಭಿವೃದ್ಧಿ ಕೌನ್ಸಿಲ್ ಸರಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿಲ್ಲ ಎನ್ನುವಂತಹ ಮಾತನ್ನು ಸಹ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಆದರೆ, ವಕ್ಫ್ ಅಭಿವೃದ್ಧಿ ಕೌನ್ಸಿಲ್ ಸಮರ್ಪಕವಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ಅದಕ್ಕೆ ನಾನು ಅಧ್ಯಕ್ಷನಾಗಿದ್ದೇನೆ ಮತ್ತು 10 ಜನ ಸದಸ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ ಕನಿಷ್ಠ ಪಕ್ಷ ಮೂರು ತಿಂಗಳಿನಲ್ಲಿ ಒಮ್ಮೆಯಾದರೂ ಸಭೆ ಸೇರುತ್ತಿದ್ದೇವೆ. ಉತ್ತಮವಾದ ರೀತಿಯಲ್ಲಿ ಕೌನ್ಸಿಲ್ ಕಾರ್ಯವನ್ನು ನಿರ್ವಹಿಸುತ್ತಿದೆ. ಬೀದರ್ ಹಾಗೂ ಉಳಿದಿರುವ ಜಿಲ್ಲೆಗಳ ಮಾಹಿತಿ ಇದರಲ್ಲಿ ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅನೇಕ ಬಾರಿ ವರದಿಗಳನ್ನು ಕೊಡುವುದಿಲ್ಲ ಅದರಿಂದಾಗಿ ನಮಗೆ ಅವುಗಳ ಮಾಹಿತಿ ಬರುವುದಿಲ್ಲ. ಯಾರು ಕೇಳುತ್ತಾರೆ ಅವರಿಗೆ ಖಂಡಿತವಾಗಿ ಸಾಲವನ್ನು ಕೋಡುತ್ತಿದ್ದೇವೆ.

**ಶ್ರೀ ಖಾಜಿ ಅರಶದ ಅಲಿ:–** ಸನ್ಮಾನ್ಯ ಸಬಾಪತಿಯವರೇ, ಕೌನ್ಸಿಲ್ ವತಿಯಿಂದ 22 ಜಿಲ್ಲೆಗಳಿಗೆ ನೀಡಲಾಗಿರುವ ಸಾಲದ ಮೊತ್ತದ ವಿವರಗಳನ್ನು ನೀಡಿದ್ದಾರೆ. ಆದರೆ ಉಳಿದ 8 ಜಿಲ್ಲೆಗಳ ವಿವರಗಳನ್ನು ನೀಡಿಲ್ಲ. ಏತಕ್ಕಾಗಿ ಆ 8 ಜಿಲ್ಲೆಗಳ ಮಾಹಿತಿಯನ್ನು ನೀಡಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಡಾ: ಮುಮ್ತಾಜ್ ಅಲಿ ಖಾನ್:–** ಸನ್ಮಾನ್ಯ ಸಭಾಪತಿಯವರೇ, ವಕ್ಫ್ ಅಭಿವೃದ್ಧಿ ಕೌನ್ಸಿಲ್‌ನಿಂದ ನಾವು ಸಾಲವನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ. ಆದರೆ, ಅವರು ಮುಂದೆ ಬರಬೇಕಾಗಿದೆ. ಯಾವ ಜಿಲ್ಲೆಗೂ ನಾವು ಸಾಲ ಇಲ್ಲವೆಂದು ಹೇಳಿಲ್ಲ. ಯಾರು ದಾಖಲೆಗಳನ್ನು ಕೊಟ್ಟಿದ್ದಾರೆ, ಅವರಿಗೆ ಸಾಲವನ್ನು ಕೊಟ್ಟಿದ್ದೇವೆ. ಅವರು ಸುಮ್ಮನೆ ಮನೆಯಲ್ಲಿ ಕುಳಿತುಕೊಂಡರೆ

ನಾವು ಆಹ್ವಾನವನ್ನು ಕಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಮುಂದೆ ಬಂದರೆ ನಾವು ಸಾಲವನ್ನು ಕೊಡುತ್ತೇವೆ.

**ರಾಜ್ಯದಲ್ಲಿನ ಬಂದಿಖಾನೆಗಳ ಬಗ್ಗೆ**

**704; ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ)**

**1)** ರಾಜ್ಯದಲ್ಲಿರುವ ಬಂದೀಖಾನೆಗಳ ಸಂಖ್ಯೆ ಎಷ್ಟು; ಇವುಗಳಲ್ಲಿರುವ ವಿಚಾರಣಾದೀನ ಖೈದಿಗಳು ಮತ್ತು ಶಿಕ್ಷೆ ಅನುಭವಿಸುತ್ತಿರುವ ಖೈದಿಗಳ ಸಂಖ್ಯೆ ಎಷ್ಟು;

**2)** ಸದರಿ ಬಂದೀಖಾನೆಗಳ ವಿಸ್ತೀರ್ಣ ಎಷ್ಟು; ಸದರಿ ಬಂದೀಖಾನೆಗಳಲ್ಲಿ ಸ್ಥಳಾವಕಾಶದ ಕೊರತೆ ಇದೆಯೇ; ಇದ್ದಲ್ಲಿ ಎಷ್ಟು ಬಂದೀಖಾನೆಗಳಲ್ಲಿ ಕೊರತೆ ಇದೆ; (ವಿವರ ನೀಡುವುದು)

**3)** ಪ್ರತಿ ಬಂದೀಖಾನೆಯಲ್ಲಿರುವ ಹೆಚ್ಚುವರಿ ಖೈದಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

**ಶ್ರೀ ಎ. ನಾರಾಯಣ ಸ್ವಾಮಿ (ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು)**

**1)** ರಾಜ್ಯದಲ್ಲಿರುವ ಒಟ್ಟು 102 ಬಂದೀಖಾನೆಗಳಿವೆ. ಇವುಗಳಲ್ಲಿ ದಿನಾಂಕ: 31.01.2011 ರಲ್ಲಿದ್ದಂತೆ 8503 ವಿಚಾರಣಾಧೀನ ಖೈದಿಗಳು ಮತ್ತು 3824 ಶಿಕ್ಷಾ ಖೈದಿಗಳು ಹಾಗೂ 195 ಇತರೆ ಬಂದಿಗಳು (ಕಾಪಿಪೋಸಾ, ಎನ್‌ಡಿಪಿಎಸ್, ಸಿವಿಲ್) ಇರುತ್ತಾರೆ.

**2)** ಬಂದೀಖಾನೆಗಳ ವಿಸ್ತೀರ್ಣವನ್ನು ಒಳಗೊಂಡ ಬಂದೀಖಾನೆವಾರು ಮಾಹಿತಿಯನ್ನು ಅನುಬಂಧ–'ಎ' ರಲ್ಲಿ ನೀಡಿದೆ.

ಬಂದೀಖಾನೆಗಳಲ್ಲಿ ಸ್ಥಳಾವಕಾಶ ಕೊರತೆ ಇದೆ. ರಾಜ್ಯದ 7 ಬಂದೀಖಾನೆಗಳಲ್ಲಿ ಸ್ಥಳಾವಕಾಶದ ಕೊರತೆ ಇರುತ್ತದೆ. ವಿವರಗಳನ್ನು ಅನುಬಂಧ–'ಬಿ' ರಲ್ಲಿ ನೀಡಿದೆ.

**3)** ಪ್ರತಿ ಬಂದೀಖಾನೆಯಲ್ಲಿರುವ ಹೆಚ್ಚುವರಿ ಖೈದಿಗಳ ಸಂಖ್ಯೆಯ ಮಾಹಿತಿಯನ್ನು ಅನುಬಂಧ–'ಸಿ' ರಲ್ಲಿ ನೀಡಿದೆ.

ANNEXURE- A

TOTAL AREA OF THE JAIL BUILDINGS OF KARNATAKA

| Sl. No. | District | Name of the Jail | Type of Jail | 1 Year of establish-ment | 2 Jail Buildings | | 3 Staff Quarters | | 4 Garden | | 5 Vacant Land | | 6 Total Area | |
|---|---|---|---|---|---|---|---|---|---|---|---|---|---|---|
| | | | | | A | G | A | G | A | G | A | G | A | G |
| 1 | Bangalore District | | | | | | | | | | | | | |
| 1 | | C.P. Bangalore | Central Prison | 2001 | 39 | 00 | 45 | 0 | 12 | 00 | 34 | 28 | 130 | 28 |
| 2 | | OAJ Koramangala | Open Air Jail | 1971 | 01 | 00 | 02 | 25 | 100 | 00 | 10 | 0 | 113 | 25 |
| 2 | Belgaum District | | | | | | | | | | | | | |
| 1 | | C.P. Belgaum | Central Prison | 1923 | 22 | 38 | 25 | 07 | 23 | 00 | 28 | 00 | 99 | 15 |
| 2 | | Subjail Bailahongal | Taluka Sub Jail | 1987 | 06.4 | 00 | 4.18 | - | - | 5 | 7.54 | 0 | 14 | 07 |
| 3 | | Subjail Gokak | Taluka Sub Jail | 1967 | 01 | 24 | 00 | 31 | 02 | 09 | 00 | 22 | 5 | 06 |
| 3 | Gulbarga District | | | | | | | | | | | | | |
| 1 | | C.P. Gulbarga | Central Prison | 1969 | 23 | 26 | 35 | 24 | 63 | 06 | - | - | 122 | 26 |
| 2 | | Subjail Aland | Taluka Sub Jail | 1991 | 01 | 6 | 01 | 36 | - | - | 01 | 2 | 04 | 02 |
| 3 | | Sub Jail Yadgir | Taluka Sub Jail | 1941 | 0 | 129 sq.mts | 0 | 100 sq.mt. | 0 | 278 sq.mt | 0 | 0 | 0 | 507 sq.mtr |
| 4 | | Sub Jail Shorapur | Taluka Sub Jail | 1967 | 0 | 9215 | 0 | 8550 sq.ft | 0 | 0 | 0 | 0 | 0 | 17765 sq.ft |
| 4 | Bellary District | | | | | | | | | | | | | |
| 1 | | C.P. Bellary | Central Prison | 1884 | 16 | 25 | 22 | 33 | 22 | 01 | - | - | 61 | 19 |
| 2 | | Subjail Hospet | Taluka Sub Jail | 1921 | 00 | 11 | 00 | 9 | 00 | 43 | - | 0 | 1 | 23 |
| 3 | | Sub Jail Hadgali | Taluka Sub Jail | 2005 | 0 | 9 | 0 | 3 | 1 | 84 cents | 0 | 28 | 2 | 84 cents |
| 5 | Mysore District | | | | | | | | | | | | | |
| 1 | | C.P. Mysore | Central Prison | 1862 | 05 | 05 | 01 | 10 | 04 | 20 | 10 | 15 | 21 | 10 |
| 2 | | Sub Jail K.R. Nagar | Taluka Sub Jail | 1993 | 0 | 46 | 0 | 30 | 0 | 0 | 1 | 35 | 3 | 31 |
| 3 | | Sub Jail Nanjangud | Taluka Sub Jail | 2003 | 0 | 10523sft | 0 | 0 | 0 | 0 | 0 | 0 | 2 | 0 |
| 6 | Bijapur District | | | | | | | | | | | | | |
| | | C.P. Bijapur | central prison | 1593 | 05 | 00 | 08 | 00 | 32 | 02 | 10 | 08 | 55 | 10 |

| Sl. No. | District | Name of the Jail | Type of Jail | Date of establish-ment | Jail Buildings | | Staff Quarters | | Garden | | Vacant Land | | Total | |
|---|---|---|---|---|---|---|---|---|---|---|---|---|---|---|
| | | | | | A | G | A | G | A | G | A | G | A | G |
| 7 | Dharwad District | | | | | | | | | | | | | |
| 1 | | C.P. Dharwad | Central Prison | 1858 | 19 | 20 | 10 | 00 | 20 | 00 | 16 | 00 | 65 | 20 |
| 2 | | Subjail Hubli | Taluka Sub Jail | 1964 | 01 | 20 | 00 | 22 | 00 | 00 | 2 | 38 | 5 | 00 |
| | | | | | | | | | | | | | | |
| | | | | | | | | | | | | | | |
| 8 | Uttar kannada District | | | | | | | | | | | | | |
| 1 | | D.P. Karwar | District Prison | 1874 | 03 | 07 | 03 | 34 | 04 | 18 | - | - | 11 | 19 |
| 2 | | Sub Jail Yellapur | Taluka Sub Jail | 1853 | 0 | 0 | 0 | 0 | 0 | 0 | 0 | 0 | 0 | Revenue Land |
| 9 | Shimoga District | | | | | | | | | | | | | |
| 1 | | D.P. Shimoga | District Prison | 1872 | 04 | 20 | 01 | 30 | 37 | 18 | 02 | 25 | 46 | 13 |
| 2 | | Sub Jail Sagar | Taluka Sub Jail | 1940 | 2 | 20 | 0 | 08 | 0 | 16 | 0 | 0 | 3 | 4 |
| 10 | Raichur District | | | | | | | | | | | | | |
| 1 | | D.P. Raichur | District Prison | 1938 | 01 | 30 | 02 | 08 | - | - | 01 | 12 | 05 | 10 |
| 2 | | Subjail Deodurga | Taluka Sub Jail | 1962 | 00 | 12 | 02 | 07 | - | - | - | 0 | 02 | 19 |
| 3 | | Subjail Gangavathi | Taluka Sub Jail | 1938 | 00 | 729.14 sq.m | 00 | 00 | 00 | 0 | 00 | 0 | 0 | 729.14 |
| 4 | | Sub Jail Lingasugur | Taluka Sub Jail | 1967 | 1 | 06 | 2 | 13 | 0 | 0 | 0 | 22 | 4 | 01 |
| 5 | | Sub Jail Manvi | Taluka Sub Jail | 1919 | 0 | 2100 | 2 | 24 | 0 | 0 | 1 | 16 | 4 | 00+2100 sq.ft |
| 11 | Mangalore District | | | | | | | | | | | | | |
| | | D.P. Mangalore | District Prison | 1850 | 04 | 17s | 02 | 86s | 00 | 27s | 04 | 40 | 11 | 70s |
| 12 | Bidar District | | | | | | | | | | | | | |
| 1 | | D.P. Bidar | District Prison | 1920 | 01 | 32 | 04 | 17 | 04 | 30 | 02 | 34.5 | 13 | 33.5 |
| 2 | | Subjail Aurad | Taluka Sub Jail | 1993 | 02 | 00 | 00 | 16 | - | - | - | - | 02 | 16 |
| 3 | | Subjail Humnabad | Taluka Sub Jail | 1961 | 00 | 12 | 00 | 00 | 00 | 00 | 00 | 08 | 00 | 0.20 |
| 13 | KODAGU District | | | | | | | | | | | | | |
| 1 | | D.P. Madikeri | district Prison | 1871 | 01 | 49s | 00 | 42s | 00 | 16s | 03 | 16 | 05 | 07s |
| 2 | | Sub Jail Virajpet | Taluka Sub Jail | 1958 | 0 | 485 sq.mts | 0 | 0.60 sents | 0 | 0 | 0 | 0 | 0 | sq.mts 0.60 sents |

| Sl. No. | District | Name of the Jail | Type of Jail | establish-ment | Jail Buildings | | Staff Quarters | | Garden | | Vacant Land | | Total | |
|---|---|---|---|---|---|---|---|---|---|---|---|---|---|---|
| | | | | | A | G | A | G | A | G | A | G | A | G |
| 14 | Chitradurga District | | | | | | | | | | | | | |
| | | D.P.Chitradurga | District Prison | 2007 | 03 | 37 | 01 | 10 | - | - | 14 | 09 | 19 | 16 |
| 15 | Chamarajnagar District | | | | | | | | | | | | | |
| 1 | | D.P. Chamrajnagar | District Prison | 2005 | 00 | 38 | 00 | 20 | - | - | 00 | 20 | 01 | 38 |
| 2 | | Sub Jail Kollegal | Taluka Sub Jail | 1896 | 0 | 928 | 0 | 0 | 0 | 0 | 0 | 0 | 0 | 928 sq.ft |
| 16 | Chikballpur District | | | | | | | | | | | | | |
| 1 | | D.P. Chikballapur | District Prison | 1919 | 1644 sft | 00 | 00 | 00 | 00 | 00 | 00 | 0 | - | 1644 sft |
| 2 | | Subjail Chintamani | Taluka Sub Jail | 2009 | | | | | | | | | 02 | 01 |
| 17 | Ramanagar District | | | | | | | | | | | | | |
| | | D.P. Ramnagar | District Prison | 1783 | 2 | 27 sft | 0 | 0 | 0 | 0 | 0 | 0 | 2 | 27 |
| 18 | Tumkur District | | | | | | | | | | | | | |
| 1 | | D.P.Tumkur (new) | District Prison | 2008 | 03 | 00 | - | - | - | - | 06 | 20 | 09 | 20 |
| 2 | | Sub Jail Tipatur | Taluka Sub Jail | 1900 | 0 | 2136.03 sft | 0 | 20 | 0 | 0 | 0 | 5277 sq.ft | - | 7413.03 sft+20G |
| 19 | Bagalkote District | | | | | | | | | | | | | |
| 1 | | D.P. Bagalkot | District Prison | 2006 | 04 | 00 | 04 | 00 | 02 | 00 | - | - | 10 | 00 |
| 2 | | Subjail Badami | Taluka Sub Jail | 1904 | 5 Rooms | 00 | 00 | 25 | - | - | 01 | 8 | 01 | 33 |
| 3 | | Subjail Jamakhandi | Taluka Sub Jail | 2009 | | | | | | | | | 04 | 12 |
| 20 | Haveri District | | | | | | | | | | | | | |
| | | D.P. Haveri | District Prison | 2008 | | | | | | | | | 15 | 00 |
| 21 | Udupi District | | | | | | | | | | | | | |
| 1 | | D.P. Udupi | District Prison | 2009 | | | | | | | | | 15 | 00 |
| 22 | Koppal District | | | | | | | | | | | | | |
| 1 | | D.P. Koppal | District Prison | 2009 | | | | | | | | | 4 | 04 |

| Sl. No. | District | Name of the Jail | Type of Jail | Date of establish-ment | Jail Buildings | | Staff Quarters | | Garden | | Vacant Land | | Total | |
|---|---|---|---|---|---|---|---|---|---|---|---|---|---|---|
| | | | | | A | G | A | G | A | G | A | G | A | G |
| 7 | **Dharwad District** | | | | | | | | | | | | | |
| 1 | | C.P. Dharwad | Central Prison | 1858 | 19 | 20 | 10 | 00 | 20 | 00 | 16 | 00 | 65 | 20 |
| 2 | | Subjail Hubli | Taluka Sub Jail | 1964 | 01 | 20 | 00 | 22 | 00 | 00 | 2 | 38 | 5 | 00 |
| | | | | | | | | | | | | | | |
| | | | | | | | | | | | | | | |
| 8 | **Uttar kannada District** | | | | | | | | | | | | | |
| 1 | | D.P. Karwar | District Prison | 1874 | 03 | 07 | 03 | 34 | 04 | 18 | - | - | 11 | 19 |
| 2 | | Sub Jail Yellapur | Taluka Sub Jail | 1853 | 0 | 0 | 0 | 0 | 0 | 0 | 0 | 0 | 0 | Revenue Land |
| 9 | **Shimoga District** | | | | | | | | | | | | | |
| 1 | | D.P. Shimoga | District Prison | 1872 | 04 | 20 | 01 | 30 | 37 | 18 | 02 | 25 | 46 | 13 |
| 2 | | Sub Jail Sagar | Taluka Sub Jail | 1940 | 2 | 20 | 0 | 08 | 0 | 16 | 0 | 0 | 3 | 4 |
| 10 | **Raichur District** | | | | | | | | | | | | | |
| 1 | | D.P. Raichur | District Prison | 1938 | 01 | 30 | 02 | 08 | - | - | 01 | 12 | 05 | 10 |
| 2 | | Subjail Deodurga | Taluka Sub Jail | 1962 | 00 | 12 | 02 | 07 | - | - | - | 0 | 02 | 19 |
| 3 | | Subjail Gangavathi | Taluka Sub Jail | 1938 | 00 | 729.14 sq.m | 00 | 00 | 00 | 0 | 00 | 0 | 0 | 729.14 |
| 4 | | Sub Jail Lingasugur | Taluka Sub Jail | 1967 | 1 | 06 | 2 | 13 | 0 | 0 | 0 | 22 | 4 | 01 |
| 5 | | Sub Jail Manvi | Taluka Sub Jail | 1919 | 0 | 2100 | 2 | 24 | 0 | 0 | 1 | 16 | 4 | 00+2100 sq.ft |
| 11 | **Mangalore District** | | | | | | | | | | | | | |
| | | D.P. Mangalore | District Prison | 1850 | 04 | 17s | 02 | 86s | 00 | 27s | 04 | 40 | 11 | 70s |
| 12 | **Bidar District** | | | | | | | | | | | | | |
| 1 | | D.P. Bidar | District Prison | 1920 | 01 | 32 | 04 | 17 | 04 | 30 | 02 | 34.5 | 13 | 33.5 |
| 2 | | Subjail Aurad | Taluka Sub Jail | 1993 | 02 | 00 | 00 | 16 | - | - | - | - | 02 | 16 |
| 3 | | Subjail Humnabad | Taluka Sub Jail | 1961 | 00 | 12 | 00 | 00 | 00 | 00 | 00 | 08 | 00 | 0.20 |
| 13 | KODAGU District | | | | | | | | | | | | | |
| 1 | | D.P. Madikeri | district Prison | 1871 | 01 | 49s | 00 | 42s | 00 | 16s | 03 | 16 | 05 | 07s |
| 2 | | Sub Jail Virajpet | Taluka Sub Jail | 1958 | 0 | 485 sq.mts | 0 | 0.60 sents | 0 | 0 | 0 | 0 | 0 | sq.mts 0.60 sents |

**ಅನುಬಂಧ – 'ಬಿ'**

| | ಕಾರಾಗೃಹ | ಅಧಿಕೃತ ಸ್ಥಳಾವಕಾಶ | ಹಾಲಿ ಇರುವ ಬಂದಿಗಳ ಸಂಖ್ಯೆ |
|---|---|---|---|
| 1 | ಕೇಂದ್ರ ಕಾರಾಗೃಹ ಬೆಂಗಳೂರು | 2172 | 4250 |
| 2 | ಕೇಂದ್ರ ಕಾರಾಗೃಹ ಬಿಜಾಪುರ | 314 | 483 |
| 3 | ಕೇಂದ್ರ ಕಾರಾಗೃಹ ಗುಲ್ಬರ್ಗಾ | 600 | 857 |
| 4 | ಕೇಂದ್ರ ಕಾರಾಗೃಹ ಮೈಸೂರು | 506 | 1021 |
| 5 | ಜಿಲ್ಲಾ ಉಪ ಕಾರಾಗೃಹ ಮಂಗಳೂರು | 150 | 247 |
| 6 | ಜಿಲ್ಲಾ ಉಪ ಕಾರಾಗೃಹ ಹಾಸನ | 219 | 322 |
| 7 | ಜಿಲ್ಲಾ ಉಪ ಕಾರಾಗೃಹ ಮಂಡ್ಯ | 272 | 433 |

# ANNEXURE-C

| KARNATAKA PRISONS | | | | | | | | |
|---|---|---|---|---|---|---|---|---|
| SL. NO | NAME OF THE INSTITUTION | AUTHORISED CAPACITY | | | PRISONERS AS ON 31.1.2011 | | | Additional Number of Prisoners detained Than auth Capacity |
| | | | | | M | F | Total | |
| | **CENTRAL PRISONS** | **MALE** | **FEMALE** | **TOTAL** | **MALE** | **FEMALE** | **TOTAL** | |
| 1 | C P BANGALORE | 2100 | 72 | **2172** | 4112 | 138 | **4250** | **2078** |
| 2 | C P BELGAUM | 1085 | 77 | **1162** | 776 | 55 | **831** | **0** |
| 3 | C P BELLARY | 717 | 30 | **747** | 474 | 20 | **494** | **0** |
| 4 | C P BIJAPUR | 294 | 20 | **314** | 455 | 28 | **483** | **169** |
| 5 | C P GULBARGA | 585 | 15 | **600** | 812 | 45 | **857** | **257** |
| 6 | C P MYSORE | 466 | 40 | **506** | 954 | 67 | **1021** | **515** |
| 7 | C P DHARWAD | 513 | 162 | **675** | 322 | 27 | **349** | **0** |
| 8 | C P TUMKUR (Not Functioning) | 0 | 69 | **69** | 0 | 0 | **0** | **0** |
| | → **Sub Total** | 5760 | 485 | **6245** | 7905 | 380 | **8285** | |
| | **DISTRICT PRISONS** | | | | | | | |
| 1 | D P BIDAR | 120 | 4 | **124** | 128 | 9 | **137** | **13** |

| | | | | | | | | |
|---|---|---|---|---|---|---|---|---|
| 2 | D P KARWAR | 324 | 62 | **386** | 89 | 4 | **93** | **0** |
| 3 | D P MADIKERI | 275 | 25 | **300** | 189 | 6 | **195** | **0** |
| 4 | D P MANGALORE | 146 | 4 | **150** | 239 | 8 | **247** | **97** |
| 5 | D P RAICHUR | 140 | 20 | **160** | 152 | 8 | **160** | **0** |
| 6 | D P SHIMOGA | 275 | 12 | **287** | 245 | 10 | **255** | **0** |
| 7 | D P CHITRADURGA | 275 | 25 | **300** | 120 | 7 | **127** | **0** |
| 8 | D P BAGALKOTE | 175 | 25 | **200** | 98 | 0 | **98** | **0** |
| 9 | D P CHAMARAJ NAGAR | 100 | 10 | **110** | 65 | 0 | **65** | **0** |
| 10 | D P TUMKUR | 300 | 25 | **325** | 223 | 5 | **228** | **0** |
| 11 | D P HAVERI | 175 | 25 | **200** | 68 | 0 | **68** | **0** |
| 12 | D P RAMNAGARAM | 175 | 25 | **200** | 185 | 0 | **185** | **0** |
| 13 | D P CHIKBALLAPUR | 16 | 0 | **16** | 67 | 0 | **67** | **51** |
| 14 | D P UDUPI | 100 | 10 | **110** | 63 | 0 | **63** | **0** |
| 15 | D P KOPPAL | 90 | 10 | **100** | 57 | 0 | **57** | **0** |
| | **Sub Total** | 2686 | 282 | **2968** | 1988 | 57 | **2045** | |
| | **DISTRICT HQ SUB JAIL** | | | | | | | |
| 1 | D S J CHICKAMAGALUR | 275 | 25 | **300** | 129 | 0 | **129** | **0** |
| 2 | D S J HASSAN | 210 | 9 | **219** | 302 | 20 | **322** | **103** |
| 3 | D S J KOLAR | 82 | 10 | **92** | 77 | 9 | **86** | **0** |
| 4 | D S J MANDYA | 264 | 8 | **272** | 420 | 13 | **433** | **161** |
| | **Sub Total** | 831 | 52 | **883** | 928 | 42 | **970** | |

| | | | | | | | | |
|---|---|---|---|---|---|---|---|---|
| | **SPECIAL SUBJAILS** | | | | | | | |
| 1 | SPL SUB JAIL DAVANGERE | 170 | 4 | **174** | 121 | 0 | **121** | **0** |
| 2 | SPL SUB JAIL KGF | 68 | 8 | **76** | 50 | 0 | **50** | **0** |
| | Sub Total | 238 | 12 | **250** | 171 | 0 | **171** | |
| 1 | **OPEN AIR JAIL KORAMANGALA** | 80 | 0 | **80** | 30 | 0 | **30** | **0** |
| | **TALUK SUB JAILS (UNDER DEPT. CONTROL)** | | | | | | | |
| 1 | ALAND | 20 | 0 | **20** | 22 | 0 | **22** | **2** |
| 2 | ARASIKERI | 24 | 0 | **24** | 24 | 0 | **24** | **0** |
| 3 | AURAD | 80 | 15 | **95** | 2 | 0 | **2** | **0** |
| 4 | BADAMI | 20 | 0 | **20** | 7 | 0 | **7** | **0** |
| 5 | BAILAHONGALA | 62 | 6 | **68** | 37 | 0 | **37** | **0** |
| 6 | CHINTHAMANI | 100 | 10 | **110** | 56 | 0 | **56** | **0** |
| 7 | DEVADURGA | 10 | 5 | **15** | 4 | 0 | **4** | **0** |
| 8 | GADAG | 104 | 8 | **112** | 61 | 0 | **61** | **0** |
| 9 | GANGAVATHI | 40 | 0 | **40** | 14 | 0 | **14** | **0** |
| 10 | GOKAK | 32 | 8 | **40** | 47 | 0 | **47** | **7** |
| 11 | HADAGLI | 120 | 30 | **150** | 16 | 0 | **16** | **0** |
| 12 | HOSPET | 40 | 8 | **48** | 44 | 5 | **49** | **1** |
| 13 | HUBLI | 96 | 8 | **104** | 104 | 0 | **104** | **0** |
| 14 | HUMANBAD | 60 | 0 | **60** | 28 | 0 | **28** | **0** |
| 15 | JAMKHANDI | 90 | 10 | **100** | 40 | 0 | **40** | **0** |
| | **Sub Total** | 898 | 108 | **1006** | 506 | 5 | **511** | |

| | | | | | **PRESENT POPULATION** | | | |
|---|---|---|---|---|---|---|---|---|
| **SL. NO** | **NAME OF THE INSTITUTION** | **AUTHORISED ACCOMODATION** | | | **TOTAL** | | | |
| | | **MALE** | **FEMALE** | **TOTAL** | **M** | **F** | **Total** | |
| 16 | KADUR | 40 | 0 | **40** | 13 | 0 | **13** | |
| 17 | K R NAGAR | 90 | 25 | **115** | 99 | 0 | **99** | |
| 18 | KOLLEGALA | 18 | 0 | **18** | 42 | 0 | **42** | |
| 19 | LINGASUGUR | 40 | 5 | **45** | 14 | 0 | **14** | |
| 20 | MANVI | 25 | 0 | **25** | 0 | 0 | **0** | |
| 21 | NANJUNAGUD | 98 | 9 | **107** | 0 | 0 | **0** | |
| 22 | NARASHIMARAJAPURA | 70 | 10 | **80** | 25 | 0 | **25** | |
| 23 | SAGAR | 48 | 6 | **54** | 0 | 0 | **0** | |
| 24 | SHORAPUR | 30 | 0 | **30** | 30 | 0 | **30** | **0** |
| 25 | TARIKERI | 34 | 6 | **40** | 12 | 0 | **12** | |
| 26 | TIPTUR | 30 | 0 | **30** | 34 | 0 | **34** | **4** |
| 27 | VIRAJPET | 20 | 0 | **20** | 23 | 0 | **23** | **3** |
| 28 | YADGIR | 30 | 0 | **30** | 39 | 0 | **39** | **9** |
| 29 | YALLAPUR | 5 | 2 | **7** | 2 | 0 | **2** | |
| 30 | SAKALESHPUR | 90 | 10 | **100** | 27 | 0 | **27** | |
| | **TALUK SUB JAILS (UNDER REV. DEPT. CONTROL)** | | | | | | | |
| 1 | ANKOLA | 5 | 0 | **5** | | | | |

| | | | | | | | | |
|---|---|---|---|---|---|---|---|---|
| 2 | ATHANI | 24 | 0 | **24** | 10 | 0 | **10** | **0** |
| 3 | BHATKAL | 20 | 0 | **20** | | | | **0** |
| 4 | BUNTWAL | 21 | 0 | **21** | | | | **0** |
| 5 | CHICKKODI | 20 | 0 | **20** | 34 | 0 | **34** | **14** |
| 6 | CHICHOLI | 20 | 0 | **20** | | | | |
| 7 | HANAGAL | 12 | 0 | **12** | 16 | 0 | **16** | **4** |
| 8 | HIREKERUR | 12 | 0 | **12** | | | | |
| 9 | HONNAVAR | 16 | 0 | **16** | | | | |
| 10 | HUKKERI | 18 | 0 | **18** | 19 | 0 | **19** | **1** |
| 11 | HUNGUND | 14 | 0 | **14** | | | | |
| 12 | KARKALA | 24 | 0 | **24** | 11 | 0 | **11** | |
| 13 | KUMTA | 10 | 0 | **10** | | | | |
| 14 | KUNDAPURA | 14 | 0 | **14** | | | | |
| 15 | KUNDGOLA | 8 | 0 | **8** | | | | |
| 16 | KUSTAGI | 25 | 0 | **25** | | | | |
| 17 | MADUGIRI | 42 | 0 | **42** | 57 | 0 | **57** | **15** |
| 18 | NAVALGUND | 16 | 0 | **16** | | | | |
| 19 | PUTTUR | 12 | 0 | **12** | | | | |
| 20 | RAIBAGH | 5 | 0 | **5** | | | | |
| 21 | RAMDURGA | 16 | 0 | **16** | 16 | 2 | **18** | **2** |
| 22 | RANEBENNUR | 14 | 0 | **14** | 18 | | **18** | **4** |
| 23 | RONA | 20 | 0 | **20** | 10 | | **10** | |

| | | | | | | | | |
|---|---|---|---|---|---|---|---|---|
| 24 | SAUNDATTI | | 15 | 0 | **15** | 0 | 0 | **0** | |
| 25 | SEDAM | | 30 | 0 | **30** | | | | |
| 26 | SHIGOM | | 16 | 0 | **16** | 0 | 0 | **0** | |
| 27 | SHIRAHATTI | | 12 | 0 | **12** | | | | |
| 28 | SIDDAPUR | | 16 | 0 | **16** | | | | |
| | | **Sub Total** | | | | **551** | **2** | **553** | |
| 1 | B S DHARWAD | | 200 | 0 | **200** | 0 | 0 | **0** | |
| 1 | J J DHARWAD | | 250 | 0 | **250** | 0 | 0 | **0** | |
| | ABSTRACT | | **AUTH ACCOMODATION** | | | **TOTAL** | | | |
| | | | **M** | **F** | **T** | **M** | **F** | **T** | |
| | 8 CENTRAL JAILS | | 5760 | 485 | **6245** | 7905 | 380 | **8285** | |
| | 15 DISTRICT JAILS | | 2686 | 282 | **2968** | 1988 | 57 | **2045** | |
| | 4 DISTRICT HQ SUBJAILS | | 831 | 52 | **883** | 928 | 42 | **970** | |
| | 2 SPECIAL SUBJAILS | | 238 | 12 | **250** | 171 | 0 | **171** | |
| | 1 OPEN AIR JAIL | | 80 | 0 | **80** | 30 | 0 | **30** | |
| | 1 BORSTAL SCHOOL | | 200 | 0 | **200** | 0 | 0 | **0** | |
| | 1 JUVENILE JAIL | | 250 | 0 | **250** | 0 | 0 | **0** | |
| | 70 TALUKA SUBJAILS | | 2043 | 181 | **2224** | 1014 | 7 | **1021** | |
| | **102 JAILS** | **GRAND TOTAL** | **12088** | **1012** | **13100** | **12036** | **486** | **12522** | |

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ನಾನು ಈ ಪ್ರಶ್ನೆಯನ್ನು ಕೇಳುವುದಕ್ಕೆ ಒಂದು ಹಿನ್ನೆಲೆ ಇದೆ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಾವುಗಳೆಲ್ಲ ಜೈಲಿನಲ್ಲಿ ಇದ್ದವರು. ವಿಶೇಷವಾಗಿ ಮೈಸೂರು ಜೈಲಿನಲ್ಲಿ ನಾನು ಇದ್ದೆ. ಆಗ ನಾವು ಜೈಲಿನ ಪರಿಸ್ಥಿತಿ ಹೇಗಿರುತ್ತದೆ ಎನ್ನುವುದನ್ನು ಕಂಡಿದ್ದೆವು. ಈಗಲೂ ಮೈಸೂರು ಜೈಲಿನ ಪರಿಸ್ಥಿತಿ ಹಾಗೆಯೇ ಇದೆ.

**ಶ್ರೀ ಎಂ.ಶ್ರೀನಿವಾಸ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್‌ರವರು ಈಗ ಏಕೆ ಜೈಲಿಗೆ ಹೋಗಿದ್ದರು ಎನ್ನುವುದು ನಮ್ಮ ಪ್ರಶ್ನೆ.

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಸಾಮಾಜಿಕ ಕ್ಷೇತ್ರದಲ್ಲಿ ಇರುವವರು ಮತ್ತು ರಾಜಕೀಯ ಕ್ಷೇತ್ರದಲ್ಲಿ ಇರುವವರು ಕೆಲವೊಮ್ಮೆ ಅನೇಕರನ್ನು ನೋಡಿಕೊಂಡು ಬರುವುದಕ್ಕೆ ಆಗಾಗ ಜೈಲಿಗೆ ಹೋಗಬೇಕಾಗುತ್ತದೆ. ನನ್ನ ಹೆಸರು 'ಮಧುಸೂದನ' ಎಂದು. ಅದು ಕೃಷ್ಣನಿಗಿರುವ ಮತ್ತೊಂದು ಹೆಸರಾಗಿದೆ. ಕೃಷ್ಣ ಜೈಲಿನಲ್ಲಿಯೇ ಹುಟ್ಟಿದ್ದು.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಜೈಲಿನಲ್ಲಿ ಹುಟ್ಟಬಹುದು. ಆದರೆ, ಹುಟ್ಟಿದ ಮೇಲೆ ಜೈಲಿಗೆ ಹೋಗಬಾರದು.

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ನಾನು ಜೈಲಿಗೆ ಹೋಗಬಾರದು ಎಂದು ಹೇಳುವುದಕ್ಕೆ ಆಗುವುದಿಲ್ಲ. ಕಾರಣವೇನೆಂದರೆ, ಜೈಲು ನನಗೆ ಗುರು ಮನೆ. ಆದರೆ ಜೈಲಿಗೆ ಏತಕ್ಕಾಗಿ ಹೋಗಬಾರದು ಎನ್ನುವುದನ್ನು ಅವರು ಹೇಳಬೇಕು. ರಾಜಕೀಯದಲ್ಲಿ ಇರುವವರು ಜೈಲಿಗೆ ಹೋಗಬೇಕಾಗುತ್ತದೆ. ಕಾಂಗ್ರೇಸಿನವರು ಅನೇಕ ಬಾರಿ ನಮ್ಮನ್ನು ಜೈಲಿಗೆ ಹಾಕಿದ್ದಾರೆ. ಆದ್ದರಿಂದ ನಾವು ಜೈಲಿಗೆ ಹೋಗುವುದಿಲ್ಲ. ಅವರು ಹಾಕಿದರೆ ಹೋಗುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಅವರು ಜೈಲಿಗೆ ಹೋಗುವಂತಹ ವಾತಾವರಣ ನಿರ್ಮಾಣವಾಗಿದೆ. ಹೊಸ ಜೈಲನ್ನು ಕಟ್ಟಿಸಬೇಕಾಗುತ್ತದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, It si a relative term, not absolute ಆದರೆ, ಅವರು absolute ಎಂದು ವಿಚಾರ ಮಾಡುತ್ತಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಮತ್ತೇ ಅವರನ್ನು ಜೈಲಿಗೆ ಕಳುಹಿಸುತ್ತೇವೆಂದು ಮಾನ್ಯ ಎಸ್.ಆರ್. ಪಾಟೀಲ್‌ರವರು ಹೇಳುತ್ತಿದ್ದಾರೆಯೇ?

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಈಗ ಅಷ್ಟೊಂದು ತಾಕತ್ತು ಇಲ್ಲ. ವಿಷಯ ಬೇರೆ ಕಡೆಗೆ ಹೋಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ತುಂಬಾ ಕಿರಿದಾಗಿರುವಂತಹ ವಸತಿ ವ್ಯವಸ್ಥೆ ಇರುವ ಮೈಸೂರಿನ ಕಾರಗೃಹದಲ್ಲಿ 506 ಜನ ಖೈದಿಗಳು ಇರಲು ಅವಕಾಶವಿದೆ. ಆದರೇ, ಅಲ್ಲಿ ಸುಮಾರು 1020 ಜನ ಖೈದಿಗಳು ಇದ್ದಾರೆ. ಮೈಸೂರಿನ ಕಾರಾಗೃಹ 1862ನೇ ಇಸವಿಯಲ್ಲಿ ನಿರ್ಮಾಣವಾಗಿದೆ. ಅದು ಯಾವಾಗ ಬೇಕಾದರೂ ಬಿದ್ದು ಹೋಗುವಂತಹ ಪರಿಸ್ಥಿತಿಯಲ್ಲಿದೆ. ಸುಮಾರು 150 ವರ್ಷಗಳಿಗೂ ಹಳೆಯದಾಗಿರುವಂತಹ ಕಾರಾಗೃಹ ಇದು. ಇದೇ ರೀತಿಯಾಗಿರುವಂತಹ ಕಾರಾಗೃಹಗಳು ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಇವೆ. ಮೈಸೂರಿನ ಕಾರಾಗೃಹವನ್ನು ಹೊಸದಾಗಿ ನಿರ್ಮಾಣ ಮಾಡುವುದಕ್ಕೆ ಸರ್ಕಾರದ ಬಳಿ ಯೋಜನೆಗಳೇನಾದರೂ ಇವೆಯೇ ಎನ್ನುವುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ಇನ್ನು ಎರಡನೆಯದಾಗಿ, ಆ ಬಂದಿಖಾನೆಗೆ ಎಷ್ಟು ಕಡಿಮೆ ಪ್ರಮಾಣದ ಹಣ ಬರುತ್ತಿದೆ ಎಂದರೆ, ಅಲ್ಲಿ ಒಂದು ಮೊದಲ ಅಂತಸ್ತಿನ ಕಟ್ಟಡವನ್ನು ಕಟ್ಟಿದ್ದಾರೆ. ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆ. ಆದರೆ, ಅದನ್ನು ಏರುವುದಕ್ಕೆ ಬೇಕಾಗಿರುವಂತಹ ಮೆಟ್ಟಿಲುಗಳನ್ನು ಕಂಟ್ರಾಕ್ಟರುಗಳು ಕಟ್ಟಿಲ್ಲ. ಮೆಟ್ಟಿಲು ಕಟ್ಟುವುದಕ್ಕೂ ಮೊದಲೇ ಕಂಟ್ರಾಕ್ಟರ್ ಬಳಿ ಇದ್ದಂತಹ ಹಣ ಮುಗಿದು ಹೋಗಿದೆ. ಸರ್ಕಾರ ಅವರಿಗೆ

ಹಣವನ್ನು ಕೊಟ್ಟಿಲ್ಲ. ಬಂದಿಖಾನೆಯ ಮೆಟ್ಟಿಲನ್ನು ಕಟ್ಟುವುದಕ್ಕೆ ಸರ್ಕಾರದ ಬಳಿ ಹಣವಿಲ್ಲ. ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಮೆಟ್ಟಿಲು ಕಟ್ಟುವುದಕ್ಕೆ ಮತ್ತು ಮೇಲಿನಿಂದ ಕೆಳಗೆ ಬೀಳದೇ ಇರುವ ರೀತಿಯಲ್ಲಿ ತಡೆಗೋಡೆಯನ್ನು ಕಟ್ಟುವುದಕ್ಕೆ ಹಣವನ್ನು ಬಿಡುಗಡೆ ಮಾಡಲಾಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎ. ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಮೆಟ್ಟಿಲು ಕಟ್ಟುವುದಕ್ಕೆ ಹಣ ಕೊಡುತ್ತೇವೆ. ಆದರೆ, ಖೈದಿಗಳು ಹೊರಗೆ ಹೋಗುವುದಕ್ಕೆ ನಾವು ಮೆಟ್ಟಿಲು ಕಟ್ಟಿ ಕೊಡುವುದಿಲ್ಲ ಎನ್ನುವುದನ್ನು ಖಾತ್ರಿ ಮಾಡುತ್ತಿದ್ದೇನೆ. ರಾಜ್ಯ ಸರ್ಕಾರದಲ್ಲಿ ಅಥವಾ ಕೇಂದ್ರ ಸರ್ಕಾರದಲ್ಲಿ ವಿಶೇಷವಾಗಿ ಬಂದಿಖಾನೆಗಳ ಬಗ್ಗೆ ನಿರ್ಲಕ್ಷ್ಯವಿದೆ ಎನ್ನುವುದು ನಿಜ. ಬಂದಿಖಾನೆ ಎಂದರೆ ಅದೊಂದು ತಾತ್ಸಾರಕ್ಕೆ ಒಳಗಾಗಿರುವಂತಹ ಇಲಾಖೆ ಎನ್ನುವುದು ನನ್ನ ಭಾವನೆಯಾಗಿದೆ. ಆದ್ದರಿಂದ ಈ ಬಾರಿಯ ಆಯವ್ಯಯದಲ್ಲಿ ಈ ಇಲಾಖೆಗೆ ಹೆಚ್ಚು ಒತ್ತು ಕೊಡಬೇಕು ಎಂದು ಕೇಳಿಕೊಂಡಾಗ, ಮಾನ್ಯ ಮುಖ್ಯಮಂತ್ರಿಗಳು ಅನುದಾನವನ್ನು ನೀಡಿದ್ದಾರೆ. ಜಾಮರ್ಸ್‌ನಿಂದ ಬಂದಿಖಾನೆಗಳು ವ್ಯವಸ್ಥೆಗೆ ಒಳಪಟ್ಟಿವೆ. ಆದ್ದರಿಂದ ಜಾಮರ್ಸ್‌ಗೆ ವಿಶೇಷವಾಗಿರುವಂತಹ ಒತ್ತನ್ನು ನೀಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿರುವಂತೆ, ಮೈಸೂರು ಜಿಲ್ಲೆಯಲ್ಲಿ ಮಾತ್ರವಲ್ಲ, ಬೆಂಗಳೂರು ಕಾರಾಗೃಹದಲ್ಲಿಯೂ ಸಹ 2172 ಖೈದಿಗಳಿಗೆ ವಸತಿ ಸೌಲಭ್ಯ ಇರುವ ಕಡೆಗೆ 4250 ಖೈದಿಗಳು ಇದ್ದಾರೆ.

**(12–30 ಗಂಟೆ)**

ಬಿಜಾಪುರ ಕಾರಾಗೃಹದಲ್ಲಿ 314 ಜನ ಖೈದಿಗಳು ಇರಬೇಕಾಗಿತ್ತು, ಆದರೆ ಅಲ್ಲಿ 483 ಜನ ಖೈದಿಗಳಿದ್ದಾರೆ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ಅದೇ ಹಾಸನ ಮತ್ತು ಮಂಡ್ಯ ಜಿಲ್ಲೆ ಕಾರಾಗೃಹಗಳಲ್ಲಿಯೂ ಖೈದಿಗಳ ಸಂಖ್ಯೆ ಹೆಚ್ಚಾಗಿದೆ. 219 ಜನ ಖೈದಿಗಳು ಇರುವ ಕಡೆ 322 ಜನ ಖೈದಿಗಳು ಮತ್ತು 270 ಜನ ಖೈದಿಗಳು ಇರುವ 433 ಜನ ಖೈದಿಗಳಿದ್ದಾರೆ.

**ಶ್ರೀ ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಹಿಂದೆ ಹಲವಾರು ಕಡೆ ಹೊಸ ಕಾರಾಗೃಹಗಳನ್ನು ನಿರ್ಮಾಣ ಮಾಡಿದ್ದಾರೆ. ಕೊಪ್ಪಳ, ಮಡೀಕೆರಿ, ಹಾವೇರಿ, ಚಾಮರಾಜನಗರ, ಚಿತ್ರದುರ್ಗ, ರಾಮನಗರ, ಬಾಗಲಕೋಟೆ, ತುಮಕೂರು, ಸಕಲೇಶಪುರ, ಚಿಂತಾಮಣಿ ಮುಂತಾದ ಸ್ಥಳಗಳಲ್ಲಿ ಹೊಸ ಕಾರಾಗೃಹಗಳನ್ನು ನಿರ್ಮಾಣ ಮಾಡಿ ಸ್ಥಳಾಂತರ ಮಾಡಿದ್ದೇವೆ. ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ನಾವು ಹೊಸ ಕಾರಾಗೃಹಗಳನ್ನು ನಿರ್ಮಾಣ ಮಾಡುತ್ತಿದ್ದೇವೆ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೇ, ಹೊಸ ಬಂದಿಖಾನೆಯನ್ನು ನಿರ್ಮಾಣ ಮಾಡಬೇಕೆಂದು ಹಾಸನದ ಬಗ್ಗೆಯೂ ಒಂದು ಪ್ರಸ್ತಾವನೆ ಇತ್ತು.

**ಶ್ರೀ ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಹೇಳುತ್ತೇನೆ. ಕೋಲಾರ ಹಾಸನ, ಬಿಜಾಪುರ ಜಿಲ್ಲೆ ಇರಬಹುದು ಹಲವಾರು ಕಡೆ ನಾವು ಸ್ಥಳವನ್ನು ಕೇಳಿದ್ದೇವೆ. ಸ್ಥಳ ನೀಡುವುದರಲ್ಲಿ ಜಿಲ್ಲಾಧಿಕಾರಿಗಳು ಒಂದು ಕಡೆ ಶಿಫಾರಸ್ಸು ಮಾಡಿದ್ದಾರೆ. ಅದು ಡಿಪಿಸಿ ಮತ್ತು ಕಾರ್ಯದರ್ಶಿಯಿಂದ ಬಂದು clearance ಆಗಲಿಲ್ಲ. Clearance ಆದ ತಕ್ಷಣ ಕಟ್ಟಡವನ್ನು ಕಟ್ಟುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇವೆ. ಹಣದ ಲಭ್ಯತೆಯನ್ನು ನೋಡಿಕೊಂಡು ಕಾರಾಗೃಹವನ್ನು ನಿರ್ಮಾಣ ಮಾಡುತ್ತೇವೆ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ಕಾರಾಗೃಹಗಳು ಊರಿನ ಒಳಗಡೆ ಬಂದಿವೆ, ಅದನ್ನು ಸರ್ಕಾರ, ಊರಿನ ಹೊರಗಡೆ ಸ್ಥಳಾಂತರಿಸಲು ಪ್ರಯತ್ನ ಮಾಡಬೇಕು.

**ಶ್ರೀ ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಮಾನ್ಯ ಮುಖ್ಯಮಂತ್ರಿಗಳ ಬಳಿ ಮಾತನಾಡಿದ್ದೇನೆ. ಎಲ್ಲೆಲ್ಲಿ ನಗರಗಳ ಮಧ್ಯದಲ್ಲಿ ಕಾರಾಗೃಹಗಳಿವೆ, ಅವುಗಳನ್ನು ನಗರದ ಹೊರಗಡೆಗೆ ಸ್ಥಳಾಂತರಿಸಬೇಕಾಗಿದೆ. ಅದೇ ಕಲ್ಪನೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕಾರಾಗೃಹವನ್ನು ಹೊರಗಡೆ ನಿರ್ಮಾಣ ಮಾಡಿದ್ದೇವೆ. ಮಾನ್ಯ ಸದಸ್ಯರು

ತಿಳಿಸಿದಂತೆ ಮೈಸೂರು ಕಟ್ಟಡಕ್ಕೆ ಅವಶ್ಯಕವಾಗಿರುವ ಮೆಟ್ಟಲುಗಳನ್ನು ಕಟ್ಟುವುದು ಮಾತ್ರವಲ್ಲ, ಈ ಕಾರಾಗೃಹದಲ್ಲಿ ಸ್ಥಳಾವಕಾಶ ಕಡಿಮೆ ಇದೆ. ಅದನ್ನು ಮತ್ತೊಂದು ಕಡೆ ಕಾರಾಗೃಹವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ನಾವು ಯೋಚನೆ ಮಾಡುತ್ತೇವೆ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ಮತ್ತೊಂದು ಕಡೆ ಅಲ್ಲ, ಇಲ್ಲಿರುವುದನ್ನು ಸ್ಥಳಾಂತರಿಸಲು ಮತ್ತು ಈ ಜಾಗವನ್ನು ಬೇರೆ ಸಾರ್ವಜನಿಕ ಕೆಲಸಕ್ಕೆ ಉಪಯೋಗ ಮಾಡಿಕೊಳ್ಳಬಹುದು.

**ಶ್ರೀ ಎ. ನಾರಾಯಣಸ್ವಾಮಿ:** ಮಾನ್ಯ ಸಭಾಪತಿಯವರೇ, ಕಾರಾಗೃಹಗಳು ನಗರಪ್ರದೇಶದಿಂದ ಹೊರಗಡೆ ಇರಬೇಕೆಂದು ಒಟ್ಟಾರೆ ಸರ್ಕಾರದ ಚಿಂತನೆ ಇದೆ. ಅದನ್ನು ಹಂತ ಹಂತವಾಗಿ ಮಾಡುತ್ತೇವೆ.

## ಸರ್ಕಾರಿ ವೈದ್ಯಕೀಯ ಕಾಲೇಜುಗಳ ಬೋಧಕ ವೈದ್ಯರುಗಳಿಗೆ ಎ.ಐ.ಸಿ.ಟಿ.ಇ., ವೇತನ ನೀಡುವ ಬಗ್ಗೆ

### 795; ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)

**ಅ)** ರಾಜ್ಯದಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ವೈದ್ಯರುಗಳಿಗೆ ಎ.ಐ.ಸಿ.ಟಿ.ಇ. ಪರಿಷ್ಕೃತ ವೇತನ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಎ.ಐ.ಟಿ.ಸಿ.ಇ. ಪರಿಷ್ಕೃತ ವೇತನ ನೀಡುವಲ್ಲಿ ವಿಳಂಬ ಉಂಟಾಗಲು ಕಾರಣಗಳೇನು;

**ಇ)** ಎ.ಐ.ಸಿ.ಟಿ.ಇ. ಪರಿಷ್ಕೃತ ವೇತನವನ್ನು ನೀಡುವ ಸಲುವಾಗಿ ಸರ್ಕಾರ ಇದುವರೆವಿಗೂ ಕೈಗೊಂಡಿರುವ ಕ್ರಮಗಳೇನು; ಯಾವ ಕಾಲಮಿತಿಯಲ್ಲಿ ನೀಡಲಾಗುವುದು;

**ಈ)** ಎ.ಐ.ಸಿ.ಟಿ.ಇ. ಪರಿಷ್ಕೃತ ವೇತನ ನೀಡಬೇಕಾಗಿರುವ ಬೋಧಕ ವೈದ್ಯರ ಸಂಖ್ಯೆ ಎಷ್ಟು? (ಕಾಲೇಜುವಾರು ಪೂರ್ಣ ವಿವರ ನೀಡುವುದು)

**ಶ್ರೀ ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು)**

**ಅ)** ಹೌದು

**ಆ)** 2011–12ನೇ ಸಾಲಿನಲ್ಲಿ ಆಯವ್ಯಯದಲ್ಲಿ ಈ ವೆಚ್ಚಕ್ಕಾಗಿ ಅವಕಾಶ ಕಲ್ಪಿಸಲಾಗಿದೆ.

**ಇ)** ಶೀಘ್ರವಾಗಿ ಕ್ರಮವಹಿಸಲಾಗುವುದು

**ಈ)** ಒಟ್ಟು 2096

(ಕಾಲೇಜುವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ)

## ಕಾಲೇಜುವಾರು ಬೋಧಕರ ಪೂರ್ಣ ವಿವರ

| ಕ್ರ. ಸಂ | ಸಂಸ್ಥೆಗಳ ಹೆಸರು | ಪ್ರಾಧ್ಯಾಪಕರು/ ಸಹ ಪ್ರಾಧ್ಯಾಪಕರು | ಸಹಾಯಕ ಪ್ರಾಧ್ಯಾಪಕರು | ಉಪನ್ಯಾಸಕರು | ಸೀನಿಯರ್ ರೆಸಿಡೆಂಟ್/ ರೆಸಿಡೆಂಟ್ | ಒಟ್ಟು |
|---|---|---|---|---|---|---|
| 1 | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಮತ್ತು ಜಂಟಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ | | | | | 02 |
| 2 | ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು. | 94+59 | 180 | 185 | | 518 |
| 3 | ಸರ್ಕಾರಿ ದಂತ ಕಾಲೇಜು, ಬೆಂಗಳೂರು | | | | | 59 |
| 4 | ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು | 81 | 91 | 11 | 29 | 212 |
| 5 | ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ | | | | | 433 |
| 6 | ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ | | | | | 218 |
| 7 | ಸರ್ಕಾರಿ ದಂತ ಕಾಲೇಜು, ಬಳ್ಳಾರಿ | | | | | 27 |
| 8 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ | 14+22 | 46 | 24+29 | | 135 |

| | | | | | | |
|---|---|---|---|---|---|---|
| 9 | ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ | 14+16 | 55 | | 27 | 112 |
| 10 | ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ | | | | | 162 |
| 11 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು | 13+24 | 41 | | | 78 |
| 12 | ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ | | | | | 122 |
| 13 | ಬೆಳಗಾಂ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳಗಾಂ | | | | | 18 |
| | | | | | **ಒಟ್ಟು** | **2096** |

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರ ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದೆ. ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್ ಕಾಲೇಜು ಅಧ್ಯಾಪಕರಿಗೆ ಎ.ಐ.ಸಿ.ಟಿ.ಇ ವೇತನ ಶ್ರೇಣಿಯನ್ನು ಏಪ್ರಿಲ್ ಒಂದನೇ ತಾರೀಖಿನಿಂದ ಕೊಡುತ್ತೇವೆಂದು ಉನ್ನತ ಶಿಕ್ಷಣ ಸಚಿವರು ಘೋಷಣೆ ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಅವರನ್ನು ಅಭಿನಂದಿಸುತ್ತೇನೆ. ಆದರೆ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರತಕ್ಕಂಥ ಈ ಬೋಧಕ ವರ್ಗಕ್ಕೆ 2006ನೇ ಸಾಲಿನಿಂದ ಪರಿಷ್ಕೃತ ಎ.ಐ.ಸಿ.ಟಿ.ಇ ವೇತನ ಶ್ರೇಣಿಯನ್ನು ಬಾಕಿ ಉಳಿಸಿಕೊಂಡಿದೆ. ಅದರ ಬಗ್ಗೆ ಹತ್ತಾರು ಬಾರಿ ಸದನದಲ್ಲಿ ಅವರಿಗೆ ಪರಿಷ್ಕೃತ ವೇತನ ಶ್ರೇಣಿಯನ್ನು ಕೊಡಬೇಕೆಂದು ಒತ್ತಾಯ ಮಾಡಿದರೂ ಸಹ ಸರ್ಕಾರ ಉತ್ತರದಲ್ಲಿ 2011–12ನೇ ಸಾಲಿನ ಆಯವ್ಯಯದಲ್ಲಿ ಈ ವೆಚ್ಚಕ್ಕಾಗಿ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದ್ದಾರೆ. ಈ ಪರಿಷ್ಕೃತ ಎ.ಐ.ಸಿ.ಟಿ.ಇ ವೇತನ ಶ್ರೇಣಿಯನ್ನು ಕೊಡಲಿಕ್ಕೆ ಎಷ್ಟು ಹಣ ಬೇಕು? ಆಯವ್ಯಯದಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ಕಾಯ್ದಿರಿಸಲಾಗಿದೆ? ಏಪ್ರಿಲ್ ಒಂದರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನವನ್ನು ಸರ್ಕಾರದವರು ಜಾರಿಗೊಳಿಸುತ್ತೀರಾ, ಜಾರಿಗೊಳಿಸುವಂಥ ಸಂದರ್ಭದಲ್ಲಿ 2006ನೇ ಸಾಲಿನಿಂದ ಬರಬೇಕಾಗಿರುವ ಬಾಕಿಯನ್ನು ಕೊಡುತ್ತದೆಯೇ ಎಂದು ಸರ್ಕಾರದಿಂದ ಸ್ಪಷ್ಟವಾದ ಉತ್ತರವನ್ನು ನಾನು ಬಯಸುತ್ತೇನೆ.

**ಶ್ರೀ ಗೋ. ಮಧುಸೂದನ್ :–** ಮಾನ್ಯ ಸಭಾಪತಿಯವರೇ, ಹೇಗೆ ಅಲೋಪತಿ ಕಾಲೇಜು ಅಧ್ಯಾಪಕರಿಗೂ ಎ.ಐ.ಸಿ.ಟಿ.ಇ ವೇತನವನ್ನು ಕೊಡಬೇಕೋ ಅದೇ ರೀತಿ ಆಯುರ್ವೇದ ಕಾಲೇಜುಗಳ ಅಧ್ಯಾಪಕರಿಗೂ ಎ.ಐ.ಸಿ.ಟಿ.ಇ ವೇತನವನ್ನು ಕೊಡಬೇಕಾಗಿರುವಂಥ ವೇತನ ಶ್ರೇಣಿ ಬಾಕಿ ಉಳಿದಿದೆ. ಸಾಮಾನ್ಯವಾಗಿ ಅಲೋಪತಿಯವರಿಗೆ ಮೊದಲು ಕೊಟ್ಟು ನಂತರ ಆಯುರ್ವೇದದವರಿಗೆ ಕೊಡುವ ಸರ್ಕಾರದ ಪದ್ಧತಿ ಇಲ್ಲಿಯತನಕ ನಡೆದುಕೊಂಡು ಬಂದಿದೆ. ದಯಮಾಡಿ ಅಲೋಪತಿಯವರಿಗೆ ಕೊಟ್ಟಾಗಲೇ ಆಯುರ್ವೇದದವರಿಗೂ ಕೊಡಬೇಕು. ಹಾಗೆಯೇ ಅಲೋಪತಿಯವರಿಗೆ ಬೇರೆ

ಬೇರೆ ಅಲೋಯನ್ಸ್ ಕೊಡುತ್ತೀರಾ. ಆದರೆ ಬೇಸಿಕ್‌ನ್ನು ಅಲೋಪತಿ ಮತ್ತು ಆಯುರ್ವೇದ ಮೆಡಿಕಲ್ ಕಾಲೇಜಿನವರಿಗೆ ಒಂದೇರೀತಿ ಕೊಡಲಾಗುತ್ತದೆಂದು ಹಿಂದೆ ಸರ್ಕಾರ ಒಪ್ಪಿಕೊಂಡಿದೆ. ಅದನ್ನು ದಯಮಾಡಿ ಸರ್ಕಾರ ಮಾಡಿ ಕೊಡುತ್ತದೆಯೇ?

**ಶ್ರೀ ಎ. ರಾಮದಾಸ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಈಗಾಗಲೇ ಉತ್ತರವನ್ನು ಒದಗಿಸಲಾಗಿದೆ. 2011–12ನೇ ಸಾಲಿನ ಬಜೆಟ್‌ನಲ್ಲಿ ಆ ಒಂದು ಹೆಡ್‌ನಲ್ಲಿ 150 ಕೋಟಿ ರೂಪಾಯಿಗಳ ಹಣವನ್ನು ತೆಗೆದು ಇಡಲಾಗಿದೆ. ಪ್ರಸ್ತುತ ಸಾಲಿನಿಂದಲೇ ಎಐಸಿಟಿಇ ಸ್ಕೇಲ್ ಕೊಡುವ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಬಹಳ ಪ್ರಮುಖವಾಗಿ 6 ಮೆಡಿಕಲ್ ಕಾಲೇಜುಗಳಿಗೆ ಹೋಗಿದ್ದೇವೆ, 4 ಮೆಡಿಕಲ್ ಕಾಲೇಜುಗಳಿಗೆ ಹೋಗುತ್ತಿದ್ದೇವೆ. ಈ ರಾಜ್ಯಕ್ಕೆ ಇರುವ ದೊಡ್ಡ ಪಿಡುಗು ಎಂದರೆ ಸರ್ಕಾರಿ ವೈದ್ಯರು ಖಾಸಗಿ ಪ್ರಾಕ್ಟೀಸ್ ಮಾಡುತ್ತಿರುವ ಒಂದು ವ್ಯವಸ್ಥೆ ಇದೆ. ಎಲ್ಲಾ ಆಸ್ಪತ್ರೆಗಳಲ್ಲಿ ಇರುವಂಥ ವೈದ್ಯರಲ್ಲಿ ನಾವು ಒಂದು ಮನವಿಯನ್ನು ಮಾಡಿದ್ದೇವೆ ಮತ್ತು ಒಂದು ವಿಚಾರವನ್ನು ಇಟ್ಟಿದ್ದೇವೆ. ಅವರಿಗೆ ಎಐಸಿಟಿಇ ಸ್ಕೇಲ್‌ನ್ನು ಯಾವತ್ತು ಕೊಡಲು ಪ್ರಾರಂಭ ಮಾಡುತ್ತೇವೆ ಆ ದಿವಸದಿಂದ ಅವರು ಖಾಸಗಿಯಾಗಿ ಪ್ರಾಕ್ಟೀಸ್ ಮಾಡಬಾರದೆಂದು ನಾವು ಅವರ association ಜೊತೆಗೆ ಮಾತನಾಡಿದ್ದೇವೆ, ಅವರು ಒಪ್ಪಿಗೆಯನ್ನು ಕೊಡುತ್ತಿದ್ದಾರೆ. ಅವರ affidavit ತೆಗೆದುಕೊಂಡು ಆನಂತರದಲ್ಲಿ ಅವರಿಗೆ ಈ ಒಂದು ಹಣವನ್ನು ಮಂಜೂರಾತಿ ಮಾಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಎರಡನೆಯದಾಗಿ ಮಾನ್ಯ ಸದಸ್ಯರು ಒಂದು ಪ್ರಶ್ನೆಯನ್ನು ಕೇಳಿದರು. 2006ನೇ ಸಾಲಿನಿಂದ ಇದನ್ನು ಕೊಡಬೇಕಾಗಿತ್ತು ಎನ್ನುವಂಥಾದ್ದು ಇದೆ. ಆದರೆ ಈಗ ಸರ್ಕಾರದ ನಿರ್ಧಾರವನ್ನು prospective ಆಗಿ ಕೊಡುವಂಥ ಚಿಂತನೆಯಿಂದಲೇ 150 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ತಕ್ಷಣದಲ್ಲಿಯೇ ಇದಕ್ಕೆ ಸಂಬಂಧಪಟ್ಟಂತಹ ಸಭೆಯನ್ನು ಮಾಡಿ ಪ್ರಸ್ತುತ ಸಾಲಿನಿಂದ ನಾವು ಅವರಿಗೆ ಎಐಸಿಟಿಇ ವೇತನವನ್ನು 2096 ಜನ ವೈದ್ಯರು ಯಾರಿದ್ದಾರೆ ಅವರಿಗೆ ಕೊಡುವಂಥ ಕೆಲಸವನ್ನು ಮಾಡುತ್ತೇವೆ. ಅವರುಗಳು

ಕಡ್ಡಾಯವಾಗಿ ಖಾಸಗಿ ಪ್ರಾಕ್ಟೀಸ್‌ನ್ನು ನಿಲ್ಲಿಸುವಂಥ ದೃಷ್ಟಿಯಲ್ಲಿ ಸರ್ಕಾರ ಕ್ರಮವನ್ನು ಕೈಗೊಳ್ಳುತ್ತಿದೆ. ಮಾನ್ಯ ಮಧುಸೂದನ್‌ರವರು ಹೇಳಿದಂಥ ವಿಚಾರದಲ್ಲಿ ಈ ಬಾರಿ ಬಜೆಟ್‌ನಲ್ಲಿ ಮೊದಲನೆಯ ಬಾರಿಗೆ ಎಲ್ಲಾ ಅಲೋಪತಿ ಜಿಲ್ಲಾ ಆಸ್ಪತ್ರೆಗಳಲ್ಲಿ ಆಯುರ್ವೇದದ ಒಂದು ಯೂನಿಟ್‌ನ್ನು ಇಟ್ಟು ಅಲೋಪತಿ ಜೊತೆಯಲ್ಲಿ ಆಯುರ್ವೇದದ ವೈದ್ಯರು ಸಹ ಸೇವೆಯನ್ನು ಮಾಡಲಿಕ್ಕೆ provision ಮಾಡಲಾಗಿದೆ. ಈ ದೃಷ್ಟಿಯಲ್ಲಿ ಆಯುರ್ವೇದ ವೈದ್ಯರು ಬೇಡಿಕೆಯ ಸಹ ಇದೆ. ಸರ್ಕಾರ ಇದರ ಬಗ್ಗೆ ಚಿಂತನೆಯನ್ನು ಮಾಡುತ್ತಿದೆ. ಇದರ ಬಗ್ಗೆ ಕ್ರಮ ಕೈಗೊಳ್ಳುವ ಕೆಲಸವನ್ನು ಮಾಡುತ್ತೇವೆ.

**ಸಭಾಪತಿಯವರು:–** ಆಯುರ್ವೇದ ವೈದ್ಯರ ಬಗ್ಗೆ ಅವರು on per with ಅಲೋಪತಿ ವೈದ್ಯರ ವೇತನವನ್ನು ಕೊಡುವುದಾದರೆ, ಸರ್ಕಾರಕ್ಕೆ ಬಹಳ ದೊಡ್ಡ ಹೊರೆಯಾಗುವುದಿಲ್ಲ. ಬಹಳ ಕಡಿಮೆ ಹಣದ ವ್ಯತ್ಯಾಸವಿದೆ. ಈ ವ್ಯವಸ್ಥೆ ಇರುವುದು ಸರಿಯಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರ ಗಮನಿಸಬೇಕು. ಎಪ್ರಿಲ್ ಒಂದನೇ ತಾರೀಖಿನಿಂದ ಕೊಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರ ಏಪ್ರಿಲ್ ಒಂದನೇ ತಾರೀಖಿನಿಂದ ಕೊಡುತ್ತೇವೆಂದು ಹೇಳಲೇ ಇಲ್ಲ.

**ಸಭಾಪತಿಯವರು:–** ಈ ವರ್ಷ ಎಂದರೆ ಏಪ್ರಿಲ್ ಎಂದೇ ಅರ್ಥ

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಕೊಡುತ್ತೇವೆಂದು ಅಷ್ಟೇ ಹೇಳಿದರು. ನಾವೇನೋ ಪರಿಶೀಲಿಸುತ್ತೇವೆಂದು ಹೇಳಿದರು.

**ಸಭಾಪತಿಯವರು:–** ಬಜೆಟ್ ಇರುವುದು ಏಪ್ರಿಲ್ ಒಂದನೇ ತಾರೀಖಿನಿಂದ.

**ಶ್ರೀ ಮರಿತಿಬ್ಬೇಗೌಡ:** ಮಾನ್ಯ ಸಭಾಪತಿಯವರೇ, ಇವರಿಗೆ ಎಐಸಿಟಿಇ ಇವೇತನ ಶ್ರೇಣಿಯನ್ನು ಏಪ್ರಿಲ್ ಒಂದನೇ ತಾರೀಖಿನಿಂದ ಸರ್ಕಾರ ಕೊಡುತ್ತ

ದೆಯೇ? 2006ರಿಂದ ಕೊಡಲಿಕ್ಕಾಗುವುದಿಲ್ಲವೆಂದರೆ ಹೇಗೆ? ದಯವಿಟ್ಟು 2006ನೇ ಇಸವಿಯಿಂದ ಅವರಿಗೆ ಕೊಡಬೇಕಾಗಿರುವ ಬಾಕಿಯನ್ನು ಸರ್ಕಾರ ಕೊಡಲೇಬೇಕು. ಅದನ್ನು ತಪ್ಪಿಸಿಕೊಳಲ್ಲು ಸಾಧ್ಯವಿಲ್ಲ. ಆದರೆ ಅದನ್ನು ನಿಧಾನವಾಗಿ ಕೊಡುತ್ತೇವೆ, ಈಗ ಹಣಕಾಸಿನ ತೊಂದರೆ ಇದೆ ಎಂದು ಬೇಕಾದರೆ ಹೇಳಲಿ. ಅದು ಬಿಟ್ಟು ನಾವು ಮುಂದೆ ಕೊಡುತ್ತೇವೆಂದು ಹೇಳುವುದು ಸೂಕ್ತವಲ್ಲ. ದಯವಿಟ್ಟು 2006ನೇ ಇಸವಿಯಿಂದ ಕೊಡಬೇಕಾದ ಬಾಕಿಯನ್ನು ಕೊಡಬೇಕು ಮತ್ತು ಏಪ್ರಿಲ್ 1ನೇ ತಾರೀಖಿನಿಂದ ಇದನ್ನು ಜಾರಿಗೊಳಿಸುತ್ತೀರಾ ಎಂದು ಸರ್ಕಾರ ದಯಮಾಡಿ ಸ್ಪಷ್ಟವಾಗಿ ಹೇಳಬೇಕು.

**ಶ್ರೀ ಎ. ರಾಮದಾಸ್:–** ಮಾನ್ಯ ಸಭಾಪತಿಯವರೇ, ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನಮ್ಮ ನಿರ್ಧಾರ ಇರುವುದು prospective ಆಗಿ ಮಾಡಬೇಕೆಂದು. 2006ರಿಂದ ಕೊಡುವಂಥ ವಿಚಾರದಲ್ಲಿ ಈಗಾಗಲೇ ಮಾನ್ಯ ಸದಸ್ಯರಿಗೆ ಹೇಳಿದಂತೆ ಆಸ್ಪತ್ರೆಗಳಿಗೆ ಹೋಗಿ ವೈದ್ಯರಿಗೆ convince ಮಾಡಿದ್ದೇವೆ. ಮುಂದೆ prospective ಆಗಿ ಕೊಡಿ ಎನ್ನುವಂಥ ವಿಚಾರಕ್ಕೆ ಅವರು ಸಹ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ನಾವು ಏಪ್ರಿಲ್‌ನಿಂದ ಅವರಿಗೆ ಜಾರಿಗೆ ಕೊಡುವಂಥ ಕೆಲಸವನ್ನು ಮಾಡುತ್ತೇವೆ. ಅದೊಂದೇ ವಿಚಾರವನ್ನು ಏಕೆ ಹೇಳುತ್ತೇನೆಂದರೆ, ಅವರಿಂದ affidavit ಬಂದ ನಂತರದಲ್ಲಿ ಇದನ್ನು ಜಾರಿಗೆ ಕೊಡುತ್ತೇವೆ.

## ಓ.ಸಿ. ಎಂಬ ಜೂಜನ್ನು ತಡೆಗಟ್ಟುವಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ

**764; ಡಾ: ಎಸ್.ಆರ್. ಲೀಲಾ (ನಾಮನಿರ್ದೇಶಿತರು)**

**ಅ)** ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನಾದ್ಯಂತ ಓ.ಸಿ. ಎಂಬ ಜೂಜು ಅವ್ಯಾಹತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಆ)** ಮಾರಕ ರೋಗದಂತೆ ಹಬ್ಬುತ್ತಿರುವ ದಂಧೆಗೆ ನಿರುದ್ಯೋಗಿ ಯುವಕರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಬಲಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದರೆ, ಈ ದಂಧೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ತೆಗದು ಕೊಂಡಿರುವ ಕ್ರಮಗಳೇನು; ಈ ದಂಧೆಯಲ್ಲಿ ಬಂಧನಕ್ಕೊಳಗಾಗಿರುವವರ ಸಂಖ್ಯೆ ಎಷ್ಟು;

**ಈ)** ಸದರಿ ಒ.ಸಿ. ಬಿಡ್ಡರುಗಳು ಮತ್ತು ಜೂಜುಕೋರೆರ ಮೇಲೆ ಯಾವ ರೀತಿಯ ಕಾನೂನು ಕ್ರಮಗಳನ್ನು ಜರುಗಿಸಲಾಗಿದೆ (ವಿವರ ಒದಗಿಸುವುದು) ಹಾಗಿಲ್ಲದಿದ್ದಲ್ಲಿ, ಕಾರಣಕರ್ತರ ಮೇಲೆ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು)**

**ಅ)** ಹೌದು

**ಆ)** ಈ ದಂಧೆಯಲ್ಲಿ ನಿರುದ್ಯೋಗಿ ಯುವಕರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಬಲಿಯಾಗುತ್ತಿರುವುದು ಕಂಡು ಬಂದಿರುವುದಿಲ್ಲ.

ಇ) ಮಟಕಾ ದಂಧೆಯನ್ನು ನಿಯಂತ್ರಣಗೊಳಿಸಲು ಸಾಗರ ತಾಲ್ಲೂಕಿನಾದ್ಯಾಂತ ಬಾತ್ಮೀದಾರರನ್ನು ನೇಮಿಸಿ, ಗುಪ್ತವಾಗಿ ನಡೆಸುವ ಜೂಜಾಟದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ, ದಾಳಿ ನಡೆಸಿ, ಪ್ರಕರಣಗಳನ್ನು ಪತ್ತೆ ಹಚ್ಚಿ, ಮಟಕಾ/ಜೂಜಾಟವನ್ನು ನಡೆಸುತ್ತಿರುವ ವ್ಯಕ್ತಿಗಳ ಮೇಲೆ ಕಾನೂನಿನಂತೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮಟಕಾ/ಜೂಜಾಟವನ್ನು ತಾಲ್ಲೂಕಿನಾದ್ಯಾಂತ ನಿಷೇಧಿಸುವ ಸಂಬಂಧ ಠಾಣಾ ಮಟ್ಟದಲ್ಲಿ ಬೀಟ್ ಪೋಲೀಸರಿಂದ ಗುಪ್ತವಾಗಿ ಮಾಹಿತಿಯನ್ನು ಸಂಗ್ರಹಿಸಿ, ಮಟಕಾ ಜೂಜಾಟವನ್ನು ನಿಯಂತ್ರಣಗೊಳಿಸಲು ಕ್ರಮಕೈಗೊಂಡಿರುತ್ತದೆ.

ಸಾಗರ ತಾಲ್ಲೂಕಿನಾದ್ಯಂತ ಕಳೆದ ಮೂರು ವರ್ಷಗಳಲ್ಲಿ ಒಸಿ/ಮಟಕಾ ಜೂಜಾಟವನ್ನು ತಡೆಯಲು ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಈ ಕೆಳಕಂಡಂತೆ ಪ್ರಕರಣಗಳನ್ನು ದಾಖಲಿಸಲಾಗಿದೆ.

| ವರ್ಷ | ದಾಖಲಾದ ಪ್ರಕರಣಗಳು | ವಶಪಡಿಸಿಕೊಂಡ ಹಣ | ದಸ್ತಗಿರಿಯಾದ ಸಂಖ್ಯೆ |
|---|---|---|---|
| 2008 | 15 | 807–00 | 18 |
| 2009 | 18 | 18,336–00 | 28 |
| 2010 | 18 | 18,840–00 | 23 |
| 2011 ಜನವರಿ ಮಾಹೆ ಕೊನೆಗೊಂಡಂತೆ | 1 | 200–00 | 1 |

**ಈ)** ದಸ್ತಗಿರಿ ಮಾಡಿರುವ ಆರೋಪಿಗಳ ಮೇಲೆ ಮತ್ತು ಓ.ಸಿ. ಬಿಡ್ಡರುಗಳ ಮೇಲೆ ಕಲಂ 78 ಕ್ಲಾಸ್ (3) ಕೆ.ಪಿ.ಆಕ್ಟ್ ರೀತ್ಯಾ ಪ್ರಕರಣಗಳನ್ನು ದಾಖಲಿಸಿ, ಪದೇ ಪದೇ ಮಟಕಾ ಜೂಜಾಟವನ್ನು ನಡೆಸುವ ವ್ಯಕ್ತಿಗಳ ಮೇಲೆ 110 ಸಿ.ಆರ್.ಪಿ.ಸಿ. ರೀತ್ಯಾ 2008ನೇ ಸಾಲಿನಲ್ಲಿ 6 ಪ್ರಕರಣಗಳನ್ನು ಮತ್ತು 2009ನೇ ಸಾಲಿನಲ್ಲಿ 4 ಪ್ರಕರಣಗಳನ್ನು ದಾಖಲಿಸಿ, ದೋಷಾರೋಪಣಾ ಪಟ್ಟಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

**ಡಾ: ಎಸ್.ಆರ್. ಲೀಲಾ:** ನನ್ನ ಪ್ರಶ್ನೆಗೆ ಸರ್ಕಾರದಿಂದ ಉತ್ತರ ಬಂದಿದೆ. 'ಮಟಕಾ ದಂಧೆಯನ್ನು ನಿಯಂತ್ರಣಗೊಳಿಸಲು ಸಾಗರ ತಾಲ್ಲೂಕಿನಾದ್ಯಂತ ಬಾತ್ಮೀದಾರರನ್ನು ನೇಮಿಸಿ', ಈ ರೀತಿ ವಿವರಗಳನ್ನು ಕೊಟ್ಟಿದ್ದಾರೆ. ನಾನು ಕೇಳಿರುವುದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಓ.ಸಿ. ಎಂಬ ಜೂಜು ಅವ್ಯಾಹತವಾಗಿ ನಡೆಯುತ್ತಿದೆ. ಇದರಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ತುಂಬಾ ದುಷ್ಪರಿಣಾಮ ಉಂಟಾಗುತ್ತಿದೆ. ಇದಕ್ಕೆ ಯುವಕರನ್ನು ಮತ್ತು ಶಾಲಾ ಹುಡುಗರನ್ನು ಸಹ ಬಳಸಿಕೊಳ್ಳುತ್ತಿದ್ದಾರೆ. ಇಂತಹವರುಗಳ ಮೇಲೆ ತುಂಬಾ ಕೆಟ್ಟ ಪರಿಣಾಮ ಉಂಟು ಮಾಡುತ್ತಿದೆ. ಅದರ ಪರಿಣಾಮವಾಗಿ ಅವರು ಮೈಗಳ್ಳರಾಗಿ ಸುಲಭವಾಗಿ ಹಣವನ್ನು ಸಂಪಾದಿಸುವಂಥ ದಾರಿಯನ್ನು ಹಿಡಿದುಕೊಂಡು ಮುಂದೆ ಅವರು

ದೊಡ್ಡವರಾಗಿ ಮದುವೆ ಮಾಡಿಕೊಂಡ ಮೇಲೆ ಹೆಂಡತಿ–ಮಕ್ಕಳನ್ನು ಕಾಡುವಂತಹ ದುಷ್ಟ ಪರಿಸ್ಥಿತಿ ಒದಗುತ್ತಿದೆ. ಹಾಗೆಯೇ ಯಾವುದೇ ಒಂದು ಕೆಲಸಕ್ಕೆ ಈಗ ಜನ ಸಿಗುತ್ತಿಲ್ಲ. ಕೃಷಿ ವಲಯದಲ್ಲಿ ಕೂಲಿಗಾಗಿ ಜನ ಸಿಗುವುದಿಲ್ಲ. ಇದರ ವ್ಯಾಪಕವಾದ ಪರಿಣಾಮದಿಂದಾಗಿ ಈ ರೀತಿಯ ಪರಿಸ್ಥಿತಿ ಉಂಟಾಗುತ್ತಿದೆ. ಆ ದೃಷ್ಟಿಯಿಂದ ಜೂಜು ಮತ್ತು ಕುಡಿತ, ಅದರಲ್ಲಿಯೂ ಇದು ಚಿಕ್ಕ ವಯಸ್ಸಿನವರಲ್ಲಿ ಹಬ್ಬುತ್ತಿರುವಂಥಾದ್ದನ್ನು ದಯವಿಟ್ಟು ಗಮನಿಸಬೇಕು. ಇದನ್ನು ಒಂದು ರೀತಿಯಲ್ಲಿ ನಿಯಂತ್ರಣ ಮಾಡುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದು ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಅವರಿಂದ ಸರಿಯಾದ ಉತ್ತರ ಬರುತ್ತದೆಂದು ಕೇಳಿದೆ. ಮೊನ್ನೆಯ ದಿವಸ cricket betting ವಿಚಾರವಾಗಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಅದನ್ನು ಮಟ್ಟ ಹಾಕುವುದಕ್ಕೆ ಎಲ್ಲಾ ಪ್ರಯತ್ನ ಮಾಡುದ್ದೇವೆ ಎಂದು ಸರ್ಕಾರ ಧನಾತ್ಮಕವಾದ ಉತ್ತರವನ್ನು ಕೊಟ್ಟಿದೆ. ಇದು ಕೂಡ ಅಷ್ಟೇ ಪ್ರಮುಖವಾಗಿರುವಂಥಾದ್ದು. ಸಾಮಾಜಿಕವಾಗಿ ತುಂಬಾ ದುಷ್ಪರಿಣಾಮವನ್ನುಂಟು ಮಾಡುತ್ತಿದೆ. ಅದಕ್ಕೋಸ್ಕರ ಇದನ್ನು ತುಂಬಾ ಗಂಭೀರವಾಗಿ ಪರಿಗಣಿಸಿ ಈ ದಂಧೆಯನ್ನು ನಿಲ್ಲಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದು ಎಲ್ಲಾ ಜನರ ಪರವಾಗಿ ಕೇಳುತ್ತೇನೆ. ಅದರಲ್ಲಿಯೂ ಈ ದಂಧೆಯಲ್ಲಿ ಸಿಕ್ಕಿ ಹಾಕಿಕೊಂಡವರ ಕುಟುಂಬಗಳೇ ನಾಶವಾಗಿ ಹೋಗುತ್ತಿದೆ. ಈ ಹುಡುಗರನ್ನು ಬಳಸಿಕೊಳ್ಳುತ್ತಿರುವುದು ಮೇಲ್ನೋಟಕ್ಕೆ ಕಾಣುವುದಿಲ್ಲ. ಅದನ್ನು ಹೇಗೆ ಹೇಗೋ ಮಾಡುತ್ತಿದ್ದಾರೆ. ಅದರ ಬಗ್ಗೆ ನಿಗಾ ಇಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು):–** ಮಾನ್ಯ ಸಭಾಪತಿಗಳೇ, ಮಟ್ಕ ಇರಬಹುದು, ಜೂಜು ಇರಬಹುದು ಅಥವಾ ಬೆಟ್ಟಿಂಗ್ ಇರಬಹುದು ಇವು ಯಾವುದೋ ಒಂದು ಜಿಲ್ಲೆಗೋ, ತಾಲ್ಲೂಕಿಗೋ ಅಥವಾ ರಾಜ್ಯಕ್ಕೋ ಸಂಬಂಧಪಟ್ಟಿದ್ದಲ್ಲ. ಅಂತರರಾಜ್ಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲೂ ಇವು ನಡೆಯುತ್ತಿವೆ. ಈ ಒ.ಸಿ. ಏನಿದೆ, ನಮಗಿರುವಂತಹ ಮಾಹಿತಿ ಪ್ರಕಾರ ಮುಂಬಯಿಯಲ್ಲಿ ಒಂದು ನಂಬರನ್ನು ತೆಗೆಯುತ್ತಾರೆ, ಆ

ನಂಬರಿನ ಮೇಲೆ ಎಂಟು ಪಟ್ಟು ಅಥವಾ ಹದಿನಾರು ಪಟ್ಟು ಹೆಚ್ಚು ಹಣ ಕೊಡುವಂಥ ದಂಧೆಯಾಗಿದೆ. ಇದು ಬಹಳ ವರ್ಷಗಳಿಂದ ನಡೆಯುತ್ತಿದೆ. ಹಿಂದೆ ಈ ದಂಧೆ ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿತ್ತು, ಆದರೆ ಬರುತ್ತಾ ಬರುತ್ತಾ ಇದು ಕಡಿಮೆಯಾಗುತ್ತಿದೆ. 2008ರಲ್ಲಿ ಶಿವಮೊಗ್ಗದ ಸಾಗರ ಭಾಗದಲ್ಲೇ ಸುಮಾರು 15 ಪ್ರಕರಣಗಳು ಮತ್ತು 2009ರಲ್ಲಿ 18 ಪ್ರಕರಣಗಳು ದಾಖಲಾಗಿವೆ. ಅವರಿಂದ ಹಣ ವಸೂಲು ಮಾಡಿದ್ದೇವೆ, ಅಂಥವರನ್ನು ದಸ್ತಗಿರಿ ಕೂಡ ಮಾಡಿದ್ದೇವೆ. ನನಗೆ, ಶಾಲೆಗೆ ಹೋಗುವಂಥ ಮಕ್ಕಳು ಅಥವಾ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು ಇಂತಹ ದಂಧೆಯಲ್ಲಿ ಭಾಗಿಯಾಗಿರುವುದರ ಬಗ್ಗೆ ಮಾಹಿತಿ ಇಲ್ಲ. ಆದರೆ ಈ ದಂಧೆ ನಡೆಯುತ್ತಿರು ವುದಂತೂ ನಿಜ. ಇದರ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಮೊನ್ನೆ, ಕ್ರಿಕೆಟ್ ಬೆಟ್ಟಿಂಗ್‌ಗೆ ಸಂಬಂಧಿಸಿದಂತೆ ಸುಮಾರು 20ಜನರನ್ನು ಬಂಧಿಸಿದ್ದೇವೆ. ಲಕ್ಷಾಂತರ ರೂಪಾಯಿಗಳ ಹಣವನ್ನು, ಕಂಪ್ಯೂಟರ್‌ಗಳನ್ನು ಮತ್ತು ಮೊಬೈಲ್‌ಗಳನ್ನು ಸೀಜ್ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಈ ದಿಸೆಯಲ್ಲಿ ಇನ್ನೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಅವಶ್ಯಕತೆ ಇದೆ. ಇದರ ಜೊತೆ, ಕಾನೂನು ಗಟ್ಟಿಗೊಳಿಸಬೇಕಾಗಿದೆ. ಈಗೇನಾಗುತ್ತಿದೆ ಎಂದರೆ, ಅಪರಾಧಿಗಳನ್ನು ಇವತ್ತು ಬಂಧಿಸಿದರೆ ನಾಳೆ ಆಚೆ ಬಂದು ಬಿಡುತ್ತಾರೆ. ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ನಾವು ಯಾರ್‍ಯಾರನ್ನು ಬಂಧಿಸಿದ್ದೆವೋ ಅವರೆಲ್ಲ ಮಾರನೆಯ ದಿನವೇ ಆಚೆ ಬಂದುಬಿಟ್ಟರು. ಇಂಥವರನ್ನು ಗಡಿಪಾರು ಮಾಡುವುದಕ್ಕೆ, ಗೂಂಡಾ ಕಾಯಿದೆ ಅಡಿ ಬಂಧಿಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರ ಚಿಂತನೆ ಮಾಡುತ್ತಿದೆ. ಇದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ಮಾತನಾಡುತ್ತಿದ್ದೇನೆ. ಹೀಗೆ ಮಾಡದಿದ್ದರೆ ಇದರಿಂದ ಸಾವಿರಾರು ಕುಟುಂಬಗಳು ನಾಶವಾಗಿ ಬಿಡುತ್ತವೆ. ಯುವಜನರು ಇಂತಹ ಚಟುವಟಿಕೆಗಳ ಕಡೆ ವಾಲುವುದನ್ನು ತಪ್ಪಿಸುವುದು ಸರ್ಕಾರದ ಕರ್ತವ್ಯವಾಗಿದೆ. ಆದ್ದರಿಂದ ಇಂತಹ ದಂದೆಗಳನ್ನು ತಡೆಗಟ್ಟುವುದಕ್ಕೆ ನಾವು ಕಠಿಣ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, ನಮ್ಮ ಜಿಲ್ಲೆಯ ಅನೇಕ ಕಡೆ ಮಹಿಳೆಯರು ಓ.ಸಿ. ಆಡುವಂತಹ ಕೆಲಸ ಮಾಡುತ್ತಿದ್ದಾರೆ

ಎಂಬುದನ್ನು ಕೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಒ.ಸಿ. ಅವ್ಯಾಹತವಾಗಿ ನಡೆಯುತ್ತಿರುವುದು ಬಹಳ ಗಂಭೀರವಾದ ವಿಷಯವಾಗಿದೆ.

**ಸಭಾಪತಿಯವರು:–** ಹಾಗಾದರೆ ಬೇರೆ ಜಿಲ್ಲೆಗಳಲ್ಲಿ ನಡೆಯಬಹುದೇ? ಯಾವ ಜಿಲ್ಲೆಗಳಲ್ಲೂ ಇಂತಹ ದಂಧೆಗಳು ನಡೆಯುವುದು ಬೇಡ. ಮಾನ್ಯ ಸಚಿವರು, ಇಂತಹ ಚಟುವಟಿಕೆ ನಡೆಯುವುದನ್ನು ತಡೆಗಟ್ಟುತ್ತೇವೆ ಎಂದು ಹೇಳಿದ್ದಾರೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಬದ್ಧತೆ ಇರುವ ಅಧಿಕಾರಿಗಳು ಇಂತಹ ದಂಧೆಗಳು ನಡೆಯುವುದನ್ನು ನಿಲ್ಲಿಸಿಯೇ ನಿಲ್ಲಿಸುತ್ತಾರೆ. ಇದು ತಮಗೂ ಗೊತ್ತು. ತಾವು, ಈ ದಂಧೆ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದೆ, ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಈ ರೀತಿ ಅಸಹಾಯಕತೆಯ ಉತ್ತರ ಕೊಡಬಾರದು.

**ಶ್ರೀ ಆರ್. ಅಶೋಕ:–** ಅಸಹಾಯಕತೆಯ ಉತ್ತರವನ್ನು ಕೊಟ್ಟಿಲ್ಲ. ಇಂತಹ ದಂಧೆಯಲ್ಲಿ ಭಾಗವಹಿಸಿದವರನ್ನು ಗಡಿಪಾರು ಮಾಡುತ್ತೇವೆ, ಗೂಂಡಾ ಕಾಯಿದೆ ಅಡಿ ತರುತ್ತೇವೆ, ಇದಕ್ಕೆ ಹಿಂದೆ–ಮುಂದೆ ನೋಡುವುದಿಲ್ಲ ಎನ್ನುವ ಮಾತನ್ನು ಹೇಳಿದೆ. ಕ್ರಿಕೇಟ್ ಬೆಟ್ಟಿಂಗ್‌ಗೆ ಸಂಬಂಧಪಟ್ಟ ಹಾಗೆ ಮೊನ್ನೆ ಏನು ಬಂಧಿಸಿ ಕ್ರಮ ಕೈಗೊಂಡಿದ್ದೇವೆಯೋ ಆ ರೀತಿ ಕ್ರಮಗಳನ್ನು ಬೇರೆ ಯಾವ ರಾಜ್ಯದವರೂ ತೆಗೆದುಕೊಂಡಿಲ್ಲ. ಈ ದಿಸೆಯಲ್ಲಿ ಬೇರೆ ರಾಜ್ಯದವರು ಸಹಕಾರ ನೀಡಿದರೆ ಇಂತಹ ದಂಧೆಯನ್ನು ಪೂರ್ಣವಾಗಿ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಬೆಟ್ಟಿಂಗ್ ಎನ್ನುವುದು ಕೇವಲ ಒಂದು ರಾಜ್ಯಕ್ಕೆ ಅಥವಾ ಒಂದು ಜಿಲ್ಲೆಗೆ ಸೀಮಿತವಾಗಿರುವಂಥದ್ದಲ್ಲ. ಬೆಟ್ಟಿಂಗ್‌ನಲ್ಲಿ ಭಾಗವಹಿಸಿದವರನ್ನು ಅರೆಸ್ಟ್ ಮಾಡಿದ ತಕ್ಷಣ ಅಂಥವರು ಹೊಸೂರು ಗಡಿಗೆ ಹೋಗಿಬಿಟ್ಟದ್ದಾರೆ. ಅಲ್ಲಿಂದ ಈ ದಂಧೆಯಲ್ಲಿ ಭಾಗವಹಿಸುತ್ತಿದ್ದಾರೆ. ಹಾಗಾಗಿ, ರಾಷ್ಟ್ರಮಟ್ಟದಲ್ಲಿ ಇಂತಹ ದಂಧೆಗಳನ್ನು ತಡೆಗಟ್ಟುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ನಮ್ಮ ರಾಜ್ಯಕ್ಕೆ

ಸಂಬಂಧಪಟ್ಟ ಹಾಗೆ, ಇಂತಹ ದಂಧೆಯನ್ನು ತಡೆಗಟ್ಟುವುದಕ್ಕೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತಿದೆ.

**ಶ್ರೀ ಅಬ್ದುಲ್ ಅಜೀಂ:** ಮಾನ್ಯ ಸಭಾಪತಿಗಳೆ, ಇಂತಹ ದಂಧೆಗಳನ್ನು ಸಂಪೂರ್ಣವಾಗಿ ತಡೆಗಟ್ಟಬೇಕಾದರೆ: You must make officers responsible, especially for this. Without their connivance ಇದು ಆಗಲು ಸಾಧ್ಯವಿಲ್ಲ. ತಾವು ಇದರ ಬಗ್ಗೆ ನಮ್ಮ ಹತ್ತಿರ ಹೇಳಬೇಕಾದರೆ, ಎಷ್ಟು ಜನ ಅಧಿಕಾರಿಗಳ ಮೇಲೆ ಇಲಾಖಾ ವಿಚಾರಣೆಗೆ ಆದೇಶ ಮಾಡಿದ್ದೇವೆ, ಎಷ್ಟು ಜನರನ್ನು ಶಿಕ್ಷೆಗೆ ಒಳಪಡಿಸಿದ್ದೇವೆ ಎಂಬ ಸಂದೇಶ ತಮ್ಮ ಕಡೆಯಿಂದ ಹೋದರೆ ಶೇಕಡಾ ನೂರರಷ್ಟು ಇಂತಹ ದಂಧೆಗಳು ನಿಯಂತ್ರಣಕ್ಕೆ ಬರುತ್ತವೆ.

**ಶ್ರೀ ಇ. ಕೃಷ್ಣಪ್ಪ:–** ಈ ದಂಧೆ ಇಡೀ ರಾಜ್ಯದಲ್ಲಿ ಅವ್ಯಾಹತವಾಗಿ ನಡೆಯುತ್ತಿದೆ. ಕೆಲವು ಕ್ಷೇತ್ರಗಳಲ್ಲಿ ಶಾಸಕರೇ ಮಟ್ಕ ನಡೆಸುವಂಥವರಿಗೆ ಶಕ್ತಿ ತುಂಬುತ್ತಿದ್ದಾರೆ. ಗೂಂಡಾ ಕಾಯಿದೆ ಅಡಿ ಇಂಥವರನ್ನು ಬಂಧಿಸುವುದು ಅಷ್ಟು ಸುಲಭದ ಕೆಲಸವಲ್ಲ. ಏಕೆಂದರೆ ಇದಕ್ಕೆ ಶಾಸಕರೆ ಅಡ್ಡ ಬರುತ್ತಾರೆ. ಇಂತಹ ದಂಧೆಯನ್ನು ತಡೆಗಟ್ಟಲು ಸರ್ಕಾರ ಕಠಿಣವಾದ ಕಾನೂನನ್ನು ತರಬೇಕು. ಬೆಂಗಳೂರಿನಲ್ಲಿ ಯಾವತ್ತೋ ಒಂದು ದಿನ ಕ್ರಿಕೆಟ್ ನಡೆದಾಗ ಬೆಟ್ಟಿಂಗ್ ನಡೆಯುತ್ತದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಹಗಲು–ರಾತ್ರಿ ಎನ್ನದೆ ಅವಿರತವಾಗಿ ಈ ದಂಧೆಯಲ್ಲಿ ತೊಡಗಿರುತ್ತಾರೆ.

**ಸಭಾಪತಿಯವರು:–** ತಾವು ಮಾತನಾಡುವಾಗ ಒಂದು ಮಾತನ್ನು ಹೇಳಿದಿರಿ. ಅದು ಇಲ್ಲಿರುವ ಎಲ್ಲಾ ಶಾಸಕರಿಗೂ ಅನ್ವಯವಾಗುತ್ತದೆ. ಈ ರೀತಿಯಾಗಿ ನೀವು ಹೇಳಬಯಸಿದರೆ ಅದಕ್ಕೆ ನಿರ್ದಿಷ್ಟವಾದ ದಾಖಲೆ ಇದ್ದರೆ ಮಾತ್ರ ಹೇಳಬೇಕು. ಇಲ್ಲದೇ ಹೋದರೆ ಸಮಾಜಕ್ಕೆ ನಮ್ಮೆಲ್ಲರ ಬಗ್ಗೆ ಏನು ಸಂದೇಶ ಹೋಗಬಹುದೆಂದು ನೀವು ತಿಳಿದುಕೊಳ್ಳಬಹುದು. ಸದನಗಳಲ್ಲಿ ಇಂತಹ ವಿಷಯಗಳ ಬಗ್ಗೆ ಚರ್ಚೆ ನಡೆಯುವಾಗ ನಾವು ನಮ್ಮ ಘನತೆ–ಗಾಂಭೀರ್ಯಗಳನ್ನೂ ಕಾಪಾಡಿಕೊಳ್ಳಬೇಕಾಗುತ್ತದೆ. ತಮ್ಮ ಗಮನದಲ್ಲಿ ಯಾವುದಾದರೂ ಇಂಥ ನಿರ್ದಿಷ್ಟ ಪ್ರಕರಣ ಇದ್ದರೆ ಮಾನ್ಯ ಸಚಿವರ

ಗಮನಕ್ಕೋ ಅಥವಾ ಸರ್ಕಾರದ ಗಮನಕ್ಕೆ ತರಬೇಕೇ ಹೊರತು, ಜನರಲೈಸ್ ಆಗಿ, ಶಾಸಕರೂ ಇಂತಹ ದಂಧೆಗಳಲ್ಲಿ ತೊಡಗುತ್ತಾರೆ ಎಂದು ಹೇಳುವುದು ಒಳ್ಳೆಯದಲ್ಲ.

**ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಕಟ್ಟಡಗಳ ಬಗ್ಗೆ**

**549; ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

**ಆ)** ಆ ಪೈಕಿ ಸ್ವಂತ ಕಟ್ಟಡಗಳಲ್ಲಿ ಮತ್ತು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಾಲೆಗಳ ಸಂಖ್ಯೆ ಎಷ್ಟು? ಸ್ವಂತ ಕಟ್ಟಡ ಹೊಂದಿಲ್ಲದ ಶಾಲೆಗಳಿಗೆ ಕಟ್ಟಡ ನಿರ್ಮಿಸಲು ಕೈಗೊಂಡಿರುವ ಕ್ರಮಗಳೇನು? (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

**ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂಧಿಖಾನೆ ಸಚಿವರು)**

**ಅ)** 395 (ಜಿಲ್ಲಾವಾರು, ತಾಲೂಕುವಾರು ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

**ಆ)**

- **ಅ)** ರಾಜ್ಯದಲ್ಲಿನ 395 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪೈಕಿ 144 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಸ್ವಂತ ಕಟ್ಟಡಗಳಲ್ಲಿವೆ. 251 ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ.
- **ಆ)** 251 ವಸತಿ ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು, ಈ ಪೈಕಿ 117 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. ನಿವೇಶನ ಲಭ್ಯವಿರುವ 21 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಶಾಲಾ ಸಂಕೀರ್ಣ ನಿರ್ಮಾಣಕ್ಕೆ ಅಂದಾಜು ಪಟ್ಟಿ ತಯಾರಿಸಲಾಗುತ್ತಿದೆ.

ಇ) ನಿವೇಶನ ಲಭ್ಯವಿಲ್ಲದಿರುವ 113 ವಸತಿ ಶಾಲೆಗಳಿಗೆ ನಿವೇಶನ ಮಂಜೂರು ಮಾಡುವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಹಾಗೂ ಈ ಬಗ್ಗೆ ಕಾಳಜಿ ವಹಿಸುವಂತೆ ಕೋರಿ ಸ್ಥಳೀಯ ಶಾಸಕರುಗಳಿಗೆ ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ದಿನಾಂಕ:04–01–2011 ರಂದು ಪತ್ರ ಬರೆದು ಜಮೀನು ಮಂಜೂರು ಮಾಡಲು ಕೋರಿದೆ. ಒಂದು ವೇಳೆ ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ ಖಾಸಗಿ ಜಮೀನು ಖರೀದಿಗೆ ಪ್ರಸ್ತಾಪಿಸಲು ತಿಳಿಸಿದೆ.

## ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರರ್ಜಿ ದೇಸಾಯಿ ವಸತಿ ಶಾಲೆಗಳ ಜಿಲ್ಲಾವಾರು, ತಾಲ್ಲೂಕುವಾರು ವಿವರ.

| ಕ್ರ. ಸಂ | ಜಿಲ್ಲೆ | ಕ್ರ. ಸಂ | ತಾಲ್ಲೂಕು | ವಸತಿ ಶಾಲೆಗಳ ಸಂಖ್ಯೆ | ಸ್ವಂತ ಕಟ್ಟಡಗಳ ಸಂಖ್ಯೆ | ಬಾಡಿಗೆ ಕಟ್ಟಡಗಳ ಸಂಖ್ಯೆ |
|---|---|---|---|---|---|---|
| 1 | ಬೆಂಗಳೂರು (ನ) | 1 | ಅನೇಕಲ್ | **1** | **1** | **1** |
| | | 2 | ಬೆಂಗಳೂರು (ಉ) | **1** | **1** | |
| | | 3 | ಬೆಂಗಳೂರು (ದ) | **1** | **1** | |
| 2 | ಬೆಂಗಳೂರು ಗ್ರಾ) | 4 | ದೊಡ್ಡಬಳ್ಳಾಪುರ | **1** | | **1** |
| | | 5 | ದೇವನಹಳ್ಳಿ | **1** | | **1** |
| | | 6 | ಹೊಸಕೋಟೆ | **1** | **1** | |
| 3 | ರಾಮನಗರ | 7 | ಕನಕಪುರ | **5** | **1** | **4** |
| | | 8 | ಚನ್ನಪಟ್ಟಣ | **3** | **1** | **2** |
| | | 9 | ರಾಮನಗರ | **6** | **4** | **2** |
| | | 10 | ಮಾಗಡಿ | **2** | **1** | **1** |
| 4 | ಚಿತ್ರದುರ್ಗ | 11 | ಹಿರಿಯೂರು | **5** | **1** | **4** |
| | | 12 | ಚಿತ್ರದುರ್ಗ | **4** | **2** | **2** |
| | | 13 | ಚಳ್ಳಕೆರೆ | **1** | **1** | |
| | | 14 | ಮೊಳಕಾಲ್ಮೂರು | **1** | | **1** |

| | | | | | | |
|---|---|---|---|---|---|---|
| | | 15 | ಹೊಳಲ್ಕೆರೆ | **2** | | **2** |
| | | 16 | ಹೊಸದುರ್ಗ | **1** | **1** | |
| 5 | ಕೋಲಾರ | 17 | ಬಂಗಾರಪೇಟೆ | **2** | **1** | **1** |
| | | 18 | ಶ್ರೀನಿವಾಸಪುರ | **1** | **1** | |
| | | 19 | ಮುಳಬಾಗಿಲು | **4** | | **4** |
| | | 20 | ಕೋಲಾರ | **3** | **2** | **1** |
| | | 21 | ಮಾಲೂರು | **1** | | **1** |
| 6 | ಚಿಕ್ಕಬಳ್ಳಾಪುರ | 22 | ಚಿಂತಾಮಣಿ | **2** | **1** | **1** |
| | | 23 | ಗೌರಿಬಿದನೂರು | **1** | | **1** |
| | | 24 | ಬಾಗೇಪಲ್ಲಿ | **1** | | **1** |
| | | 25 | ಚಿಕ್ಕಬಳ್ಳಾಪುರ | **3** | | **3** |
| | | 26 | ಶಿಡ್ಲಘಟ್ಟ | **1** | | **1** |
| 7 | ಶಿವಮೊಗ್ಗ | 27 | ಶಿಕಾರಿಪುರ | **6** | **3** | **3** |
| | | 28 | ಭದ್ರಾವತಿ | **3** | **1** | **2** |
| | | 29 | ಸೊರಬ | **1** | | **1** |
| | | 30 | ತೀರ್ಥಹಳ್ಳಿ | **2** | **1** | **1** |
| | | 31 | ಸಾಗರ | **1** | | **1** |
| | | 32 | ಶಿವಮೊಗ್ಗ | **2** | **2** | |

| | | | | | | |
|---|---|---|---|---|---|---|
| 8 | ತುಮಕೂರು | 33 | ಮಧುಗಿರಿ | **1** | **1** | |
| | | 34 | ಪಾವಗಡ | **3** | **1** | **2** |
| | | 35 | ಕುಣಿಗಲ್ | **3** | | **3** |
| | | 36 | ಶಿರಾ | **5** | | **5** |
| | | 37 | ತುಮಕೂರು | **1** | | **1** |
| | | 38 | ಗುಬ್ಬಿ | **1** | | **1** |
| | | 39 | ಕೊರಟಗೆರೆ | **2** | **2** | |
| | | 40 | ಚಿಕ್ಕನಾಯಕನಹಳ್ಳಿ | **1** | | **1** |
| | | 41 | ತುರುವೆಕೆರೆ | **1** | | **1** |
| | | 42 | ತಿಪಟೂರು | **1** | | **1** |
| 9 | ದಾವಣಗೆರೆ | 43 | ಚೆನ್ನಗಿರಿ | **1** | **1** | |
| | | 44 | ಹರಪ್ಪನಹಳ್ಳಿ | **3** | **2** | **1** |
| | | 45 | ಹರಿಹರ | **3** | **2** | **1** |
| | | 46 | ದಾವಣಗೆರೆ | **5** | **2** | **3** |
| | | 47 | ಹೊನ್ನಾಳಿ | **1** | | **1** |
| | | 48 | ಜಗಳೂರು | **1** | | **1** |
| 10 | ಮೈಸೂರು | 49 | ನಂಜನಗೂಡು | **4** | **3** | **1** |
| | | 50 | ಮೈಸೂರು | **3** | **2** | **1** |

| | | | | | | |
|---|---|---|---|---|---|---|
| | | 51 | ಹೆಚ್.ಡಿ. ಕೋಟೆ | **2** | | **2** |
| | | 52 | ಟಿ. ನರಸೀಪುರ | **2** | | **2** |
| | | 53 | ಹುಣಸೂರು | **2** | **1** | **1** |
| | | 54 | ಕೆ.ಆರ್. ನಗರ | **2** | | **2** |
| | | 55 | ಪಿರಿಯಾಪಟ್ಟಣ | **2** | | **2** |
| 11 | ಚಿಕ್ಕಮಂಗಳೂರು | 56 | ಕಡೂರು | **6** | **3** | **3** |
| | | 57 | ಕೊಪ್ಪ | **1** | **1** | |
| | | 58 | ಮೂಡಿಗೆರೆ | **2** | | **2** |
| | | 59 | ಶೃಂಗೇರಿ | **1** | | **1** |
| | | 60 | ತರಿಕೆರೆ | **2** | **1** | **1** |
| | | 61 | ನರಸಿಂಹರಾಜಪುರ | **1** | | **1** |
| | | 62 | ಚಿಕ್ಕಮಂಗಳೂರು | **4** | **1** | **3** |
| 12 | ದಕ್ಷಿಣ ಕನ್ನಡ | 63 | ಮಂಗಳೂರು | **5** | **1** | **4** |
| | | 64 | ಬೆಳ್ತಂಗಡಿ | **2** | **2** | |
| | | 65 | ಪುತ್ತೂರು | **1** | | **1** |
| | | 66 | ಬಂಟ್ವಾಳ | **1** | | **1** |
| | | 67 | ಸುಳ್ಯ | **1** | | **1** |
| 13 | ಹಾಸನ | 68 | ಹಾಸನ | **4** | **4** | |

| | | | | | | |
|---|---|---|---|---|---|---|
| | | 69 | ಬೇಲೂರು | **2** | | **2** |
| | | 70 | ಹೊಳೆನರಸೀಪುರ | **5** | **2** | **3** |
| | | 71 | ಅರಕಲಗೂಡು | **3** | | **3** |
| | | 72 | ಸಕಲೇಶಪುರ | **3** | | **3** |
| | | 73 | ಚೆನ್ನರಾಯಪಟ್ಟಣ | **3** | **1** | **2** |
| | | 74 | ಅರಸೀಕೆರೆ | **1** | | **1** |
| 14 | ಮಂಡ್ಯ | 75 | ಮಳವಳ್ಳಿ | **3** | **2** | **1** |
| | | 76 | ಮಂಡ್ಯ | **2** | **1** | **1** |
| | | 77 | ನಾಗಮಂಗಲ | **4** | **1** | **3** |
| | | 78 | ಮದ್ದೂರು | **2** | **1** | **1** |
| | | 79 | ಶ್ರೀರಂಗಪಟ್ಟಣ | **3** | **1** | **2** |
| | | 80 | ಕೆ.ಆರ್. ಪೇಟೆ | **2** | **1** | **1** |
| | | 81 | ಪಾಂಡವಪುರ | **3** | **2** | **1** |
| 15 | ಚಾಮರಾಜನಗರ | 82 | ಗುಂಡ್ಲುಪೇಟೆ | **4** | **2** | **2** |
| | | 83 | ಕೊಳ್ಳೆಗಾಲ | **4** | **1** | **3** |
| | | 84 | ಚಾಮರಜನಗರ | **2** | | **2** |
| 16 | ಉಡುಪಿ | 85 | ಉಡುಪಿ | **2** | **1** | **1** |
| | | 86 | ಕಾರ್ಕಳ | **1** | | **1** |

| | | | | | | |
|---|---|---|---|---|---|---|
| | | 87 | ಕುಂದಾಪುರ | **2** | | **2** |
| 17 | ಕೊಡಗು | 88 | ವಿರಾಜಪೇಟೆ | **1** | | **1** |
| | | 89 | ಸೋಮವಾರಪೇಟೆ | **4** | **2** | **2** |
| 18 | ಬೆಳಗಾಂ | 90 | ಅಥಣಿ | **3** | **1** | **2** |
| | | 91 | ಹುಕ್ಕೇರಿ | **5** | **3** | **2** |
| | | 92 | ಸೌದತ್ತಿ | **1** | **1** | |
| | | 93 | ಬೈಲಹೊಂಗಲ | **3** | **2** | **1** |
| | | 94 | ಗೋಕಾಕ್ | **7** | **4** | **3** |
| | | 95 | ಚಿಕ್ಕೋಡಿ | **4** | **1** | **3** |
| | | 96 | ರಾಮದುರ್ಗ | **1** | | **1** |
| | | 97 | ರಾಯಭಾಗ್ | **1** | | **1** |
| | | 98 | ಬೆಳಗಾಂ | **1** | | **1** |
| | | 99 | ಖಾನಾಪುರ | **1** | **1** | |
| 19 | ಬಿಜಾಪುರ | 100 | ಇಂಡಿ | **5** | **4** | **1** |
| | | 101 | ಮುದ್ದೇಬಿಹಾಳ | **1** | **1** | |
| | | 102 | ಬಿಜಾಪುರ | **3** | **1** | **2** |
| | | 103 | ಬಸವನಬಾಗೇವಾಡಿ | **1** | | **1** |
| | | 104 | ಸಿಂಧಗಿ | **2** | | **2** |

| | | | | | | |
|---|---|---|---|---|---|---|
| 20 | ಧಾರವಾಡ | 105 | ಧಾರವಾಡ | **2** | | **2** |
| | | 106 | ಕಲಘಟಗಿ | **1** | | **1** |
| | | 107 | ಕುಂದಗೋಳ | **2** | | **2** |
| | | 108 | ನವಲಗುಂದ | **1** | | **1** |
| | | 109 | ಹುಬ್ಬಳ್ಳಿ | **1** | | **1** |
| 21 | ಉತ್ತರಕನ್ನಡ | 110 | ಮುಂಡಗೋಡು | **1** | **1** | |
| | | 111 | ಕುಮಟ | **1** | | **1** |
| | | 112 | ಜೋಯಿಡಾ, (ಸೂಪಾ) | **1** | | **1** |
| | | 113 | ಯಲ್ಲಾಪುರ | **1** | **1** | |
| | | 114 | ಹಳಿಯಾಳ | **2** | | **2** |
| | | 115 | ಭಟ್ಕಳ | **1** | | **1** |
| | | 116 | ಶಿರಸಿ | **1** | **1** | |
| 22 | ಬಾಗಲಕೋಟೆ | 117 | ಬಾಗಲಕೋಟೆ | **4** | **3** | **1** |
| | | 118 | ಜಮಖಂಡಿ | **1** | **1** | |
| | | 119 | ಮುಧೋಳ್ | **5** | **3** | **2** |
| | | 120 | ಬೀಳಗಿ | **2** | | **2** |
| | | 121 | ಬದಾಮಿ | **1** | | **1** |

| | | | | | | |
|---|---|---|---|---|---|---|
| | | 122 | ಹುನಗುಂದ | **1** | | **1** |
| 23 | ಗದಗ | 123 | ಗದಗ | **3** | **1** | **2** |
| | | 124 | ರೋಣ | **1** | **1** | |
| | | 125 | ಶಿರಹಟ್ಟಿ | **1** | **1** | |
| | | 126 | ಮುಂಡರಗಿ | **1** | | **1** |
| | | 127 | ನರಗುಂದ | **1** | | **1** |
| 24 | ಹಾವೇರಿ | 128 | ಹಾನಗಲ್ | **3** | **1** | **2** |
| | | 129 | ಬ್ಯಾಡಗಿ | **1** | | **1** |
| | | 130 | ಶಿಗ್ಗಾಂ | **2** | | **2** |
| | | 131 | ಹಿರೇಕೆರೂರು | **2** | **1** | **1** |
| | | 132 | ಸವಣೂರು | **1** | **1** | |
| | | 133 | ರಾಣೆಬೆನ್ನೂರು | **1** | | |
| | | 134 | ಹಾವೇರಿ | **2** | **1** | **1** |
| 25 | ಗುಲ್ಬರ್ಗ | 135 | ಅಫ್‌ಜಲ್‌ಪುರ | **3** | **2** | **1** |
| | | 136 | ಚಿತ್ತಾಪುರ | **5** | **1** | **4** |
| | | 137 | ಚಿಂಚೋಳಿ | **1** | **1** | |
| | | 138 | ಗುಲ್ಬರ್ಗ | **5** | **1** | **4** |
| | | 139 | ಜೇವರ್ಗಿ | **3** | **1** | **2** |

| | | | | | | |
|---|---|---|---|---|---|---|
| | | 140 | ಆಳಂದ | **2** | **1** | **1** |
| | | 141 | ಸೇಡಂ | **2** | **1** | **1** |
| 26 | ಯಾದಗಿರಿ | 142 | ಶಹಪುರ | **2** | **1** | **1** |
| | | 143 | ಸುರಪುರ | **3** | **1** | **2** |
| | | 144 | ಯಾದಗಿರಿ | **6** | **2** | **4** |
| 27 | ಬಳ್ಳಾರಿ | 145 | ಹಗರಿಬೊಮ್ಮನಹಳ್ಳಿ | **2** | **1** | **1** |
| | | 146 | ಹೊಸಪೇಟೆ | **4** | **2** | **2** |
| | | 147 | ಕೂಡ್ಲಿಗಿ | **2** | **1** | **1** |
| | | 148 | ಹಡಗಲಿ | **4** | **1** | **3** |
| | | 149 | ಸಂಡೂರು | **4** | **1** | **3** |
| | | 150 | ಶಿರಗುಪ್ಪ | **2** | **1** | **1** |
| | | 151 | ಬಳ್ಳಾರಿ | **5** | **1** | **4** |
| 28 | ಬೀದರ್ | 152 | ಔರಾದ್ | **3** | **1** | **2** |
| | | 153 | ಬೀದರ್ | **4** | **1** | **3** |
| | | 154 | ಬಾಲ್ಕಿ | **2** | | **2** |
| | | 155 | ಹುಮನಾಬಾದ್ | **2** | | **2** |
| | | 156 | ಬಸವಕಲ್ಯಾಣ | **4** | **1** | **3** |
| 29 | ರಾಯಚೂರು | 157 | ಲಿಂಗಸಗೂರು | **4** | **1** | **3** |

| | | | | | | |
|---|---|---|---|---|---|---|
| | | 158 | ರಾಯಚೂರು | **5** | **2** | **3** |
| | | 159 | ದೇವದುರ್ಗ | **4** | **1** | **3** |
| | | 160 | ಮಾನ್ವಿ | **3** | | **3** |
| | | 161 | ಸಿಂಧನೂರು | **3** | | **3** |
| 30 | ಕೊಪ್ಪಳ | 162 | ಗಂಗಾವತಿ | **4** | **2** | **2** |
| | | 163 | ಯಲ್ಬುರ್ಗಾ | **4** | **2** | **2** |
| | | 164 | ಕೊಪ್ಪಳ | **2** | | **2** |
| | | 165 | ಕುಷ್ಟಗಿ | **2** | **1** | **1** |
| **ಒಟ್ಟು** | | | | **395** | **144** | **251** |

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಗಳೆ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಕಟ್ಟಡಗಳಲ್ಲಿ ಬಾಡಿಗೆಯ ಕಟ್ಟಡಗಳ ಸಂಖ್ಯೆ ಎಷ್ಟು ಎಂದು ಕೇಳಿದ ನನ್ನ ಪ್ರಶ್ನೆಗೆ ಮಾನ್ಯ ಸಚಿವರು, 251 ವಸತಿ ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿವೆ ಮತ್ತು 144 ವಸತಿ ಶಾಲೆಗಳು ಸ್ವಂತ ಕಟ್ಟಡಗಳಲ್ಲಿವೆ ಎಂದು ಹೇಳಿದರು. 113 ವಸತಿ ಶಾಲೆಗಳಿಗೆ ನಿವೇಶನ ಮಂಜೂರು ಮಾಡು ವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ, ಈ ಬಗ್ಗೆ ಕಾಳಜಿ ವಹಿಸಲು ಉಸ್ತುವಾರಿ ಸಚಿವರಿಗೆ ಮತ್ತು ಸ್ಥಳೀಯ ಶಾಸಕರನ್ನೂ ಕೇಳಿದ್ದೇವೆ ಎಂದು ಉತ್ತರ ಕೊಟ್ಟಿದ್ದೀರಿ. ಇಲ್ಲಿ ಒಂದು ವಿಚಾರ ತಿಳಿದುಕೊಳ್ಳ ಬೇಕು. ವಸತಿ ಶಾಲೆಗಳಿಗೆಂದು ಯಾರೂ ಕಟ್ಟಡಗಳನ್ನು ಕಟ್ಟುವುದಿಲ್ಲ. ಮನೆಗೆಂದು, ಗೋಡೌನ್‌ಗೆಂದು ಅಥವಾ ಹೋಟೇಲ್‌ಗೆಂದು ಕಟ್ಟುತ್ತಾರೆ. ಈಗ ನೀವು ನಡೆಸುತ್ತಿರುವ ಶಾಲೆಗಳೆಲ್ಲ ಗೋಡೌನ್‌ನಲ್ಲಿವೆ. ನಿಮ್ಮ ಇಲಾಖೆಯವರಿಗೆ, ಬಾಡಿಗೆ ಕೊಟ್ಟು ವಸತಿ ಶಾಲೆಗಳನ್ನು ನಡೆಸುವುದೇ ಲಾಭದಾಯಕ ಎಂಬ ಭಾವನೆ ಇದೆ ಎಂದು ಕಾಣಿಸುತ್ತಿದೆ. ಹಾಗಿಲ್ಲದೇ ಇದ್ದರೆ, ನಿವೇಶನಗಳು ಸಿಗುವುದೇ ಇಲ್ಲ ಎಂದು ವಾದ ಮಾಡುವುದಕ್ಕೆ ಆಗುವುದಿಲ್ಲ. ನಿವೇಶನಗಳು ಅಗತ್ಯವಾಗಿದ್ದಾಗ ಅದನ್ನು ಪಡೆಯುವುದಕ್ಕೆ ಅವಕಾಶ ಇರುತ್ತದೆ. ಆದ್ದರಿಂದ, ಎಲ್ಲಿ ವಸತಿ ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿದೆಯೋ ಅಂತಹ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ಒದಗಿಸು ವಂತಹ ಕೆಲಸ ಮಾಡಬೇಕು ಮತ್ತು ಗೋಡೌನ್‌ನಲ್ಲಿ ನಡೆಸುತ್ತಿರುವಂಥ ವಸತಿ ಶಾಲೆಗಳನ್ನು ಸರಿಪಡಿಸಬೇಕೆಂದು ನಾನು ಕೋರುತ್ತೇನೆ.

**ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು):–** ಮಾನ್ಯ ಸಭಾಪತಿಗಳೆ, 395 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ 144 ಶಾಲೆಗಳು ಈಗಾಗಲೇ ಸ್ವಂತ ಕಟ್ಟಡವನ್ನು ಹೊಂದಿದೆ. 117 ಶಾಲೆಗಳಿಗೆ ಸಂಬಂಧಪಟ್ಟ ಹಾಗೆ ಕಟ್ಟಡದ ಕೆಲಸ ನಡೆಯುತ್ತಿದ್ದು ಅದು ಮುಗಿಯುವ ಹಂತದಲ್ಲಿದೆ. 21 ವಸತಿ ಶಾಲೆಗಳಿಗೆ ನಿವೇಶನದ ಲಭ್ಯತೆ ಇದೆ, ಅದಕ್ಕೆ ಅಂದಾಜು ಪಟ್ಟಿ ತಯಾರಿಸಲಾಗುತ್ತಿದೆ. 113 ವಸತಿ ಶಾಲೆಗಳಿಗೆ ನಿವೇಶನಗಳನ್ನು ಒದಗಿಸಬೇಕೆಂದು ಜಿಲ್ಲಾಧಿಕಾರಿಗಳ ಸಭೆ ಕರೆದು ಚರ್ಚೆ

ಮಾಡಿದ್ದೇನೆ, ಇಲಾಖೆಯಿಂದ ಹಣ ಕೊಡುತ್ತೇವೆ, ಇಲಾಖೆಯಿಂದಲೇ ನಿವೇಶನ ಖರೀದಿ ಮಾಡುತ್ತೇವೆ ಎಂಬ ವಿಷಯವನ್ನು ತಿಳಿಸಿದ್ದೇನೆ. ಅಲ್ಲದೇ ಸ್ಥಳೀಯ ಶಾಸಕರಿಗೆ, ಉಸ್ತುವಾರಿ ಸಚಿವರಿಗೆ ಪತ್ರ ಬರೆದಿದ್ದೇನೆ. ಇಡೀ ಸಮಾಜಕ್ಕೆ, ಸರ್ಕಾರಕ್ಕೆ ಮಾರ್ಗದರ್ಶನ ಮಾಡುವಂಥದ್ದು ಶಾಸಕರ ಜವಾಬ್ದಾರಿಯಾಗಿದೆ. ಜೊತೆಗೆ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳು ಕೂಡ ಹಿಂದಿನ ವರ್ಷ ಪ್ರಾರಂಭವಾಗಿರುವಂಥದ್ದು, 114 ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆ. ಅದಕ್ಕೂ ನಿವೇಶನ ಇಲ್ಲ. ನಾನು ಸದನದ ಮುಖಾಂತರ ಎಲ್ಲಾ ಶಾಸಕರಲ್ಲಿ, ಜಿಲ್ಲಾ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಹಾಸ್ಟಲ್ ಇರಬಹುದು, ಅಥವಾ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳಿಗೆ ನಿವೇಶನ ಒದಗಿಸಿಕೊಡುವುದಕ್ಕೆ ತಾವು ಮುತುವರ್ಜಿವಹಿಸಬೇಕು. ತಮ್ಮ ರಿವ್ಯೂ ಮೀಟಿಂಗ್‌ಗಳಲ್ಲಿ ಜಿಲ್ಲಾಧಿಕಾರಿಗಳನ್ನು, ತಹಶೀಲ್ದಾರ್‌ಗಳನ್ನು ಕರೆಯಿಸಿ ನನ್ನ ಇಲಾಖೆಯನ್ನು ಉಳಿಸಿಕೊಡಬೇಕೆಂದು ಸದನದ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗಲೂ ಸ್ಪಷ್ಟವಾಗಿ ಹೇಳಲಿಲ್ಲ. 113 ಶಾಲೆಗಳಿಗೆ ಯಾವಾಗ ಸ್ವಂತ ಕಟ್ಟಡಗಳನ್ನು ಮಾಡುತ್ತಾರೆ? ಈ ವರ್ಷ ಮಾಡುತ್ತಾರೆಯೇ ಅಥವಾ ಮುಂದಿನ ವರ್ಷ ಮಾಡುತ್ತಾರೆಯೇ? ಅದಕ್ಕೊಂದು ಕಾಲಮಿತಿ ಇರಬೇಕಲ್ಲವೆ? ಏಕೆಂದರೆ, ಇದು ನಿರಂತರವಾಗಿರಬಾರದು.

**ಶ್ರೀ ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ಇಲಾಖೆಯಲ್ಲಿ ಹಣದ ಕೊರತೆ ಇಲ್ಲ. ಅದು ಮೊರಾರ್ಜಿ ದೇಸಾಯಿ ಶಾಲೆ ಇರಬುದು, ಕಿತ್ತೂರು ರಾಣಿಚೆನ್ನಮ್ಮ ಶಾಲೆ ಇರಬಹುದು, ಹಾಸ್ಟಲ್‌ಗಳಿರ ಬಹುದು.

**ಸಭಾಪತಿಯವರು:–** ಹಣ ಇದೆ. ಕಟ್ಟಡವನ್ನು ಕಟ್ಟಿಸುತ್ತೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಚಿವರು ಕೋಲಾರ ಜಿಲ್ಲೆಗೆ ಉಸ್ತುವಾರಿ ಸಚಿವರಾಗಿದ್ದಾರೆ. 11 ಶಾಲೆಗಳಲ್ಲಿ 8 ಶಾಲೆಗಳು. . . . .

**ಸಭಾಪತಿಯವರು:–** ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆಂದು ತಾವೆಲ್ಲರೂ ಕೇಳಿಸಿಕೊಳ್ಳಲಿಲ್ಲ. ಶಾಸಕರುಗಳು ಪ್ರಯತ್ನ ಮಾಡಿ ನಮಗೆ ಜಾಗ ಕೊಡಿಸಲಿ. ಕಟ್ಟಡವನ್ನು ಕಟ್ಟಿಸುವುದಕ್ಕೆ ನಮ್ಮ ಹತ್ತಿರ ಹಣವಿದೆ ಎಂದು ಹೇಳಿದ್ದಾರೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಅವರೇ ಮೀಟಿಂಗ್ ಕರೆದು ಇವೆಲ್ಲಾ ಮಾಡುವುದಕ್ಕಾಗುವುದಿಲ್ಲವೆ?

**ಸಭಾಪತಿಯವರು:–** ಜಾಗ ಕೊಟ್ಟರೆ ಕಟ್ಟಿಸುತ್ತೇನೆ ಎಂದು ಮಾನ್ಯ ಸಚಿವರು ಹೇಳಿದರು. ಜಾಗ ಕೊಟ್ಟ ಮೇಲೂ ಕಟ್ಟಡವನ್ನು ಕಟ್ಟಿಸದಿದ್ದರೆ ಮತ್ತೊಮ್ಮೆ ಪ್ರಶ್ನೆಯನ್ನು ತನ್ನಿ. ಇದರ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಹಾಗೆಂದು ಶಾಸಕರ ಮೇಲೆ ಜಿಲ್ಲಾ ಉಸ್ತುವಾರಿ ಸಚಿವರ ಮೇಲೆ ನಾನು ಹೊರೆಯಾಗಿಲ್ಲ. ನಾನೇ ಸ್ವತಃ ಜಿಲ್ಲಾ ಮಟ್ಟದಲ್ಲಿ, ವಿಭಾಗ ಮಟ್ಟದಲ್ಲಿ ಸಭೆಗಳನ್ನು ಮಾಡುತ್ತಿದ್ದೇನೆ. ಕಡ್ಡಾಯವಾಗಿ ಜಮಾಬಂದಿ ಕಡತವನ್ನು ತರಿಸುತ್ತಿದ್ದೇನೆ. ಜಮಾಬಂದಿಗಳಲ್ಲಿ ಏನು ದಾಖಲಾಗಿವೆ ಆ ದಾಖಲೆಗಳ ಮೇಲೆ ನಾನು ಜಾಗಗಳನ್ನು ಪಡೆಯುತ್ತಿದ್ದೇನೆ. ನನ್ನಿಂದ ಎಲ್ಲಾ ಪ್ರಯತ್ನಗಳು ಆಗುತ್ತಿವೆ. ಈ ವರ್ಷ ಖಂಡಿತವಾಗಿಯೂ ನಾನು ಜಾಗಗಳನ್ನು ಪಡೆದು ಮಾನ್ಯ ಸದಸ್ಯರುಗಳೇನು ಅಪೇಕ್ಷೆ ಪಡುತ್ತಿದ್ದಾರೆ ಅದು ಮೊರಾರ್ಜಿ ದೇಸಾಯಿ ಶಾಲೆಗಳಿರಬಹುದು, ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳಿರಬಹುದು ಅವುಗಳನ್ನು ನಿರ್ಮಾಣ ಮಾಡುತ್ತೇನೆ.

## ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ವಿದ್ಯಾರ್ಥಿ ನಿಲಯಗಳ ನಿರ್ಮಾಣ.

**646; ಶ್ರೀ. ಎಸ್. ನಾಗರಾಜ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿರುವ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆಯ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು; ಅವು ಎಲ್ಲೆಲ್ಲಿವೆ; (ವಿಳಾಸವಾರು ವಿವರ ನೀಡುವುದು); ಸದರಿ ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಈ ಹಾಸ್ಟೆಲ್‌ಗಳ ನಿರ್ವಹಣೆಗೆ ಮಂಜೂರಾಗಿರುವ ಸಿಬ್ಬಂದಿ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ವಿದ್ಯಾರ್ಥಿನಿಲಯವಾರು ವಿವರ ಒದಗಿಸುವುದು);

**ಆ)** ಆ ಪೈಕಿ ಸ್ವಂತ ಕಟ್ಟಡದಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು; ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು; ಪಾವತಿಸಲಾಗುತ್ತಿರುವ ಬಾಡಿಗೆ ಮೊತ್ತ ಎಷ್ಟು; (ವಿದ್ಯಾರ್ಥಿ ನಿಲಯವಾರು ವಿವರ ಒದಗಿಸುವುದು)

**ಇ)** ಸ್ವಂತ ಕಟ್ಟಡ ಹೊಂದಿಲ್ಲದ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆಯೇ; ನಿರ್ಮಾಣ ಹಂತದಲ್ಲಿ ಇರುವ ವಿದ್ಯಾರ್ಥಿನಿಲಯಗಳ ಕಟ್ಟಡಗಳ ಸಂಖ್ಯೆ ಎಷ್ಟು

**ಈ)** ಪ್ರಸಕ್ತ ಸಾಲಿನಲ್ಲಿ ಎಷ್ಟು ವಿದ್ಯಾರ್ಥಿನಿಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆ? (ಇದಕ್ಕೆ ಅಗತ್ಯವಾದ ಹಣಕಾಸಿನ ವಿವರಗಳನ್ನು ಒದಗಿಸುವುದು)?

**ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು)**

**ಅ) ಮತ್ತು ಆ)** ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ವಿವರಗಳನ್ನು ಕ್ರಮವಾಗಿ ಅನುಬಂಧ–1, ಅನುಬಂಧ–2 ಮತ್ತು ಅನುಬಂಧ–3 ರಲ್ಲಿ ನೀಡಲಾಗಿದೆ.

ಇ) ಹೌದು

| ಕ್ರ. ಸಂ | ಇಲಾಖೆ | ನಿರ್ಮಾಣ ಹಂತದಲ್ಲಿರುವ ವಿದ್ಯಾರ್ಥಿನಿಲಯಗಳು | |
|---|---|---|---|
| | | ಮೈಸೂರು | ಚಾಮರಾಜನಗರ |
| 1 | ಸಮಾಜ ಕಲ್ಯಾಣ | 13 | 08 |
| 2 | ಪರಿಶಿಷ್ಟ ವರ್ಗಗಳ ಕಲ್ಯಾಣ | – | – |
| 3 | ಹಿಂದುಳಿದ ವರ್ಗಗಳ ಕಲ್ಯಾಣ | 03 | 01 |

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಚಾಮರಾಜನಗರ ಜಿಲ್ಲೆಯಲ್ಲಿ ಒಂದು ವಿದ್ಯಾರ್ಥಿನಿಲಯದ ಕಟ್ಟಡದ ಕಾಮಗಾರಿಗೆ ಅನಮೋದನೆ ನೀಡಲಾಗಿದೆ. 2 ವಿದ್ಯಾರ್ಥಿನಿಲಯಗಳಿಗೆ ಅಂದಾಜು ಪಟ್ಟಿ ಪಡೆದು ಕಟ್ಟಡ ಕಾಮಗಾರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

**ಈ) ಸಮಾಜ ಕಲ್ಯಾಣ ಇಲಾಖೆ**

ಪ್ರಸಕ್ತ ಸಾಲಿನಲ್ಲಿ ನಿವೇಶನದ ಲಭ್ಯತೆಯನ್ನು, ಅನುದಾನದ ಲಭ್ಯತೆಯನ್ನು ಅನುಸರಿಸಿ ಮೈಸೂರು ಜಿಲ್ಲೆಯಲ್ಲಿ 3 ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ 4 ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಮಾಡಲು ಉದ್ದೇಶಿಸಿದೆ. ಇದಕ್ಕೆ ಅವಶ್ಯಕವಾದ ಹಣವನ್ನು ರಾಜ್ಯವಲಯದಲ್ಲಿ ಒಟ್ಟು ₹ 7375 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.

**ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ**

ನಿವೇಶನ ದೊರೆತಿರುವ 1 ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣದ ಬಗ್ಗೆ ಕ್ರಮವಹಿಸಲಾಗಿದೆ. 2 ವಿದ್ಯಾರ್ಥಿನಿಲಯಗಳಿಗೆ ದೊರೆತಿರುವ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡಲು ಕ್ರಮವಹಿಸಲಾಗಿದೆ. ಅನುದಾನದ ಕೊರತೆ ಇರುವುದಿಲ್ಲ.

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**

ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಶೇ.50:50ರ ಅನುಪಾತದಲ್ಲಿ ಮೈಸೂರು ಜಿಲ್ಲೆಯಲ್ಲಿನ ಮೆಟ್ರಿಕ್-ಪೂರ್ವ ಬಾಲಕರ ಜಿಲ್ಲೆಯಲ್ಲಿನ ಮೆಟ್ರಿಕ್-ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ರಂಗಸಮುದ್ರ, ಟಿ.ನರಸೀಪುರ ತಾಲ್ಲೂಕು ಇದರ ಕಟ್ಟಡ ನಿರ್ಮಾಣ ಕಾರ್ಯವನ್ನು ₹ 78.01ಲಕ್ಷ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆತ ನಂತರ ಕಟ್ಟಡ ನಿರ್ಮಾಣ ಕಾರ್ಯ ಕೈಗೊಳ್ಳಲಾಗುವುದು.

# ಅನುಬಂಧ–1

# ಸಮಾಜ ಕಲ್ಯಾಣ ಇಲಾಖೆ

| ಕ್ರ.ಸಂ | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು | ವಿದ್ಯಾರ್ಥಿ ನಿಲಯದ ಸ್ಥಳ | ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | ಕಟ್ಟಡದ ವಿವರ | | | ಪಾವತಿಸ ಲಾಗುತ್ತಿರುವ ಬಾಡಿಗೆ ಮೊತ್ತ | ಮಂಜೂರಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳ ು |
|---|---|---|---|---|---|---|---|---|---|
| | | | | ಸ್ವಂತ | ಬಾಡಿಗೆ | ನಿರ್ಮಾಣ | | | |
| 1 | **2** | 3 | 4 | 5 | 6 | 7 | 8 | 9 | 10 |
| | **ಚಾಮರಾಜನಗರ ಜಿಲ್ಲೆ** | | | | | | | | |
| 1 | ಸರ್ಕಾರಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ | ಚಾ.ನಗರ ಟೌನ್ | 30 | ಸ್ವಂತ | | | | 6 | 3 |
| 2 | ಸರ್ಕಾರಿ ಸಾರ್ವಜನಿಕ ಬಾಲಕಿಯರ ವಿದ್ಯಾರ್ಥಿನಿಲಯ | ಚಾ.ನಗರ ಟೌನ್ | 79 | ಸ್ವಂತ | | | | 6 | 3 |
| 3 | ಸರ್ಕಾರಿ ಸಾರ್ವಜನಿಕ ಬಾಲಕಿಯರ ವಿದ್ಯಾರ್ಥಿನಿಲಯ, | ಸಂತೇಮರಹಳ್ಳಿ | 23 | ಸ್ವಂತ | | | | 5 | – |
| 4 | ಸರ್ಕಾರಿ ಸಾರ್ವಜನಿಕ ಬಾಲಕಿಯರ ವಿದ್ಯಾರ್ಥಿನಿಲಯ, | ಚಂದಕವಾಡಿ | 38 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 6750 | 5 | 5 |
| 5 | ಸರ್ಕಾರಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, | ವೆಂಕಟಯ್ಯನ ಛತ್ರ | 44 | ಸ್ವಂತ | | | | 6 | 1 |
| 6 | ಸರ್ಕಾರಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, | ಸಂತೇಮರಹಳ್ಳಿ | 50 | ಸ್ವಂತ | | | | 5 | 3 |
| 7 | ಸರ್ಕಾರಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, | ಆಲೂರು | 34 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 2400 | 4 | – |
| 8 | ಸರ್ಕಾರಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, | ಉಡಿಗಾಲ | 50 | ಸ್ವಂತ | | | | 4 | 1 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 9 | ಸರ್ಕಾರಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, | ಹೊಂಗನೂರು | 50 | ಸ್ವಂತ | | | | 4 | 1 |
| 10 | ಸರ್ಕಾರಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, | ಚಂದಕವಾಡಿ | 54 | ಸ್ವಂತ | | | | 4 | 4 |
| 11 | ಸರ್ಕಾರಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, | ಹರವೆ | 39 | ಸ್ವಂತ | | | | 4 | 1 |
| 12 | ಸರ್ಕಾರಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ, | ಬಿಸಲವಾಡಿ | 45 | | ಬಾಡಿಗೆ | | 8100 | 4 | 5 |
| 13 | ಸರ್ಕಾರಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ | ಕುದೇರು | 22 | ಸ್ವಂತ | | | | 4 | 2 |
| 14 | ಸರ್ಕಾರಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿನಿಲಯ | ಜನ್ನೂರು | 21 | ಸ್ವಂತ | | | | 3 | 1 |
| 15 | ಸರ್ಕಾರಿ ಕಾಲೇಜು ಬಾಲಕರ ವಿದ್ಯಾರ್ಥಿ ನಿಲಯ ಬ್ಲಾಕ್–1 | ಚಾ.ನಗರ ಟೌನ್ | 124 | ಸ್ವಂತ | | | | 17 | 4 |
| 16 | ಸರ್ಕಾರಿ ಕಾಲೇಜು ಬಾಲಕರ ವಿದ್ಯಾರ್ಥಿ ನಿಲಯ ಬ್ಲಾಕ್–2 | ಚಾ.ನಗರ ಟೌನ್ | 40 | | ಬಾಡಿಗೆ | | 2350 | 8 | 1 |
| 17 | ಸರ್ಕಾರಿ ಕಾಲೇಜು ಬಾಲಕಿಯರ ವಿದ್ಯಾರ್ಥಿ ನಿಲಯ | ಚಾ.ನಗರ ಟೌನ್ | 84 | ಸ್ವಂತ | | | | 5 | 3 |
| 18 | ಸರ್ಕಾರಿ ಕಾಲೇಜು ಬಾಲಕರ ವಿದ್ಯಾರ್ಥಿ ನಿಲಯ | ಕುದೇರು | 27 | ಸ್ವಂತ | | | | 6 | 1 |
| 19 | ಸ.ವರ್ಗೀಕೃತ ಕಾಲೇಜು ಬಾಲಕರ ವಿದ್ಯಾರ್ಥಿ ನಿಲಯ | ಚಾ.ನಗರ ಟೌನ್ | 57 | | ಬಾಡಿಗೆ | | 30440 | 6 | 6 |
| 20 | ಸರ್ಕಾರಿ.ವರ್ಗೀಕೃತ ಕಾಲೇಜು ಬಾಲಕಿಯರ ವಿದ್ಯಾರ್ಥಿ ನಿಲಯ | ಚಾ.ನಗರ ಟೌನ್ | 31 | | ಬಾಡಿಗೆ | | 12000 | 6 | 6 |
| 21 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿ ನಿಲಯ | ಚಾ.ನಗರ ಟೌನ್ | 65 | | ಬಾಡಿಗೆ | | 9550 | 6 | 2 |
| 22 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಗುಂಡ್ಲುಪೇಟೆ | 75 | ಸ್ವಂತ | | | | 5 | 3 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 23 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಕಬ್ಬಳ್ಳಿ | 65 | ಸ್ವಂತ | | | | 5 | – |
| 24 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಹಂಗಳ | 45 | ಸ್ವಂತ | | | | 5 | 1 |
| 25 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಬಾಚಹಳ್ಳಿ | 30 | ಸ್ವಂತ | | | | 5 | 1 |
| 26 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಬೊಮ್ಮಲಾಪುರ | 37 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 3000 | 4 | 4 |
| 27 | ಸರ್ಕಾರಿ ಬಾಲಕಿಯರ ವಿದ್ಯಾರ್ಥಿ ನಿಲಯ | ಗುಂಡ್ಲುಪೇಟೆ | 101 | ಸ್ವಂತ | | | | 6 | 3 |
| 28 | ಸರ್ಕಾರಿ ಬಾಲಕಿಯರ ವಿದ್ಯಾರ್ಥಿ ನಿಲಯ | ಕಬ್ಬಳ್ಳಿ | 51 | ಸ್ವಂತ | | | | 5 | 1 |
| 29 | ಸರ್ಕಾರಿ ಕಾಲೇಜು ಬಾಲಕಿಯರ ವಿದ್ಯಾರ್ಥಿ ನಿಲಯ | ಗುಂಡ್ಲುಪೇಟೆ ಟೌನ್ | 73 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 10900 | 5 | 3 |
| 30 | ಸರ್ಕಾರಿ ಕಾಲೇಜು ಬಾಲಕರ ವಿದ್ಯಾರ್ಥಿ ನಿಲಯ | ಗುಂಡ್ಲುಪೇಟೆ ಟೌನ್ | 75 | ಸ್ವಂತ | | | | 4 | 1 |
| 31 | ಸರ್ಕಾರಿ ಬಾಲಕೀಯರ ವಿದ್ಯಾರ್ಥಿ ನಿಲಯ | ಬೇಗೂರು | 45 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 10000 | 3 | 5 |
| 32 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಕೊಳ್ಳೇಗಾಲ ಟೌನ್ | 99 | ಸ್ವಂತ | | | | 13 | 2 |
| 33 | ಸರ್ಕಾರಿ ಬಾಲಕೀಯರ ವಿದ್ಯಾರ್ಥಿ ನಿಲಯ (ಎನ್‌ಪಿ) | ಕೊಳ್ಳೇಗಾಲ ಟೌನ್ | 114 | ಸ್ವಂತ | | | | 10 | 1 |
| 34 | ಸರ್ಕಾರಿ ಬಾಲಕೀಯರ ವಿದ್ಯಾರ್ಥಿ ನಿಲಯ (ಪಿ) | ಕೊಳ್ಳೇಗಾಲ ಟೌನ್ | 50 | ಸ್ವಂತ | | | | 5 | 3 |
| 35 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಪಾಳ್ಯ | 47 | ಸ್ವಂತ | | | | 4 | – |
| 36 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಕಾಮಗೆರೆ | 50 | ಸ್ವಂತ | | | | 6 | – |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 37 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಹನೂರು | 49 | ಸ್ವಂತ | | | | 5 | – |
| 38 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಮಣಗಳ್ಳಿ | 58 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 6400 | 4 | 4 |
| 39 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ರಾಮಪುರ | 50 | ಸ್ವಂತ | | | | 4 | 1 |
| 40 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ದಿನ್ನಳ್ಳಿ | 50 | ಸ್ವಂತ | | | | 4 | 1 |
| 41 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಕೂಡ್ಲೂರು | 23 | ಸ್ವಂತ | | | | 4 | 2 |
| 42 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಕುರಟ್ಟಿ ಹೊಸೂರು | 24 | | ಬಾಡಿಗೆ | | 3060 | 4 | 4 |
| 43 | ಸರ್ಕಾರಿ ಬಾಲಕೀಯರ ವಿದ್ಯಾರ್ಥಿ ನಿಲಯ | ಹನೂರು | 31 | ಸ್ವಂತ | | | | 4 | 2 |
| 44 | ಸರ್ಕಾರಿ ಬಾಲಕೀಯರ ವಿದ್ಯಾರ್ಥಿ ನಿಲಯ | ಮಾರ್ಟಳ್ಳಿ | 50 | ಸ್ವಂತ | | | | 4 | 4 |
| 45 | ಸರ್ಕಾರಿ ಬಾಲಕೀಯರ ಕಾಲೇಜು ವಿದ್ಯಾರ್ಥಿನಿಲಯ ಭಾಗ–1 | ಕೊಳ್ಳೇಗಾಲ ಟೌನ್ | 75 | ಸ್ವಂತ | | | | 6 | 2 |
| 46 | ಸರ್ಕಾರಿ ಬಾಲಕೀಯರ ಕಾಲೇಜು ವಿದ್ಯಾರ್ಥಿನಿಲಯ ಭಾಗ–2 | ಕೊಳ್ಳೇಗಾಲ ಟೌನ್ | 58 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 9100 | 4 | 1 |
| 47 | ವರ್ಗೀಕೃತ ಬಾಲಕರ ಕಾಲೇಜು ವಿದ್ಯಾರ್ಥಿ ನಿಲಯ | ಕೊಳ್ಳೇಗಾಲ ಟೌನ್ | 50 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 9600 | 6 | 3 |
| 48 | ಸರ್ಕಾರಿ ಮಹದೇಶ್ವರ ಕಾಲೇಜು ಬಾಲಕರ ವಿದ್ಯಾರ್ಥಿನಿಲಯ, | ಕೊಳ್ಳೇಗಾಲ ಟೌನ್ | 179 | ಸ್ವಂತ | | | | 11 | 4 |
| 49 | ಸರ್ಕಾರಿ ಬಾಲಕರ ಕಾಲೇಜು ವಿದ್ಯಾರ್ಥಿ ನಿಲಯ | ಹನೂರು | 75 | ಸ್ವಂತ | | | 0 | 4 | – |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 50 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಯಳಂದೂರು ಟೌನ್ | 97 | ಸ್ವಂತ | | | | 6 | 1 |
| 51 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಹೊನ್ನೂರು | 71 | ಸ್ವಂತ | | | | 4 | 1 |
| 52 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಮಾಂಬಳ್ಳಿ | 45 | ಸ್ವಂತ | | | | 4 | 2 |
| 53 | ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯ | ಗೌಡಹಳ್ಳಿ | 43 | ಸ್ವಂತ | | | | 4 | 2 |
| 54 | ಸರ್ಕಾರಿ ಬಾಲಕಿಯರವ ವಿದ್ಯಾರ್ಥಿ ನಿಲಯ | ಯಳಂದೂರು ಟೌನ್ | 76 | ಸ್ವಂತ | | | 0 | 7 | 3 |
| | **ಒಟ್ಟು** | | **3068** | **40** | **14** | **8** | **123650** | **292** | **118** |
| | **ಮೈಸೂರು ಜಿಲ್ಲೆ** | | | | | | | | |
| 1 | ಬಾಲಕಿ.ವಿ.ನಿ. ನಂಜನಗೂಡು | ನಂಜನಗೂಡು | 142 | ಸ್ವಂತ | | | – | 6 | 1 |
| 2 | ಬಾಲಕರ.ವಿ.ನಿ. ನಂಜನಗೂಡು | | 40 | ಸ್ವಂತ | | | – | 4 | 0 |
| 3 | ಬಾಲಕರ.ವಿ.ನಿ. ಹೆಡಿಯಾಲ | | 40 | ಸ್ವಂತ | | | – | 4 | 0 |
| 4 | ಬಾಲಕರ.ವಿ.ನಿ.ಕಸುವಿನಹಳ್ಳಿ | | 30 | | | | – | 4 | 2 |
| 5 | ಬಾಲಕರ.ವಿ.ನಿ. ಹರದನಹಳ್ಳಿ | | 61 | ಕಮ್ಯುನಿಟಿ ಹಾಲ್ | | | – | 4 | 2 |
| 6 | ಬಾಲಕರ.ವಿ.ನಿ. ನಗರ್ಲೆ | | 50 | ಸ್ವಂತ | | | – | 5 | 1 |
| 7 | ಬಾಲಕರ.ವಿ.ನಿ. ತಗಡೂರು | | 40 | ಸ್ವಂತ | | | – | 4 | 1 |
| 8 | ಬಾಲಕರ.ವಿ.ನಿ. ಬದನವಾಳು | | 40 | ಸ್ವಂತ | | | – | 4 | 1 |
| 9 | ಬಾಲಕರ.ವಿ.ನಿ. ಹದಿನಾರು | | 38 | ಸ್ವಂತ | | | – | 4 | 1 |
| 10 | ಬಾಲಕಿಯರ.ವಿ.ನಿ. ಹುರಾ | | 28 | ಸ್ವಂತ | | | – | 4 | 2 |
| 11 | ಬಾಲಕರ ಕಾಲೇಜು ವಿ.ನಿ, ನಂಜನಗೂಡು | | 40 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | ನಿಗಧಿ ಯಾಗಿಲ್ಲ | 4 | 0 |
| 12 | ಬಾಲಕೀಯರ ಕಾಲೇಜು ವಿ.ನಿ, ನಂಜನಗೂಡು | | 85 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 14000 | 4 | 1 |
| 13 | ಮೆಟ್ರಿಕ್ ಪೂರ್ವ ಬಾಲಕರ ವಿ.ನಿಲಯ, ಪಿರಿಯಾಪಟ್ಟಣ | ಪಿರಿಯಾ ಪಟ್ಟಣ | 84 | ಸ್ವಂತ | | | – | 4 | 0 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 14 | ಮೆಟ್ರಿಕ್ ಪೂರ್ವ ಬಾಲಕರ ವಿ.ನಿಲಯ, ರಾವಂದೂರು | | 50 | ಸ್ವಂತ | | | – | 4 | 0 |
| 15 | ಮೆಟ್ರಿಕ್ ಪೂರ್ವ ಬಾಲಕಿಯರ ವಿ.ನಿಲಯ, ಪಿರಿಯಾಪಟ್ಟಣ | | 50 | ಸ್ವಂತ | | | – | 4 | 0 |
| 16 | ಮೆಟ್ರಿಕ್ ನಂತರದ ಬಾಲಕರ ವಿ.ನಿಲಯ, ಪಿರಿಯಾಪಟ್ಟಣ | | 59 | ಸ್ವಂತ | | | – | 4 | |
| 17 | ಮೆಟ್ರಿಕ್ ನಂತರದ ಬಾಲಕಿಯರ ವಿ.ನಿಲಯ, ಪಿರಿಯಾಪಟ್ಟಣ | | 18 | ಸ್ವಂತ | | | – | 4 | 2 |
| 18 | ಪ.ಜಾ.ಬಾಲಕರ ವಿ.ನಿಲಯ, ಹೆಚ್.ಡಿ.ಕೋಟೆ | ಹೆಚ್.ಡಿ. ಕೋಟೆ | 50 | ಸ್ವಂತ | | | – | 6 | 4 |
| 19 | ಮೆ.ಪೂ.ಬಾಲಕೀಯರ ವಿ.ನಿಲಯ, ಹೆಚ್.ಡಿ.ಕೋಟೆ | | 105 | ಸ್ವಂತ | | | – | 6 | 4 |
| 20 | ಮೆ.ಪೂ.ಬಾಲಕರ ವಿ.ನಿಲಯ, ಸರಗೂರು | | 65 | ಸ್ವಂತ | | | – | 4 | 3 |
| 21 | ಮೆ.ಪೂ.ಬಾಲಕೀಯರ ವಿ.ನಿಲಯ, ಸರಗೂರು | | 53 | | ಬಾಡಿಗೆ | | 6090 | 4 | 3 |
| 22 | ಮೆ.ಪೂ.ಬಾಲಕರ ವಿ.ನಿಲಯ, ಅಂತರಸಂತೆ | | 34 | ಸ್ವಂತ | | | – | 4 | |
| 23 | ಮೆ.ಪೂ.ಬಾಲಕೀಯರ ವಿ.ನಿಲಯ, ಹೊಮ್ಮರಗಳ್ಳಿ | | 77 | ಸ್ವಂತ | | | – | 4 | 4 |
| 24 | ಮೆ.ಪೂ.ಬಾಲಕರ ವಿ.ನಿಲಯ, ಎಂಸಿ. ತಳಲು | | 40 | ಸರ್ಕಾರಿ (ರೇಷ್ಮೆ ಇಲಾಖೆ) | | | – | 5 | 5 |
| 25 | ಮೆಟ್ರಿಕ್ ನಂತರದ ಬಾಲಕಿಯರ ವಿ.ನಿಲಯ, ಹೆಚ್.ಡಿ.ಕೋಟೆ | | 48 | ಸ್ವಂತ | | ನಿರ್ಮಾಣ ಹಂತದಲ್ಲಿದೆ | – | 4 | 1 |
| 26 | ಮೆಟ್ರಿಕ್ ನಂತರದ ಬಾಲಕರ ವಿ.ನಿಲಯ, ಹೆಚ್.ಡಿ.ಕೋಟೆ | | 50 | ಸ್ವಂತ | | | – | 4 | 4 |
| 27 | ಮೆಟ್ರಿಕ್ ನಂತರದ ಬಾಲಕರ ವಿ.ನಿಲಯ, ಸರಗೂರು | | 15 | ಸ್ವಂತ (ಪ.ಪಂಚಾಯಿತಿ ಕಟ್ಟಡ) | | | – | 4 | 4 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 28 | ಪದವಿ ಕಾಲೇಜು ವಿ.ನಿ,. ಹೆಚ್.ಡಿ.ಕೋಟೆ | | 50 | ಸ್ವಂತ | | | – | 4 | 2 |
| 29 | ಮೆಟ್ರಿಕ್ ಪೂರ್ವ ಬಾಲಕರ ವಿ.ನಿಲಯ, ನಜರಬಾದ್ | ಮೈಸೂರು | 234 | ಸ್ವಂತ | | | – | 9 | 2 |
| 30 | ಮೆಟ್ರಿಕ್ ಪೂರ್ವ ಬಾಲಕಿಯರ ವಿ.ನಿಲಯ, ವಿ.ವಿ.ಮೊಹಲ್ಲ, ಭಾಗ–1 | | 150 | ಸ್ವಂತ | | | – | 7 | 0 |
| 31 | ಮೆಟ್ರಿಕ್ ಪೂರ್ವ ಬಾಲಕಿಯರ ವಿ.ನಿಲಯ, ವಿ.ವಿ.ಮೊಹಲ್ಲ, ಭಾಗ–2 | | 49 | ಸ್ವಂತ | | | – | 4 | 0 |
| 32 | ಮೆಟ್ರಿಕ್ ಪೂರ್ವ ಬಾಲಕರ ವಿ.ನಿಲಯ, ಕೀಳನಪುರ | | 40 | ಸ್ವಂತ | | | – | 4 | 0 |
| 33 | ಮೆಟ್ರಿಕ್ ಪೂರ್ವ ಬಾಲಕರ ವಿ.ನಿಲಯ, ಎಸ್. ಕಲ್ಲಹಳ್ಳಿ | | 50 | ಸ್ವಂತ | | | – | 4 | 0 |
| 34 | ಮೆಟ್ರಿಕ್ ಪೂರ್ವ ಬಾಲಕರ ವಿ.ನಿಲಯ, ಕಡಕೊಳ | | 50 | ಸ್ವಂತ | | | – | 4 | 0 |
| 35 | ಮೆಟ್ರಿಕ್ ಪೂರ್ವ ಬಾಲಕರ ವಿ.ನಿಲಯ, ಜಯಪುರ | | 36 | ಸ್ವಂತ | | | – | 4 | 0 |
| 36 | ಮೆಟ್ರಿಕ್ ನಂತರದ ಬಾಲಕೀಯರ ವಿ.ನಿಲಯ, ವಿ.ವಿ.ಮೊಹಲ್ಲ, | | 200 | ಸ್ವಂತ | | | – | 8 | |
| 37 | ಸರ್ಕಾರಿ ಪದವಿ ಪೂರ್ವ ಬಾಲಕರ ಕಾಲೇಜು ವಿ.ನಿಲಯ ಬೋಗಾದಿ | | 160 | ಸ್ವಂತ | | | – | 6 | 1 |
| 38 | ವರ್ಗೀಕೃತ ಬಾಲಕರ ವಿದ್ಯಾರ್ಥಿನಿಲಯ, ಬೋಗಾದಿ | | 85 | ಸ್ವಂತ | | ನಿರ್ಮಾಣ ಹಂತದಲ್ಲಿದೆ | – | 4 | 0 |
| 39 | ವೃತ್ತಿಪರ ಬಾಲಕಿಯರ ಕಾಲೇಜು ವಿ.ನಿಲಯ, ವಿ.ವಿ.ಮೊಹಲ್ಲ | | 85 | ಸ್ವಂತ | | | – | 4 | 0 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 40 | ವೈದ್ಯಕೀಯ ಮತ್ತು ತಾಂತ್ರಿಕ ಬಾಲಕರ ವಿದ್ಯಾರ್ಥಿನಿಲಯ, ಬೋಗಾದಿ | | 90 | ಸ್ವಂತ | | | – | 4 | 0 |
| 41 | ವೃತ್ತಿಪರ ಬಾಲಕರ ವಿದ್ಯಾರ್ಥಿನಿಲಯ, ಕೆಸರೆ | | 85 | ಸ್ವಂತ | | | – | 4 | 0 |
| 42 | ಸರ್ಕಾರಿ ಕಾಲೇಜು ಬಾಲಕೀಯರ ವಿ.ನಿಲಯ, ರಾಮಕೃಷ್ಣನಗರ | | 80 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 18280 | 6 | |
| 43 | ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಶಾರದಾದೇವಿನಗರ | | 100 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 21600 | 6 | 4 |
| 44 | ಸರ್ಕಾರಿ ಬಾಲಕರ ವಿ.ನಿಲಯ, ಟಿ. ನರಸೀಪುರ | ಟಿ. ನರಸೀಪುರ | 52 | ಸ್ವಂತ | | | – | 5 | 2 |
| 45 | ಸರ್ಕಾರಿ ಬಾಲಕೀಯರ ವಿ.ನಿಲಯ, ಟಿ. ನರಸೀಪುರ | | 114 | ಸ್ವಂತ | | | – | 7 | 1 |
| 46 | ಸರ್ಕಾರಿ ಬಾಲಕರ ವಿ.ನಿಲಯ, ಮೂಗೂರು | | 50 | ಸ್ವಂತ | | | – | 4 | 2 |
| 47 | ಸರ್ಕಾರಿ ಬಾಲಕರ ವಿ.ನಿಲಯ, ತಲಕಾಡು | | 50 | ಸ್ವಂತ | | | – | 4 | 3 |
| 48 | ಸರ್ಕಾರಿ ಬಾಲಕರ ವಿ.ನಿಲಯ, ಬನ್ನೂರು | | 36 | ಸ್ವಂತ | | | – | 4 | 1 |
| 49 | ಸರ್ಕಾರಿ ಬಾಲಕರ ವಿ.ನಿಲಯ, ವ್ಯಾಸರಾಜಪುರ | | 59 | ಸ್ವಂತ | | | – | 5 | 0 |
| 50 | ಸರ್ಕಾರಿ ಬಾಲಕರ ವಿ.ನಿಲಯ, ಚಿದರವಳ್ಳಿ | | 41 | ಸ್ವಂತ | | | – | 4 | 2 |
| 51 | ಸರ್ಕಾರಿ ಬಾಲಕರ ವಿ.ನಿಲಯ, ಮುಸುವಿನಕೊಪ್ಪಲು | | 35 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 3850 | 4 | 2 |
| 52 | ಮೆಟ್ರಿಕ್ ನಂತರದ ಬಾಲಕೀಯರ ವಿ.ನಿಲಯ, ಟಿ.ನರಸೀಪುರ | | 32 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 9900 | 5 | 5 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 53 | ಮೆಟ್ರಿಕ್ ನಂತರದ ಬಾಲಕರ ವಿ.ನಿಲಯ, ಟಿ.ನರಸೀಪುರ | | 50 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 9800 | 5 | 3 |
| 54 | ಸರ್ಕಾರಿ.ಬಾಲಕೀಯರ ವ.ನಿಲಯ, ಹುಣಸೂರು | ಹುಣಸೂರು | 35 | ಸ್ವಂತ | | | – | 4 | 0 |
| 55 | ಸರ್ಕಾರಿ ಬಾಲಕರ ವಿ.ನಿಲಯ, ಹುಣಸೂರು | | 75 | ಸ್ವಂತ | | | – | 5 | 0 |
| 56 | ಸರ್ಕಾರಿ ಬಾಲಕರ ವಿ.ನಿಲಯ, ಚಿಲ್ಕುಂದ | | 43 | ಸ್ವಂತ | | | – | 4 | 0 |
| 57 | ಸರ್ಕಾರಿ ಬಾಲಕರ ವಿ.ನಿಲಯ, ಗಾವಡಗೆರೆ | | 41 | ಸ್ವಂತ | | | – | 4 | 0 |
| 58 | ಸರ್ಕಾರಿ ಬಾಲಕರ ವಿ.ನಿಲಯ, ಕೆ.ಎಂ. ದೊಡ್ಡಿ | | 49 | ಸ್ವಂತ | | | – | 4 | 0 |
| 59 | ಸರ್ಕಾರಿ ಬಾಲಕರ ವಿ.ನಿಲಯ, ಕೆ. ಎಂ. ಬಿಳಿಕೆರೆ | | 38 | ಸ್ವಂತ | | | – | 4 | 0 |
| 60 | ಸರ್ಕಾರಿ ಬಾಲಕರ ವಿ.ನಿಲಯ, ಕೆ.ಎಂ. ಬನ್ನಿಕುಪ್ಪೆ | | 45 | | ಬಾಡಿಗೆ | | 4780 | 4 | 0 |
| 61 | ಸರ್ಕಾರಿ ಬಾಲಕರ ವಿ.ನಿಲಯ, ಕೆ. ಎಂ. ರತ್ನಪುರಿ | | 48 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | 4312 | 5 | 4 |
| 62 | ಮೆಟ್ರಿಕ್ ನಂತರದ ಬಾಲಕೀಯರ ವಿ.ನಿಲಯ, ಹುಣಸೂರು | | 50 | | ಬಾಡಿಗೆ | ನಿರ್ಮಾಣ ಹಂತದಲ್ಲಿದೆ | ನಿಗಧಿ ಯಾಗಿಲ್ಲ | 6 | 6 |
| 63 | ಮೆಟ್ರಿಕ್ ನಂತರದ ಬಾಲಕರ ವಿ.ನಿಲಯ, ಹುಣಸೂರು | | 150 | ಸ್ವಂತ | | | – | 7 | 0 |
| 64 | ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕೀಯರ ವಿ.ನಿಲಯ, ಕೆ.ಆರ್. ನಗರ | ಕೆ. ಆರ್. ನಗರ | 36 | ಸ್ವಂತ | | | – | 4 | 0 |
| 65 | ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿ.ನಿಲಯ, ಕೆ.ಆರ್. ನಗರ | | 39 | ಸ್ವಂತ | | | – | 5 | 0 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 66 | ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿ.ನಿಲಯ, ಸಾಲಿಗ್ರಾಮ | | 37 | ಸ್ವಂತ | | | – | 3 | 0 |
| 67 | ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕೀಯರ ವಿ.ನಿಲಯ, ಸಾಲಿಗ್ರಾಮ | | 22 | ಸ್ವಂತ | | | – | 3 | 0 |
| 68 | ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿ.ನಿಲಯ, ಹೊಸೂರು | | 42 | ಸ್ವಂತ | | | – | 4 | 0 |
| 69 | ಮೆಟ್ರಿಕ್ ನಂತರದ ಬಾಲಕರ ವಿ.ನಿಲಯ, ಕೆ.ಆರ್. ನಗರ | | 45 | ಸ್ವಂತ | | | – | 8 | 0 |
| | **ಒಟ್ಟು** | | **4290** | **57** | **12** | **13** | **92612** | **319** | **84** |
| | **ಒಟ್ಟು** | | **7358** | **97** | **26** | **21** | **216262** | **611** | **202** |

## ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ–ಅನುಬಂಧ–2

| ಕ್ರ. ಸಂ | ವಿದ್ಯಾರ್ಥಿ ನಿಲಯದ ಹೆಸರು ಮತ್ತು ವಿಳಾಸ | ವಿದ್ಯಾರ್ಥಿ ನಿಲಯದ ಸ್ಥಳ | ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | ಕಟ್ಟಡದ ವಿವರ | | | ಪಾವತಿಸ ಲಾಗುತ್ತಿರುವ ಬಾಡಿಗೆ ಮೊತ್ತ (ರೂ. ಗಳಲ್ಲಿ) | ಮಂಜೂ ರಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು |
|---|---|---|---|---|---|---|---|---|---|
| | | | | ಸ್ವಂತ | ಬಾಡಿಗೆ | ನಿರ್ಮಾಣ | | | |
| 1 | 2 | 3 | 4 | 5 | 6 | 7 | 8 | 9 | 10 |
| 1 | **ಮೈಸೂರು ಜಿಲ್ಲೆ** ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮೈಸೂರು ಟೌನ್, ಮೈಸೂರು | ಅಂಕಣ 2 ನೋಡಿ | 22 | | ಬಾಡಿಗೆ | | ನಿಗದಿಯಾಗಿಲ್ಲ | 04 | 00 |
| 2 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಹೆಚ್.ಡಿ.ಕೋಟೆ | –“– | 40 | | ಬಾಡಿಗೆ | | ನಿಗದಿಯಾಗಿಲ್ಲ | 04 | 01 |
| 3 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಬೇಗೂರು, ಹೆಚ್.ಡಿ.ಕೋಟೆ | –“– | 37 | ಸ್ವಂತ | | | | 05 | 03 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 4 | ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ, ಕೆಂಚನಹಳ್ಳಿ, ಹೆಚ್.ಡಿ.ಕೋಟೆ | –“– | 36 | ಸ್ವಂತ | | | | 05 | 01 |
| 5 | ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ, ಬಿ.ಮಟಕೆರೆ, ಹೆಚ್.ಡಿ.ಕೋಟೆ | –“– | 0 | ಸ್ವಂತ | | | | 05 | 05 |
| 6 | ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ, ಅಂತರಸಂತೆ, ಹೆಚ್.ಡಿ.ಕೋಟೆ | | 33 | ಸ್ವಂತ | | | | 05 | 00 |
| 7 | ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ, | | 25 | ಸ್ವಂತ | | | | 04 | 01 |
| | **ಪಿರಿಯಾಪಟ್ಟಣ** | | | | | | | | |
| 8 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಪಿರಿಯಾಪಟ್ಟಣ | | 41 | ಸ್ವಂತ | | | | 04 | 00 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 9 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಬೈಲುಕುಪ್ಪೆ, ಪಿರಿಯಾಪಟ್ಟಣ | | 40 | ಸ್ವಂತ | | | | 04 | 02 |
| 10 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕೆ.ಆರ್. ನಗರ | | 25 | ಸ್ವಂತ | | | | 03 | 00 |
| 11 | ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ, ಹುಣಸೂರು, ಕೆ.ಆರ್.ನಗರ | | 35 | ಸ್ವಂತ | | | | 05 | 02 |
| 12 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಹನಗೋಡಿ, ಕೆ.ಆರ್. ನಗರ | | 50 | ಸ್ವಂತ | | | | 06 | 03 |
| 13 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮೈಸೂರು | | 75 | | ಬಾಡಿಗೆ | | 10,000 | 04 | 04 |

**ಚಾಮರಾಜನಗರ ಜಿಲ್ಲೆ**

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 1 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಚಾಮರಾಜನಗರ ಟೌನ್ | –"– | 50 | ಸ್ವಂತ | | | | 04 | 02 |
| 2 | ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ, ಚಾಮರಾಜನಗರ | –"– | 37 | | ಬಾಡಿಗೆ | | 11,600 | 05 | 04 |
| 3 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕೊಳ್ಳೆಗಾಲ | –"– | 50 | ಸ್ವಂತ | | | | 04 | 02 |
| 4 | ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ, ಎಂ.ಎಂ. ಹಿಲ್ಸ್. | –"– | 90 | ಸ್ವಂತ | | | | 05 | 05 |
| 5 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಬಂಡಳ್ಳಿ ಚಾಮರಾಜನಗರ ತಾ॥ | –"– | 47 | | ಬಾಡಿಗೆ | | 2,090 | 04 | 04 |
| 6 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಗುಂಡ್ಲುಪೇಟೆ | –"– | 50 | ಸ್ವಂತ | | | | 05 | 05 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 7 | ಮೆಟ್ರಿಕ್ ನಂತರದ ಬಾಲಕೀಯರ ವಿದ್ಯಾರ್ಥಿ ನಿಲಯ, ಚಾಮರಾಜನಗರ | –"– | 17 | | ಬಾಡಿಗೆ | | 7,650 | 05 | 05 |
| 8 | ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಕೊಳ್ಳೇಗಾಲ ಟೌನ್ | | 13 | | ಬಾಡಿಗೆ | | 15,442 | 04 | 04 |
| | **ಒಟ್ಟು** | | **813** | | | | | | |

# ಹಿಂದುಳಿದ ವರ್ಗಗಳ ಇಲಾಖೆ–ಅನುಬಂಧ–3

| ಕ್ರ. ಸಂ | ವಿದ್ಯಾರ್ಥಿ ನಿಲಯದ ಹೆಸರು ಮತ್ತು ವಿಳಾಸ | ವಿದ್ಯಾರ್ಥಿ ನಿಲಯದ ಸ್ಥಳ | ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | ಕಟ್ಟಡದ ವಿವರ | | | ಪಾವತಿಸಲಾಗುತ್ತಿರುವ ಬಾಡಿಗೆ ಮೊತ್ತ ( ರೂ. ಗಳಲ್ಲಿ) | ಮಂಜೂರಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು |
|---|---|---|---|---|---|---|---|---|---|
| | | | | ಸ್ವಂತ | ಬಾಡಿಗೆ | ನಿರ್ಮಾಣ | | | |
| | **ಮೈಸೂರು ಜಿಲ್ಲೆ** | | | | | | | | |
| 1 | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯ, ಆದಿ ಚುಂಚನಗಿರಿ ರಸ್ತೆ, ಕಾವೇರಿ ಸ್ಕೂಲ್ ಹತ್ತಿರ, ಕುವೆಂಪುನಗರ, ಮೈಸೂರು | ಅಂಕಣ 2 ನೋಡಿ | 270 | ಸ್ವಂತ | | | | 06 | 02 |
| 2 | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯ, ಸಿದ್ದಾಪ್ಪಾಜಿ ದೇವಸ್ಥಾನದ ಹಿಂಭಾಗ, ಶ್ರೀರಾಮಮಂದಿರ ರಸ್ತೆ, ತೊಣಚಿಕೊಪ್ಪಲು, ಮೈಸೂರು. | –"– | 248 | | ಬಾಡಿಗೆ | | 17,415 | 06 | 01 |
| 3 | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯ, ಸಿಎಫ್‌ಟಿಆರ್‌ಐ ಬಡಾವಣೆ, 2ನೇ ಹಂತ ಬೋಗಾದಿ, ಮೈಸೂರು | –"– | 180 | ಸ್ವಂತ | | | | 4 | 0 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 4 | ಮೆಟ್ರಿಕ್ ನಂತರ ವೃತ್ತಿಪರ ಬಾಲಕರ ವಿದ್ಯಾರ್ಥಿ ನಿಲಯ, ವಿಜಯನಗರ, ಮೈಸೂರು | –"– | 120 | | ಬಾಡಿಗೆ | | 19,800 | 4 | 2 |
| 5 | ಮೆಟ್ರಿಕ್ ನಂತರ ವೃತ್ತಿಪರ ಬಾಲಕರ ವಿದ್ಯಾರ್ಥಿ ನಿಲಯ, ಆದಿ ಚುಂಚನಗಿರಿ ರಸ್ತೆ, ಕಾವೇರಿ ಸ್ಕೂಲ್ ಹತ್ತಿರ, ಕುವೆಂಪುನಗರ, ಮೈಸೂರು | –"– | 105 | ಸ್ವಂತ | | | | 03 | 0 |
| 6 | ಮೆಟ್ರಿಕ್ ನಂತರ ಸ್ನಾತಕೋತ್ತರ ಬಾಲಕರ ವಿದ್ಯಾರ್ಥಿ ನಿಲಯ, ಪಂಪಾವತಿ ರಸ್ತೆ, ಸರಸ್ವತಿಪುರಂ, ಮೈಸೂರು | –"– | 152 | | ಬಾಡಿಗೆ | | 1,500 | 06 | 04 |
| 7 | ಮೆಟ್ರಿಕ್ ನಂತರ ಬಾಲಕೀಯರ ವಿದ್ಯಾರ್ಥಿ ನಿಲಯ, ಆರ್.ಎಂ.ಪಿ. ಕ್ವಾಟ್ರಸ್ ಎದುರು, ಆದಿಚುಂಚನಗಿರಿ ರಸ್ತೆ, ಮೈಸೂರು | –"– | 172 | ಸ್ವಂತ | | | | 05 | 01 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 8 | ಮೆಟ್ರಿಕ್ ನಂತರ ಬಾಲಕೀಯರ ವಿದ್ಯಾರ್ಥಿ ನಿಲಯ, ಆರ್.ಎಂ.ಪಿ. ಕ್ವಾಟ್ರಸ್ ಎದುರು, ಆದಿಚುಂಚನಗಿರಿ ರಸ್ತೆ, ಮೈಸೂರು | –"– | 142 | ಸ್ವಂತ | | | | 05 | 01 |
| 9 | ಮೆಟ್ರಿಕ್ ನಂತರಬಾಲಕೀಯರ ವಿದ್ಯಾರ್ಥಿ ನಿಲಯ, ಆರ್.ಎಂ.ಪಿ. ಕ್ವಾಟ್ರಸ್ ಎದುರು, ಆದಿಚುಂಚನಗಿರಿ ರಸ್ತೆ, ಮೈಸೂರು | –"– | 127 | ಸ್ವಂತ | | | | 05 | 0 |
| 10 | ಮೆಟ್ರಿಕ್ ನಂತರದ ವೃತ್ತಿಪರ ಬಾಲಕೀಯರ ವಿದ್ಯಾರ್ಥಿ ನಿಲಯ ಯಾದವಗಿರಿ ಮೈಸೂರು | –"– | 148 | | ಬಾಡಿಗೆ | | 31,600 | 07 | 07 |
| 11 | ಮೆಟ್ರಿಕ್ ನಂತರ ಸ್ನಾತಕೋತ್ತರ ಬಾಲಕೀಯರ ವಿದ್ಯಾರ್ಥಿ ನಿಲಯ, ಆರ್.ಎಂ.ಪಿ. ಕ್ವಾಟ್ರಸ್ ಎದುರು, ಆದಿಚುಂಚನಗಿರಿ ರಸ್ತೆ, ಮೈಸೂರು | –"– | 52 | ಸ್ವಂತ | | | | 05 | 02 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 12 | ಮೆಟ್ರಿಕ್ ನಂತರ ಸ್ನಾತಕೋತ್ತ ಬಾಕೀಯರ ವಿದ್ಯಾರ್ಥಿ ನಿಲಯ ಆರ್.ಎಂ.ಪಿ. ಕ್ವಾಟ್ರಸ್ ಎದುರು, ಆದಿಚುಂಚನಗಿರಿ ರಸ್ತೆ, ಮೈಸೂರು | –"– | 50 | ಸ್ವಂತ | | | | 05 | 03 |
| 13 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಹುಣಸೂರು ರಸ್ತೆ ಇಲಾವಾಲ ಮೈಸೂರು | –"– | 35 | ಸ್ವಂತ | | | | 04 | 01 |
| 14 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಉದ್ಬೂರು | –"– | 15 | ಸ್ವಂತ | | | | 04 | 01 |
| 15 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಸಿದ್ದಾರಾಮನಹುಂಡಿ. | –"– | 50 | ಸ್ವಂತ | | | | 04 | 02 |
| 16 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಬೀರಿಹುಂಡಿ | –"– | 29 | ಸ್ವಂತ | | | | 04 | 01 |
| 17 | ಮೆಟ್ರಿಕ್ ನಂತರ ಬಾಲಕೀಯರ ವಿದ್ಯಾರ್ಥಿ ನಿಲಯ, ಟಿ.ನರಸೀಪುರ ಟೌನ್ | –"– | 46 | ಸ್ವಂತ | | | | 07 | 07 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 18 | ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ ನಂ–1, ವಿನಾಯಕನಗರ, ಬಲಮುರಿ ದೇವಸ್ಥಾನ ಪಕ್ಕ, ಟಿ. ನರಸೀಪುರ | –"– | 25 | ಸ್ವಂತ | | | | 05 | 02 |
| 19 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ನಂ.57, ಹೊಸ ತಿರಮಕೊಡಲು, ಟಿ.ನರಸೀಪುರ | –"– | 45 | ಸ್ವಂತ | | | | 04 | 02 |
| 20 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ರಂಗಸಮುದ್ರ | –"– | 30 | | ಬಾಡಿಗೆ | | 3,800 | 04 | 00 |
| 21 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ನಂ.202, ಅಂಗಡಿ ಬೀದಿ, ತಿಬ್ಬಾದೇವಿ ದೇವಸ್ಥಾನದ ಎದುರು, ಮೂಗೂರು. | –"– | 31 | | ಬಾಡಿಗೆ | | 2,100 | 04 | 02 |
| 22 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ತಲಕಾಡು | –"– | 41 | ಸ್ವಂತ | | | | 04 | 00 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 23 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಬನ್ನೂರು. (ನಂಜಾಪುರ) | –"– | 67 | | ಬಾಡಿಗೆ | | 15,000 | 04 | 00 |
| 24 | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯ, ಹೌಸಿಂಗ್ ಬೋರ್ಡ್ ಕಾಲೋನಿ, ನಂಜನಗೂಡು | –"– | 94 | ಸ್ವಂತ | | | | 04 | 00 |
| 25 | ಮೆಟ್ರಿಕ್ ನಂತರ ಬಾಲಕೀಯರ ವಿದ್ಯಾರ್ಥಿ ನಿಲಯ, ನಂಜನಗೂಡು | –"– | 50 | ಸ್ವಂತ | | | | 07 | 07 |
| 26 | ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ, ಕಾರುಣ್ಯಕೃಪ ದೇವಿರಮ್ಮನಹಳ್ಳಿ, ವಿದ್ಯಾನಗರ, ನಂಜನಗೂಡು | –"– | 40 | | ಬಾಡಿಗೆ | | 10,000 | 05 | 00 |
| 27 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಅರುಣಾ ರಸ್ತೆ, ಎಂ.ಜಿ.ರಸ್ತೆ, ನಂಜನಗೂಡು | –"– | 29 | ಸ್ವಂತ | | | | 04 | 01 |
| 28 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ತಗಡೂರು | –"– | 45 | ಸ್ವಂತ | | | | 04 | 01 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 29 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಹೆಮ್ಮರಗಾಲ | –"– | 54 | ಸ್ವಂತ | | | | 04 | 00 |
| 30 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕೂಡ್ಲಾಪುರ | –"– | 33 | ಸ್ವಂತ | | | | 04 | 03 |
| 31 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕಳಲೆ | –"– | – | ಸ್ವಂತ | | | | 04 | 00 |
| 32 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕಸುವಿನಹಳ್ಳಿ | –"– | 41 | ಸ್ವಂತ | | | | 04 | 01 |
| 33 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕಪ್ಪಸೋಗೆ | –"– | 41 | ಸ್ವಂತ | | | | 04 | 01 |
| 34 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಹುಲ್ಲಹಳ್ಳಿ | –"– | 40 | ಸ್ವಂತ | | | | 04 | 00 |
| 35 | ಮೆಟ್ರಿಕ್ ನಂತರದ ಬಾಲಕೀಯರ ವಿದ್ಯಾರ್ಥಿ ನಿಲಯ, ಹೆಚ್.ಡಿ. ಕೋಟೆ | –"– | 50 | | ಬಾಡಿಗೆ | | 9,000 | 07 | 07 |
| 36 | ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ, ಹೆಚ್.ಡಿ. ಕೋಟೆ | –"– | 35 | | ಬಾಡಿಗೆ | | 7,248 | 05 | 04 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 37 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ತಾ.ಪಂ.ಕಛೇರಿ ಹಿಂಬಾಗ, ಹೆಚ್.ಡಿ.ಕೋಟೆ | –"– | 50 | ಸ್ವಂತ | | | | 04 | 01 |
| 38 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮಾನಂದವಾಡಿ ರಸ್ತೆ ಮಾದಾಪುರ. | –"– | 51 | ಸ್ವಂತ | | | | 04 | 01 |
| 39 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮುನಗನಹಳ್ಳಿ | –"– | 50 | ಸ್ವಂತ | | | | 04 | 00 |
| 40 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕ್ಯಾತನಹಳ್ಳಿ | –"– | 31 | ಸ್ವಂತ | | | | 04 | 01 |
| 41 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ನಂಜನಗೂಡು ರಸ್ತೆ, ಮುಳ್ಳೂರು | –"– | 50 | | ಬಾಡಿಗೆ | | 2,675 | 04 | 00 |
| 42 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಫಾರಸ್ಟ್ ಕಛೇರಿ, ಸರಗೂರು | –"– | 50 | ಸ್ವಂತ | | | | 04 | 01 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 43 | ಮೆಟ್ರಿಕ್ ನಂತರ ಬಾಲಕೀಯರ ವಿದ್ಯಾರ್ಥಿ ನಿಲಯ, ಸರ್ಕಾರಿ ಪದವಿ ಪೂರ್ವ ಕಾಲೇಜು ಹತ್ತಿರ, ಮಾರುತಿ ಬಡಾವಣೆ, ಹುಣಸೂರು | –“– | 47 | ಸ್ವಂತ | | | | 05 | 03 |
| 44 | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯ, ಮೂಕನಹಳ್ಳಿ, ಹುಣಸೂರು ಟೌನ್. | –“– | 73 | ಸ್ವಂತ | | | | 05 | 01 |
| 45 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಸೇತುವೆ ಹುಣಸೂರು | –“– | 55 | ಸ್ವಂತ | | | | 04 | 02 |
| 46 | ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ, ಸರ್ಕಾರಿ ಪದವಿ ಪೂರ್ವ ಕಾಲೇಜು ಹತ್ತಿರ, ಮಾರುತಿ ಬಡಾವಣೆ, ಹುಣಸೂರು | –“– | 56 | ಸ್ವಂತ | | | | 05 | 03 |
| 47 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಸುರೇಶ್ ಬಿಲ್ಡಿಂಗ್ ಹನಗೂಡು | –“– | 47 | | ಬಾಡಿಗೆ | | 3,110 | 04 | 00 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 48 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮಾರುತಿ ಪ್ರೌಢಶಾಲೆ ಆವರಣ, ತಟ್ಟೆಕೆರೆ. | -“- | 16 | ಸ್ವಂತ | | | | 04 | 01 |
| 49 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಹುಣಸೂರು, ಬೈಪಾಸ್ ರಸ್ತೆ ಬಿಳಿಕೆರೆ | -“- | 50 | ಸ್ವಂತ | | | | 04 | 01 |
| 50 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಸಾಲಿಗ್ರಾಮದ ರಸ್ತೆ, ಹಿರೇಕ್ಯಾತನಹಳ್ಳಿ | -“- | 50 | ಸ್ವಂತ | | | | 04 | 01 |
| 51 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಗೆರಸನಹಳ್ಳಿ | -“- | 40 | | ಬಾಡಿಗೆ | | 2,189 | 04 | 03 |
| 52 | ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಪಿರಿಯಾಪಟ್ಟಣ ಟೌನ್ | -“- | 50 | | ಬಾಡಿಗೆ | | 3,360 | 07 | 07 |
| 53 | ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ, ಪಿರಿಯಾಪಟ್ಟಣ ಟೌನ್ | -“- | 41 | | ಬಾಡಿಗೆ | | 18,200 | 05 | 04 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 54 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಪಿರಿಯಾಪಟ್ಟಣ ಟೌನ್ | –"– | 30 | ಸ್ವಂತ | | | | 04 | 01 |
| 55 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ನಂದಿನಾಥಪುರದ ರಸ್ತೆ, ಹಣಸೇವಾಡಿ | –"– | 50 | ಸ್ವಂತ | | | | 04 | 02 |
| 56 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕೆಇಬಿ ವೃತ್ತ, ಬೆಟ್ಟದಪುರ | –"– | 60 | ಸ್ವಂತ | | | | 04 | 00 |
| 57 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಬೆಟ್ಟದ ಪುರ ರಸ್ತೆ, ಆರೋಗ್ಯ ಕೇಂದದ್ರ ಹತ್ತಿರ ಕೋಮಲಾಪುರ | –"– | 50 | ಸ್ವಂತ | | | | 04 | 01 |
| 58 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕುಶಾಲನಗರ, ಬೆಟ್ಟದಪುರ, ಸರ್ಕಾರಿ ಪ್ರೌಢಶಾಲೆ ಮುಂಬಾಗ, ಹಾರನಹಳ್ಳಿ | –"– | 50 | ಸ್ವಂತ | | | | 04 | 01 |
| 59 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಗ್ರಾಮಪಂಚಾಯಿತಿ ಹಿಂಬಾಗ, ಕಿತ್ತೂರು | –"– | 50 | | ಬಾಡಿಗೆ | | ನಿಧಿಯಾಗಿಲ್ಲ | 04 | 01 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 60 | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯ, ರೈಲ್ವೇ ಸ್ಟೇಷನ್ ರಸ್ತೆ, ಕೆ.ಆರ್.ನಗರ | –"– | 150 | ಸ್ವಂತ | | | | 05 | 01 |
| 61 | ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ, ಕೆ.ಆರ್. ನಗರ ಟೌನ್ | –"– | 100 | ಸ್ವಂತ | | | | 05 | 02 |
| 62 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಸಾಲಿಗ್ರಾಮ | –"– | 75 | | ಬಾಡಿಗೆ | | 10,915 | 04 | 03 |
| 63 | ಮೆಟ್ರಿಕ್ ಪೂರ್ವ ಬಾಲಕೀಯರ ವಿದ್ಯಾರ್ಥಿ ನಿಲಯ, ಹಾಸನ ಮುಖ್ಯರಸ್ತೆ, ಕೆ.ಆರ್. ನಗರ | –"– | 44 | ಸ್ವಂತ | | | | 05 | 02 |
| 64 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ವೆಂಕಟೇಶ ಬಿಲ್ಡಿಂಗ್, ಗ್ರಂಥಾಲಯ ರಸ್ತೆ, ಆಂಜನೇಯ ಬ್ಲಾಕ್, ಕೆ.ಆರ್. ನಗರ | –"– | 50 | ಸ್ವಂತ | | | | 04 | 01 |
| 65 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಹರದನಹಳ್ಳಿ | –"– | 50 | | ಬಾಡಿಗೆ | | 1,985 | 04 | 01 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 66 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮುಖ್ಯರಸ್ತೆ, ಹಂಪಾಪುರ | –"– | 46 | ಸ್ವಂತ | | | | 04 | 00 |
| 67 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಮುಖ್ಯರಸ್ತೆ, ಹೊಸ ಅಗ್ರಹಾರ | –"– | 44 | ಸ್ವಂತ | | | | 04 | 01 |
| 68 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಕಾಲೇಜು ಪಕ್ಕ ಮಿರ್ಲೆ | –"– | 51 | ಸ್ವಂತ | | | | 04 | 00 |
| 69 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಸಾಲಿಗ್ರಾಮ ರಸ್ತೆ, ಬೇರ್ಯ | –"– | 37 | ಸ್ವಂತ | | | | 04 | 00 |
| 70 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ತಮ್ಮಯನವರ ಮನೆ, ಮೇಲೂರು | –"– | 50 | | ಬಾಡಿಗೆ | | 2,261 | 04 | 01 |
| 71 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಫ್ರೌಡಶಾಲೆ ಪಕ್ಕ ಹನಸೊಗೆ, | –"– | 50 | ಸ್ವಂತ | | | | 04 | 01 |
| | | | | | | ಒಟ್ಟು | **1,62,158** | | |

## ಚಾಮರಾಜನಗರ ಜಿಲ್ಲೆ

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 1 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಚಾಮರಾಜನಗರ ಟೌನ್ | –"– | 122 | ಸ್ವಂತ | | | | 04 | 00 |
| 2 | ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಚಾಮರಾಜನಗರ ಟೌನ್ | –"– | 32 | ಸ್ವಂತ | | | | 05 | 03 |
| 3 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ವೆಂಕಟಯ್ಯನ ಛತ್ರ ಚಾಮರಾಜನಗರ ತಾ॥ | –"– | 25 | ಸ್ವಂತ | | | | 04 | 00 |
| 4 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕಾಗಲವಾಡಿ, ಚಾಮರಾಜನಗರ ತಾ॥ | –"– | 30 | | ಬಾಡಿಗೆ | | 5,220 | 04 | 00 |
| 5 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಅರಕಲವಾಡಿ, ಚಾಮರಾಜನಗರ ತಾ॥ | –"– | 50 | ಸ್ವಂತ | | | | 04 | 00 |
| 6 | ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ, ಚಾಮರಾಜನಗರ ಟೌನ್ | –"– | 114 | | ಬಾಡಿಗೆ | | 18,000 | 04 | 02 |
| 7 | ಮೆಟ್ರಿಕ್ ನಂತರ ಬಾಲಕೀಯರ ವಿದ್ಯಾರ್ಥಿನಿಲಯ, ಚಾಮರಾಜನಗರ ಟೌನ್ | –"– | 70 | ಸ್ವಂತ | | | | 05 | 02 |
| 8 | ಮೆಟ್ರಿಕ್ ನಂತರ ಬಾಲಕೀಯರ ವಿದ್ಯಾರ್ಥಿನಿಲಯ,ಹರವೆ ಚಾಮರಾಜನಗರ ತಾ॥ | –"– | 70 | | ಬಾಡಿಗೆ | | 4,900 | 07 | 03 |
| 9 | ವೃತ್ತಿಪರ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಚಾಮರಾಜನಗರ ಟೌನ್ | –"– | 100 | | ಬಾಡಿಗೆ | | 9,600 | 06 | 02 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 10 | ಮಾದರಿ ಸಾರ್ವಜನಿಕ ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಚಾಮರಾಜನಗರ ಟೌನ್ | –"– | 32 | ಸ್ವಂತ | | | | 07 | 04 |
| 11 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಗುಂಡ್ಲುಪೇಟೆ ಟೌನ್ | –"– | 50 | ಸ್ವಂತ | | | | 04 | 00 |
| 12 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬೇಗೂರು, ಗುಂಡ್ಲುಪೇಟೆ ತಾ॥ | –"– | 38 | ಸ್ವಂತ | | | | 04 | 01 |
| 13 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಗರಗನಹಳ್ಳಿ, ಗುಂಡ್ಲುಪೇಟೆ ತಾ॥ | –"– | 35 | ಸ್ವಂತ | | | | 04 | 02 |
| 14 | ಮೆಂಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಗುಂಡ್ಲುಪೇಟೆ ಟೌನ್ | –"– | 49 | | ಬಾಡಿಗೆ | | 8,300 | 04 | 01 |
| 15 | ಮೆಂಟ್ರಿಕ್ ನಂತರದ ಬಾಲಕೀಯರ ವಿದ್ಯಾರ್ಥಿನಿಲಯ, ಗುಂಡ್ಲುಪೇಟೆ ಟೌನ್ | –"– | 57 | ಸ್ವಂತ | | | | 05 | 03 |
| 16 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕೊಳ್ಳೇಗಾಲ ಟೌನ್ | –"– | 75 | ಸ್ವಂತ | | | | 04 | 01 |
| 17 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹನೂರು ಕೊಳ್ಳೇಗಾಲ ತಾ॥ | –"– | 47 | ಸ್ವಂತ | | | | 04 | 01 |
| 18 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕೌದಳ್ಳಿ, ಕೊಳ್ಳೇಗಾಲ ತಾ॥ | –"– | 41 | ಸ್ವಂತ | | | | 04 | 01 |
| 19 | ಮೆಂಟ್ರಿಕ್ ನಂತರದ ಬಾಲಕೀಯರ ವಿದ್ಯಾರ್ಥಿನಿಲಯ, ಕೊಳ್ಳೇಗಾಲ ಟೌನ್ | –"– | 91 | ಸ್ವಂತ | | | | 05 | 01 |

| 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|
| 20 | ಮೆಂಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಕೊಳ್ಳೇಗಾಲ ಟೌನ್ | –"– | 100 | | ಬಾಡಿಗೆ | | 19,650 | 06 | 02 |
| 21 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಯಳಂದೂರು ಟೌನ್ | –"– | 24 | ಸ್ವಂತ | | | | 04 | 00 |
| 22 | ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕೆಸ್ತೂರು, ಯಳಂದೂರು ತಾ॥ | –"– | 46 | ಸ್ವಂತ | | | | 04 | 03 |
| 23 | ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಯಳಂದೂರು ಟೌನ್ | –"– | 20 | | ಬಾಡಿಗೆ | | 3,350 | 07 | 05 |
| | | | | | | **ಒಟ್ಟು** | **69.020** | | |

ಪ್ರಸ್ತುತ ಮೈಸೂರ ಜಿಲ್ಲೆಯಲ್ಲಿ 3 ಕಟ್ಟಡಗಳು ಚಾಮರಾಜನಗರ ಜಿಲ್ಲೆಯಲ್ಲಿ 1 ಕಟ್ಟಡಗಳು ಹೀಗೆ 4 ಕಟ್ಟಡಗಳು ನಿರ್ಮಾಣ ಹಂತದಲ್ಲಿರುತ್ತವೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)(ಶ್ರೀ ಎಸ್. ನಾಗರಾಜ್‌ರವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮೈಸೂರು ಮತ್ತು ಚಾಮರಜನಗರ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ಪರಿಶಿಷ್ಟ ವರ್ಗಗಳ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ, ಈ ಎಲ್ಲಾ ಇಲಾಖೆಗಳಲ್ಲಿ ಸುಮಾರು 10,000ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಹಾಸ್ಟಲ್‌ನಲ್ಲಿದ್ದಾರೆ. ಅದರಲ್ಲಿ 26 ಹಾಸ್ಟಲ್‌ಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ಈ ಬಾಡಿಗೆ ಕಟ್ಟಡಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಬಹಳ ಇದೆ. ಇದರಿಂದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಆದಷ್ಟು ಬೇಗ ಕಟ್ಟಡಗಳ ನಿರ್ಮಾಣ ಆಗಬೇಕೆನ್ನುವುದು ನಮ್ಮ ಮುಖ್ಯ ಉದ್ದೇಶ. 21 ಕಟ್ಟಡಗಳು ನಿರ್ಮಾಣ ಹಂತದಲ್ಲಿವೆ ಎಂದು ಉತ್ತರದಲ್ಲಿದೆ. ಅದರೆ, ಈ ನಿರ್ಮಾಣ ಹಂತದಲ್ಲಿರ ತಕ್ಕಂಥ ಕಟ್ಟಡಗಳು ಯಾವಾಗ ಪೂರ್ಣಗೊಳ್ಳುತ್ತದೆ? ಎರಡು ಜಿಲ್ಲೆಗಳ ಹಾಸ್ಟಲ್‌ಗಳಲ್ಲಿ ಮಂಜೂರಾಗಿರತಕ್ಕಂಥ ಹುದ್ದೆಗಳಲ್ಲಿ ಖಾಲಿ ಇರತಕ್ಕಂಥ ಹುದ್ದೆಗಳು ಸುಮಾರು 300 ಹುದ್ದೆಗಳು ಎಂದು ಹೇಳಿದ್ದಾರೆ. ಇವತ್ತು ಹಾಸ್ಟಲ್‌ಗಳ ನಿರ್ವಹಣೆ ಮಾಡುವುದಕ್ಕೆ ಬಹಳ ತೊಂದರೆಯಾಗಿದೆ. ಅಲ್ಲಿ ಅವಶ್ಯವಾಗಿ ಮಂಜೂರಾಗಿರತಕ್ಕಂಥ ಹುದ್ದೆಗಳನ್ನು ಭರ್ತಿ ಮಾಡಿದಿದ್ದರೆ ಇವತ್ತು ವಿದ್ಯಾರ್ಥಿಗಳನ್ನು ನಿರ್ವಹಣೆ ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತಾರೆ ಮತ್ತು ಈ ಬಾಡಿಗೆ ಕಟ್ಟಡಗಳಲ್ಲಿರತಕ್ಕಂಥ ವಿದ್ಯಾರ್ಥಿಗಳನ್ನು ಸ್ವಂತ ಕಟ್ಟಡಕ್ಕೆ ಯಾವಾಗ ಮುಕ್ತಿ ಕೊಡುತ್ತಾರೆ? ಕಟ್ಟಡದ ಕಾಮಗಾರಿ ನಿರ್ಮಾಣ ಹಂತದಲ್ಲಿದೆ ಎಂದು ಹೇಳಿದ್ದಾರಲ್ಲಾ ಯಾವಾಗ ಪೂರ್ಣಗೊಳ್ಳಬಹುದು ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಎ. ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಚಾಮರಾಜ ನಗರದಲ್ಲಿ ಪರಿಶಿಷ್ಟ ಜಾತಿ ವರ್ಗದ್ದು ಒಟ್ಟು 54 ಹಾಸ್ಟೆಲ್‌ಗಳಿವೆ. 40 ಹಾಸ್ಟಲ್‌ಗಳು ಸ್ವಂತ ಕಟ್ಟಡದಲ್ಲಿದೆ. 14 ಬಾಡಿಗೆ ಕಟ್ಟಡದಲ್ಲಿವೆ. 8 ಕಟ್ಟಡಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಬಹುಶಃ ಇನ್ನು 4 ತಿಂಗಳಿನಲ್ಲಿ ಪೂರ್ಣಗೊಳಿಸಿ

ಅದನ್ನು ನಮ್ಮ ಇಲಾಖೆಗೆ ಒಪ್ಪಿಸುತ್ತಾರೆ. 6 ನಿವೇಶನಗಳಿವೆ. 23 ಬಿ.ಸಿ.ಎಂ. ಹಾಸ್ಟೆಲ್‌ಗಳಿವೆ. 23 ಬಾಡಿಗೆ ಹಾಸ್ಟೆಲ್‌ಗಳಲ್ಲಿ ಇವೆ. ಒಂದು ಹಾಸ್ಟೆಲ್ ಮಾತ್ರ ನಿರ್ಮಾಣ ಹಂತದಲ್ಲಿದೆ. 8 ನಿವೇಶನಗಳು ಲಭ್ಯವಾದ ತಕ್ಷಣ ಕಟ್ಟಡಗಳನ್ನು ನಿರ್ಮಾಣ ಮಾಡುತ್ತೇವೆ. ಅದೇ ರೀತಿ ಮೈಸೂರು ಜಿಲ್ಲೆಯ ಬಗ್ಗೆ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಿದ್ದೇನೆ. ಮಾನ್ಯ ಸದಸ್ಯರು 300 ಹುದ್ದೆಗಳು ಖಾಲಿ ಇವೆ, ಅವುಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಮೈಸೂರಿನಲ್ಲಿ 64 ಹುದ್ದೆಗಳು ಖಾಲಿ ಇವೆ. ಒಟ್ಟು 201 ಖಾಲಿ ಹುದ್ದೆಗಳಿವೆ. ತಮಗೆ ಗೊತ್ತಿರಬಹುದು, ಡಿ ಗ್ರೂಪ್ ನೌಕರರನ್ನು ಉದ್ಯೋಗಗಳಲ್ಲಿ ಸೇರಿಸಿಕೊಳ್ಳುವುದಕ್ಕೆ ಅವಕಾಶಗಳಿಲ್ಲ. ಹೊರ ಗುತ್ತಿಗೆಯ ಆಧಾರದ ಮೇಲೆ ಡಿ ಗ್ರೂಪ್ ನೌಕರರನ್ನು ನಾವು ಸೇರಿಸಿಕೊಂಡಿದ್ದೇವೆ. ಹೊರ ಗುತ್ತಿಗೆಯಿಂದಲೇ ಅಡಿಗೆ ಸಹಾಯಕರನ್ನು ತೆಗೆದುಕೊಂಡಿದ್ದೇವೆ. ಉಳಿದಂತೆ ಈಗಾಗಲೇ 600 ವಾರ್ಡನ್‌ಗಳನ್ನು ನೇಮಕಾತಿ ಮಾಡಿಕೊಂಡಿದ್ದೇವೆ. ಕೆ.ಪಿ.ಎಸ್.ಸಿ.ಯಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಇರಬಹುದು, ಹಿಂದುಳಿದ ವರ್ಗ ಇರಬಹುದು, ಒಟ್ಟು 513 ವಾರ್ಡನ್‌ಗಳಿಗೆ ಪರೀಕ್ಷೆಯಾಗಿದೆ. ಬಹುಶಃ ಫಲಿತಾಂಶ ಕೂಡ ಪ್ರಕಟವಾಗಿದೆ. ಅದನ್ನು ನಾವು ಭರ್ತಿ ಮಾಡುತ್ತೇವೆ. ಹೊರ ಗುತ್ತಿಗೆಯಿಂದ ಅಡಿಗೆ ಸಹಾಯಕರನ್ನು ಭರ್ತಿ ಮಾಡಿರುವುದರಿಂದ ಬಹುತೇಕವಾಗಿ ನೂರಕ್ಕೆ ಎಂಭತ್ತು ಪರ್ಸೆಂಟ್ ಸಮಸ್ಯೆ ಪರಿಹಾರವಾಗುತ್ತದೆ ಎನ್ನುವ ವಿಶ್ವಾಸ ನನಗಿದೆ.

**ಬೆಂಗಳೂರು ಮಹಾನಗರ ಪೊಲೀಸ್ ವಲಯದ ಪುನರ್ ರಚನೆ**

**798; ಡಾ॥ ದೊಡ್ಡರಂಗೇಗೌಡ (ನಾಮ ನಿರ್ದೇಶಿತರು)**

**ಅ)** ಬೃಹತ್ ಬೆಂಗಳೂರು ಮಹಾನಗರ ರಚನೆಯಾದ ಹಿನ್ನೆಲೆಯಲ್ಲಿ ಬೆಂಗಳೂರು ಪೊಲೀಸ್ ಕಮೀಷನರೇಟ್‌ನ್ನು ಪುನರ್ ರಚಿಸಲಾಗಿವುದೇ; ಹೊಸದಾಗಿ ಸೇರಿದ 110 ಹಳ್ಳಿಗಳು ಮತ್ತು ಅವುಗಳ ಪ್ರದೇಶವನ್ನು ಬೆಂಗಳೂರು ಪೊಲೀಸ್ ಕಮೀಷನರೇಟ್ ವ್ಯಾಪ್ತಿಗೆ ಒಳಪಡಿಸಿ ನಗರದ ನಾಗರೀಕರಿಗೆ ಅನುಕೂಲ ಮಾಡಿಕೊಡಲಾಗುವುದೇ;

**ಆ)** ಈ ಉದ್ದೇಶಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪೊಲೀಸ್ ವಲಯವನ್ನು ಕೇಂದ್ರ, ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ಎಂದು ಐದು ವಲಯಗಳನ್ನಾಗಿ ವಿಂಗಡಿಸಿ ಪುನರ್ ರೂಪಿಸಲಾಗುವುದೇ;

**ಇ)** ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಬರುವ ನಾಗರೀಕರು ಈಗ ದೂರು ನೀಡಲು ಹೊರವಲಯದ ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ರುವ ಠಾಣೆಗಳಿಗೆ ಹೋಗಬೇಕಾಗಿದ್ದು, ಹೊಸದಾಗಿ ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಸೇರಿದ ಬಡಾವಣೆಗಳಲ್ಲಿ ಪೊಲೀಸ್ ಗಸ್ತು ಇಲ್ಲದ ಪರಿಣಾಮ ವಾಗಿ ಕಳ್ಳತನ, ದರೋಡೆ ಮುಂತಾದ ಸಮಾಜಘಾತುಕ ಕೃತ್ಯಗಳು ನಡೆಯುತ್ತಿದ್ದು ಇವುಗಳನ್ನು ತಡೆಯಲು ಬಿ.ಬಿ.ಎಂ.ಪಿ ವ್ಯಾಪ್ತಿಯ ಹೊಸ ಪ್ರದೇಶಗಳನ್ನು ಬೆಂಗಳೂರು ಪೊಲೀಸ್ ಕಮೀಷನರೇಟ್ ವ್ಯಾಪ್ತಿಗೆ ತರಲು ಕ್ರಮ ತೆಗೆದುಕೊಳ್ಳಲಾಗುವುದೆ?

**ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು)**

**ಅ)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ಬಂದ ಮೇಲೆ ಪೊಲೀಸ್ ಕಮೀಷನರೇಟ್‌ನ ವ್ಯಾಪ್ತಿಯನ್ನು ಪುನರ್ ವಿಂಗಡಣೆ ಮಾಡುವ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಹೊಸದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿಸಲಾದ ಹಳ್ಳಿಗಳು ಮತ್ತು ಅವುಗಳ ಪ್ರದೇಶವನ್ನು ಬೆಂಗಳೂರು ಪೊಲೀಸ್ ಕಮೀಷನರೇಟ್ ವ್ಯಾಪ್ತಿಗೆ ಒಳಪಡಿಸಿ ನಗರದ ನಾಗರೀಕರಿಗೆ ಅನುಕೂಲ ಮಾಡುವ ಬಗ್ಗೆ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರಿಂದ ಪ್ರಸ್ತಾವನೆ ಬಂದ ನಂತರ ಪರಿಶೀಲಿಸಲಾಗುವುದು.

**ಆ)** ಪ್ರಸ್ತುತ ಬೆಂಗಳೂರು ನಗರದ ಪೊಲೀಸ್ ಕಮೀಷನರೇಟ್ ಘಟಕದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಕೇಂದ್ರ, ಆಗ್ನೇಯ ಹಾಗೂ ಈಶಾನ್ಯ ವಿಭಾಗಗಳನ್ನು ಒಳಗೊಂಡಂತೆ ಒಟ್ಟು 7 ವಿಭಾಗಗಳು ಅಸ್ತಿತ್ವದಲ್ಲಿ ಇರುತ್ತದೆ. ಈ 7

ವಿಭಾಗಗಳನ್ನು ಮತ್ತೆ ಪುನರ್ ವಿಂಗಡಿಸುವ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಡಿಯಲ್ಲಿ ಬರುವ ಕೆಲವೊಂದು ಹಳ್ಳಿಗಳು ಬೆಂಗಳೂರು ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಪ್ರಸ್ತುತ ಸೇರಿರುವುದಿಲ್ಲ. ಈ ಹಳ್ಳಿಗಳು ಪೊಲೀಸ್ ಕಮೀಷನರೇಟ್‌ಗೆ ಸೇರಿದ ಪೊಲೀಸ್ ಠಾಣೆಗಳಿಗೆ ಒಳಪಡದ ಕಾರಣ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒಳಪಡುವ ಎಲ್ಲಾ ಪ್ರದೇಶಗಳನ್ನು ಪೊಲೀಸ್ ಕಮೀಷನರೇಟ್ ವ್ಯಾಪ್ತಿಗೊಳಪಡಿಸುವಂತೆ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಂದಲ್ಲಿ ಅದನ್ನು ಪರಿಶೀಲಿಸಲಾಗುವುದು.

**ಶ್ರೀ ಸಿದ್ದರಾಜು (ವಿಧಾನಸಭಾ ಕ್ಷೇತ್ರ) (ಡಾ: ದೊಡ್ಡರಂಗೇಗೌಡರವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರ ತೃಪ್ತಿಯನ್ನು ತಂದಿಲ್ಲ. 110 ಹಳ್ಳಿಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ್ದು, ಪೊಲೀಸ್ ಇಲಾಖೆಯ ದೃಷ್ಟಿಯಿಂದ ಪೊಲೀಸ್ ಕಮೀಷನರೇಟ್ ವ್ಯಾಪ್ತಿಗೆ ಈ ಹಳ್ಳಿಗಳನ್ನು ಸೇರಿಸಲಾಗಿದ್ದು, ಇವುಗಳಿಗೆ ಸಂಬಂಧಪಟ್ಟಂತೆ ನಾಗರೀಕರಿಗೆ ಮೂಲಭೂತ ಸೌಕರ್ಯಗಳ ಅನುಕೂಲಗಳನ್ನು ಮಾಡಿಕೊಡಬೇಕಾಗಿತ್ತು. ಆ ಅನುಕೂಲಗಳನ್ನು ಮಾಡಿಕೊಡದೆ ಪ್ರಸ್ತಾವನೆ ಬಂದ ನಂತರ ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ಅಲ್ಲಿಯವರೆಗೆ ಆ ಭಾಗದ ಜನರ ಪ್ರಾಣ. ಆಸ್ತಿ ಮತ್ತು ಅವುಗಳ ರಕ್ಷಣೆಯನ್ನು ಯಾರು ಮಾಡುತ್ತಾರೆ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ನಾನು ಮಾನ್ಯ ಸಚಿವರಲ್ಲಿ ಕೇಳಬಯಸುವುದೇನೆಂದರೆ, ಈ ಭಾಗದಲ್ಲಿ ಹೆಚ್ಚು ಕಳ್ಳತನ, ಕೊಲೆ ಮತ್ತು ಸುಲಿಗೆಗಳು ನಡೆಯುವಂತಹ ಪ್ರಕರಣಗಳು ಕಂಡುಬರುತ್ತಿವೆ. ಈ ಭಾಗದಲ್ಲಿರತಕ್ಕಂಥ 110 ಹಳ್ಳಿಗಳ ಪೈಕಿ ಕೆಲವೊಂದು ಹಳ್ಳಿಗಳಲ್ಲಿ 120 ಮನೆಗಳು ಇರುವಂಥದ್ದನ್ನು ನಾವು ಕಾಣುತ್ತೇವೆ. ದಯಮಾಡಿ ಈ ಒಂದು ಪ್ರಸ್ತಾವನೆಯನ್ನು ಮಾನ್ಯ ಸಚಿವರು ತರಿಸಿಕೊಂಡು ಈ ಮನೆಗಳಿಗೆ

ರಕ್ಷಣೆಯನ್ನು ಕೊಡುವಂತಹ ಕ್ರಮ ವಹಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಶ್ರೀ ಆರ್. ಅಶೋಕ:–** ಮಾನ್ಯ ಸಭಾಪತಿಯವರೇ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆದಮೇಲೆ ಸುಮಾರು 110 ಹಳ್ಳಿಗಳನ್ನು ಬೆಂಗಳೂರು ನಗರ ಪೋಲೀಸ್ ವ್ಯಾಪ್ತಿಗೆ ಸೇರಿಸಬೇಕು ಎನ್ನುವುದು ಅವರ ಮನವಿ ಇದೆ. ಈಗಾಗಲೇ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ 110 ಹಳ್ಳಿಗಳು ಬಂದಿವೆ. ಆದ್ದರಿಂದ ಹೊಸ ಹಳ್ಳಿಗಳೇನು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿದ ಅವುಗಳನ್ನು ಪೋಲೀಸ್ ವ್ಯಾಪ್ತಿಗೂ ಬರಬೇಕು, ಅಂದರೆ, ಬಿಡದಿ ಇರಬಹುದು, ತುಮಕೂರು ರಸ್ತೆಯ ಕೆಲವು ಭಾಗಗಳಿರಬಹುದು, ಈ ತರಹದ ಕೆಲವು ಭಾಗಗಳು ಇನ್ನೂ ದೂರದ ಗ್ರಾಮಾಂತರ ಠಾಣೆಗಳಿಗೆ ಹೋಗಬೇಕಾಗಿದೆ ಎಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದೇ ಸದನದಲ್ಲಿ ಮಾನ್ಯ ಕೃಷ್ಣಪ್ಪನವರು ಇದೇ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದರು. ಕೆಲವು ಪ್ರದೇಶಗಳನ್ನು ಬೆಂಗಳೂರು ವ್ಯಾಪ್ತಿಗೆ ತರಬೇಕು, ತುಮಕೂರು ರಸ್ತೆಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿವೆ ಎನ್ನುವುದನ್ನು ಮಾನ್ಯ ಕೃಷ್ಣಪ್ಪನವರು ವ್ಯಕ್ತ ಮಾಡಿದ್ದರು. ಮಾನ್ಯ ದೊಡ್ಡರಂಗೇಗೌಡರು ಕೇಳಿರುವಂತಹ ಪ್ರಶ್ನೆಗೆ ಸರ್ಕಾರ ಸ್ಪಂದನೆ ಮಾಡಿದೆ. ಈ ವ್ಯಾಪ್ತಿಯನ್ನು ಜಾಸ್ತಿ ಮಾಡುವಂಥದ್ದಕ್ಕೆ ಬೆಂಗಳೂರು ಸುತ್ತ ಮುತ್ತ ಇರತಕ್ಕಂಥ ಹಳ್ಳಿಗಳೇನು, ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಯಾಗಿವೆ ಆ ಎಲ್ಲಾ ಭಾಗಗಳನ್ನು ಬೆಂಗಳೂರಿನ ಪೊಲೀಸ್ ವ್ಯಾಪ್ತಿಗೆ ತರುವಂಥದ್ದಕ್ಕೆ ಸರ್ಕಾರ ಇನ್ನೂ 6 ತಿಂಗಳೊಳಗಡೆ ಈ ಎಲ್ಲಾ ಭಾಗಗಳನ್ನು ಸಮೀಕ್ಷೆ ಮಾಡಿಸಿ ಬೆಂಗಳೂರು ಮಹಾನಗರ ಪಾಲಿಕೆಗೆ ತರುವಂತಹ ತೀರ್ಮಾನವನ್ನು ನಾವು ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

## ಸ್ವಾತಂತ್ರ್ಯ ಹೋರಾಟಗಾರರಿಗೆ ಐರಾವತ ಬಸ್ಸುಗಳಲ್ಲಿ ಪ್ರಯಾಣಿಸಲು ಅವಕಾಶ ನೀಡುವ ಬಗ್ಗೆ

**771; ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಹಿರಿಯ ಸ್ವಾತಂತ್ರ್ಯ ಹೋರಾಟಗಾರರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳಲ್ಲಿ ಪ್ರಯಾಣಿಸಲು ಉಚಿತ ಬಸ್‌ಪಾಸ್‌ಗಳನ್ನು ನೀಡಲಾಗಿದೆಯೇ;

**ಆ)** ಉಚಿತ ಪಾಸ್ ವಿತರಿಸಲಾಗಿದ್ದರೆ, ನಿಗಮದ ಯಾವ ಯಾವ ಬಸ್‌ಗಳಲ್ಲಿ ಪ್ರಯಾಣಿಸಲು ಅವಕಾಶವಿದೆ;

**ಇ)** ನಿಗಮದ ಐರಾವತ ಬಸ್‌ಗಳಲ್ಲಿ ಉಚಿತ ಪಾಸ್ ಆಧಾರದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಪ್ರಯಾಣಿಸಲು ಅವಕಾಶವಿದೆಯೇ;

**ಈ)** ಇಲ್ಲದಿದ್ದಲ್ಲಿ ಐರಾವತ ಬಸ್‌ಗಳಲ್ಲಿ ಉಚಿತ ಪಾಸ್‌ಗಳ ಆಧಾರದ ಮೇಲೆ ಪ್ರಯಾಣಿಸಲು ಅವಕಾಶ ಕಲ್ಪಸಿ ಕೊಡುವ ವಿಚಾರ ಸರ್ಕಾರಕ್ಕೆ ಇದೆಯೇ?

**ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು)**

**ಅ)** ನೀಡಲಾಗಿದೆ

**ಆ)** ಕನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳ ನಗರ ಸಾರಿಗೆ, ನಗರ ಹೊರವಲಯ ಸಾರಿಗೆ, ಸಾಮಾನ್ಯ ವೇಗದೂತ, ಸೆಮಿಡಿಲಕ್ಸ್ ಮತ್ತು ರಾಜಹಂಸ ಮಾದರಿಯ ಬಸ್ಸುಗಳಲ್ಲಿ ಪ್ರಯಾಣಿಸಲು ಅವಕಾಶ ನೀಡಲಾಗಿದೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಹವಾ ನಿಯಂತ್ರಿತ ಬಸ್ ಹೊರತು ಪಡಿಸಿ ಉಳಿದ ಎಲ್ಲಾ ವಾಹನಗಳಲ್ಲೂ ಪ್ರಯಾಣಿಸಬಹುದು.

**ಇ)** ಇಲ್ಲ.

**ಈ)** ಇಲ್ಲ.

**(1:00 ಗಂಟೆ)**

**ಶ್ರೀ ಎಸ್.ಕೆ. ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಉತ್ತರವನ್ನು ಗಮನಿಸಿದ್ದೇನೆ. ರಾಜ್ಯದಲ್ಲಿ ಅಥವಾ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ ಜೀವಂತವಾಗಿರುವವರ ಸಂಖ್ಯೆ ಇವತ್ತು ಬಹಳ ಕಡಿಮೆ ಇದೆ. ರಾಜ್ಯದಲ್ಲಿ ಹಿಂದೆ ನಡೆದಂತಹ ಸ್ವಾತಂತ್ರ್ಯ ಹೋರಾಟ, ಅದಕ್ಕೆ ಆದಂತಹ ತ್ಯಾಗ, ಬಲಿದಾನಗಳನ್ನು ನೆನಪು ಮಾಡಿಕೊಳ್ಳುವುದಕ್ಕೆ ಜೀವಂತ ಸಾಕ್ಷಿಗಳು ಕೆಲವೇ ಕೆಲವು ಮಾತ್ರ ಇವೆ. ಅವರಿಗೆ ಉಚಿತ ಪಾಸ್ ಕೊಡುವಂತಹ ವ್ಯವಸ್ಥೆ ಸಾರಿಗೆ ಸಂಸ್ಥೆಯಿಂದ ಆಗಿರುವಂತಹದ್ದು ತುಂಬಾ ಸಂತೋಷದ ಸಂಗತಿ. ಆದರೆ, ಈ ಉಚಿತ ಪಾಸ್ ಕೊಡುವಂತಹ ಸಂದರ್ಭ ದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿರುವಂತಹ ಹವಾ ನಿಯಂತ್ರಿತ ಬಸ್ ಮತ್ತು ಐರಾವತ ಬಸ್‌ನಲ್ಲಿ ಪ್ರಯಾಣ ಮಾಡುವುದನ್ನು ಹೊರತುಪಡಿಸಿ ಬಾಕಿ ಎಲ್ಲಾ ಬಸ್‌ಗಳಲ್ಲಿ ಪ್ರಯಾಣ ಮಾಡುವುದಕ್ಕೆ ಉಚಿತ ಬಸ್ ಪಾಸ್ ವ್ಯವಸ್ಥೆಯನ್ನು ಮಾಡಿರುವುದು ಸಂತೋಷ. ಇವೆರಡು ಬಸ್‌ಗಳಲ್ಲಿ ಉಚಿತ ಪಾಸ್ ನೀಡುವುದನ್ನು ಏತಕ್ಕೆ ತಡೆಹಿಡಿಯಲಾಗಿದೆ ಎನ್ನುವುದು ಅರ್ಥವಾಗುತ್ತಿಲ್ಲ. ಜೊತೆಗೆ ಈ ಎರಡು ಬಸ್‌ಗಳಲ್ಲಿ ಪ್ರಯಾಣ ಮಾಡುವವರ ಸಂಖ್ಯೆ ಬಹಳ ಕಡಿಮೆ ಇದೆ. ಜೊತೆಗೆ ಐರಾವತ ಬಸ್‌ಗಳ ಸಂಖ್ಯೆ ಬಹಳ ಕಡಿಮೆ ಇದೆ. ಅದರಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಉಚಿತ ಪ್ರಯಾಣ ಮಾಡುವುದರಿಂದ ಸಾರಿಗೆ ಸಂಸ್ಥೆಗೆ ಆರ್ಥಿಕ ಹೊರೆ ಬೀಳುತ್ತದೆ ಎನ್ನುವುದು ಏನಿಲ್ಲ. ಅದೇ ರೀತಿ ಈಗಾಗಲೇ ಸ್ವಾತಂತ್ರ್ಯ ಹೋರಾಟಗಾರರ ಹತ್ತಿರ ಟ್ರೈನ್ ಪಾಸ್‌ಗಳು ಕೂಡ ಇದೆ. ಹೀಗಾಗಿ, ಹೆಚ್ಚಿನ ಹೊರೆ ಏನೂ ಬೀಳುವುದಿಲ್ಲ. ಆದ್ದರಿಂದ, ಇವರುಗಳಿಗೆ ಈ ಎರಡು ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡುವುದನ್ನು ಏತಕ್ಕೆ ತಡೆಹಿಡಿಯಲಾಗಿದೆ ಎನ್ನುವುದನ್ನು ಮಾನ್ಯ ಸಾರಿಗೆ ಸಚಿವರು ತಿಳಿಸಿ ಕೊಡಬೇಕು.

**ಶ್ರೀ ಎಸ್.ಆರ್. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅತ್ಯುತ್ತಮವಾದಂತಹ ಪ್ರಶ್ನೆಯನ್ನು ತಂದಿರುವಂತಹ ಮಾನ್ಯ ಸದಸ್ಯರಾದ ಶ್ರೀಯುತ ಸಿದ್ದರಾಮಣ್ಣನವರನ್ನು ಈ ಸಂದರ್ಭದಲ್ಲಿ

ಅಭಿನಂದಿಸುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಸ್ವಾತಂತ್ರ್ಯ ಹೋರಾಟಗಾರರು ಅತ್ಯಂತ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಬಲಿಷ್ಠ ಬ್ರಿಟೀಷ್‌ರನ್ನು ಭಾರತದಿಂದ ಹೊಡೆದೋಡಿಸಲಿಕ್ಕೆ ಬಹು ದೊಡ್ಡ ತ್ಯಾಗ ಬಲಿದಾನ ಮಾಡಿದಂತಹ, ಅಲ್ಲೊಬ್ಬರು, ಇಲ್ಲೊಬ್ಬರು ಉಳಿದಿರುವಂತಹ ಸ್ವಾತಂತ್ರ್ಯ ಹೋರಾಟಗಾರರಿಗೆ ಹವಾ ನಿಯಂತ್ರಿತ ಬಸ್ ಮತ್ತು ಐರಾವತ ಬಸ್‌ನಲ್ಲಿ ಉಚಿತ ಪ್ರಯಾಣ ಮಾಡಲಿಕ್ಕೆ ಅವಕಾಶವಿಲ್ಲ ಎಂದು ಉತ್ತರ ಕೊಡುವುದಕ್ಕಿಂತ ಮೊದಲು ಮಾನ್ಯ ಸಚಿವರು ಇದರ ಬಗ್ಗೆ ಚಿಂತನೆ ಮಾಡ ಬೇಕಾಗಿತ್ತು. ಇಲ್ಲಿ ಅವರು ಬಂದು ಸಚಿವರಾಗುವುದಕ್ಕೆ ಮತ್ತು ತಾವು ಇಲ್ಲಿ ಬಂದು ಸಭಾಪತಿಗಳಾಗಲಿಕ್ಕೆ ಮತ್ತು ನಾನು ಶಾಸಕನಾಗುವುದಕ್ಕೆ ಬಹು ದೊಡ್ಡದಾದ ಕೊಡುಗೆ ನೀಡಿದಂತಹ ಸ್ವಾತಂತ್ರ್ಯ ಹೋರಾಟಗಾರರಿಗೆ ಹವಾ ನಿಯಂತ್ರಿತ ಬಸ್ ಮತ್ತು ಐರಾವತ ಬಸ್‌ನಲ್ಲಿ ಉಚಿತ ಪ್ರಯಾಣ ಮಾಡಲಿಕ್ಕೆ ಅವಕಾಶವಿಲ್ಲವೆಂದರೆ ಹೇಗೆ? ಕಳ್ಳರು, ಸುಳ್ಳರು ಏರ್ ಕಂಡೀಷನ್ ಬಸ್‌ನಲ್ಲಿ ಅಡ್ಡಾಡುವಂತಹ ಸಂದರ್ಭದಲ್ಲಿ ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವಲ್ಲಿ ಬಹು ದೊಡ್ಡದಾದ ತ್ಯಾಗ ಮಾಡಿದಂತಹ ಸ್ವಾತಂತ್ರ್ಯ ಹೋರಾಟಗಾರರಿಗೆ ಈ ಬಸ್‌ನಲ್ಲಿ ಹವಾ ನಿಯಂತ್ರಿತ ಬಸ್ ಮತ್ತು ಐರಾವತ ಬಸ್‌ನಲ್ಲಿ ಉಚಿತ ಪ್ರಯಾಣ ಮಾಡಲಿಕ್ಕೆ ಅವಕಾಶ ಕಲ್ಪಸುವುದಿಲ್ಲವೆಂದು ಹೇಳುವುದು ಬಹಳ ನಾಚಿಕೆಗೇಡಿನ ಸಂಗತಿ ಎಂದು ಹೇಳಲಿಕ್ಕೆ ಬಯಸುತ್ತೇನೆ. ಅದರ ಬಗ್ಗೆ ಸರ್ಕಾರ ಪುನ: ಚಿಂತನೆ ಮಾಡಬೇಕು. ಸರ್ಕಾರ ಚಿಂತನೆ ಮಾಡಿ ಅವರಿಗೆ ಈಗ ಕೊಟ್ಟಿರುವಂತಹ ಸೌಲಭ್ಯಕ್ಕಿಂತ ಹೆಚ್ಚಿನ ಸೌಲಭ್ಯ ಕೊಡುವಲ್ಲಿ ಸರ್ಕಾರ ಎಂದಿಗೂ ಹಿಂದೇಟು ಹಾಕಬಾರದು ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಇವರಿಗೆ ಟ್ರೈನ್‌ಗಳಲ್ಲಿ ಎ.ಸಿ. ಕೋಚ್‌ನಲ್ಲಿ ಉಚಿತ ಪ್ರಯಾಣ ಮಾಡುವಲ್ಲಿ ಕೇಂದ್ರ ಸರ್ಕಾರ ಅವಕಾಶ ಮಾಡಿಕೊಟ್ಟಿದೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಸಮಯ ಮುಗಿದು ಹೋಗುತ್ತಿದೆ. ಇನ್ನೂ 6 ಪ್ರಶ್ನೆಗಳಿವೆ. ಇದರ ಬಗ್ಗೆ ಸಚಿವರ ಉತ್ತರ ವನ್ನು ಕೊಡಲಿ. ನಿಮ್ಮ ಅಭಿಪ್ರಾಯವನ್ನು ಮಾನ್ಯ ಸಚಿವರು ಗೌರವಿಸುತ್ತಾರೋ ಇಲ್ಲವೋ ನೋಡೋಣ. ಅವರಿಗೆ ಉತ್ತರ ಕೊಡಲಿಕ್ಕೆ ಅವಕಾಶವನ್ನು ಕೊಡಿ.

**ಶ್ರೀ ಎಸ್.ಆರ್. ಪಾಟೀಲ್:–** ನಾನು ಸರ್ಕಾರಕ್ಕೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ ಇವರಿಗೆ ಈ ಎರಡು ಬಸ್‌ಗಳಲ್ಲೂ ಉಚಿತ ಪ್ರಯಾಣದ ವ್ಯವಸ್ಥೆ ಮಾಡಿಕೊಡುವುದು ಸರ್ಕಾರದ ಆದ್ಯ ಕರ್ತವ್ಯ ಮತ್ತು ಪವಿತ್ರ ಕರ್ತವ್ಯವಾಗಿದೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸಬಾಪತಿಯವರೇ, ಈಗಾಗಲೇ ಸಾಮಾನ್ಯ ಸಾರಿಗೆ ವ್ಯವಸ್ಥೆಯಲ್ಲಿ ಅವರಿಗೆ ಉಚಿತ ಪ್ರಯಾಣ ಮಾಡುವಲ್ಲಿ ಅನುಮತಿಯನ್ನು ಕೊಟ್ಟಿದ್ದರು. ಈ ಸ್ವಾತಂತ್ರ್ಯ ಹೋರಾಟಗಾರರು ಕಡಿಮೆ ಸಂಖ್ಯೆಯಲ್ಲಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. 4128 ಜನ ಸ್ವಾತಂತ್ರ್ಯ ಹೋರಾಟಗಾರರು ಇದ್ದಾರೆ. ಇವರಿಗೆ ಸಾಮಾನ್ಯ ಸಾರಿಗೆಯಲ್ಲಿ ಮೊದಲು ಅವಕಾಶವನ್ನೂ ಕೊಡಲಾಗಿತ್ತು. ಅದಾದನಂತರ ವೇಗದೂತ ಬಸ್, ಸೆಮಿಡಿಲಕ್ಸ್ ಮತ್ತು ರಾಜಹಂಸ ಬಸ್‌ಗಳಿಗೂ ವಿಸ್ತರಣೆ ಮಾಡಲಾಯಿತು. ಈಗ Volvo Bus ಗಳ ಪ್ರಯಾಣದರ ಹೆಚ್ಚಾಗುತ್ತಿದೆ. ಅದರಲ್ಲಿ ನಮಗೆ ಏನಾದರೂ ನಷ್ಟವುಂಟಾದರೆ ಸಮಸ್ಯೆಯಾಗುತ್ತದೆ. ಮತ್ತೆ ನಮ್ಮ ಎಲ್ಲಾ ಸಂಸ್ಥೆಗಳು ಲಾಭದಲ್ಲಿ ಇಲ್ಲ. ಹುಬ್ಬಳ್ಳಿ ಡಿವಿಜನ್ ಸೇರಿದಂತೆ ಕೆಲವು ಸಂಸ್ಥೆಗಳು ನಷ್ಟದಲ್ಲಿವೆ. ಆದ್ದರಿಂದ, ಹಣಕಾಸಿನ ವ್ಯವಸ್ಥೆಯನ್ನು ನೋಡಿಕೊಂಡು ಆರ್ಥಿಕ ಇಲಾಖೆಯೊಂದಿಗೆ ನಾನು ಮಾತನಾಡುತ್ತೇನೆ. ಅವರು ಅನುಮತಿಯನ್ನು ಕೊಟ್ಟರೆ ಅದನ್ನು ಮಾಡಲಿಕ್ಕೆ ಅವಕಾಶವಾಗುತ್ತದೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಅಧಿಕಾರಿಗಳು ಅನುಮತಿಯನ್ನು ಕೊಟ್ಟರೆ ನಾವು ಮಾಡಿಕೊಡುತ್ತೇವೆನ್ನುವುದು ಬಹಳ ನಾಚಿಕೆಗೇಡಿನ ಸಂಗತಿ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಹಿರಿಯ ಸದಸ್ಯರಾದ ಶ್ರೀಯುತ ಎಸ್.ಆರ್. ಪಾಟೀಲ್‌ರವರು ಮಾತನಾಡುತ್ತಿದ್ದಾರೆ. ಎಲ್ಲರೂ ಒಂದೇ ಬಾರಿ ಎದ್ದು ನಿಂತರೆ, ನೀವು ಮಾತನಾಡಿದ್ದು, ಯಾವುದೂ ದಾಖಲೆಗೆ

ಹೋಗುವುದಿಲ್ಲ. ನೀವುಗಳು ಮಾತನಾಡಬೇಕೆಂದರೆ ಅನುಮತಿಯನ್ನು ತೆಗೆದುಕೊಂಡು ಮಾತನಾಡಬೇಕು. ಅವರಿಗೆ ಮಾತನಾಡುವುದಕ್ಕೆ ಬಿಡಿ.

**ಶ್ರೀ ಆರ್. ಅಶೋಕ್:–** ನಾನೂ ಪೂರ್ಣವಾಗಿ ಉತ್ತರವನ್ನು ಹೇಳಲಿಕ್ಕೆ ಅವಕಾಶವನ್ನು ಕೊಡಿ.

**ಶ್ರೀ. ಎಸ್.ಆರ್. ಪಾಟೀಲ್:–** ಇದು ಬಹಳ ಚಿಕ್ಕದಾದ ವಿಷಯವೆಂದು ಮಾನ್ಯ ಸಚಿವರು ಗಮನಿಸಬೇಕು. ನಾನು ಈಗಾಗಲೇ ಹೇಳಿದಂತೆ ಅವರ ಪುಣ್ಯದಿಂದ ನೀವು ಸಚಿವರಾಗಿದ್ದೀರಿ. ಸಭಾಪತಿಯವರು ಕೂಡ ಸ್ವಾತಂತ್ರ್ಯ ಹೋರಾಟಗಾರರು ಮಾಡಿದ ಪುಣ್ಯದಿಂದ ಇವತ್ತು ಆ ಒಂದು ಸಭಾಪೀಠದಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗಿದೆ. ಈಗ ಈ ಬಗ್ಗೆ ಅಧಿಕಾರಿಗಳನ್ನು ಕೇಳಿ, ಅವರ ಆರ್ಥಿಕ ಅನುಕೂಲತೆಯನ್ನು ನೋಡಿ ಮಾಡುತ್ತೇನೆ ಎಂದು ಹೇಳು ವಂತಹ ಉತ್ತರ ಬಹಳ ಕಳಪೆ ಉತ್ತರವಾಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರು ಈ ಬಗ್ಗೆ ಮತ್ತೊಮ್ಮೆ ಏನು ಉತ್ತರ ಕೊಡುತ್ತಾರೆನ್ನುವುದನ್ನು ನೋಡೋಣ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರ ಸ್ವಾತಂತ್ರ್ಯ ಹೋರಾಟಗಾರರಿಗೆ ಅವಮಾನ ಮಾಡುವಂತಹ ಉತ್ತರವಾಗಿದೆ ಎಂದು ನಾನು ಹೇಳಬೇಕಾಗುತ್ತದೆ.

**ಶ್ರೀ ಆರ್. ಅಶೋಕ್:–** ಸನ್ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ಹೋರಾಟಗಾರರು ಉಚಿತ ಪ್ರಯಾಣ ಮಾಡುವುದರ ಜೊತೆಗೆ ಅವರ ಸಹಾಯಕರೂ ಸಹ ಪ್ರಯಾಣ ಮಾಡುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟಿದ್ದೇವೆ. ಅದನ್ನು ಉಚಿತವಾಗಿ ಕೊಟ್ಟಿದ್ದೇವೆ. ಕಾಲ ಕಾಲಕ್ಕೂ ಅವರುಗಳಿಗೆ ಎಲ್ಲಾ ಬಸ್‌ಗಳಲ್ಲಿ ಪ್ರಯಾಣ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಅಂದರೆ, ರಾಜಹಂಸ ಬಸ್ ಮಾದರಿಯವರೆಗೂ ಮಾಡಿ ಕೊಟ್ಟಿದ್ದೇವೆ. ನಮ್ಮ ಹಣಕಾಸಿನ ಇತಿಮಿತಿಯನ್ನೂ ನೋಡಿಕೊಂಡು ಈ ವಿಚಾರವನ್ನು ನಾನು ಪರಿಶೀಲನೆ ಮಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಸಂಬಂಧ ಉತ್ತರವನ್ನು ಕೊಡಲೇ ಇಲ್ಲ. ಇದು ಬಹಳ ಚಿಕ್ಕ ವಿಚಾರ. ನಾವು ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವಿಸುವುದಿಲ್ಲ, ಅವರಿಗೆ ಏರ್ ಕಂಡಿಷನ್ ಬಸ್‌ನಲ್ಲಿ ಅವರು ಉಚಿತ ಪ್ರಯಾಣ ಮಾಡಲು ಅವರಿಗೆ ಅವಕಾಶವನ್ನು ಕಲ್ಪಿಸುವುದಕ್ಕೆ ಆರ್ಥಿಕ ಇತಿಮಿತಿಯನ್ನು ನೋಡಿಕೊಂಡು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇವತ್ತು ಅಧಿಕಾರಿಗಳ ಮತ್ತು ಶಾಸಕರುಗಳಿಗೆ ಕೊಡುವ ಸಾರಿಗೆ–ಸಂಬಳದ ಭತ್ಯೆಯನ್ನು ನಮಗೆ ಕೊಡುವುದನ್ನು ಬಿಟ್ಟು, ಅದನ್ನು ತೆಗೆದು ಅವರಿಗೆ ಕೊಟ್ಟರೆ ನಾವು ಒಪ್ಪುತ್ತೇವೆ. ಇವತ್ತು ಶಾಸಕರುಗಳಿಗೆ ಏನು ಸಾರಿಗೆ, ಸಂಬಳ ಭತ್ಯೆ ಇದೆ; ಅದನ್ನು ಕಡಿಮೆ ಮಾಡಿ ಅದನ್ನು ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರು ಈ ಬಗ್ಗೆ ಪರಿಶೀಲಿಸುತ್ತೇನೆಂದು ಹೇಳಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಆರ್ಥಿಕ ಇತಿಮಿತಿಯನ್ನು ನೋಡಿ ಮಾಡುತ್ತೇನೆಂದು ಹೇಳುವುದು ಸಮಂಜಸ ಉತ್ತರವಲ್ಲ. ಇದು ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಡತಕ್ಕಂತಹ ಅವಮಾನ ಎಂದು ನಾವು ಭಾವಿಸಬೇಕಾಗುತ್ತದೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸಚಿವರು ಏನು ಹೇಳುತ್ತಾರೆಂದು ಕೇಳೋಣ.

**ಶ್ರೀ ಆರ್. ಅಶೋಕ್:–** ಇದು ಯಾರು ಸಹ ವೈಯಕ್ತಿಕವಾಗಿ ತೆಗದು ಕೊಳ್ಳುವಂತಹ ವಿಚಾರವಲ್ಲ. ದಯವಿಟ್ಟು, ನಾನು ವಿನಂತಿ ಮಾಡುವುದೇನೆಂದರೆ ಈಗಾಗಲೇ ಈ ಸೌಲಭ್ಯವನ್ನು ಸಾಮಾನ್ಯ ಬಸ್‌ನಿಂದ ವೇಗದೂತಕ್ಕೆ, ಸೆಮಿಡಿಲಕ್ಸ್‌ಗೆ, ರಾಜಹಂಸಕ್ಕೆ ನಾವು ವಿಸ್ತರಣೆ ಮಾಡಿದ್ದೇವೆ. ಜೊತೆಗೆ ಅವರ ಜೊತೆ ಒಬ್ಬರು ಉಚಿತವಾಗಿ ಪ್ರಯಾಣ ಮಾಡುವುದಕ್ಕೂ ಸಹ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ನಮ್ಮ ಎರಡು ಸಂಸ್ಥೆಗಳು

ನಷ್ಟದಲ್ಲಿವೆ. 10–15 ಜನ ಇದ್ದರೆ ಮಾಡಬಹುದಾಗಿತ್ತು. ಸುಮಾರು 4 ಸಾವಿರಕ್ಕಿಂತ ಹೆಚ್ಚು ಸ್ವಾತಂತ್ರ್ಯ ಹೋರಾಟಗಾರರಿದ್ದಾರೆ. ಆದ್ದರಿಂದ, ನಮ್ಮ ಹಣಕಾಸಿನ ಇತಿಮಿತಿಯನ್ನು ನೋಡಿಕೊಂಡು ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಕಾರ್ಗಿಲ್ ಯುದ್ಧ ಇರಬಹುದು, ಈ ದೇಶದ ಯಾವುದೇ ಒಂದು ಹೋರಾಟದಲ್ಲಿ ಅದು ಭಯೋತ್ಪಾದನೆ ಚಟುವಟಿಕೆ ಇರಬಹುದು, ಅವುಗಳಲ್ಲಿ ಮಡಿದಂತಹ ಇಡಿ ಕುಟುಂಬಕ್ಕೆ ಈ ಒಂದು ಸೌಲಭ್ಯವನ್ನು ಕೊಡುತ್ತಿದ್ದೇವೆ. ಇದಕ್ಕೆ ಯಾವುದೇ ಸೂತ್ರೋಲೆ ಇರಲಿಲ್ಲ, ಯಾರು ಸಹ ಪ್ರಶ್ನೆಯನ್ನು ಹಾಕಿರಲಿಲ್ಲ. ಈ ಭಯೋತ್ಪಾದನೆಯನ್ನು ನಿಗ್ರಹ ಮಾಡುವಂತಹ ಸಂದರ್ಭದಲ್ಲಿ ನಮ್ಮ ಸೈನಿಕರು ಹೋರಾಟ ಮಾಡಿ ಸಾಯುತ್ತಾರೆ, ಅವರ ಇಡೀ ಕುಟುಂಬಕ್ಕೆ ಅವರ ಹೆಂಡತಿ, ಅವರ ತಂದೆ–ತಾಯಿ ಮತ್ತು ಮಕ್ಕಳಿಗೆ 10 ವರ್ಷಗಳ ಕಾಲ ಉಚಿತವಾಗಿ ಕೊಡುತ್ತಿದ್ದೇವೆ. ಇದರ ಜೊತೆಗೆ ಈಗಾಗಲೇ ಶಾಲಾ ಮಕ್ಕಳಿಗೆ 75% ರಷ್ಟು ಉಚಿತವಾಗಿ ಈ ಸೌಲಭ್ಯವನ್ನು ಕೊಡುತ್ತಿದ್ದೇವೆ. ಅಂಗವಿಕಲರಿಗೂ ಸಹ ರಿಯಾಯಿತಿ ಬಸ್ ಪಾಸ್ ಅನ್ನು ಕೊಡುತ್ತಿದ್ದೇವೆ. ಇದೆಲ್ಲ ಬರ್ಡನ್ಸ್ ನಮ್ಮ ಮೇಲೆ ಇದೆ. ಮಾನ್ಯ ಶಾಸಕರ ಕಳಕಳಿಗೆ ನಮ್ಮ ಬೆಂಬಲ ಇದೆ. ಆದ್ದರಿಂದ, ನಾನು ಹಣಕಾಸಿನ ವ್ಯವಸ್ಥೆಯನ್ನು ನೋಡಿಕೊಂಡು ಈ ವಿಚಾರವನ್ನು ಪರಿಶೀಲನೆ ಮಾಡುತ್ತೇನೆ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಲ್ಲಿ ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಕೆ.ಎಸ್.ಆರ್.ಟಿ.ಸಿ. ಬಸ್ ಸೌಲಭ್ಯ ಜನ ಸಮುದಾಯದ ಅನುಕೂಲಕ್ಕಾಗಿ ಇದೆ. 5 ಕೋಟಿಗಿಂತ ಹೆಚ್ಚು ಜನಸಂಖ್ಯೆ ಇರತಕ್ಕಂತಹ ರಾಜ್ಯದಲ್ಲಿ ಸ್ವಾತಂತ್ರ್ಯ ಹೋರಾಟ ಗಾರರಿರುವುದು ಸುಮಾರು 4 ಸಾವಿರ ಜನ ಸಂಖ್ಯೆ ಇದೆ. ಅವರೆಲ್ಲರೂ ಕನಿಷ್ಟಪಕ್ಷ ಈಗಾಗಲೇ 75–80 ವರ್ಷಗಳನ್ನು ದಾಟಿದವರು ಇದ್ದಾರೆ. ಇವರು ಇನ್ನು ಎಷ್ಟು ದಿವಸಗಳು ಬದುಕುತ್ತಾರೋ ಗೊತ್ತಿಲ್ಲ. ಇದು ಸಾಮಾಜಿಕ ಕಳಕಳಿ ಮತ್ತು ಇದು ರಾಷ್ಟ್ರಾಭಿಮಾನದ ಸಂಕೇತ. ನೀವು

ಕಾರ್ಗಿಲ್ ಯುದ್ಧದಲ್ಲಿ ಮಡಿದಂತಹ ಕುಟುಂಬಗಳಿಗೆ ಉಚಿತ ಪ್ರಯಾಣದ ವ್ಯವಸ್ಥೆಯನ್ನು ಕಲ್ಪಿಸಿದ್ದೀರಿ. ಅದಕ್ಕೆ ತಮ್ಮನ್ನು ಅಭಿನಂದಿಸುತ್ತೇವೆ. ಶಾಲಾ ಮಕ್ಕಳಿಗೆ ಈ ಸೌಲಭ್ಯವನ್ನು ಕೊಟ್ಟಿರುವುದನ್ನು ನಾವು ಅಭಿನಂಧಿಸುತ್ತೇವೆ. ಇದೇನೂ ದೊಡ್ಡ ಹೊರೆಯಾಗುವುದಿಲ್ಲ. ಸ್ವಾತಂತ್ರ್ಯ ಹೋರಾಟಗಾರರ ಈ ಒಂದು ಕೋರಿಕೆಯನ್ನು ಪರಿಗಣಿಸುವಂತೆ ತಮ್ಮ ಮೂಲಕ ಮಾನ್ಯ ಗೃಹ ಹಾಗೂ ಸಾರಿಗೆ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಐರಾವತ ಬಸ್‍ಗಳು ತಾಲ್ಲೂಕು ಕೇಂದ್ರಗಳಲ್ಲಿ ಇರುವುದಿಲ್ಲ. ದೊಡ್ಡ ದೊಡ್ಡ ಜಿಲ್ಲಾ ಕೆಂದ್ರಗಳಿಗೆ ಮಾತ್ರ ಈ ಐರಾವತ ಬಸ್ ಮತ್ತು ಮತ್ತು ವೋಲ್ವೋ ಬಸ್‍ಗಳ ಸೌಲಭ್ಯವಿರುತ್ತದೆ. ಉಳಿದ ಕಡೆಗಳಲ್ಲಿ ಸಾಮಾನ್ಯ ಬಸ್‍ಗಳೇ ಇರುತ್ತವೆ. ಇನ್ನೊಂದು ವಿಚಾರವಾಗಿ ಹೇಳುವುದಾದರೆ ಇವರ ಜೊತೆ ಮತ್ತೊಬ್ಬರು ಇರುತ್ತಾರೆಂದು ಮಾನ್ಯ ಸಚಿವರು ಹೇಳಿದರು. ಈಗ ಇರುವಂತಹ ಸ್ವಾತಂತ್ರ್ಯ ಹೋರಾಟಗಾರರು 70 ವರ್ಷಗಳ ಮೇಲಿನವರು ಇದ್ದಾರೆ. ಮಾನವೀಯ ಕಳಕಳಿಯಿಂದ ವಯಸ್ಸಾದವರ ಜೊತೆ ಒಬ್ಬ ಸಹಾಯಕರು ಇರಬೇಕು. ಮಾನ್ಯ ಸಚಿವರಾದ ಶ್ರೀಯುತ ಆರ್. ಅಶೋಕ್‍ರವರು ಉತ್ತಮ ಕೆಲಸ ಮಾಡುತ್ತಿದ್ದಾರೆಂದು ನಾವು ಬಹಳ ಪ್ರೀತಿಯಿಂದ ಹೇಳುತ್ತೇವೆ. ಆದ್ದರಿಂದ, ಈ ವಿಚಾರದಲ್ಲಿ ದೊಡ್ಡ ಮನಸ್ಸು ಮಾಡಿ. ಇದರಿಂದ ದೊಡ್ಡ ಹಾನಿ ಏನೂ ಆಗುವುದಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು.

**ಸಭಾಪತಿಯವರು:–** ಈ ಬಗ್ಗೆ ಮಾನ್ಯ ಸಚಿವರು ಏನಾದರೂ ಹೇಳುವುದಿದ್ದರೆ ಹೇಳಬೇಕು.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೆ, . . . . . .

**ಸಭಾಪತಿಯವರು:–** ಇದು ಪ್ರಶ್ನೋತ್ತರ ಅವಧಿ. ನಾವು ಮುಂದಿನ ಪ್ರಶ್ನೆಗೆ ಹೋಗಬೇಕು. ನೀವು ಸಾಕಷ್ಟು ವಿಚಾರಗಳನ್ನು ಹೇಳಿದ್ದೀರಿ. ಅದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆಂದು ಕೇಳೋಣ. You have made your point. Let him answer.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ಬಗ್ಗೆ ಪ್ರಶ್ನೆಯನ್ನು ಕೇಳಿ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ನಮ್ಮ ಸಂಸ್ಥೆ ಈಗ ಲಾಭದಾಯಕವಾಗಿಲ್ಲ. ಬಹಳಷ್ಟು ಸಂಸ್ಥೆಗಳು ನಷ್ಟದಲ್ಲಿವೆ. ಅದರೂ ಸಹ ಈ ವಿಚಾರವಾಗಿ 3–4 ಜನ ಮಾನ್ಯ ಸದಸ್ಯರುಗಳು ವಿಶೇಷವಾಗಿ ಪ್ರಸ್ತಾಪ ಮಾಡಿರುವುದರಿಂದ ಇದರ ಬಗ್ಗೆ ಪರಿಶೀಲನೆ ಮಾಡಿ, ಮಾನ್ಯ ಮುಖ್ಯಮಂತ್ರಿಗಳ ಮನವೊಲಿಸಿ ಇದನ್ನು ಜಾರಿಗೆ ತರುವುದಕ್ಕೆ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ.

## ಸದಲಗಾ ಪಟ್ಟಣದಲ್ಲಿ ಮಿನಿ ಡಿಪೋ ಸ್ಥಾಪಿಸುವ ಬಗ್ಗೆ

## 703; ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಅ)** ಬೆಳಗಾಂ ಜಿಲ್ಲೆ ಚಿಕ್ಕೊಡಿ ತಾಲ್ಲೂಕು ಸದಲಗಾ ಪಟ್ಟಣದಲ್ಲಿ ಮಿನಿ ಡಿಪೋವನ್ನು ಸ್ಥಾಪಿಸುವ ಸಲುವಾಗಿ ಮಂಜೂರಾಗಿರುವ ಜಮೀನನ್ನು ಸರ್ವೆ ಮಾಡಿ ಸಾರಿಗೆ ಸಂಸ್ಥೆಗೆ ಹಸ್ತಾಂತರಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದಕ್ಕೆ ಕಾರಣಗಳೇನು;

**ಆ)** ಸದರಿ ಜಮೀನನನ್ನು ಅತಿಕ್ರಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳಾವವು; (ವಿವರ ನೀಡುವುದು)

**ಇ)** ಅತಿಕ್ರಮಣಕಾರರು ಯಾರು? ಅವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)?

## ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು)

**ಅ) ಆ) ಮತ್ತು ಇ)** ಸರ್ಕಾರದ ಗಮನಕ್ಕೆ ಬಂದಿದೆ. ಜಿಲ್ಲಾಧಿಕಾರಿಗಳು ಬೆಳಗಾವಿ ರವರು 3 ಎಕರೆ 20 ಗುಂಟೆ ಸದಲಗಾ ಸರಹದ್ದಿನ ಸರ್ವೆ ಸಂ.787 ಅ/1ರ ಜಾಗವನ್ನು ಸಾರಿಗೆ ಸಂಸ್ಥೆಗೆ ಮಂಜೂರು ಮಾಡಿರುತ್ತಾರೆ. ಸದರಿ ಜಮೀನಿಗೆ ಸಂಸ್ಥೆಯು ₹ 50061–00 ಗಳನ್ನು

ಹಣ ಸಂದಾಯ ಮಾಡಿ, ಪತ್ರ ವ್ಯವಹಾರ ಮಾಡಿದರೂ ಸಹ ಇಂದಿನವರೆಗೂ ಹದ್ದುಬಸ್ತು ಗುರುತಿಸಿ ಸಂಸ್ಥೆಗೆ ಹಸ್ತಾಂತರಿಸಿರುವುದಿಲ್ಲ.

ಪಟ್ಟಣ ಪಂಚಾಯಿತಿ ಸದಲಗಾ ರವರು ಸದರಿ ಜಮೀನಿನ ಜಾಗವನ್ನು ಸೈಟುಗಳನ್ನಾಗಿ ಪರಿವರ್ತಿಸಿ ಹಂಚಿರುತ್ತಾರೆ, ಆದ ಕಾರಣ ಸದರಿ ವಿಷಯವಾಗಿ ಜಿಲ್ಲಾಧಿಕಾರಿಗಳು ಬೆಳಗಾವಿರವರಿಗೆ ಲಿಖಿತವಾಗಿ ಪತ್ರ ಮುಖೇನ ತಿಳಿಸಿ ಈ ಕುರಿತು ಒಂದು ಕಮಿಟಿಯನ್ನು ರಚಿಸಿ ಸಮಗ್ರ ವಿಚಾರಣೆ ನಡೆಸಿ ಜಮೀನಿನಲ್ಲಿಯ ಅನಧಿಕೃತ ಕಟ್ಟಡಗಳನ್ನು ತೆರವು ಗೊಳಿಸಿ ಹದ್ದುಬಸ್ತು ಗುರುತಿನ ಸಂಸ್ಥೆಗೆ ಜಮೀನನ್ನು ಹಸ್ತಾಂತರಿಸಲು ವಿನಂತಿಸಲಾಗಿದೆ.

**ಶ್ರೀ ಮನೋಹರ ಮಸ್ಕಿ (ಪದವೀಧರರ ಕ್ಷೇತ್ರ):–** ಶ್ರೀ ಕಮಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ ಅವರ ಪರವಾಗಿ

**ಸಭಾಪತಿಯವರು:–** ಈ ಬಗ್ಗೆ ನನಗೆ ಪತ್ರ ಬಂದಿಲ್ಲ. ತಾವು ಬೇಗನೆ ಕೇಳಿಬಿಡಿ.

**ಶ್ರೀ ಮನೋಹರ ಮಸ್ಕಿ:–** ಮಾನ್ಯ ಮುಖ್ಯ ಸಚೇತಕರು ನನಗೆ ಆಗಲೇ ತಿಳಿಸಿದ್ದಾರೆ. ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಅನಧಿಕೃತವಾದ ಕಟ್ಟಡಗಳನ್ನು ತೆರವುಗೊಳಿಸಿ ಆ ಹದ್ದುಬಸ್ತು ಗುರುತಿಸಿ, ಸದರಿ ಜಾಗವನ್ನು ಸಂಸ್ಥೆಗೆ ಹಸ್ತಾಂತರಿಸಲು ವಿನಂತಿ ಮಾಡಿದ್ದೇವೆಂದು ಹೇಳಿದ್ದಾರೆ. ಈ ಅತಿಕ್ರಮಣಕಾರರು ಯಾರು ಎಂದು ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಈ ಸದಲಗಾ ಪಟ್ಟಣದಲ್ಲಿನ 3 ಎಕರೆ 20 ಗುಂಟೆ ಜಾಗವನ್ನು ಸಾರಿಗೆ ಸಂಸ್ಥಗೆ ಮಂಜೂರು ಮಾಡಲಾಗಿರುತ್ತದೆ. ಆದರೆ ಅಲ್ಲಿ ಷಾಪಿಂಗ್ ಕಾಂಪ್ಲೆಕ್ಸ್ ಮೊಬೈಲ್ ಟವರ್ ಎಲ್ಲಾ ಬಂದಿದೆ. ಅಲ್ಲಿನ ಪುರಸಭೆ ಪಂಚಾಯತಿಯವರು ತನ್ನದಲ್ಲದ ಆ ಜಾಗವನ್ನು ಬೇರೆಯವರಿಗೆ ಪರಭಾರೆ ಮಾಡಿದ್ದಾರೆ. ಇದು ಬಹಳ ಗಂಭೀರವಾದ ವಿಷಯವಾಗಿದೆ. ಸರ್ಕಾರದ ಸ್ವತ್ತನ್ನು ಕೆಲವು ಪ್ರಭಾವಿ ವ್ಯಕ್ತಿಗಳು ದುರುಪಯೋಗ ಪಡಿಸಿಕೊಳ್ಳುವುದು ಆಗಬಾರದು. ಆದುದರಿಂದ ಇದರ ಬಗ್ಗೆ ವಿನಂತಿ

ಮಾಡುವ ಮಟ್ಟದಲ್ಲಿ ಇದು ಇಲ್ಲ. ನನಗೆ ಬಂದಿರುವ ವರದಿಗಳನ್ನು ನಾನು ಕೊಡುತ್ತೇನೆ. ಕಳೆದ ಒಂದು ವರ್ಷದ ಹಿಂದೆ ಅಪರ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಈ ಅತಿಕ್ರಮಣವನ್ನು ತೆರವುಗೊಳಿಸಿ ಎಂದು ಪತ್ರವನ್ನು ಬರೆದಿದ್ದರು. ಅದರ ಪ್ರತಿ ನನ್ನ ಹತ್ತಿರ ಇದೆ. ಅಲ್ಲಿಂದ ಇಲ್ಲಿಯವರೆಗೆ ಈ ಬಗ್ಗೆ ಯಾವುದೂ ಮುಂದುವರೆದಿಲ್ಲ. ಈಗ ಮತ್ತೆ ಕೆ.ಎಸ್.ಆರ್.ಟಿ.ಸಿ.ಯವರು ವಿನಂತಿ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಈ ರೀತಿ ವಿನಂತಿ ಮಾಡುವ ಮಟ್ಟದಲ್ಲಿ ಇದ್ದರೆ ಆಗುವುದಿಲ್ಲ. ಕೆ.ಎಸ್.ಆರ್.ಟಿ.ಸಿ. ತನ್ನ ಜಾಗವನ್ನು ಉಳಿಸಿಕೊಳ್ಳುವುದಕ್ಕೆ ಆಗಲಿಲ್ಲವೆಂದರೆ, ಇನ್ನು ಮುಂದೆ ಕೆ.ಎಸ್.ಆರ್.ಟಿ.ಸಿ. ತನಗೆ ಬೇಕಾದ ಜಮೀನನ್ನು ವಶಪಡಿಸಿಕೊಳ್ಳುವುದನ್ನಾದರೂ ಬಿಡಬಹುದು. ಈ ಜಾಗ ಕಂಡವರ ಪಾಲಾಗುವುದಕ್ಕೆ ಸರ್ಕಾರ ಬಿಡಬಾರದು ಈ ಜಾಗವನ್ನು ವಶಪಡಿಸಿಕೊಳ್ಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿ ಇವೆ. ಸದಲಗಾ ಪಟ್ಟಣ ಪಂಚಾಯತಿ ವ್ಯಾಪ್ತಿಯ ಈ ಜಾಗವನ್ನು ನಮಗೆ ಕೊಡಿ ಎಂದು ಹೇಳಿ ವಿನಂತಿ ಮಾಡಿಕೊಂಡಿದ್ದು ಅದಕ್ಕೆ ಕಟ್ಟಬೇಕಾದ ಹಣವನ್ನು ಕೂಡ ಕಟ್ಟಿದ್ದೇವೆ. ಜಿಲ್ಲಾಧಿಕಾರಿಗಳು/ಉಪ ವಿಭಾಗಾಧಿಕಾರಿಗಳು ಆ ಜಮೀನನ್ನು ನಮಗೆ ಹಸ್ತಾಂತರ ಮಾಡಬೇಕಾಗಿತ್ತು. ಆದರೆ ಇದುವರೆಗೂ ಆ ಜಮೀನನ್ನು ಅವರು ನಮಗೆ ಹಸ್ತಾಂತರ ಮಾಡಿಲ್ಲ. ಸ್ಥಳೀಯವಾಗಿ ಇರತಕ್ಕಂಥಹ ಪಟ್ಟಣ ಪಂಚಾಯಿತಿಯವರು ಈ ಜಾಗದಲ್ಲಿ ನಿವೇಶನಗಳನ್ನು ಮಾಡಿ ಹಂಚಿಕೆ ಮಾಡಿದ್ದಾರೆ. ಇವೆರಡೂ ಸರ್ಕಾರ ಸಂಸ್ಥೆಯಾಗಿದೆ. ಇದರಿಂದಾಗಿ ಈ ಜಾಗವನ್ನು ನಮಗೆ ಹಸ್ತಾಂತರ ಮಾಡಬೇಕೆಂದು ಹಲವಾರು ಬಾರಿ ಜಿಲ್ಲಾಧಿ ಕಾರಿಗಳಿಗೆ ಮನವಿ ಮಾಡಿದರೂ ಸಾಧ್ಯವಾಗುತ್ತಿಲ್ಲ.ಅವರು ನಮಗೆ ಜಾಗವನ್ನು ನೀಡಿದ್ದೇ ಆದರೆ ಅಲ್ಲಿ ಕೆ.ಎಸ್.ಆರ್.ಟಿ.ಸಿ.ಯ ಡಿಪೋವನ್ನು ಮಾಡುವುದಕ್ಕೆ ನಮಗೆ ಏನೂ ತೊಂದರೆ ಇಲ್ಲ. ಈಗಾಗಲೇ ಅಲ್ಲಿ ವಾಸ ಇದ್ದಾರೆ. ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅದನ್ನು ತೆರವುಗೊಳಿಸುವುದು ಸ್ವಲ್ಪ ಕಷ್ಟವೆಂದು ಅನ್ನಿಸುತ್ತದೆ. ಜಿಲ್ಲಾಧಿಕಾರಿಗಳವರಲ್ಲಿ

ಮತ್ತೊಮ್ಮೆ ವಿನಂತಿ ಮಾಡುತ್ತೇನೆ. ಅದೇ ಜಾಗವನ್ನು ನೀಡಿದ್ದೇ ಆದರೆ ಉತ್ತಮ. ಇಲ್ಲವಾದಲ್ಲಿ ಪರ್ಯಾಯ ಜಾಗವನ್ನಾದರೂ ನಮಗೆ ಕೊಡುವುದಕ್ಕೆ ತಿಳಿಸುತ್ತೇನೆ. ಅಲ್ಲಿ ಜಾಗವನ್ನು ನೀಡಿದ್ದೇ ಆದರೆ ಕೆ.ಎಸ್.ಆರ್.ಟಿ.ಸಿ. ಬಸ್ ಡಿಪೋವನ್ನು ಮಾಡುತ್ತೇವೆ. ಮಾನ್ಯ ಸದಸ್ಯರು ಹಲವಾರು ವಿಚಾರಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಈ ಕುರಿತು ಜಿಲ್ಲಾಧಿಕಾರಿಗಳಿಗೆ ತಿಳಿಸುತ್ತೇನೆ. ನಮ್ಮ ಅಧಿಕಾರಿಗಳಿಗೂ ಕೂಡ ಇದನ್ನು ಫಾಲೋ ಅಫ್ ಮಾಡುವುದಕ್ಕೆ ಹೇಳುತ್ತೇನೆ. ಈ ಜಾಗವನ್ನು ನಮ್ಮ ಸುಪರ್ದಿಗೆ ತೆಗೆದುಕೊಳ್ಳುವುದಕ್ಕೆ ಕ್ರಮವನ್ನು ತೆಗೆದುಕೊಳ್ಳತ್ತೇನೆ.

**ಶ್ರೀ ಮನೋಹರ ಮಸ್ಕಿ:–** ಇದರಲ್ಲಿ ಎರಡು ಪ್ರಶ್ನೆ ಇದೆ. ಇದನ್ನು ತೆರವುಗೊಳಿಸುವುದಕ್ಕೆ ಸಾರಿಗೆ ಸಚಿವರಿಗೆ ಅಧಿಕಾರ ಇಲ್ಲ ಈ ತೆರವುಗೊಳಿಸುವ ಕಾರ್ಯವನ್ನು ಜಿಲ್ಲಾಧಿಕಾರಿಗಳು ಮಾಡಬೇಕಾಗುತ್ತದೆ. ಈ ಎರಡೂ ಇಲಾಖೆಗಳ ಮಧ್ಯೆ ಕೋ–ಆರ್ಡಿನೇಷನ್ ಇಲ್ಲ. ಇದಕ್ಕೆ ಸರ್ಕಾರ ಏನು ಹೇಳುತ್ತದೆ. ಪಟ್ಟಣ ಪಂಚಾಯತಿಯವರು ಈ ಜಾಗವನ್ನು ಖಾಸಗಿಯವರಿಗೆ ಮಾರಿದ್ದು, ಅಲ್ಲಿ ಕಟ್ಟಡಗಳೂ ಕೂಡ ಬಂದು ಜನರು ವಾಸವಾಗಿದ್ದಾರೆ. ಸಾರಿಗೆ ಇಲಾಖೆಯವರು ಈ ಜಾಗವನ್ನು ಪಡೆಯುವುದಕ್ಕೋಸ್ಕರ ಹಣವನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ಈ ರೀತಿಯಾಗಿ ಪಟ್ಟಣ ಪಂಚಾಯತಿ ಯವರು ಕಾನೂನು ಬಾಹಿರವಾಗಿ ಈ ಜಾಗವನ್ನು ಖಾಸಗಿ ಯವರಿಗೆ ಮಾರುವುದಕ್ಕೆ ಕಾರಣವೇನು? ಇದರಲ್ಲಿ ತಪ್ಪಿತಸ್ಥರು ಯಾರು, ಇದರ ಹಿಂದೆ ಇರುವ ವ್ಯಕ್ತಿಗಳು ಯಾರು? ಸರ್ಕಾರ ಈ ಬಗ್ಗೆ ಯಾವ ಕ್ರಮವನ್ನು ತೆಗೆದು ಕೊಳ್ಳುತ್ತದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಅಷ್ಟೇ ಅಲ್ಲ ಈ ಸದಲಗ ಪಟ್ಟಣ ನಮ್ಮ ರಾಜ್ಯದ ಗಡಿ ಭಾಗವಾಗಿದೆ. ನಮ್ಮ ಗಡಿ ಭಾಗದ ನಾಗರೀಕರಿಗೆ ಅಗತ್ಯವಿರುವ ಸಾರಿಗೆ ಸೌಕರ್ಯವನ್ನು ಕೊಡುವುದಕ್ಕೆ ಅತ್ಯಂತ ಅಗತ್ಯವಾದ ಜಾಗ ಇದಾಗಿದೆ. ಈ ಸರ್ಕಾರಿ ಸಂಸ್ಥೆಗೆ ಸೇರಿದಂತಹ ಜಮೀನನ್ನು ಇನ್ನೊಂದು ಸರ್ಕಾರಿ ಸಂಸ್ಥೆಯ ಜೊತೆ ಖಾಸಗಿ ವ್ಯಕ್ತಿಗಳು ಸೇರಿಕೊಂಡು ಆ ಜಮೀನನ್ನು ಕಬಳಿಸಿದ್ದಾರೆ. ಮತ್ತೊದು ಕಡೆ ಇದು ಗಡಿ ಭಾಗದ ನಾಗರೀಕರು ಈ ಸಾರಿಗೆ ಸೌಲಭ್ಯದಿಂದ

ವಂಚಿತರಾಗಿದ್ದಾರೆ. ಇದೂ ಕೂಡ ಒಂದು ಸಮಸ್ಯೆಯಾಗಿದೆ. ಈ ಎರಡೂ ವಿಷಯಗಳ ಸಂಗತಿಯನ್ನು ಸರ್ಕಾರ ಹೇಗೆ ಪರಿಶೀಲಿಸುತ್ತದೆ. ಮಾನ್ಯ ಸಾರಿಗೆ ಸಚಿವರು ಈ ಪ್ರಶ್ನೆಗಳಿಗೆ ಉತ್ತರವನ್ನು ನೀಡಬೇಕು.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನೀಡಿದ ಉತ್ತರದಿಂದಾಗಿ ಅಲ್ಲಿನ ಪರಿಸ್ಥಿತಿ ನಮಗೆ ಗೊತ್ತಾಗುತ್ತಿದೆ. ಈಗಾಗಲೇ ಅಲ್ಲಿನ ಪಟ್ಟಣ ಪಂಚಾಯಿತಿಯ ಕೆಲವು ಫಲಾನುಭವಿಗಳಿಗೆ ಆ ಜಮೀನನ್ನು ಅಲಾಟ್‌ಮೆಂಟ್ ಮಾಡಿದ್ದಾರೆ. ಆ ಫಲಾನುಭವಿಗಳು ಷಾಪಿಂಗ್ ಕಾಂಪ್ಲೆಕ್ಸ್ ಇಲ್ಲವೇ ಮನೆಗಳನ್ನು ಕಟ್ಟಿದ್ದಾರೆ. ಇದರಲ್ಲಿ ಕೆ.ಎಸ್.ಆರ್.ಟಿ.ಸಿ.ಯ ಪಾತ್ರ ಏನೂ ಇಲ್ಲ. ಪಟ್ಟಣ ಪಂಚಾಯತಿಯ ಆಡಳಿತ ಮಂಡಳಿಯವರು ಇವರಿಬ್ಬರಿಗೆ ಆ ಜಾಗವನ್ನು ಕೊಡಬಾರದಿತ್ತು. ಇದು ಬಹಳ ಸೂಕ್ಷ್ಮ ವಿಚಾರ ಇದು. ಅಲ್ಲಿ ವಿಭಾಗಾಧಿಕಾರಿಗಳು ಇಲ್ಲವೇ ಜಿಲ್ಲಾಧಿಕಾರಿಗಳು ಇದ್ದಾರೆ. ಸಾರಿಗೆ ಇಲಾಖೆ ವಾಯುವ್ಯ ವಿಭಾಗದ ಎಂ.ಡಿ. ಇದ್ದಾರೆ ಇವರು ಇಬ್ಬರು ಮತ್ತು ಸಂಬಂಧಪಟ್ಟ ಎಲ್ಲಾ ಇಲಾಖಾಧಿಕಾರಿಗಳ/ಪಟ್ಟಣ ಪಂಚಾಯತಿಯವರು ಇಲ್ಲವೇ ಜಿಲ್ಲಾ ಉಸ್ತುವಾರಿ ಸಚಿವರನ್ನೊಳಗೊಂಡ ಒಂದು ಸಭೆಯನ್ನು ಕರೆದು ಒಂದು ಸಭೆಯನ್ನು ಮಾಡಿ ಅದನ್ನು ಅಮಿಕಬಲ್ ಸೆಟಲ್‌ಮೆಂಟ್ ಅನ್ನು ಮಾಡುವುದು ಒಳ್ಳೆಯದು ಎಂಬ ನನ್ನ ಒಂದು ಸಲಹೆಯನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ನೀಡಬಯಸುತ್ತೇನೆ.

**ಶ್ರೀ ಆರ್. ಅಶೋಕ್:–** ಈಗ ಅಲ್ಲಿ ಏನು ಕಟ್ಟಡಗಳನ್ನು ಕಟ್ಟಿಕೊಂಡಿದ್ದಾರೆ ಈ ಜಾಗವನ್ನು ಅವರಿಗೆ ಅಲಾಟ್‌ಮೆಂಟ್ ಮಾಡುವಾಗ ಸ್ಥಳೀಯ ಶಾಸಕರ ಶಿಫಾರಸ್ಸಿನ ಮೇರೆಗೆ ಈ ಜಾಗವನ್ನು ನೀಡಿದ್ದಾರೆ ಎಂಬ ಮಾಹಿತಿ ಇದೆ. ಇದರ ಸತ್ಯಾಸತ್ಯತೆ ಏನು ಇದೆ ಎಂದು ನನಗೆ ಗೊತ್ತಿಲ್ಲ. ಸ್ಥಳೀಯ ಶಾಸಕರು ಇವರಿಗೆ ಆ ಜಾಗವನ್ನು ಕೊಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ ಎಂದು ಹೇಳುತ್ತಾರೆ. ಅಲ್ಲಿಂದ ಚಿಕ್ಕೋಡಿಗೆ 20 ಕಿ.ಮೀ. ಆಗುತ್ತದೆ. ಮತ್ತು ಅಲ್ಲಿಂದ ನಿಪ್ಪಾಣಿಗೆ 30 ಕಿ.ಮೀ. ದೂರದಲ್ಲಿ ಇದೆ. ಈ ಎರಡೂ ಕಡೆಗಳಲ್ಲಿ ನಮ್ಮ ಡಿಪೋ ಇದೆ. ಸಾರಿಗೆ ವ್ಯವಸ್ಥೆಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದ ಹಾಗೆ ಗಮನಹರಿಸುತ್ತೇನೆ. ಈ ಜಮೀನು

ಕೊಟ್ಟರೆ ಬಹಳ ಸಂತೋಷ. ಇದು ನಮ್ಮ ಜಾಗ ನಾವು ಇದಕ್ಕೆ ಹಣವನ್ನೂ ಕೂಡ ಕಟ್ಟಿದ್ದೇವೆ. ಈ ಜಾಗ ಗ್ಯಾರಂಟಿ ನಮಗೇ ಸೇರಬೇಕು. ಮನೆಗಳು ನಿರ್ಮಾಣವಾಗಿರುವುದರಿಂದ ಒಂದು ರೀತಿಯ ಗೊಂದಲ ಉಂಟಾಗಿದೆ. ಈ ಕುರಿತು ಜಿಲ್ಲಾಧಿಕಾರಿಗಳ ಸಮಕ್ಷಮದಲ್ಲಿ ಒಂದು ತೀರ್ಮಾನವನ್ನು ತೆಗೆದು ಕೊಳ್ಳುವುದಕ್ಕೆ ನಾನು ನಮ್ಮ ಇಲಾಖಾಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ.

**ಬೆಳಗಾವಿ ಮೆಡಿಕಲ್ ಕಾಲೇಜಿನಲ್ಲಿ ಖಾಲಿ ಇರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ತುಂಬುವ ಬಗ್ಗೆ**

**677; ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ)**

**ಅ)** ಬೆಳಗಾವಿ ಮೆಡಿಕಲ್ ಕಾಲೇಜಿನಲ್ಲಿ ಖಾಲಿ ಇರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳ ಸಂಖ್ಯೆ ಎಷ್ಟು; (ದಿನಾಂಕ ಸಹಿತ ಹುದ್ದೆವಾರು ವಿವರ ನೀಡುವುದು)

**ಆ)** ಈ ಹುದ್ದೆಗಳನ್ನು ತುಂಬಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ.

**ಇ)** ಈ ಹುದ್ದೆಗಳು ಖಾಲಿ ಇರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಈ)** ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಯಾವಾಗ? (ವಿವರ ನೀಡುವುದು)

**ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು)**

**ಅ)** ಖಾಲಿ ಇರುವ ಬೋಧಕ ಹುದ್ದೆಗಳ ಸಂಖ್ಯೆ : 36
ಖಾಲಿ ಇರುವ ಬೋಧಕೇತರ ಹುದ್ದೆಗಳ ಸಂಖ್ಯೆ : 194
ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

**ಆ)** ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

**ಇ)** ಹೌದು

**ಈ)** ಆದಷ್ಟು ಬೇಗನೆ ಭರ್ತಿ ಮಾಡಲಾಗುವುದು

# ಅನುಬಂಧ–1

## BELGAUM INSTITUTE OF MEDICAL SCIENCES, BELGAUM
## Details of Teaching Staff AS ON 04-03-2011

| SI. NO | CADRE | S | W | V | REMARKS | |
|---|---|---|---|---|---|---|
| | | | | | vacant | Posts filled up |
| 1 | 2 | 3 | 4 | 5 | 6 | 7 |
| 1 | Director | 1 | 1 | 0 | | |
| 2 | Principal | 1 | 1 | 0 | | |
| 3 | Chief Administrative Officer | 1 | 1 | 0 | | |
| 4 | Financial Adviser | 1 | 1 | 0 | | |
| 5 | Professor | 21 | 19 | 2 | 1. TB & chest Disease<br>2. Denstistry<br>These posts are vacant since inception 2006-07 | 19 professors have been appointed as per MCI norms in the year 2005, 2007, 2008 & 2010 by walk-in-interview duly obtaining the sanction from the governing council. |

| | | | | | | |
|---|---|---|---|---|---|---|
| 6 | Associate Professor/Readers | 31 | 31 | 0 | | 31 posts have been up as per MCI norms in the year 2005, 2007, 2008 & 2010 by walk- in-interview duly obtaining the sanction from the governing council. |
| 7 | Assistant Professor | 40 | 30+18 | 0 | | 40 posts have been up as per MCI norms in the year 2005, 2007, 2008 & 2010 by walk- in-interview duly obtaining the sanction from the governing council & absorbed from District Hospital, belgaum |
| 8 | Sr Resident | 26 | 22 | 4 | 4 posts are vacant since inception 2006-07 | 17 posts have been filled up by walk-in-interview on 20-05-2010 remaining 5 posts have filled up on consolidated salary. |
| 9 | Tutor/Reg/Jr. Resident | 92 | 88 | 4 | 4 posts are vacant since inception 2006-07 | 88 posts are filled up by appointment on consolidated salary as per the requirement of MCI |
| 10 | Medical Officer Of Health Officer Cum Lectures | 2 | 0 | 2 | vacant since inception 2006-07 | |

| | | | | | | |
|---|---|---|---|---|---|---|
| 11 | Lady Medical Officer | 3 | 0 | 3 | vacant since inception 2006-07 | |
| 12 | Statistician Cum Asst. Lecturer | 1 | 1 | 0 | | Appointed on 2005 |
| 13 | Clinical Psychologist | 1 | 0 | 1 | vacant since inception 2006-07 | |
| 14 | Psychiatrist (Child) | 1 | 1 | 0 | | Appointed on 2009 |
| 15 | MSW | 11 | 0 | 11 | 8 posts vacant since inception 2006-07 | 3 posts have been filled up on outsource basis |
| | **Total** | **223** | **201** | **27** | | |

# ಅನುಬಂಧ–2

## BELGAUM INSTITUTE OF MEDICAL SCIENCES, BELGAUM

### Staff Position Non-Teaching Staff as on 04-03-2011

| SI.NO | CADRE | S | W | V | REMARKS | |
|---|---|---|---|---|---|---|
| | | | | | vacant | Posts filled up |
| 1 | 2 | 3 | 4 | 5 | 6 | 7 |
| | **Staff nurses:255** | | | | | |
| 1 | Staff nurses | 255 | 51 | 204 | 113 since inception | 51 filled up on regular basis in 2008, 40 filled up on outsource basis |
| | **Para medical workers:106** | | | | | |
| 2 | Pharma Chemist | 1 | 1 | 0 | | Filled up in the year 2007 |
| 3 | Speech Therapist | 3 | 0 | 3 | since inception 2006-07 | |
| 4 | Physiotherapist | 2 | 1 | 1 | since inception 2006-07 | |
| 5 | Orthotherapist | 2 | 0 | 2 | since inception 2006-07 | |
| 6 | Radio Therapist | 3 | 0 | 3 | since inception 2006-07 | |
| 7 | Occupation Therapist | 2 | 0 | 2 | since inception 2006-07 | |
| 8 | Counselor | 1 | 0 | 1 | since inception 2006-07 | |
| 9 | Lady Health Visitor | 1 | 0 | 1 | since inception 2006-07 | |

| 1 | 2 | 3 | 4 | 5 | 6 | 7 |
|---|---|---|---|---|---|---|
| 10 | Lab Technician/OT | 58 | 27 | 31 | | 27 filled up on regular basis in 2008<br>31 filled up outsource basis |
| 11 | Audiometer Technician | 1 | 0 | 1 | since inception 2006-07 | |
| 12 | Radiographer | 8 | 0 | 8 | since inception 2006-07 | |
| 13 | Dental Techanician | 4 | 0 | 4 | since inception 2006-07 | |
| 14 | Modular | 1 | 0 | 1 | since inception 2006-07 | |
| 15 | Artist | 1 | 0 | 1 | | Filled up on consolidated salary in 2010 |
| 16 | MRW | 4 | 0 | 4 | since inception 2006-07 | |
| 17 | Public Health Nurse | 3 | 0 | 3 | since inception 2006-07 | |
| 18 | Health Educatot | 4 | 0 | 4 | since inception 2006-07 | |
| 19 | Health Inspectors | 4 | 0 | 4 | since inception 2006-07 | |
| 20 | Electro Cardiographer | 1 | 0 | 1 | since inception 2006-07 | |
| 21 | Refractionist | 1 | 0 | 1 | since inception 2006-07 | |
| 22 | Physists | 1 | 0 | 1 | since inception 2006-07 | |
| | **‘Group ‘c’** | | | 0 | | |
| 23 | Senior Typist | 1 | 0 | 1 | since inception 2006-07 | |

| 1 | 2 | 3 | 4 | 5 | 6 | 7 |
|---|---|---|---|---|---|---|
| 24 | Stenographer | 18 | 0 | 18 | 15 | 3 filled up on outsource basis |
| 25 | Strorekeeper Cum Clerk | 22 | 0 | 22 | 4 | 18 filled up on outsource basis |
| 26 | Record Keeper/Clerk | 18 | 0 | 18 | | 18 filled up on outsource basis |
| 27 | Chief Librarian | 1 | 0 | 1 | since inception 2006-07 | |
| 28 | Deputy Chief Librarian | 1 | 0 | 1 | since inception 2006-07 | |
| 29 | Assistant Librarian | 2 | 2 | 0 | | 2 filled up on regular basis in 2008 |
| 30 | Workshop Worker | 6 | 0 | 6 | since inception 2006-07 | |
| 31 | Van Driver | 2 | 0 | 2 | | Filled up on consolidated salary in 2010 |
| | **'Group 'D': 75** | 0 | | 0 | | |
| 32 | Dissection Hall Artist | 6 | 0 | 6 | | 6 posts are filled up on outsource basis |
| 33 | Lab Attendor | 31 | 21 | 10 | | 21 filled up on regular basis in 2008<br>1 Filled up on consolidated salary in 2010<br>9 filled up on outsource basis |

| 1 | 2 | 3 | 4 | 5 | 6 | 7 |
|---|---|---|---|---|---|---|
| 34 | Peons/Group ‘D’ | 8 | 0 | 8 | | 8 posts are filled up on outsource basis |
| 35 | Dark Room Assistant | 4 | 0 | 4 | | 4 posts are filled up on outsource basis |
| 36 | Sweepers | 26 | 0 | 26 | | 26 posts are filled up on outsource basis |
| | **Total** | **507** | **103** | **404** | | |

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ:–** ಮಾನ್ಯ ಸಭಾಪತಿಯವರೆ, ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾ ಗುತ್ತದೆ. ಎಂದು ಹೇಳಿದ್ದಾರೆ. ಅದಕ್ಕೆ ಏನಾದರೂ ನಿರ್ದಿಷ್ಟವಾದ ಸಮಯ ವನ್ನು ನಿಗದಿಪಡಿಸಿದ್ದೀರಾ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಒಂದು ಆಸ್ಪತ್ರೆ ನಡೆಯಬೇಕಾದರೆ ವೈದ್ಯರ ಜೊತೆಯಲ್ಲಿ ಸ್ಟ್ಯಾಫ್ ನರ್ಸ್‍ಗಳ ಹುದ್ದೆಗಳನ್ನು ಕೂಡ ಭರ್ತಿ ಮಾಡುವುದು ಅಗತ್ಯವಿದೆ. ತಾವು ಕೊಟ್ಟಂತಹ ಮಾಹಿತಿಯ ಪ್ರಕಾರ 233 ಮಂಜೂರಾದ ಹುದ್ದೆಗಳ ಪೈಕಿ 204 ಹುದ್ದೆಗಳು ಖಾಲಿ ಇವೆ. ತಾಂತ್ರಿಕ ಸಿಬ್ಬಂದಿಯ ಎಲ್ಲಾ ಹುದ್ದೆಗಳೂ ಖಾಲಿ ಇವೆ. ಇದರಿಂದಾಗಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳನ್ನು ಗಮನದಲ್ಲಿಟ್ಟು ಕೊಂಡು ಈ ಎಲ್ಲಾ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಎಸ್.ಎ. ರಾಮದಾಸ್:–** ಮಾನ್ಯ ಸಭಾಪತಿಯವರೆ, ಒಟ್ಟು 233 ಬೋಧಕ ಸಿಬ್ಬಂದಿಗಳ ಹುದ್ದೆಗಳು ನಮಗೆ ಮಂಜೂರಾತಿಯಾಗಿರುವ ಹುದ್ದೆಗಳಾಗಿವೆ. ಈ ಪೈಕಿ 197 ಜನರು ಈಗಾಗಲೇ ಕೆಲಸವನ್ನು ಮಾಡುತ್ತಿ ದ್ದಾರೆ. ಮತ್ತೆ 36 ಜನ ಬೋಧಕ ಸಿಬ್ಬಂದಿಯ ಅವಶ್ಯಕತೆ ಏನು ಅಗತ್ಯವಾಗಿ ಬೇಕಾಗಿದೆ; ಈ ಹುದ್ದೆಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಆದೇಶವನ್ನು ನೀಡಲಾಗಿದೆ. ನೋಟಿಫಿಕೇಷನ್ ಅನ್ನು ಮಾಡಿದ್ದೇವೆ. ವಾಕ್ ಇನ್ ಇಂಟರ್‌ವ್ಯೂ ಮಾಡುವುದಕ್ಕೆ ಅನುಮತಿಯನ್ನು ನೀಡಿದ್ದೇವೆ. ಇನ್ನು ಒಂದು ತಿಂಗಳೊಳಗೆ ವಾಕ್ ಇನ್ ಇಂಟರವ್ಯೂ ಮಾಡಿ ಆ ಕೆಲಸವನ್ನು ಮುಗಿಸಿ ಕೊಡುತ್ತೇವೆ. ಬೋಧಕೇತರ ಸಿಬ್ಬಂದಿಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಒಟ್ಟು 507 ಮಂಜೂರಾದ ಹುದ್ದೆಗಳಲ್ಲಿ 103 ಜನರು ಕೆಲಸ ಮಾಡುತ್ತಿದ್ದಾರೆ. ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ದೃಷ್ಟಿಯಲ್ಲಿ ಔಟ್ ಸೋರ್ಸಿನ ಮೂಲಕವಾಗಿ ನೇಮಕಾತಿಯನ್ನು ಮಾಡಿಕೊಳ್ಳುವುದಕ್ಕಾಗಿ ಆದೇಶವನ್ನು ಕೊಟ್ಟಿದ್ದೇವೆ. ಇನ್ನು ಮೂರು ತಿಂಗಳ ಒಳಗಾಗಿ ಒಂದು ನೋಟಿಫಿಕೇಷನ್ ಅನ್ನು ಮಾಡಿ ಪರ್ಮನೆಂಟ್ ಆಗಿ ಅವರನ್ನು

ತೆಗೆದುಕೊಳ್ಳುವ ವ್ಯವಸ್ಥೆಯ ಬಗ್ಗೆ ಈಗಾಗಲೇ ಚಿಂತನೆ ಮಾಡಿದ್ದೇವೆ. ಇದನ್ನು ಟೈಂಬೌಂಡ್‌ನಲ್ಲಿ ಮುಗಿಸಿ ಕೊಡುತ್ತೇವೆ.

**ಕಳೆದ 3 ವರ್ಷಗಳ ಆಯವ್ಯಯ ವೆಚ್ಚದ ಬಗ್ಗೆ ವಿವರ**

**452; ಶ್ರೀ ಅಬ್ದುಲ್ ಅಜೀಂ (ವಿಧಾನ ಸಭಾಕ್ಷೇತ್ರ)**

**ಅ)** 2008–09, 2009–10, 2010–11ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ನೀಡಲಾದ ಆಯವ್ಯಯದ ಮೊತ್ತವೆಷ್ಟು.

**ಆ)** ಬಿಡುಗಡೆ ಮಾಡಲಾದ ಮೊತ್ತ ಎಷ್ಟು; ಆ ಪೈಕಿ ಖರ್ಚಾಗಿರುವ ಮೊತ್ತ ಎಷ್ಟು; ಯಾವ ಉದ್ದೇಶಕ್ಕಾಗಿ ಖರ್ಚು ಮಾಡಲಾಗಿದೆ; (ಇಲಾಖಾವಾರು ವಿವರ ನೀಡುವುದು)

**ಇ)** ಬಾಕಿ ಉಳಿದಿರುವ ಮೊತ್ತವೆಷ್ಟು; (ವರ್ಷಾವಾರು ವಿವರ ನೀಡುವುದು);

**ಈ)** ಈ ಬಾಕಿ ಉಳಿದಿರುವ ಹಣವನ್ನು ಮುಂದಿನ ಸಾಲಿನಲ್ಲಿ ವಿನಿಯೋಗಿಸಲಾಗಿದೆಯೇ ಅಥವಾ ಆರ್ಥಿಕ ಇಲಾಖೆಗೆ ಹಿಂದಿರುಗಿಸಲಾಗಿದೆಯೇ; ಹಾಗಿದ್ದರೆ, ಇದಕ್ಕೆ ಕಾರಣವೇನು? (ವಿವರ ನೀಡುವುದು)

**ಪ್ರೋ. ಡಾ: ಮುಮ್ತಾಜ್ ಅಲಿ ಖಾನ್ (ನಾಮ ನಿರ್ದೇಶಿತರು ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)**

**ಅ)** ಅಲ್ಪಸಂಖ್ಯಾತರ ಇಲಾಖೆಗೆ ಈ ಕೆಳಕಂಡಂತೆ ಆಯವ್ಯಯ ಒದಗಿಸಲಾಗಿದೆ.

**(₹ ಲಕ್ಷಗಳಲ್ಲಿ)**

| ವರ್ಷ | ನೀಡಲಾದ ಆಯವ್ಯಯದ ಮೊತ್ತ |
|---|---|
| 2008–09 | ₹ 12898.47 |
| 2009–10 | ₹ 17373.21 |
| 2010–11 | ₹ 26926.75 |

**ಆ)** **(₹ ಲಕ್ಷಗಳಲ್ಲಿ)**

| **ವರ್ಷ** | **ಬಿಡುಗಡೆ** | **ಖರ್ಚು** |
|---|---|---|
| 2008–09 | 12398.93 | 12398.93 |
| 2009–10 | 15708.64 | 15708.64 |
| 2010–11 | 26926.75 | 19614.64 (ಫೆಬ್ರವರಿ–2011ರವರೆಗೆ) |

ಖರ್ಚು ಮಾಡಲಾದ ವಿವರ ಅನುಬಂಧದಲ್ಲಿ ಲಗತ್ತಿಸಿದೆ. ಉಳಿದ ಇಲಾಖೆಗಳಿಗೆ ಬಿಡುಗಡೆ ಮಾಡಲಾದ ಹಣವನ್ನು ಯೋಜನೇತರ ಅಡಿಯಲ್ಲಿ ಖರ್ಚು ಮಾಡಲಾಗಿದೆ.

**ಇ)** **(₹ ಲಕ್ಷಗಳಲ್ಲಿ)**

| **ವರ್ಷ** | **ಉಳಿತಾಯವಾಗಿರುವ ಮೊತ್ತ** |
|---|---|
| 2008–09 | ಇಲ್ಲ |
| 2009–10 | ಇಲ್ಲ |
| 2010–11 | ಉಳಿದ ಹಣವನ್ನು ಮಾರ್ಚ್ ಅಂತ್ಯದೊಳಗೆ ಖರ್ಚು ಮಾಡಲು ಕ್ರಮ ಕೈಗೊಳ್ಳಲಾಗುವುದು. |

**ಈ)** 2008–09 ಮತ್ತು 2009–10ರಲ್ಲಿ ಖರ್ಚು ಆಗದೆ ಉಳಿದ ಹಣ ವ್ಯಪಗತ (Lapse) ವಾಗಿರುತ್ತದೆ.

## Annexure 'A'

## ಕನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ)

## 2008–09, 2009–10, 2010–11ನೇ ಸಾಲಿನ 31.1.2011ರ ವರೆಗಿನ ಗುರಿ ಮತ್ತು ಸಾಧನೆ

| ಕ್ರ. ಸಂ | ಯೋಜನೆಗಳು | 2008–09 | | | |
|---|---|---|---|---|---|
| | | ಆಯವ್ಯಯ ಮೊತ್ತ | ಬಿಡುಗಡೆಯಾದ ಮೊತ್ತ | ಖರ್ಚಾದ ಮೊತ್ತ | ಆಯವ್ಯಯ ಮೊತ್ತ |
| | | ಆರ್ಥಿಕ | ಆರ್ಥಿಕ | ಆರ್ಥಿಕ | ಆರ್ಥಿಕ |
| 1 | ಸ್ವಾವಲಂಬನ ಸಾಲ ಮತ್ತು ಸಹಾಯ ಧನ ಯೋಜನೆ | 2220.00 | 2117.77 | 2288.71 | 2000.00 |
| 2 | ಅರಿವು ಯೋಜನೆ | | | | |
| 2 | ಗಂಗಾ ಕಲ್ಯಾಣ ಯೋಜನೆ | 800.00 | 702.23 | 1062.66 | 1000.00 |
| 3 | ಶ್ರಮಶಕ್ತಿ ಯೋಜನೆ | 1000.00 | 750.00 | 749.92 | 720.00 |
| 4 | ಮೈಕ್ರೋ ಸಾಲ ಮತ್ತು ಸಹಾಯ ಧನ ಯೋಜನೆ | 900.00 | 900.00 | 639.85 | 1200.00 |

| | | | | | |
|---|---|---|---|---|---|
| 5 | ಭೂ ಖರೀದಿ ಯೋಜನೆ | 200.00 | 200.00 | 0.00 | 0.00 |
| | **ಒಟ್ಟು** | **5120.00** | **4670.00** | **4741.14** | **4920.00** |
| ಟಿಪ್ಪಣಿ–1 2009–10ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಭೌತಿಕ 1000 ಫಲಾನುಭವಿಗಳಿಗೆ ಕೊಳವೆ ಬಾವಿ ಕೊರೆಯ ಬಾವಿಗಳನ್ನು ಕೊರೆಸಲು 636.40 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಬಾಕಿ ಉಳಿದ ಗುರಿಯ ಅನ್ವಯ ಮೊತ್ತವನ್ನು 2010–11ನೇ ಸಾಲಿನಲ್ಲಿ | | | | | |
| ಟಿಪ್ಪಣಿ–2 2010–11ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಭೌತಿಕ 1510 ಜನರಿಗೆ ಜಿಲ್ಲಾವರು ಗುರಿ ನಿಗದಿ ಪಡಿಸಲಾಗಿದೆ. ನೀಡಲಾಗಿದೆ. | | | | | |
| ಟಿಪ್ಪಣಿ–3 2010–11ನೇ ಸಾಲಿನ ಭೂ ಖರೀದಿ ಯೋಜನೆಯಡಿಯಲ್ಲಿ ಭೌತಿಕ 160 ಜನ ರೈತರಿಗೆ ಜಿಲ್ಲಾವಾರು ಗುರಿ ನಿಗದಿ ಪಡಿಸಲಾಗಿದೆ. | | | | | |

## ಅನುಬಂಧ 'ಎ'

## 2008–09, 2009–10, 2010–11ನೇ ಸಾಲಿನ 31.1.2011ರ ವರೆಗಿನ ಗುರಿ ಮತ್ತು ಸಾಧನೆ

| 2009–10 | | 2010–11 | | |
|---|---|---|---|---|
| ಬಿಡುಗಡೆಯಾದ ಮೊತ್ತ | ಖರ್ಚಾದ ಮೊತ್ತ | ಆಯವ್ಯಯ ಮೊತ್ತ | ಬಿಡುಗಡೆಯಾದ ಮೊತ್ತ | ಖರ್ಚಾದ ಮೊತ್ತ |
| ಆರ್ಥಿಕ | ಆರ್ಥಿಕ | ಆರ್ಥಿಕ | ಆರ್ಥಿಕ | ಆರ್ಥಿಕ |
| 1925.00 | 1772.91 | 2200.00 | 2200.00 | 1866.12 |
| | | | | |
| 600.00 | 636.40 | 1300.00 | 1100.00 | 0.00 |
| 720.00 | 755.39 | 1100.00 | 1000.00 | 926.78 |
| 900.00 | 732.93 | 1400.00 | 1300.00 | 943.91 |
| 0.00 | 0.00 | 0.00 | 0.00 | 0.00 |
| 4145.00 | 3897.63 | 6000.00 | 5600.00 | 3736.81 |
| ಜಿಲ್ಲಾವರು ಗುರಿ ನಿಗದಿ ಪಡಿಸಲಾಗಿದೆ. ಈ ಪೈಕಿ 748 ಫಲಾನುಭವಿಗಳಿಗೆ ಕೊಳವೆ ಸಾಲಿನಲ್ಲಿ ಕಾರ್ಯಗತಗೊಳಿಸಲು ಖರ್ಚು ಮಾಡಲಾಗುತ್ತದೆ. | | | | |
| ಈ ಪೈಕಿ 779 ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಸಲು ಕಾರ್ಯಾದೇಶ | | | | |
| ಯೋಜನೆಯ ಅನುಷ್ಠಾನ ಕಾರ್ಯ ಪ್ರಗತಿಯಲ್ಲಿದೆ. | | | | |

## ಅನುಬಂಧ 'A'

## ಅಲ್ಪಸಂಖ್ಯಾತರ ನಿರ್ದೇಶನಾಲಯ

2008–09, 2009–10, 2010–11ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ಮತ್ತು ಖರ್ಚಾದ ಹಣ.

| ವರ್ಷ | ಒದಗಿಸಲಾದ ಮೊತ್ತ | ಬಿಡುಗಡೆ ಮಾಡಲಾದ ಮೊತ್ತ | ಖರ್ಚು ಮಾಡಲಾದ ಮೊತ್ತ |
|---|---|---|---|
| 2008–09 | 6757.68 | 6754.64 | 6639.51 |
| 2009–10 | 13514.50 | 13410.22 | 13289.83 |
| 2010–11 | 18666.01 | 13152.07 | 12724.51 |

**ಶ್ರೀ ಅಬ್ದುಲ್ ಅಜೀಂ:–** ಮಾನ್ಯ ಸಭಾಪತಿಯವರೆ, 2008–09ರಲ್ಲಿ ಎಷ್ಟು ಹಣವನ್ನು ನೀವು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಒದಗಿಸಿ ಕೊಟ್ಟಿದ್ದೀರಿ ಎಂದು ಪ್ರಶ್ನೆಯನ್ನು ಕೇಳಿದ್ದಕ್ಕೆ 128 ಕೋಟಿ ರೂಪಾಯಿ ಎಂದು ಹೇಳಿದ್ದಾರೆ. 2009–10ರಲ್ಲಿ 173 ಕೋಟಿ ಎಂದು ಹೇಳಿದ್ದಾರೆ. 2008–09 ರಲ್ಲಿ 123 ಕೋಟಿ ಖರ್ಚಾಗಿದೆ ನಾವು 123 ಕೋಟಿ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅಂದರೆ ಹಿಂದೆ ಏನು ಒದಗಿಸಿದ್ದರು ಅದಕ್ಕೂ ಇದಕ್ಕೂ 5 ಕೋಟಿ ರೂಪಾಯಿ ವ್ಯತ್ಯಾಸ ಇದೆ.

ಅಂದರೆ ಅವರು ಒದಗಿಸಿರುವ ಹಣಕ್ಕೂ ಬಿಡುಗಡೆಯಾದ ಹಣಕ್ಕೂ ಸುಮಾರು ಐದು ಕೋಟಿ ರೂಪಾಯಿಗಳ ವ್ಯತ್ಯಾಸವಿದೆ. ಅದೇ ತರಹ 2009–10ರಲ್ಲಿ 173 ಕೋಟಿ ಹಣ ಒದಗಿಸಿ ಕೊಟ್ಟಿದ್ದಾರೆ, 157 ಕೋಟಿ ರೂಪಾಯಿ ಹಣ ಬಿಡುಗಡೆಯಾಗಿದೆ. 157 ಕೋಟಿ ರೂಪಾಯಿ ಖರ್ಚಾಗಿದೆ ಎಂದು ಹೇಳುತ್ತಾರೆ. ಇದರಲ್ಲಿ ಸುಮಾರು 16 ಕೋಟಿ ರೂಪಾಯಿ ವ್ಯತ್ಯಾಸವಿದೆ. ಈ ವ್ಯತ್ಯಾಸದ ಹಣ ಏಕೆ ಬಂತು? ಈ ಹಣವನ್ನು ನೀವು ಏಕೆ ಖರ್ಚು ಮಾಡಿಲ್ಲ. ನೀವು ಯೋಜನೆ ಮಾಡುವಾಗ ನಿಮ್ಮ ಬಜೆಟ್‌ನಲ್ಲಿ ಇಷ್ಟು ಕೋಟಿ ಎಂದು ಹೇಳುತ್ತಿರಿ. ಕೊನೆಗೆ ಅಲ್ಲಿ ಹಣ ಉಳಿದಾಗ ಆ ಉಳಿದ ಹಣ ಏಕೆ ಉಳಿಯಿತೆಂದು ನಾವು ಪ್ರಶ್ನೆ ಕೇಳಿದಾಗ lapse ಆಯಿತು ಎಂದು

ಹೇಳುತ್ತಾರೆ. ಮಾನ್ಯ ಸಭಾಪತಿಯವರೆ, ಅದು lapse ಹೇಗೆ ಆಗುತ್ತದೆ? ನಾವು ಬಜೆಟ್‌ನಲ್ಲಿ ಒಮ್ಮೆ ಯೋಜನೆ ಮಾಡಿದ ಮೇಲೆ ಅದನ್ನು ಮುಂದಿನ ವರ್ಷಕ್ಕೆ brought forward ಮಾಡಿ ಖರ್ಚು ಮಾಡಬೇಕು. Lapse ಹೇಗಾಗುತ್ತದೆ? ಇದಕ್ಕೆ ಯಾರು ಹೊಣೆಗಾರರು ಎಂದು ಮಾನ್ಯ ಸಚಿವರು ತಿಳಿಸಬೇಕು.

**ಪ್ರೊ: ಡಾ: ಮುಮ್ತಾಜ್ ಅಲಿ ಖಾನ್:–** ಮಾನ್ಯ ಸಭಾಪತಿಯವರೆ, ಸಹಜವಾಗಿ ಬಿಡುಗಡೆಯಾಗುವುದಕ್ಕೂ ಒದಗಿಸುವುದಕ್ಕೂ ವ್ಯತ್ಯಾಸ ಬಂದೇ ಬರುತ್ತದೆ. ಆ ವ್ಯತ್ಯಾಸ 5–10–15 ಕೋಟಿ ಇರಬಹುದು. ಸರ್ಕಾರ 200 ಕೋಟಿ ಒದಗಿಸುತ್ತದೆಂದು ಹೇಳಿರುತ್ತದೆ. ಆದರೆ ಅಷ್ಟು ಹಣ ಬಿಡುಗಡೆಯಾಗುವುದಿಲ್ಲ. ಅದು ಮಾನ್ಯ ನಾಣಯ್ಯನವರಿಗೆ ಹಾಗೂ ಮಾನ್ಯ ಸದಸ್ಯರಿಗೆ ಗೊತ್ತಿರುವ ವಿಷಯ. ಆದರೆ ಬಿಡುಗಡೆಯಾದ ಹಣವನ್ನು ನಾವು ಸಂಪೂರ್ಣವಾಗಿ ಖರ್ಚು ಮಾಡಿದ್ದೇವೆ. 2008–09 2009–10, ಹಾಗೂ 2010–11ನೇ ಸಾಲಿನಲ್ಲಿ ಏನೇನು ಹಣ ಬಿಡುಗಡೆಯಾಗಿದೆ ಅಷ್ಟನ್ನೂ ನಾವು ಖರ್ಚು ಮಾಡಿದ್ದೇವೆ. ನಾವು ಬಿಡುಗಡೆಯಾಗಿರುವ ಹಣವನ್ನು ಖರ್ಚು ಮಾಡಿರುವ ಸಂತೋಷ ನಮಗೆ ಇದೆ. ಕೊನೆಯಲ್ಲಿ lapse ಎಂದು ಬರೆದಿರುವುದು ತಪ್ಪಾಗಿದೆ.

**ಶ್ರೀ ಅಬ್ದುಲ್ ಅಜೀಂ:–** ಮಾನ್ಯ ಸಭಾಪತಿಯವರೆ, ಒಮ್ಮೆ ನೀವು ಬಜೆಟ್‌ನಲ್ಲಿ ಹೇಳಿದ ಮೇಲೆ ಅಷ್ಟು ಹಣವನ್ನು ಕೊಡಬೇಕು. ನೀವು ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ನೀವು ಬಿಡುಗಡೆ ಏಕೆ ಆಗಿಲ್ಲ ಎಂದು ಉತ್ತರವನ್ನು ಕೊಡಬೇಕು. ಆಗುತ್ತದೆ, ಎಂದು ಹೇಳುವ ಉತ್ತರವನ್ನು ನೀಡುವುದು ಸರಿಯಾದ ಉತ್ತರವಲ್ಲ. ಮಾನ್ಯ ಸಭಾಪತಿಯವರೆ, ಈ ಉತರ ನೋಡಿದರೆ, if we examine this answer in the light of the law, it amounts to cheating. They are punishable under section 420 of Indian penal Code. ನೀವು ಹೇಳುವುದು ಒಂದು ಮಾಡುವುದು ಒಂದು.

**ಡಾ: ವಿ.ಎಸ್. ಆಚಾರ್ಯ:–** ಮಾನ್ಯ ಸಭಾಪತಿಯವರೆ, Hon’bel Member has made his point. ಸರ್ಕಾರದಲ್ಲಿ 128 ಕೋಟಿಯಲ್ಲಿ ಐದು ಕೋಟಿ ಅಂದರೆ ಶೇಕಡ 3ಕ್ಕಿಂತಲೂ ಕಡಿಮೆ. 3ಕ್ಕಿಂತ ಕಡಿಮೆ

ಬಿಡುಗಡೆಯಾಗಿದೆ ಎಂದು ಹೇಳಿದರೆ ದೊಡ್ಡ grievance ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಸರ್ಕಾರದ ಒಟ್ಟು ಬಜೆಟ್‌ನಲ್ಲಿ ಲಭ್ಯತೆಯಿಂದ, ಕೇಂದ್ರದಿಂದ ಅಥವಾ ಬೇರೆ ಬೇರೆ ಮೂಲದಿಂದ ಬರುವಂಥ ಆದಾಯಗಳು, ಅದರ ಮೇಲಾಗಿರತಕ್ಕಂಥ ಪರಿಣಾಮಗಳು ಇದನ್ನೆಲ್ಲಾ ನೋಡಿದ್ದರೆ ಉತ್ತಮ ರೀತಿಯ ಕೆಲಸ ಆಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಕೊಟ್ಟಿರುವಂಥ 123 ಕೋಟಿಯಲ್ಲಿನ ಕೊನೆಯ ಕೋಟಿ ರೂಪಾಯಿಗಳನ್ನು ಕೂಡ ಖರ್ಚು ಮಾಡಿದ್ದಾರೆ. ಆದ್ದರಿಂದ ಇಲಾಖೆಯ ದಕ್ಷತೆ ಮತ್ತು ಕಾಳಜಿಯ ಬಗ್ಗೆ ಅವರು ಮೆಚ್ಚುಗೆಯನ್ನು ವ್ಯಕ್ತ ಮಾಡಬೇಕು. ಆದ್ದರಿಂದ ಇದರಲ್ಲಿ ದೂರುವಂಥ ಯಾವುದೇ ಪ್ರಶ್ನೆ ಇಲ್ಲ. ಮಾನ್ಯ ಸದಸ್ಯರು ದಯಮಾಡಿ ಅರ್ಥ ಮಾಡಿಕೊಳ್ಳಬೇಕು.

## ರಾಜ್ಯ ವಿದ್ಯುತ್ ಕೊರತೆ ಖರೀದಿ ಪ್ರಮಾಣ

## 462; ಶ್ರೀ ಬಸವರಾಜು ಹೊರಟ್ಟಿ (ಶಿಕ್ಷಕರ ಕ್ಷೇತ್ರ) ಹಾಗೂ ಶ್ರೀ ಖಾಜಿ ಅರಶದ ಅಲಿ (ವಿಧಾನಸಭಾ ಕ್ಷೇತ್ರ)

**ಅ)** ರಾಜ್ಯದಲ್ಲಿ ಕೊರತೆ ಇರುವ ವಿದ್ಯುತ್‌ನ ಪ್ರಯಾಣವೆಷ್ಟು;

**ಆ)** ಈ ಕೊರತೆಯನ್ನು ನೀಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)

ಇ) ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಕಡಿತದಿಂದ ರೈತರಿಗೆ ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಈ)** ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ವಿದ್ಯುತ್ ಕೊರತೆಯನ್ನು ನೀಗಿಸಲು ಸರ್ಕಾರದ ವತಿಯಿಂದ ಖರೀದಿಸಲಾದ ವಿದ್ಯುತ್ ಪ್ರಯಾಣ ಎಷ್ಟು ಹಾಗೂ ಎಷ್ಟೆಷ್ಟು ಬೆಲೆಗೆ ಖರೀದಿಸಲಾಗುತ್ತಿದೆ

(ವರ್ಷಾವಾರು ಖರೀದಿವಾರು ವಿವರ ನೀಡುವುದು);

**ಉ)** ಕಳೆದ ಐದು ವರ್ಷಗಳಲ್ಲಿ ವಿದ್ಯುತ್ತನ್ನು ಪೂರೈಕೆ ಮಾಡಿದ ಕಂಪನಿಗಳು ಯಾವುವು; ಆ ಕಂಪನಿಗಳಿಗೆ ಪಾವತಿಸಲಾದ ಪ್ರತಿಯೂನಿಟ್ ದರ ಎಷ್ಟು? (ವರ್ಷಾವಾರು, ಕಂಪನಿವಾರು ಸಂಪೂರ್ಣ ವಿವರ ನೀಡುವುದು)

**ಕು: ಶೋಭಾ ಕರಂದ್ಲಾಜೆ (ಇಂಧನ ಸಚಿವರು)**

**ಅ)** ಪ್ರಸ್ತುತ ರಾಜ್ಯದಲ್ಲಿ ಪ್ರತಿದಿನ ಅಂದಾಜು 30 ಮಿಲಿಯನ್ ಯೂನಿಟ್‌ಗಳಷ್ಟು ವಿದ್ಯುತ್ ಕೊರತೆ ಇರುತ್ತದೆ.

**ಆ)** ರಾಜ್ಯ ಸರ್ಕಾರವು ವಿದ್ಯುತ್ ಕೊರತೆಯನ್ನು ನೀಗಿಸಲು, ಹೆಚ್ಚುವರಿಯಾಗಿ ಸೆಪ್ಟೆಂಬರ್ 2010 ರಿಂದ ಮೇ 2011 ರವರೆಗೆ ಪ್ರತಿದಿನ ಅಂದಾಜು 23 ಮಿಲಿಯನ್ ಯೂನಿಟ್ಟುಗಳಷ್ಟು ವಿದ್ಯುತ್ತನ್ನು ಖಾಸಗಿ ವಿದ್ಯುತ್ ಉತ್ಪಾದಕರಿಂದ ಪಡೆಯಲಾಗುತ್ತಿದೆ ಮತ್ತು ಛತ್ತೀಸ್‌ಘಡ ಸರ್ಕಾರದಿಂದ ಜನವರಿ 2011ರಿಂದ ಏಪ್ರಿಲ್ 2011 ರವರೆಗೆ ಪ್ರತಿದಿನ ಅಂದಾಜು 7 ಮಿಲಿಯನ್ ಯೂನಿಟ್‌ಗಳಷ್ಟು ವಿದ್ಯುತನ್ನು ಖರೀದಿಸುತ್ತಿದೆ.

**ಇ)** ರಾಜ್ಯ ಸರ್ಕಾರವು ರೈತರ ಕೃಷಿ ಪಂಪುಸೆಂಟ್ಟುಗಳಿಗೆ ಹಾಗೂ ಕುಡಿಯುವ ನೀರಿನ ಸ್ಥಾವರಗಳಿಗೆ ಹಗಲಿನ ವೇಳೆಯಲ್ಲಿಯೇ 6ಗಂಟೆಗಳ ಕಾಲ ನಿರಂತರವಾಗಿ 3 ಫೇಸ್‌ನಲ್ಲಿ ವಿದ್ಯುತ್ ಪೂರೈಸಲಾಗುತ್ತಿದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯದಲ್ಲಿ ತೊಂದರೆಯಾಗದಂತೆ ಸಂಜೆ 6 ಗಂಟೆಯಿಂದ ಬೆಳ್ಳಿಗೆ 6 ಗಂಟೆಯವರೆಗೆ ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಪೂರೈಸಲಾಗುತ್ತಿದೆ.

**ಈ)** ಸರ್ಕಾರವು 2006–07 ರಿಂದ 2010–11 (ಫೆಬ್ರವರಿ 2011ರ ಅಂತ್ಯದವರೆಗೆ) ಒಟ್ಟು 8,869.68 ಮಿಲಿಯನ್ ಯೂನಿಟ್ಟುಗಳಷ್ಟು ವಿದ್ಯುತ್ತನ್ನು ಖರೀದಿಸಿದೆ. ವರ್ಷವಾರು ವಿವರಗಳು ಈ. ಕೆಳಕಂಡತಿದೆ.

| **ವರ್ಷ** | **ವಿದ್ಯುತ್ ಪ್ರಯಾಣ (ಮಿ.ಯೂ.)** | **ಸರಾಸರಿ ವಿದ್ಯುತ್ ದರ ಪ್ರತಿ ಯೂನಿಟ್‌ಗೆ (₹ ಗಳಲ್ಲಿ)** |
|---|---|---|
| 2006–07 | ಖರೀದಿಸಿಲ್ಲ | ಖರೀದಿಸಿಲ್ಲ |
| 2007–08 | 40.50 | 7.04 |
| 2008–09 | 1318.83 | 6.76 |
| 2009–10 | 1548.15 | 6.38 |
| 2010–11 (ಫೆಬ್ರವರಿ ಅಂತ್ಯಕ್ಕೆ) | 5962.20 (ತಾತ್ಕಾಲಿಕ) | 4.89 |

**ಉ)** ವಿದ್ಯುತನ್ನು ಪೂರೈಕೆ ಮಾಡಿದ ಕಂಪನಿಗಳು ಮತ್ತು ಪ್ರತಿ ಯೂನಿಟ್‌ಗೆ ಪಾವತಿಸಲಾದ ದರಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

# ಅನುಬಂಧ

## ಕಳೆದ 5ವರ್ಷಗಳಲ್ಲಿ ವಿದ್ಯುತನ್ನು ಪೂರೈಕೆ ಮಾಡಿದ ಕಂಪನಿಗಳು ಮತ್ತು ಪ್ರತಿ ಯೂನಿಟ್‌ಗೆ ಪಾವತಿಸಲಾದ ದರಗಳ ವರ್ಷಾವಾರು ವಿವರಗಳು

**2007–08**

| ಕ್ರ ಸಂ. | ಕಂಪನಿಯ ಹೆಸರು | ವಿದ್ಯುತ್ ಪ್ರಯಾಣ (ಮಿ.ಯೂ.ಗಳಲ್ಲಿ) | ಸರಾಸರಿ ವಿದ್ಯುತ್ ದರ ಪ್ರತಿ ಯೂನಿಟ್‌ಗೆ (₹ ಗಳಲ್ಲಿ) |
|---|---|---|---|
| 1 | ಪಿ.ಟಿ.ಸಿ. | 40.50 | 7.04 |

**2008–09**

| ಕ್ರ ಸಂ. | ಕಂಪನಿಯ ಹೆಸರು | ವಿದ್ಯುತ್ ಪ್ರಯಾಣ (ಮಿ.ಯೂ.ಗಳಲ್ಲಿ) | ಸರಾಸರಿ ವಿದ್ಯುತ್ ದರ ಪ್ರತಿ ಯೂನಿಟ್‌ಗೆ (₹ ಗಳಲ್ಲಿ) |
|---|---|---|---|
| 1 | ಕೇಂದ್ರ ಸರ್ಕಾರಿ ಸ್ವಾಮ್ಯದ ಎನ್.ಟಿ.ಪಿ.ಸಿ. ವಿವಿಎನ್ಎಲ್ | 16.86 | 8.13 |
| 2 | ಮೆ:ಜಿ.ಎಂ.ಆರ್ ಎನರ್ಜಿ ಲಿ. | 588.52 | 6.62 |
| 3 | ಮೆ: ಜೆ.ಎಸ್.ಡಬ್ಲ್ಯೂ ಎನರ್ಜಿ ಲಿ. | 441.62 | 6.84 |
| 4 | ಪಿ.ಟಿ.ಸಿ.ಎಲ್.ಐ | 219.46 | 7.86 |
| 5 | ಮೆ: ಜಿ.ಯು.ಎನ್. ಎಲ್. | 7.61 | 6.56 |

| | | | |
|---|---|---|---|
| 6 | ಭಾರತೀಯ ವಿದ್ಯುತ್ ವಿನಿಮಯ ಕೇಂದ್ರ (ಐ.ಇ.ಎಕ್ಸ್) | 43.27 | 6.31 |
| 7 | ಟಾಟಾ ಪವರ್ | 1.49 | 7.81 |
| | **ಒಟ್ಟು** | **1318.83** | |

**2009–10**

| ಕ್ರಂ ಸಂ. | ಕಂಪನಿಯ ಹೆಸರು | ವಿದ್ಯುತ್ ಪ್ರಯಾಣ (ಮಿ.ಯೂ.ಗಳಲ್ಲಿ) | ಸರಾಸರಿ ವಿದ್ಯುತ್ ದರ ಪ್ರತಿ ಯೂನಿಟ್‌ಗೆ (₹ ಗಳಲ್ಲಿ) |
|---|---|---|---|
| 1 | ಕೇಂದ್ರ ಸರ್ಕಾರಿ ಸ್ವಾಮ್ಯದ ಎನ್.ಟಿ.ಪಿ.ಸಿ. ವಿವಿಎನ್ಎಲ್ | 69.10 | 4.51 |
| 2 | ಮೆ:ಜಿ.ಎಂ.ಆರ್ ಎನರ್ಜಿ ಲಿ. | 102.89 | 5.50 |
| 3 | ಮೆ: ಜೆ.ಎಸ್.ಡಬ್ಲೂ ಎನರ್ಜಿ ಲಿ. | 591.37 | 5.56 |
| 4 | ಪಿ.ಟಿ.ಸಿ.ಎಲ್.ಐ | 443.96 | 6.37 |
| 5 | ಮೇ:ಲ್ಯಾಂಕೋ ಎಲೆಕ್ಟ್ರಿಕ್ ಯೂಟಿಲಿಟಿ | 292.80 | 9.25 |
| 6 | ಭಾರತೀಯ ವಿದ್ಯುತ್ ವಿನಿಮಯ ಕೇಂದ್ರ (ಐ.ಇ.ಎಕ್ಸ್) | 13.70 | 4.64 |
| 7 | ರಿಲೈಯನ್ಸ್ | 34.33 | 4.50 |
| | **ಒಟ್ಟು** | **1548.15** | |

**2010–11 (ಫೆಬ್ರವರಿ 2011ರವರೆಗೆ):**

| ಕ್ರ ಸಂ. | ಕಂಪನಿಯ ಹೆಸರು | ವಿದ್ಯುತ್ ಪ್ರಯಾಣ (ಮಿ.ಯೂ.ಗಳಲ್ಲಿ) | ಸರಾಸರಿ ವಿದ್ಯುತ್ ದರ ಪ್ರತಿ ಯೂನಿಟ್‌ಗೆ (₹ ಗಳಲ್ಲಿ) | ಖರೀದಿಯ ಅವಧಿ |
|---|---|---|---|---|
| 1 | ಕೇಂದ್ರ ಸರ್ಕಾರಿ ಸ್ವಾಮ್ಯದ ಎನ್.ಟಿ.ಪಿ.ಸಿ. ವಿವಿಎನ್ಎಲ್ | 724.85 | 4.39 | ಜುಲೈ–10 ರಿಂದ ಸೆಪ್ಟೆಂಬರ್ 10. ಡಿಸೆಂಬರ್–2010, ಜನವರಿ–2011 |
| 2 | ಮೆ: ಜೆ.ಎಸ್.ಡಬ್ಲೂ | 3613.50 | 5.30 | ಏಪ್ರಿಲ್–2010 ರಿಂದ ಫೆಬ್ರವರಿ–2011 |
| 3 | ಪಿ.ಟಿ.ಸಿ.ಎಲ್.ಐ. | 1178.50 | 4.95 | ಏಪ್ರಿಲ್–ಮೇ–2010, ಜುಲೈ–10ರರಿಂದ ಫೆಬ್ರವರಿ–2011 |
| 4 | ಮೆ: ಲ್ಯಾಂಕೋ ಎಲೆಕ್ಟ್ರಿಕ್ | 18.00 | 4.73 | ಆಗಸ್ಟ್–2010 |
| 5 | ವಿದ್ಯುತ್ ವಿನಿಮಯ ಕೇಂದ್ರ (ಐ.ಇ.ಎಕ್ಸ್) | 184.82 | 4.00 | ಜುಲೈ–2010 ರಿಂದ ಅಕ್ಟೋಬರ್ 2010, ಡಿಸೆಂಬರ್ 2010 |

| | | | | |
|---|---|---|---|---|
| 6 | ಛತ್ತಿಸ್‌ಘಡ್ ರಾಜ್ಯ ಸರ್ಕಾರದಿಂದ | 225.65 | 3.91 | ಜನವರಿ–2011 ಫೆಬ್ರವರಿ–2011 |
| 7 | ಪವರ್ ಎಕ್ಸ್‌ಚೇಂಜ್ ಇಂಡಿಯಾ ಲಿಮಿಟೆಡ್ (ಪಿಎಕ್ಸ್‌ಐಎಲ್) | 16.88 | 3.60 | ಸೆಪ್ಟೆಂಬರ್2010, ಅಕ್ಟೋಬರ್–2010, ಡಿಸೆಂಬರ್ 2010 |
| | **ಒಟ್ಟು** | **5962.20** | | |

**ಶ್ರೀ ಖಾಜಿ ಅರಶದ ಆಲಿ:–** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಿದ್ದಾರೆ. ನಾನು ಒಂದು ಉಪ ಪ್ರಶ್ನೆಯನ್ನು ಕೇಳಬಯಸುತ್ತೇನೆ. ಅದೇನೆಂದರೆ ಖರೀದಿ ದರದಲ್ಲಿ ವ್ಯಾತ್ಯಾಸ ಏಕೆ ಆಗಿದೆ? ಖರೀದಿ ದರ ಪ್ರತಿ ವರ್ಷ ಹೆಚ್ಚು ಆಗಬೇಕು ಆದರೆ ಇಲ್ಲಿ ಕಡಿಮೆಯಾಗುತ್ತಿದೆಯಲ್ಲ ಏಕೆ? ಬೇರೆ ಬೇರೆ ಕಂಪನಿಗಳಿಂದ ನೀವು ಖರೀದಿ ಮಾಡಿದ್ದೀರಿ ಆದರೆ ಅದರಲ್ಲಿ ವ್ಯತ್ಯಾಸ ಏಕೆ ಇದೆ?

**ಶ್ರೀಮತಿ ಶೋಭಾ ಕರಂದ್ಲಾಜೆ:–** ಮಾನ್ಯ ಸಭಾಪತಿಯವರೆ, ಪ್ರತಿ ದಿವಸ 'Open Exchange' ನಲ್ಲಿ ವ್ಯತ್ಯಾಸ ಆಗುತ್ತಲೇ ಇರುತ್ತದೆ. ನಾವು ಸೆಪ್ಟೆಂಬರ್ ತಿಂಗಳಿನಲ್ಲಿ ಖರೀದಿ ಮಾಡದೆ ಒಪ್ಪಂದ ಮಾಡಿಕೊಳ್ಳದಿದ್ದರೆ, ಇವೊತ್ತು ಒಪ್ಪಂದ ಮಾಡಿಕೊಳ್ಳಲು ಹೋಗಿದ್ದರೆ ಒಂಭತ್ತುವರೆ ರೂಪಾಯಿ ಇರುತ್ತಿತ್ತು. ಇದು ನಿನ್ನೆಯ ದರ. ಅಂದರೆ ಪ್ರತಿ ಗಂಟೆಗೆ ಪ್ರತಿ ದಿವಸಕ್ಕೆ, ಪ್ರತಿ ನಿಮಿಷಕ್ಕೂ ಕೂಡ Exchange ನಲ್ಲಿ ದರಗಳ ವ್ಯತ್ಯಾಸಗಳು ಆಗುತ್ತಿವೆ. ಆದರೆ ನಾವು ಸೆಪ್ಟೆಂಬರ್‌ನಲ್ಲಿ ಸುಮಾರು ಒಂದು ಸಾವಿರ ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಖರೀದಿ ಮಾಡುವುದಕ್ಕಾಗಿ ಕರಾರು ಮಾಡಿಕೊಂಡಿದ್ದೇವೆ. ಆಗ ನಮಗೆ ಸರಾಸರಿಯಾಗಿ 4ರೂಪಾಯಿ 95ಪೈಸಗೆ ಸಿಕ್ಕಿದೆ. ಅದರಲ್ಲಿ ಕೆಲವು ಕಂಪನಿಗಳು ಟೆಂಡರ್‌ನಲ್ಲಿ ದರಗಳನ್ನು ಹೆಚ್ಚು ಕಡಿಮೆ ಹಾಕಿರುವುದರಿಂದ ಈ ವ್ಯತ್ಯಾಸಗಳಿವೆ. ನಾವು ಮತ್ತೆ ಜನವರಿಯಲ್ಲಿ ಟೆಂಡರ್‌ಗೆ ಹೋಗಬೇಕೆಂದು ನಿರ್ಧಾರ ಮಾಡಿದ್ದೆವು. ಆಗ ಮತ್ತೆ ಪುನಃ ನಮಗೆ ಟೆಂಡರ್‌ನಲ್ಲಿ ದರ ಹೆಚ್ಚು ಬರಬಹುದೆನ್ನುವಂಥ ಸೂಚನೆ ಬಂತು. ಆ ಕಾರಣಕ್ಕಾಗಿ ನಾವು ಛತ್ತೀಸ್‌ಗಡ್ ಸರ್ಕಾರದೊಂದಿಗೆ ಪರಸ್ಪರ ಮಾತನಾಡಿಕೊಂಡು 3ರೂಪಾಯಿ 91ಪೈಸೆಗೆ 300ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಜನವರಿಯಿಂದ ಈಗ ಫೆಬ್ರವರಿಯವರೆಗೆ ಒಂದು ತಿಂಗಳು ನಾವು ಖರೀದಿ ಮಾಡಿಲ್ಲ. ನಾವು ಏಕೆ ಖರೀದಿ ಮಾಡಿಲ್ಲ ಅಂದರೆ ನಮಗೆ alignment ಸಿಕ್ಕಿಲ್ಲ. ಲೈನ್ ಸಿಕ್ಕಲಿಲ್ಲ. ಅದು ಬಿಟ್ಟು ಈಗ ಮಾರ್ಚ್, ಏಪ್ರಿಲ್, ಮೇ ನಲ್ಲಿ ಛತ್ತಿಸ್‌ಗಡ್‌ದಿಂದ 3ರೂಪಾಯಿ 91 ಪೈಸೆಗೆ ಖರೀದಿ ಮಾಡುವುದಕ್ಕೆ ನಾವು ಒಪ್ಪಂದವನ್ನು ಮಾಡಿಕೊಂಡಿದ್ದೇವೆ. 'Open Exchange' ನಲ್ಲಿ Stock Exchange ಇರುವ ತರಹ ಇದೆ. ಅಲ್ಲಿ ಪ್ರತಿ ದಿವಸ,

ಪ್ರತಿ ನಿಮಿಷಕ್ಕೆ ದರ ಹೆಚ್ಚು ಕಡಿಮೆ ಆಗುತ್ತಿರುತ್ತವೆ. ಅಲ್ಲಿ ತುಂಬಾ Variations ಇದೆ. ಆ ಕಾರಣಕ್ಕಾಗಿ ಈ ವ್ಯತ್ಯಾಸ ಆಗಿದೆ. ಇವೊತ್ತು ಸರ್ಕಾರ ಬರುವಂಥ ದಿನಗಳಲ್ಲಿ ಒಂದು ಗಾದೆಯ ರೀತಿಯಲ್ಲಿನ ಪರಿಸ್ಥಿತಿಯಲ್ಲಿದೆ ಅದೇನೆಂದರೆ "ತಲೆಗೆ ಹೊಚ್ಚಿಕೊಂಡರೆ ಕಾಲಿಗೆ ಬರುವುದಿಲ್ಲ, ಕಾಲಿಗೆ ಹೊಚ್ಚಿಕೊಂಡರೆ ತಲೆಗೆ ಬರುವುದಿಲ್ಲ". ನಿನ್ನೆ ನಮ್ಮ ಬಳ್ಳಾರಿಯ ಯುನಿಟ್ ಹೋಗಿದೆ ನಮಗೆ ಪುನಃ 500 ಮೆಗಾ ಯುನಿಟ್ ಕಡಿಮೆಯಾಗಿದೆ. ನಾವು 1300 ಮೆಗಾವ್ಯಾಟ್ ವಿದ್ಯಚ್ಛಕ್ತಿಯನ್ನು ಖರೀದಿ ಮಾಡಿ ಈಗ ಎಷ್ಟು ನಾವು ಪೂರೈಕೆ ಮಾಡುತ್ತಿದ್ದೇವೆ. ಅಷ್ಟಕ್ಕೆ ಅದು ಸರಿ ಹೋಗುತ್ತದೆ. ಒಂದು ಯುನಿಟ್ ಬಿದ್ದು ಹೋದರೂ ಕೂಡ ನಮಗೆ ಆತಂಕ ಪ್ರಾರಂಭವಾಗುತ್ತದೆ. ಆದರೆ ಬರುವಂಥ ದಿನಗಳಲ್ಲಿ ಈ ವರ್ಷ ನಮ್ಮ 'Grid'ಗೆ ಬಳ್ಳಾರಿಯ 3ನೇ ಘಟಕ ಸುಮಾರು 600 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಈ ವರ್ಷದ ಸೆಪ್ಟೆಂಬರ್‌ಗೆ ಹೊಸದಾಗಿ ಸೇರ್ಪಡೆಯಾಗುತ್ತದೆ. ಹಾಗೆಯೇ ನಮ್ಮ ಉಡುಪಿಯ ಏನು ಪ್ರಾಜೆಕ್ಟ್ ಇದೆ ಅದರದ್ದು ಈ ವರ್ಷ synchorinse ಮಾಡಿದ್ದಾರೆ. ಸುಮಾರು 80 ಮೆಗಾವ್ಯಾಟ್ ವಿದ್ಯುತ್ 2ನೇ ಯುನಿಟ್‌ದಿಂದ ಬರುತ್ತಿದೆ. ಆದರೆ ಈ ವರ್ಷದ ಕೊನೆಯಲ್ಲಿ 600 ಮೆಗಾವ್ಯಾಟ್ ನಮ್ಮ 'Grid' ಗೆ ಸೇರಬಹುದೆಂದು ಇದೆ. ನಾಗ್‌ಝುರಿಯಲ್ಲಿ ನಾವು ಸುಮಾರು 30 ಮೆಗಾವ್ಯಾಟ್ ಈ ವರ್ಷ ಉತ್ಪಾದನೆ ಮಾಡುತ್ತೇವೆ. ಅದನ್ನು ನಾವು ಏಪ್ರಿಲ್ ಮೇನಲ್ಲಿ ಆರಂಭ ಮಾಡ ಬೇಕೆಂದಿದ್ದೇವೆ. ರಾಯಚೂರಿನ ಆಪಲ್‌ದಿನ್ನಿಯಲ್ಲಿ Solar Power ಅನ್ನು ಟೆಸ್ಟ್ ಮಾಡೋಣ ಎಂದು ಹೇಳಿ ಮಾಡಿದ್ದೇನೆ ಅಲ್ಲಿಂದ ಸುಮಾರು 100 ಮೆಗಾವ್ಯಾಟ್ ವಿದ್ಯುತ್ ಈ ವರ್ಷದ ಜೂನ್‌ನಲ್ಲಿ ನಮಗೆ ಬರುತ್ತದೆ. ಇನ್ನು non-conventional energy' ಯಿಂದ ಅಂದರೆ wind, ಸಣ್ಣ ಸಣ್ಣ ಜಲವಿದ್ಯುತ್ ಇದೆಲ್ಲಾ ಸೇರಿ ಸುಮಾರು 450 ಮೆಗಾವ್ಯಾಟ್ ವಿದ್ಯುತ್ ಈ ವರ್ಷ ನಮ್ಮ 'Grid' ಗೆ ಸೇರಬಹುದೆಂದು ಇದೆ. ಈ ರೀತಿ 1000–1300–1400 ಮೆಗಾವ್ಯಾಟ್ ವಿದ್ಯುತ್ ನಮಗೆ ಹೊಸದಾಗಿ ಬಂದರೆ ಒಂದಷ್ಟು ನಮ್ಮ ಸಮಸ್ಯೆಗಳು ಬಗೆಹರಿಯುತ್ತವೆ. ಇಲ್ಲದಿದ್ದರೆ ಪ್ರತಿ ವರ್ಷ ಈ ಸಮಸ್ಯೆ ಇದ್ದೇ ಇರುತ್ತದೆ. ಒಂದು ಯುನಿಟ್ ಬಿದ್ದು ಹೋದರು ಕೂಡ,

ಒಂದು ಯುನಿಟ್‌ನಲ್ಲಿ technical ತೊಂದರೆಯಾದರೂ ಕೂಡ tension ಪ್ರಾರಂಭ ವಾಗುವಂಥದ್ದು ಆರಂಭವಾಗುತ್ತದೆ. ಈ ಕಾರಣಕ್ಕಾಗಿ ಈ ರೀತಿಯ ಒಂದು ಒಪ್ಪಂದವನ್ನು ಸೆಪ್ಟೆಂಬರ್‌ನಲ್ಲಿ ಮಾಡಿ ನಾವು Power Exchange ದಿಂದ Power ಅನ್ನು ತೆಗೆದುಕೊಳ್ಳುವ ಕಾರಣ ಪ್ರತಿ ಬಾರಿ ವ್ಯತ್ಯಾಸ ಇರುತ್ತದೆ. ಆದರೂ ನಾವು ಸಮಾಧಾನಕರವಾಗಿ ಈ ವರ್ಷ ಸ್ವಲ್ಪ ಪರವಾಇಲ್ಲ ಎನ್ನವಂಥ ಸ್ಥಿತಿಯಲ್ಲಿದ್ದೇವೆ. ಏಕೆಂದರೆ 4 ರೂಪಾಯಿ 91 ಪೈಸೆಗೆ ಸರಾಸರಿಯಾಗಿ ನಮಗೆ workout ಆಗುತ್ತಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಒಂದು ಪ್ರಮುಖವಾದ ಪ್ರಶ್ನೆ ಇದೆ.

**ಸಭಾಪತಿಯವರು:–** ಇಲ್ಲ ಸಮಯ ಆಗಿದೆ. ಇನ್ನು ಎರಡು ಪ್ರಶ್ನೆಗಳಿವೆ.

**ಶ್ರೀ ಎಸ್.ಆರ್.ಪಾಟೀಲ್:–** ಇದೊಂದು ಪ್ರಮುಖವಾದ ಪ್ರಶ್ನೆ ಇದೆ.

**ಸಭಾಪತಿಯವರು:–** ಹಾಗಾದರೆ ಇದೇ ಕೊನೆಯ ಪ್ರಶ್ನೆ ಮಾಡುತ್ತೇನೆ. ಇನ್ನು ಕೊನೆಯ ಎರಡು ಪ್ರಶ್ನೆಗಳು ಇರುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ಮುಂದಿನ ಪ್ರಶ್ನೆ ತೆಗೆದುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:–** ಒಂದು ಸಣ್ಣ ಉಪ ಪ್ರಶ್ನೆ ಇದೆ. ಅದು ಬಹಳ ಪ್ರಮುಖವಾಗಿದ್ದು ಇದೆ.

**ಸಭಾಪತಿಯವರೆ:–** ಹಾಗಾದರೆ ನೀವು ನೋಟೀಸ್ ಕೊಡಿ. ಅದರ ಬಗ್ಗೆ ಬೇರೆ ರೂಪದಲ್ಲಿ ಚರ್ಚೆ ಮಾಡೋಣ. ನೀವು ಕೇಳುವ ಪ್ರಶ್ನೆ ಬೇರೆ. ನೀವು ಅದರ ಬಗ್ಗೆ ಬೇರೆ ರೂಪದಲ್ಲಿ ಕೇಳಿ ನಾನು ಅವಕಾಶ ಮಾಡಿಕೊಡುತ್ತೇನೆ. ಈಗ ಆಗುವುದಿಲ್ಲ. ಮಾನ್ಯ ವೀರಕುಮಾರ್‌ರವರೆ ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಇದು ರೈತರಿಗೆ ಸಂಬಂಧಪಟ್ಟಂಥ ಪ್ರಶ್ನೆ. ಇಂದು ಕೃಷಿ ಬಜೆಟ್ ಮಂಡನೆ ಮಾಡಿ ದಾಖಲೆ ಮಾಡಿದ್ದೇವೆಂದು ಹೇಳುವಂಥ ಸಂದರ್ಭದಲ್ಲಿ ಒಂದೇ ಒಂದು ಸಣ್ಣ

ಪ್ರಶ್ನೆ ಇದೆ. ಕೃಷಿ ಬಜೆಟ್ ಮಂಡನೆ ಮಾಡಿ 6 ಗಂಟೆಯ ವಿದ್ಯುತ್ ಅನ್ನು ಕೊಡುತ್ತಾರೆ. ಇದು ನಾಚಿಕೆಗೇಡಿತನದ ಸಂಗತಿ. Mr.Chairman Sir, you be kind enough to permit me.

**ಸಭಾಪತಿಯವರು:–** ಅದಕ್ಕೆ ನೀವು ಒಂದು ನೋಟಿಸ್ ಅನ್ನು ಕೊಡಿ. ಅದಕ್ಕೆ ಅರ್ಧ ಗಂಟೆ ಸಮಯ ಕೊಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಹಾಗಾದರೆ ಇದೇ ಪ್ರಶ್ನೆಯನ್ನು ಅರ್ಧ ಗಂಟೆಯ ಚರ್ಚೆಗೆ convert ಮಾಡಿ.

**ಸಭಾಪತಿಯವರು:–** ನೀವು ನೋಟೀಸ್ ಕೊಡಿ ನೋಡೋಣ.

**ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಗಳ ಬಗ್ಗೆ**

**469; ಶ್ರೀ ವೀರಕುಮಾರ್ .ಅ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಕಳೆದ 3 ವರ್ಷಗಳಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಯಾವ ಯಾವ ಅಲ್ಪಸಂಖ್ಯಾತರ ಸಮುದಾಯಗಳಿಗೆ ನೆರವು ನೀಡಲಾಗಿದೆ: (ಜಿಲ್ಲಾವಾರು ವಿವರ ನೀಡುವುದು)

**ಆ)** ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ಜಾರಿಯಲ್ಲಿರುವ ಯೋಜನೆಗಳಾವುವು: (ವಿವರ ನೀಡುವುದು)

**ಇ)** ಕಳೆದ 3 ವರ್ಷಗಳಲ್ಲಿ ವಿವಿಧ ಅಲ್ಪಸಂಖ್ಯಾತರ ಸಂಘಗಳಿಗೆ ನೀಡಿರುವ ಆರ್ಥಿಕ ನೆರವು ಎಷ್ಟು: ಇದರಲ್ಲಿ ಬೆಳಗಾಂ ಜಿಲ್ಲೆಯಲ್ಲಿರುವ ಅಲ್ಪ ಸಂಖ್ಯಾತರ ಸಂಘಗಳಿಗೆ ನೀಡಿರುವ ಆರ್ಥಿಕ ನೆರವು ಎಷ್ಟು:

**ಈ)** 2009–10ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಬಿಡುಗಡೆ ಯಾಗಿರುವ ಅನುದಾನ ಎಷ್ಟು: ಇದರಲ್ಲಿ ಬೆಳಗಾಂ ಜಿಲ್ಲೆಗೆ ಒದಗಿಸಿರುವ ಅನುದಾನವೆಷ್ಟು? (ವಿವರ ನೀಡುವುದು)

**ಡಾ: ಮುಮ್ತಾಜ್ ಅಲಿ ಖಾನ್, (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಸಚಿವರು)**

**ಅ)** ಕಳೆದ 3 ವರ್ಷಗಳಲ್ಲಿ ನಿಗಮದಿಂದ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರೈಸ್ತ, ಜೈನ ಹಾಗೂ ಬೌದ್ಧ ಸಮುದಾಯಗಳಿಗೆ ನೆರವು ನೀಡಿದೆ. ಜಿಲ್ಲಾವಾರು ಹಾಗೂ ಸಮೂದಾಯವಾರು ವಿವರಗಳನ್ನು ಅನುಬಂಧ "A" "B" & "C" ಗಳಲ್ಲಿ ಲಗತ್ತಿಸಿದೆ.

**ಆ)** ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ಜಾರಿಯಲ್ಲಿರುವ ಈ ಕೆಳಕಂಡ ಯೋಜನೆಗಳ ವಿವರಗಳನ್ನು ಅನುಬಂಧ – D ರಲ್ಲಿ ಲಗತ್ತಿಸಿದೆ.

1. ಸ್ವಾವಲಂಬನ ಮಾರ್ಜಿನ್ ಹಣ ಹಾಗೂ ಸಹಾಯಧನ ಯೋಜನೆ
2. ಶ್ರಮಶಕ್ತಿ ಸಾಲ ಯೋಜನೆ
3. ಅರಿವು ಸಾಲದ ಯೋಜನೆ
4. ಕಿರುಸಾಲ ಹಾಗೂ ಸಹಾಯಧನ ಸಾಲದ ಯೋಜನೆ
5. ಗಂಗಾ ಕಲ್ಯಾಣ ಯೋಜನೆ
6. ಭೂ ಖರೀದಿ ಯೋಜನೆ

**ಇ)** ನಿಗಮದಿಂದ ಸಂಘಗಳಿಗೆ ನೇರವಾಗಿ ನೆರವು ನೀಡುವ ಯೋಜನೆಗಳಿರುದಿಲ್ಲ.

ಮೈಕ್ರೋ ಸಾಲ ಯೋಜನೆಯಡಿಯಲ್ಲಿ ಸ್ವಸಹಾಯ ಸಂಘಗಳ ಮೂಲಕ ಫಲಾನುಭವಿಗಳಿಗೆ ಸಾಲದ ನೆರವು ನೀಡಲು ಅವಕಾಶವಿರುತ್ತದೆ.

ಕಳೆದ ಮೂರು ವರ್ಷಗಳಲ್ಲಿ ಅಲ್ಪಸಂಖ್ಯಾತರ ಸ್ವ ಸಹಾಯ ಸಂಘಗಳಿಗೆ ನೆರವು ನೀಡಿರುವ ರಾಜ್ಯವಾರು ಹಾಗೂ ಬೆಳಗಾಂ ಜಿಲ್ಲೆಯ ವಿವರಗಳು ಕೆಳಗಿನಂತಿವೆ.

**ರಾಜ್ಯಾವಾರು ವಿವರ**

| ವರ್ಷ | ಸ್ವ ಸಹಾಯ ಸಂಘಗಳು | ಫಲಾನುಭವಿಗಳು | ಮೊತ್ತ (ಲಕ್ಷಗಳಲ್ಲಿ) |
|---|---|---|---|
| 2007–08 | 207 | 3099 | 182.93 |
| 2008–09 | 631 | 7613 | 639.85 |
| 2009–10 | 676 | 9002 | 732.93 |

**ಬೆಳಗಾಂ ಜಿಲ್ಲೆಯ ವಿವರ**

| ವರ್ಷ | ಸ್ವ ಸಹಾಯ ಸಂಘಗಳು | ಫಲಾನುಭವಿಗಳು | ಮೊತ್ತ (ಲಕ್ಷಗಳಲ್ಲಿ) |
|---|---|---|---|
| 2007–08 | 65 | 625 | 18.63 |
| 2008–09 | 36 | 481 | 24.05 |
| 2009–10 | 31 | 441 | 20.55 |

**ಈ)** 2009–10ನೇ ಸಾಲಿಗೆ ಸರ್ಕಾರದಿಂದ ನಿಗಮಕ್ಕೆ ₹ 4145 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನವನ್ನು ನಿಗಮವು ಜಿಲ್ಲಾವಾರು ಹಂಚಿಕೆ ಮಾಡುತ್ತಿದೆ. ಅದರಂತೆ ಬೆಳಗಾಂ 1518 ಫಲಾನುಭವಿಗಳಿಗೆ ₹ 258.66 ಲಕ್ಷಗಳನ್ನು ಹಂಚಿಕೆ ಮಾಡಿದೆ.

**ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್:–** ಮಾನ್ಯ ಸಭಾಪತಿ ಯವರೇ, 'micro loan scheme' ಏನಿದೆ ಅದರಡಿಯಲ್ಲಿ 10 ಸಾವಿರ ರೂಪಾಯಿ ಸಾಲವನ್ನು ಕೊಡುತ್ತಿದ್ದೀರಿ. ಅದನ್ನು 25 ಸಾವಿರ ರೂಪಾಯಿಗೆ ಹೆಚ್ಚಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಇನ್ನು 'ಗಂಗಾ ಕಲ್ಯಾಣ ಸ್ಕೀಮ್' ಸಲುವಾಗಿ ಬಹಳ ಕಡಿಮೆ ಬಜೆಟ್ ಇಟ್ಟಿದ್ದೀರಿ. ಅದನ್ನು ಸ್ವಲ್ಪ ಹೆಚ್ಚು ಮಾಡಿ. ಮುಸ್ಲೀಮ್ಸ್, ಕ್ರಿಶ್ಚಿಯನ್ಸ್, ಜೈನ್ಸ್

ಅವರಿಗೆ ಅದರ ಹೆಚ್ಚಿನ ಲಾಭ ಆಗಬೇಕು. ಹೆಚ್ಚಿನ ಫಲಾನುಭವಿಗಳು ಅದರ ಉಪಯೋಗ ಪಡೆದುಕೊಳ್ಳಬೇಕೆಂದು ಕೋರುತ್ತೇನೆ.

**ಪ್ರೊ: ಡಾ: ಮುಮ್ತಾಜ್ ಅಲಿಖಾನ್:–** ಮಾನ್ಯ ಸಭಾಪತಿಯವರೆ, ಅದರ ಬಗ್ಗೆ ಪ್ರಯತ್ನ ಮಾಡುತ್ತೇವೆ ಈ ಸಲ 326 ಕೋಟಿ ರೂಪಾಯಿ ಹಣ ಸರ್ಕಾರ ಕೊಟ್ಟಿರುವುದರಿಂದ ನಾವು ಸಾಧ್ಯವಾದಷ್ಟು ಮಟ್ಟಿಗೆ ಶೇಕಡ 25ರಷ್ಟು ಶೇಕಡ ಐವತ್ತರಷ್ಟು ಹೆಚ್ಚು ಮಾಡಲಿಕ್ಕೆ ಪ್ರಯತ್ನ ಪಡುತ್ತಿದ್ದೇವೆ. ಅಲ್ಪಸಂಖ್ಯಾತರಿಗೆ ಹೆಚ್ಚಿನ ಸೌಲಭ್ಯಗಳು ದೊರೆಯುವ ದಿಸೆಯಲ್ಲಿ ನಾವು ಕೂಡ ಚಿಂತಿತರಿದ್ದೇವೆನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

**ಎಸ್‌ಸಿ/ಎಸ್‌ಟಿ ಜನಾಂಗದವರ ಮೇಲೆ ಹೂಡುವ ಮೊಕದ್ದಮೆ ಬಗ್ಗೆ**

**603; ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭಾ ಕ್ಷೇತ್ರ)**

**ಅ)** ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲಿನ ಮೊಕದ್ದಮೆಗಳನ್ನು ಮಾನವೀಯತೆಯ ದೃಷ್ಟಿಯಿಂದ ವಾಪಸ್ಸು ಪಡೆಯಲು ಸರ್ಕಾರವು ಚಿಂತಿಸುತ್ತಿದೆಯೇ;

**ಆ)** ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲೆ ವಿನಾಕಾರಣ ಪೊಲೀಸರು ಮೊಕದ್ದಮೆಗಳನ್ನು ಹಾಕಿ ಕಾರಾಗೃಹಗಳಿಗೆ ಕಳುಹಿಸುವ ದುರುದ್ದೇಶಗಳನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

**ಇ)** ಕಳೆದ 5 ವರ್ಷಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರ ಮೇಲಿನ ಎಷ್ಟು ಮೊಕದ್ದಮೆಗಳನ್ನು ಸರ್ಕಾರದ ವತಿಯಿಂದ ಹಿಂದಕ್ಕೆ ಪಡೆಯಲಾಗಿದೆ?

**ಶ್ರೀ ಆರ್. ಅಶೋಕ್ (ಗೃಹ ಸಚಿವರು)**

**ಅ)** ದಲಿತ ಸಂಘರ್ಷ ಸಮಿತಿ ಹಾಗೂ ಇತರ ಸಂಘಟನೆಗಳಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲಿನ ಮೊಕದ್ದಮೆಗಳನ್ನು ಹಿಂಪಡೆಯಲು ಕೋರಿ ಸ್ವೀಕೃತವಾಗಿರುವ ಮನವಿಗಳನ್ನು ಸರ್ಕಾರವು

ಸಹಾನುಭೂತಿಯಿಂದ ಪರೀಶಿಲಿಸಿ ನಿರ್ಧಾರ ತೆಗೆದುಕೊಳ್ಳುತ್ತಿದೆ. ಪ್ರಸ್ತುತ ಈ ವಿಷಯಕ್ಕೆ ಸಂಬಂಧಪಟ್ಟಂತೆ 39 ಪ್ರಕರಣಗಳು ಸಚಿವ ಸಂಪುಟದ ಪರಿಶೀಲನೆಯ ಹಂತದಲ್ಲಿರುತ್ತವೆ.

**ಆ)** ವಿನಾಕಾರಣ ಪೊಲೀಸರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲೆ ಮೊಕದ್ದಮೆಗಳನ್ನು ಹಾಕಿ ಕಾರಾಗೃಹಗಳಿಗೆ ಕಳುಹಿಸಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) 2006ರಿಂದ ಇಲ್ಲಿಯವರೆಗೆ ಒಟ್ಟು 5 ಮೊಕದ್ದಮೆಗಳನ್ನು ಸರ್ಕಾರ ಹಿಂದಕ್ಕೆ ಪಡೆದಿರುತ್ತದೆ.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. 39 ಪ್ರಕರಣಗಳನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳ ಮೇಲೆ ಹೂಡಿದ್ದೇವೆ, ಅವುಗಳ ಪರಿಶೀಲನೆಯನ್ನು ಮಾಡಿ ಐದನ್ನು ಈಗಾಗಲೇ ನಾವು drop ಮಾಡಿದ್ದೇವೆ ಉಳಿದಂಥದ್ದು ಈಗಾಗಲೇ ಪರಿಶೀಲನೆ ಹಂತದಲ್ಲಿವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ.

**(1–30 ಗಂಟೆ)**

ಮಂಡ್ಯ ಜಿಲ್ಲೆ ಮಳವಳ್ಳಿಯಲ್ಲಿ 'ಸಿಡಿ' ಹಬ್ಬದ ಆಚರಣೆಯಲ್ಲಿ ಸಾಮಾಜಿಕ ಹಕ್ಕಿಗಾಗಿ ಅದಂತಹ ಒಂದು ದೊಂಬಿ–ಗಲಭೆಯಲ್ಲಿ, ಅಲ್ಲಿ ಹೆಚ್ಚು ಪರಿಶಿಷ್ಟರು ಇರುವಂಥದ್ದು ಅವರ ಮೇಲೆ ಒಂದು ಮೊಕದ್ದಮೆ ಇದೆ. ಏನು 5 ದಾವೆಗಳನ್ನು ಹಿಂದಕ್ಕೆ ಪಡೆದುಕೊಳ್ಳಲಾಗಿದೆಯೋ ಅದೇ ರೀತಿ ಇನ್ನು ಉಳಿದಂತಹ 39 ಕೇಸ್‌ಗಳು ಬಾಕಿ ಏನು ಇದೆ. ಅವುಗಳನ್ನು ಕೂಡ ಸರ್ಕಾರದವರು ಹಿಂದಕ್ಕೆ ಪಡೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ನಮ್ಮ ಸದಸ್ಯರಾದ ಶ್ರೀ ವೀರಯ್ಯನವರ ಪ್ರಶ್ನೆ ದಲಿತರ ಒಂದು ಹೋರಾಟದ ಸಂದರ್ಭದಲ್ಲಿ

ಅವರ ಮೇಲೆ ಹಾಕಿರುವಂತಹ ಕೇಸ್‌ಗಳನ್ನು ವಾಪಾಸ್ಸು ಪಡೆಯಬೇಕು ಎನ್ನುವಂತಹ ಪ್ರಶ್ನೆಯನ್ನು ಎತ್ತಿದ್ದಾರೆ. ಸರ್ಕಾರ ಸಹ ಅದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಿ, ಈಗಾಗಲೇ 5 ಕೇಸ್‌ಗಳನ್ನು ಹಿಂದಕ್ಕೆ ಪಡೆದುಕೊಂಡಿದ್ದೇವೆ, ಇನ್ನು 39 ಪ್ರಕರಣಗಳಿವೆ. ಅವುಗಳ ಬಗ್ಗೆ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ವಿನಂತಿ ಮಾಡುವುದೇನೆಂದರೆ, ಯಾರು ಈ ಸಾಮಾಜಿಕ ಹೋರಾಟ, ಅಂದರೆ ನೀರು ಇರಬಹುದು, ರಸ್ತೆ ಇರಬಹುದು ಈ ರೀತಿಯಾಗಿ ಒಂದು ಜನಪರ ಹೋರಾಟ ಏನು ಮಾಡಿರುತ್ತಾರೆ, ಆ ಸಂದರ್ಭದಲ್ಲಿ ಅವರ ಮೇಲೆ ಹಾಕಿರುವಂತಹ ಕೇಸ್‌ಗಳನ್ನು ವಾಪಾಸ್ಸು ತೆಗೆದುಕೊಳ್ಳಬೇಕೆಂದು ಸರ್ಕಾರ ತೀರ್ಮಾನವನ್ನು ಮಾಡಿದೆ. ಆದ್ದರಿಂದ ನಿಮ್ಮ 39 ಪ್ರಕರಣಗಳೇನಿವೆ, ಅದರಲ್ಲಿ ಯಾವುದು ಹೋರಾಟದ ಸಂದರ್ಭದಲ್ಲಿ ಹಾಕಿರುವಂತಹ ಕೇಸ್‌ಗಳನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಕ್ರಮಗಳನ್ನು ಕೈಗೊಳ್ಳುತ್ತೇವೆ.

**ಸಭಾಪತಿಯವರು:–** ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.

## (ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

**ಡಾ: ವಿ.ಎಸ್. ಆಚಾರ್ಯ (ಸಭಾ ನಾಯಕರು):–** ಮಾನ್ಯ ಸಭಾಪತಿ ಯವರೇ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 15ನೇ ಪಟ್ಟಿಯಲ್ಲಿರುವ ಎಲ್ಲಾ 39 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

## ವಸತಿ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ

**612; ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭಾ ಕ್ಷೇತ್ರ)**

**ಅ)** ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ಹುದ್ದೆವಾರು ವಿವರ ನೀಡುವುದು);

**ಆ)** ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು);

**ಇ)** ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಮುಂದೆ ಈ ವಿಷಯದ ಬಗ್ಗೆ ಆರ್ಥಿಕ ಇಲಾಖೆಯ ಸಹಮತಿ ನೀಡುತ್ತಿದ್ದಾಗ್ಯೂ ಸಹ ವಿಳಂಬ ವಾಗುತ್ತಿರಲು ಕಾರಣಗಳೇನು;

**ಈ)** ವಸತಿ ಶಾಲೆಗಳ ಮೂಲಭೂತ ಸೌಲಭ್ಯಕ್ಕಾಗಿ ಸರ್ಕಾರ ನಿಗಧಿಪಡಿಸಿರುವ ಅನುದಾನದ ಪೈಕಿ ಹಣವನ್ನು ಯಾವ ಯಾವ ಸೌಲಭ್ಯಗಳಿಗೆ ಬಿಡುಗಡೆ ಮಾಡಿದೆ? (ವಿವರ ನೀಡುವುದು).

**ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂಧಿಖಾನೆ ಸಚಿವರು)**

**ಅ)** ಖಾಲಿ ಇರುವ ಹುದ್ದೆಗಳ ಸಂಖ್ಯೆ : 9875

ಹುದ್ದೆವಾರು ವಿವರ ಈ ಕೆಳಕಂಡಂತಿದೆ:

| | |
|---|---|
| ಪ್ರಾಂಶುಪಾಲರು | – 395 |
| ಶಿಕ್ಷಕರು | – 3950 |
| ಬೋಧಕೇತರ ಸಿಬ್ಬಂದಿ | – 5530 |

**ಆ)** ಸಂಘದ ವತಿಯಿಂದ ನೇಮಕಾತಿ ಮಾಡಲು ತೀರ್ಮಾನಿಸಿದ್ದು, ಸಂಘಕ್ಕೆ ಪ್ರತ್ಯೇಕವಾಗಿ ಆದೇಶ ಸಂಖ್ಯೆ: ಸಕಇ 70 ಮೊದೇಶಾ 2010, ದಿನಾಂಕ: 21–01–2011 ರಲ್ಲಿ ವೃಂದ ಮತ್ತು ನೇಮಕಾತಿ

ನಿಯಮಾವಳಿಯನ್ನು ರಚಿಸಲಾಗಿದೆ. ಅದರಂತೆ ಆರ್ಥಿಕ ಇಲಾಖೆಯಿಂದ ಅನುಮತಿ ನೀಡಿರುವ ಹುದ್ದೆಗಳಿಗೆ ಸಿಬ್ಬಂದಿಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗಿದೆ. ಮುಂದಿನ ಜೂನ್ 2011ಕ್ಕೆ ಭರ್ತಿಯಾಗುವ ನಿರೀಕ್ಷೆಯಿದೆ.

ಇ) ಆರ್ಥಿಕ ಇಲಾಖೆಯು ಈ ಹುದ್ದೆಗಳನ್ನು ಭರ್ತಿ ಮಾಡಲು ಆದೇಶ ಸಂಖ್ಯೆ. ಸಕಇ 112 ಎಂಡಿಎಸ್ 2008, ದಿ:25–04–2009 ಮತ್ತು ಸಕಇ 22 ಮೊದೇಶಾ 2009, ದಿ:22–06–2009ರಲ್ಲಿ ಅನುಮತಿ ನೀಡಿರುತ್ತದೆ. ಆದರೆ ಈ ಹುದ್ದೆಗಳು ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆಗಳಿಗೆ ಮಂಜೂರಾಗಿವೆ. ಈ ಶಿಕ್ಷಕರ ಅನುಕೂಲತೆ ದೃಷ್ಟಿಯಿಂದ ಇಲಾಖೆಗಳ ಬದಲು ಸಂಘದ ವತಿಯಿಂದ ನೇಮಕಾತಿ ಮಾಡಲು ತೀರ್ಮಾನಿಸಿದ್ದು, ಈಗ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಂತಿಮಗೊಳಿಸಲಾಗಿದೆ. ಈ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಂತೆ ಅತಿ ತುರ್ತಾಗಿ ನೇಮಕಾತಿ ಮಾಡಲು ಕ್ರಮವಹಿಸಲಾಗುತ್ತಿದೆ.

**ಈ)** ವಸತಿ ಶಾಲೆಗಳ ಮೂಲಭೂತ ಸೌಲಭ್ಯಕ್ಕಾಗಿ ಸರ್ಕಾರ ನಿಗಧಿಪಡಿಸಿರುವ ಅನುದಾನವನ್ನು ಎಲ್ಲಾ ಜಿಲ್ಲೆಗಳಿಗೆ ಅಗತ್ಯತೆ ಅನುಸಾರ ಬಿಡುಗಡೆ ಮಾಡಿರುವ ಅನುದಾನವನ್ನು ಕೆಳಕಂಡ ಸೌಲಭ್ಯಗಳನ್ನು ಒದಗಿಸಲು ಆಯಾಯ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

| **ಕ್ರ. ಸಂ.** | **ಸೌಲಭ್ಯಗಳ ವಿವರ** | **ಒಟ್ಟು ಬಿಡುಗಡೆ ಮಾಡಿದ ಮೊತ್ತ (₹ ಗಳಲ್ಲಿ)** |
|---|---|---|
| 1. | ವಸತಿ ಶಾಲೆಗಳಿಗೆ ಶಾಲಾ ಬೆಂಚು, ಡೆಸ್ಕ್, ಕುರ್ಚಿ,ಆಲ್ಮೇರಾ ಒದಗಿಸಲು. | 68104340 |
| 2. | ಗಣಕಯಂತ್ರ, ಯು.ಪಿ.ಎಸ್.ಪ್ರಿಂಟರ್, ಟಿವಿ | 48909750 |

| | | |
|---|---|---|
| | ಒದಗಿಸಲು | |
| 3. | ಡೈನಿಂಗ್ ಟೇಬಲ್. ಚಾಪೆ, ಹಾಸಿಗೆ, ಹೊದಿಕೆ, ಮಂಚ, ಟ್ರಂಕ್ ಇತ್ಯಾದಿಗಳನ್ನು ಒದಗಿಸಲು | 156041400 |
| | **ಒಟ್ಟು** | **273055490** |

**ಸುಟ್ಟ ಗಾಯಗಳ ತುರ್ತು ಚಿಕಿತ್ಸೆ ವಿಶೇಷ ಘಟಕಗಳನ್ನು ಸ್ಥಾಪಿಸುವ ಬಗ್ಗೆ.**

**520; ಆರ್.ವಿ. ವೆಂಕಟೇಶ್(ವಿಧಾನಸಭಾ ಕ್ಷೇತ್ರ)**

**ಅ)** ಬೆಂಗಳೂರಿನ ಎಷ್ಟು ಆಸ್ಪತ್ರೆಗಳಲ್ಲಿ ಸುಟ್ಟ ಗಾಯಗಳ ತುರ್ತು ಚಿಕಿತ್ಸೆಯ ವಿಶೇಷ ಘಟಕಗಳನ್ನು ಸ್ಥಾಪಿಸಲಾಗಿದೆ;

**ಆ)** ಸುಟ್ಟ ಗಾಯಗಳ ಚಿಕಿತ್ಸಾ ಸೌಲಭ್ಯಗಳು ಬೆಂಗಳೂರಿನ ಜನಸಂಖ್ಯೆಗೆ ಅನುಗುಣವಾಗಿ ಇಲ್ಲದೇ ಸಾರ್ವಜನಿಕರು ಸಂಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

**ಇ)** ಈ ಸುಟ್ಟ ಗಾಯಗಳ ಚಿಕಿತ್ಸಾ ಸೌಲಭ್ಯಗಳನ್ನು ಇನ್ನೂ ಹೆಚ್ಚಾಗಿ ವಿಸ್ತರಿಸಲು ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳು ಯಾವುವು? (ವಿವರ ನೀಡುವುದು)

**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

**ಅ)** ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿ ಬರುವ ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ಇಲ್ಲಿ ಸುಟ್ಟ ಗಾಯಗಳ ವಿಶೇಷ ವಾರ್ಡ್ ಇರುತ್ತದೆ.

**ಆ)** ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಸೂಕ್ತ ಚಿಕಿತ್ಸೆ ನೀಡಲು ಕ್ರಮವಹಿಸಲಾಗಿದೆ.

**ಇ)** 2008–09 ನೇ ಸಾಲಿನಲ್ಲಿ ಜಿಲ್ಲಾ ಆಸ್ಪತ್ರೆಗಳಾದ ಗುಲ್ಬರ್ಗಾ, ಬೀದರ್, ಬಿಜಾಪುರ ಬಾಗಲಕೋಟೆ, ಶಿವಮೊಗ್ಗ ಮತ್ತು ಚಾಮರಾಜನಗರ ಇಲ್ಲಿ

ಸುಟ್ಟಗಾಯಗಳ ವಾರ್ಡ್‌ಗಳನ್ನು ಸ್ಥಾಪಿಸಲಾಗಿದೆ. ಮುಂದುವರೆದು, 2009–10 ನೇ ಸಾಲಿನಲ್ಲಿ ಜಿಲ್ಲಾ ಆಸ್ಪತ್ರೆಗಳಾದ ಕೋಲಾರ, ತುಮಕೂರು, ಧಾರವಾಡ, ಕಾರವಾರ ಮತ್ತು ಹಾಸನ ಜಿಲ್ಲೆಗಳಲ್ಲಿ ಸುಟ್ಟ ಗಾಯಗಳ ಚಿಕಿತ್ಸಾ ವಾರ್ಡ್‌ಗಳನ್ನು ಸ್ಥಾಪಿಸಲಾಗಿದೆ. ಇವುಗಳು ಈಗಾಗಲೇ ಕಾರ್ಯಾರಂಭ ಮಾಡಿವೆ.

## ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿರುವ ಬಗ್ಗೆ

## 489; ಶ್ರೀ ಆರ್.ವಿ. ವೆಂಕಟೇಶ್ (ವಿಧಾನಸಭಾ ಕ್ಷೇತ್ರ)

**ಅ)** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೀಡುವ ಜಾತಿ ಪ್ರಮಾಣ ಪತ್ರಗಳನ್ನು ಇತರೆ ಪಂಗಡಕ್ಕೆ ಸೇರಿದ ವ್ಯಕ್ತಿಗಳಿಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಇಂತಹ ಪ್ರಕರಣಗಳ ಸಂಖ್ಯೆ ಎಷ್ಟು;

**ಆ)** ಇಂತಹ ಅಕ್ರಮ ಪ್ರಕರಣಗಳಲ್ಲಿ ಭಾಗಿಯಾದವರ ವಿರುದ್ಧ ಸರ್ಕಾರವು ಕೈಗೊಂಡ ಕ್ರಮಗಳೇನು; ಯಾವ ಯಾವ ಅಧಿಕಾರಿ: ಫಲಾನುಭವಿಗಳ ಮೇಲೆ ಸರ್ಕಾರವು ಕ್ರಮಕೈಗೊಂಡಿದೆ;

**ಇ)** ಮೇಲ್ಜಾತಿಯವರು ತಾವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರೆಂದು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದು ಸರ್ಕಾರಿ ಹುದ್ದೆಯನ್ನು ಗಿಟ್ಟಿಸಿಕೊಂಡಿರುವ ಪ್ರಕರಣಗಳೆಷ್ಟು;

**ಈ)** ಈ ಪ್ರಕರಣಗಳ ತನಿಖೆ ಯಾವ ಹಂತದಲ್ಲಿದೆ: ಈ ಎಲ್ಲಾ ಪ್ರಕರಣ ಗಳಲ್ಲಿಯೂ ಸಂಬಂಧಪಟ್ಟ ತಹಶೀಲ್ದಾರರೇ ಹೊಣೆಗಾರರಾಗಿದ್ದು, ಇವರ ವಿರುದ್ಧ ಸರ್ಕಾರವು ಕೈಗೊಂಡ ಕ್ರಮಗಳೇನು?

## ಶ್ರೀ ಎ. ನಾರಾಯಣ ಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದಿಖಾನೆ ಸಚಿವರು)

**ಅ)** ಹೌದು 639 ಪ್ರಕರಣಗಳು

**ಆ)** 639 ಅಕ್ರಮ ಪ್ರಕರಣಗಳಿದ್ದು ಇವುಗಳಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ.

ನ್ಯಾಯಾಲಯದಲ್ಲಿ 6 ಪ್ರಕರಣಗಳಲ್ಲಿ ಫಲಾನುಭವಿಗಳಿಗೆ ಶಿಕ್ಷೆಗೆ ಒಳಪಡಿಸಲಾಗಿದೆ. ಅನುಬಂಧ –1 ರಲ್ಲಿ ವಿವರಗಳನ್ನು ನೀಡಲಾಗಿದೆ.

21 ಪ್ರಕರಣಗಳಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದ ಫಲಾನುಭವಿಗಳನ್ನು ಸೇವೆಯಿಂದ ವಜಾ ಮಾಡಲಾಗಿದೆ. (ಅನುಬಂಧ–2)

ಅಲ್ಲದೆ 241 ಪ್ರಕರಣಗಳಲ್ಲಿ ನೌಕರರನ್ನು ಸೇವೆಯಿಂದ ವಜಾಗೊಳಿಸುವಂತೆ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ.

ಯಾವ ಅಧಿಕಾರಿಯ ಮೇಲೂ ಕ್ರಮ ತೆಗೆದುಕೊಂಡಿರುವುದಿಲ್ಲ.

ಇ) 433 ಪ್ರಕರಣಗಳು

**ಈ)** 241 ಪ್ರಕರಣಗಳಲ್ಲಿ ಸರ್ಕಾರಿ ನೌಕರರನ್ನು ಸೇವೆಯಿಂದ ವಜಾ ಮಾಡಲು ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಿಗಳಿಗೆ ಪತ್ರ ಬರೆಯಲಾಗಿದ್ದು 21 ಸರ್ಕಾರಿ ನೌಕರರನ್ನು ಸೇವೆಯಿಂದ ವಜಾ ಮಾಡಲಾಗಿರುತ್ತದೆ. ಅಂತಹ ಜಾತಿ ಪ್ರಮಾಣ ಪತ್ರಗಳನ್ನು ನೀಡುವಾಗ ಯಾವ ವಿಧಾನ ಪಾಲಿಸಬೇಕೆಂಬ ಕುರಿತಂತೆ ಸುತ್ತೋಲೆ ಸಂಖ್ಯೆ:ಸಕಇ 8 ಎಸ್ಎಡಿ 2009 ದಿನಾಂಕ: 16–02–2009ರಲ್ಲಿ ವಿವರಿಸಲಾಗಿದ್ದು, ಉಲ್ಲೇಖಿತ ಸುತ್ತೋಲೆ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ ತಹಶೀಲ್ದಾರರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲು ಕಂದಾಯ ಇಲಾಖೆಯನ್ನು ಕೋರಲಾಗುವುದು.

ಅನುಬಂಧ - I

## ನ್ಯಾಯಾಲಯದಲ್ಲಿ ಶಿಕ್ಷೆಯಾಗಿರುವ ಪ್ರಕರಣಗಳ ವಿವರ

| ಕ್ರ.ಸಂ. | ಪೊಲೀಸ್ ಠಾಣೆ ಮೊ.ಸಂ. ದಿನಾಂಕ: | ಆಪಾದಿತರ ಹೆಸರು ಮತ್ತು ಹುದ್ದೆ | ಮೂಲ ಜಾತಿ | ಪಡೆದ ಜಾತಿ | ಸಿ.ಸಿ. ಸಂಖ್ಯೆ | ನ್ಯಾಯಾಲಯದ ತೀರ್ಪು |
|---|---|---|---|---|---|---|
| 1 | ಹಲಸೂರು ಗೇಟ್, ಪೊಲೀಸ್ ಠಾಣೆ ಮೊ.ಸಂ. 289/04 ಕಲಂ 198, 420 ಐಪಿಸಿ ಕ್ಲಾಸ್ 3(1)(9) ಎಸ್‌ಸಿ/ಎಸ್‌ಟಿ ಪಿ.ಎ. ಆಕ್ಟ್ 1989 | 1. ಶ್ರೀ ಎಂ. ಗೋವಿಂದರಾಜು<br>2. ಶ್ರೀ ಸೆಂದಿಲ್ ಕುಮಾರ್<br>3. ಶ್ರೀಮತಿ ಇಂದೂಮತಿ | ಮೊದಲಿಯಾರ್ | ಆದಿ ದ್ರಾವಿಡ | 54/2006 | ಆರೋಪಿಗಳಾದ ಎಂ. ಗೋವಿಂದರಾಜು, ಶ್ರೀ ಸೆಂದಿಲ್ ಕುಮಾರ್, ಶ್ರೀಮತಿ ಇಂದುಮತಿ ರವರುಗಳು ತಾನು ಮೊದಲಿಯಾರ್ ಜಾತಿಗೆ ಸೇರಿದ್ದು, "ಆದಿ ದ್ರಾವಿಡ" ಎಂದು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದ ಮೀಸಲಾತಿಯಡಿಯಲ್ಲಿ ಸರ್ಕಾರಿ ಸವಲತ್ತುಗಳನ್ನು ಪಡೆದಿರುವುದು ತನಿಖೆಯಿಂದ ದೃಢಪಟ್ಟದ್ದರಿಂದ ಆರೋಪಿಗಳಿಗೆ ಮಾನ್ಯ ನ್ಯಾಯಾಲವು ದಿ: 07-10-08 ರಂದು ಗೋವಿಂದರಾಜು ರವರಿಗೆ 1ವರ್ಷ ಸಜೆ, 1000/-ರೂ ದಂಡ (2) ಸೆಂದಿಲ್ ಕುಮಾರ್ ರವರಿಗೆ 1ವರ್ಷ ಸಜೆ, 1000/-ರೂ ದಂಡ. (3) ಇಂದುಮತಿ ರವರಿಗೆ 1ವರ್ಷ ಸಜೆ, 1000/- ರೂ ದಂಡ ಶಿಕ್ಷೆಯಾಗಿರುತ್ತದೆ. |
| 2 | ಶಿವಮೊಗ್ಗ ಕೋಟೆ ಠಾಣೆ ಮೊ.ಸಂ. 20/88 ಕಲಂ 196, 198, 420 ಐಪಿಸಿ | ಶ್ರೀ ಎಂ. ವಿವೇಕಾನಂದ, ಸಿಂಡಿಕೇಟ್ ಬ್ಯಾಂಕ್, ಬೆಳಗಾವಿ. | ನಾಯಕ | ಭೋವಿ | 197/89 | ದಿ: 22-07-1995 ರಂದು ಶಿವಮೊಗ್ಗ ಸಿ.ಜೆ. ಎಂ. ನ್ಯಾಯಾಧೀಶರು ಸದರಿ ಕೇಸಿನ ಆರೋಪಿಗೆ ಕಲಂ 248 ಕ್ಲಾಸ್ (1) ಸಿಆರ್‌ಪಿಸಿ ರೀತ್ಯ ಜಾಮೀನು ಮುಚ್ಚಳಿಕೆ ವಜಾಗೊಳಿಸಿ, ಸಜೆ ಗೊಳಿಸಿರುತ್ತಾರೆ. |

| | | | | | | |
|---|---|---|---|---|---|---|
| 3 | ಶಿಕಾರಿಪುರ ಪೊಲೀಸ್ ಠಾಣೆ ಮೊ.ಸಂ. 77/92 ಕಲಂ 419, 420, 466, 468 | 1. ಶ್ರೀಮತಿ ಜಿ.ಎಂ. ಸುಮನಬಾಯಿ<br>2. ಶ್ರೀ ಜಿ.ಎಸ್. ಮಂಗಳೂರಿ<br>3. ಶ್ರೀ ಕೆ. ಚಂದ್ರಶೇಖರ್ ಶಿಕಾರಿ ಪುರ | ಬ್ರಾಹ್ಮಣ | ಮಲೇರು | 476/93 | ದಿ: 19–04–1997 ರಂದು ಶಿಕಾರಿಪುರ ಮಾನ್ಯ ಜೆ.ಎಂ..ಎಫ್.ಸಿ. ನ್ಯಾಯಾಲಯದ ನ್ಯಾಯಾಧೀಶರು<br>1) ಎ1 ಆರೋಪಿಗೆ ರೂ. 2500/–,<br>2) ಎ2 ಆರೋಪಿಗೆ ರೂ. 1000/–<br>3) ಎ3 ಆರೋಪಿಗೆ ರೂ. 2500/– ದಂಡ ವಿಧಿಸಿರುತ್ತಾರೆ. |
| 4 | ಕಲಘಟಗಿ ಪೊಲೀಸ್ ಠಾಣೆ, ಮೊ.ಸಂ. 214/08 ಕಲಂ 196, 198, 199 & 420 ಐಪಿಸಿ ಕ್ಲಾಸ್ 3(1)(9) ಎಸ್‌ಸಿ/ಎಸ್‌ಟಿ ಪಿ.ಎ. ಆಕ್ಟ್ 1989 | ಶ್ರೀ ರಮೇಶ್ ಫಕೀರಪ್ಪ ಕಿಳ್ಳಿ ಕ್ಯಾತರ್, ಎಪಿಸಿ | ಕಿಳ್ಳಿಕ್ಯಾತರ್ | ಸಿಳ್ಳಿ ಕ್ಯಾತಸ್ | 4/2009 | ದಿನಾಂಕ: 20–02–2010 ರಂದು ಧಾರವಾಡದ ಸೆಕೆಂಡ್ ಅಡಿಷನಲ್ ಸೆಷನ್ಸ್ ಸ್ಪೇಷಲ್ ನ್ಯಾಯಾಧೀಶರು ಹೊರಡಿಸಿರುವ ಶಿಕ್ಷೆ<br>1. ಕಲಂ 182 ಐಪಿಸಿ 6 ತಿಂಗಳು ಕಠಿಣ ಶಿಕ್ಷೆ ರೂ. 1000/– ದಂಡ<br>2. ಕಲಂ 420 ಐಪಿಸಿ 6 ತಿಂಗಳು ಕಠಿಣ ಶಿಕ್ಷೆ ರೂ. 1000/– ದಂಡ<br>3. ಕಲಂ 182 ಐಪಿಸಿ 6 ತಿಂಗಳು ಕಠಿಣ ಶಿಕ್ಷೆ ರೂ. 1000/– ದಂಡ<br>4. ಕಲಂ 196 ಐಪಿಸಿ 6 ತಿಂಗಳು ಕಠಿಣ ಶಿಕ್ಷೆ ರೂ. 1000/– ದಂಡ<br>5. ಕಲಂ 198 ಐಪಿಸಿ 6 ತಿಂಗಳು ಕಠಿಣ ಶಿಕ್ಷೆ ರೂ. 1000/– ದಂಡ<br>6. ಕ್ಲಾಸ್ 3(1)(9) ಎಸ್‌ಸಿ/ಎಸ್‌ಟಿ ಪಿ.ಎ. ಆಕ್ಟ್ 1989 ದಂಡದ ಮೊತ್ತ ಕಟ್ಟದಿದ್ದರೆ ಒಂದು ತಿಂಗಳ ಕಠಿಣ ಶಿಕ್ಷೆ |

| | | | | | | |
|---|---|---|---|---|---|---|
| 6 | ಅತ್ತಿಬೆಲೆ 167/10 ಕಲಂ 395 ಐಪಿಸಿ | ಆರೋಪಿ ಮತ್ತು ಮಾಲು ಪತ್ತೆಯಾಗಬೇಕಾಗಿರುತ್ತೆ. |
| 7 | ನೆಲಮಂಗಲ 527/2010 ಕಲಂ 395 ಐಪಿಸಿ | ಸಿಸಿ ನಂಬರ್ ಬರಬೇಕಾಗಿರುತ್ತದೆ. |
| 8 | ಮಾದನಾಯಕನಹಳ್ಳಿ 23/2010 ಕಲಂ. 397 ಐಪಿಸಿ | ಸಿ ಅನುಮತಿ ಕೋರಿದೆ. |

| | | |
|---|---|---|
| 9 | ಮಾದನಾಯಕನಹಳ್ಳಿ 35/2010 ಕಲಂ. 395 ಐಪಿಸಿ | ಸಿಸಿ ನಂ. 174/2011 ವಿಚಾರಣೆ |
| 10 | ನೆಲಮಂಗಲ (ಗ್ರಾ) 57/2010 ಕಲಂ 395 ಐಪಿಸಿಟ | ಸಿಸಿ ನಂ.111/2011 ವಿಚಾರಣೆ |
| 11 | ತ್ಯಾಮಗೊಂಡ್ಲು 85/2010 ಕಲಂ. 395 ಐಪಿಸಿ | ತನಿಖೆಯಲ್ಲಿದೆ. |
| 12 | ಡಾಬಸ್‌ಪೇಟ್ 208/2010 ಕಲಂ 395 ಐಪಿಸಿ | ತನಿಖೆಯಲ್ಲಿದೆ. |
| 13 | ಮಾದನಾಯಕನಹಳ್ಳಿ 25/2010 ಕಲಂ. 399,402 ಐಪಿಸಿ | ಸಿಸಿ ಪಡೆಯಬೇಕಾಗಿದೆ. |
| 14 | ಮಾದನಾಯಕನಹಳ್ಳಿ 53/2010 ಕಲಂ 399,402 ಐಪಿಸಿ | ಸಿಸಿ ಪಡೆಯಬೇಕಾಗಿದೆ. |
| 15 | ಮಾದನಾಯಕನಹಳ್ಳಿ 76/2010 ಕಲಂ 399,402 ಐಪಿಸಿ | ಸಿಸಿ ಪಡೆಯಬೇಕಾಗಿದೆ. |
| 16 | ನೆಲಮಂಗಲ (ಪುರ) 758/2010 ಕಲಂ 399,402 ಐಪಿಸಿ | ಸಿಸಿ ಪಡೆಯಬೇಕಾಗಿದೆ. |
| 17 | ಮಾದನಾಯಕನಹಳ್ಳಿ 260/2010 ಕಲಂ 399, 402 ಐಪಿಸಿ | ತನಿಖೆಯಲ್ಲಿರುತ್ತದೆ |
| 18 | ಚನ್ನರಾಯಪಟ್ಟಣ ಠಾಣಾ ಮೊ.ನಂ 42/10 ಕಲಂ 395 ಐಪಿಸಿ | ನ್ಯಾಯಾಲಯ ವಿಚಾರಣೆಯಲ್ಲಿರುತ್ತೆ. |

## ಅನುಬಂಧ–ಆ

## ಬೆಂಗಳೂರು ನಗರ.

| ಕ್ರಮ ಸಂಖ್ಯೆ | ಪೊಲೀಸ್ ಠಾಣೆ ಮೊ.ಸಂ. ಮತ್ತು ಕಲಂ | ರೌಡಿ ಆಸಾಮಿಗಳ ಹೆಸರು | ಪ್ರಕರಣದ ಪ್ರಸ್ತುತ ಹಂತ |
|---|---|---|---|
| 1 | ವಿವೇಕನಗರ ಪೊ.ಠಾಣೆ ಮೊ. ಸಂಖ್ಯೆ 353/10, ಕಲಂ 302, 201 ಜೊತೆಗೆ 34 ಐಪಿಸಿ | ರೌಡಿ ಆಸಾಮಿ ಜಾರ್ಜ್ @ ಪಿ.ಜಾರ್ಜ್ ಬಿನ್ ಲೇಟ್ ಪಳನಿ | 10ನೇ ಎ.ಸಿ.ಎಂ.ಎಂ. ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ. |
| 2 | ಶಂಕರಪುರ ಪೊ.ಠಾಣೆ ಮೊ ಸಂಖ್ಯೆ 7/10, ಕಲಂ 143, 144, 147, 148, 302 ರೆಡ್‌ವಿತ್ 149 ಐಪಿಸಿ | 1) ರಾಜಶೇಕರ್ (ಮೃತರಾಗಿರುತ್ತಾರೆ)<br>2) ಪುಷ್ಪರಾಜ್<br>ಇಬ್ಬರೂ ಕಾಟನ್‌ಪೇಟೆ ಠಾಣೆಯಲ್ಲಿ ರೌಡಿ ಶೀಟಿನ ಆಸಾಮಿಯಾಗಿರುತ್ತಾರೆ. | ಎಫ್.ಟಿ.ಸಿ.–10ನೇ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು ಎಸ್.ಸಿ.ನಂ.1060/10 ಆಗಿರುತ್ತದೆ |
| 3 | ಸುಬ್ರಮಣ್ಯಪುರ ಪೊ.ಠಾಣೆ ಮೊ ಸಂಖ್ಯೆ 203/10, ಕಲಂ 143, 147, 148, 302 ರೆಡ್‌ವಿತ್ 149 ಐಪಿಸಿ | ಲೋಕಿ @ ಲೋಕೇಶ್ ಬಿನ್ ಮುನಿಯಪ್ಪ, | ಎಫ್.ಟಿ.ಸಿ.–5ನೇ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು ಎಸ್.ಸಿ.ನಂ.951/10 ಆಗಿರುತ್ತದೆ |
| 4 | ಸುಬ್ರಮಣ್ಯಪುರ ಪೊ.ಠಾಣೆ ಮೊ ಸಂಖ್ಯೆ 211/10, ಕಲಂ 302, ರೆಡ್‌ವಿತ್ 34 ಐಪಿಸಿ | ಪಿಟ್ಟ @ ನಾಗರಾಜ ಬಿನ್ ಕೃಷ್ಣಪ್ಪ, | ಎಫ್.ಟಿ.ಸಿ.–8ನೇ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು ಎಸ್.ಸಿ.ನಂ. 839/10 ಆಗಿರುತ್ತದೆ |

| | | | |
|---|---|---|---|
| 5 | ಸಿ.ಕೆ.ಅಚ್ಚುಕಟ್ಟು ಪೊ.ಠಾಣೆ.ಮೊ.ಸಂಖ್ಯೆ 181/10, ಕಲಂ 143, 144, 147, 148, 448, 302 ರೆಡ್‌ವಿತ್ 149 ಐಪಿಸಿ | 1) ಲಿಂಗರಾಜ @ ಲಿಂಗ (ಮೃತರಾಗಿರುತ್ತಾರೆ)<br>2) ರವಿ @ ರವಿಕುಮಾರ @ ಸೈಕಲ್ ರವಿ | ಎಫ್.ಟಿ.ಸಿ.–13ನೇ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು ಎಸ್.ಸಿ.ನಂ.1153/10 ಆಗಿರುತ್ತದೆ |
| 6 | ಬನಶಂಕರಿ ಪೊ.ಠಾಣೆ ಮೊ.ಸಂಖ್ಯೆ 12/11,ಕಲಂ 143, 144, 147, 324, 307, 302, 120 (ಬಿ)ರೆಡ್ ವಿತ್ 149 ಐಪಿಸಿ 25 ಆರ್ಮ್ಸ್ ಆಕ್ಟ್ | ದಿವಾನ್‌ಅಲಿ @ ಮಹಮ್ಮದ್ ಆಲಿ, (ಮೃತರಾಗಿರುತ್ತಾರೆ) | ತನಿಖೆಯಲ್ಲಿರುತ್ತದೆ |
| 7 | ಕಲಾಸಿಪಾಳ್ಯ ಪಿ.ಎಸ್. ಮೊ.ಸಂ. 137/2006 ಕಲಂ 332, 307 ರೆಡ್‌ವಿತ್ 34 ಐಪಿಸಿ | ರವಿಕುಮಾರ್ @ ಬಾಬಿನ್ | ಎಸ್.ಸಿ. ನಂ. 67/2006 ಮಾನ್ಯ ಎಫ್‌ಟಿಸಿ –11ನೇ ನ್ಯಾಯಾಲಯವು ಆರೋಪಿಗೆ ದಿ:10–022*011 ರಂದು 10 ವರ್ಷಗಳ ಕಾಲ ಕಠಿಣ ಕಾರಾಗೃಹ ಶಿಕ್ಷೆ ಮತ್ತು ₹10,000–00 ದಂಡ ವಿಧಿಸಿರುತ್ತದೆ. |

## ಬೆಂಗಳೂರು ಗ್ರಾಮಾಂತರ

| ಕ್ರಮ ಸಂಖ್ಯೆ | ಪೊಲೀಸ್ ಠಾಣೆ ಮೊ.ಸಂ. ಮತ್ತು ಕಲಂ | ರೌಡಿ ಆಸಾಮಿಗಳ ಹೆಸರು | ಪ್ರಕರಣದ ಪ್ರಸ್ತುತ ಹಂತ |
|---|---|---|---|
| 1 | ನೆಲಮಂಗಲ ಪೊ.ಠಾಣೆ ಮೊ.ಸಂ. 255/10 ಕಲಂ : 504, 506, 384 ರೆ/ವಿ 34 ಐಪಿಸಿ | ಬೆತ್ತನಗೆರೆ ಶಂಕರ @ ಶಂಕರೇಗೌಡ ಮತ್ತು ಸಹಚರರು | ಮಾನ್ಯ ಸಿಜೆ & ಜೆಎಂಎಫ್‌ಸಿ ನ್ಯಾಯಾಲಯದ ಸಿಸಿ ಸಂಖ್ಯೆ : 239/11ರಲ್ಲಿ ವಿಚಾರಣೆಯಲ್ಲಿರುತ್ತದೆ. |
| 2 | ನೆಲಮಂಗಲ ಪೊ.ಠಾಣೆ ಮೊ.ಸಂ. 389/10 ಕಲಂ : 504, 506 ಐಪಿಸಿ | ಬೆತ್ತನಗೆರ ಶಂಕರ @ ಶಂಕರೇಗೌಡ ಮತ್ತು ಸಹಚರರು | ತನಿಖೆಯಲ್ಲಿರುತ್ತದೆ |
| 3 | ನೆಲಮಂಗಲ ಪೊ.ಠಾಣೆ ಮೊ.ಸಂ. 435/10 ಕಲಂ : 504, 507 ಐಪಿಸಿ | ಬೆತ್ತನಗೆರ ಶಂಕರ @ ಶಂಕರೇಗೌಡ ಮತ್ತು ಸಹಚರರು | ಮಾನ್ಯ ನ್ಯಾಯಾಲಯಕ್ಕೆ ದೋಷರೋಪಣೆ ಪತ್ರ ಸಲ್ಲಿಸಿದ್ದು, ಸಿಸಿ ನಂಬರ್ ಬರಬೇಕಿದೆ. |
| 4 | ನೆಲಮಂಗಲ ಪೊ.ಠಾಣೆ ಮೊ.ಸಂ. 727/10 ಕಲಂ : 504, 507 ಐಪಿಸಿ | ಬೆತ್ತನಗೆರ ಶಂಕರ @ ಶಂಕರೇಗೌಡ ಮತ್ತು ಸಹಚರರು | ಮಾನ್ಯ ಸಿಜೆ & ಜೆಎಂಎಫ್‌ಸಿ ನ್ಯಾಯಾಲಯದ ಸಿಸಿ ಸಂಖ್ಯೆ:120/11 ರಲ್ಲಿ ವಿಚಾರಣೆಯಲ್ಲಿರುತ್ತದೆ. |

| | | | |
|---|---|---|---|
| 5 | ನೆಲಮಂಗಲ ಪೊ.ಠಾಣೆ ಮೊ.ಸಂ. 581/10 ಕಲಂ: 143, 147, 148, 341, 307, 302 ರೆ/ವಿ 149 ಐಪಿಸಿ | ಬೆತ್ತನಗೆರೆ ಮಂಜ @ ಮಂಜುನಾಥ ಮತ್ತು ಸಹಚರರು | ಮಾನ್ಯ ಸಿಜೆ & ಜೆಎಂಎಫ್‌ಸಿ ನ್ಯಾಯಾಲಯದ ಸಿಸಿ ಸಂಖ್ಯೆ : 1134/10 ರಲ್ಲಿ ವಿಚಾರಣೆಯಲ್ಲಿರುತ್ತದೆ. |
| 6 | ನೆಲಮಂಗಲ ಪೊ.ಠಾಣೆ ಮೊ.ಸಂ. 41/11 ಕಲಂ 308,399,400,402 ರೆ/ವಿ 149 ಐಪಿಸಿ ಜೊತೆಗೆ 25,27 ಆರ್ಮ್ಸ್ ಆಕ್ಟ್. | ಬೆತ್ತನಗೆರೆ ಮಂಜ @ ಮಂಜುನಾಥ,ಶಂಕರ ಮತ್ತು ಸಹಚರರು | ತನಿಖೆಯಲ್ಲಿರುತ್ತದೆ |

## ಚಿಂದಿ ಆಯುವ ಮಕ್ಕಳ ಪುನರ್‌ವಸತಿ

## 792; ಶ್ರೀ ಇ. ಕೃಷ್ಣಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಅ)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಚಿಂದಿ ಆಯುವ (ರ್‍ಯಾಗ್ ಪಿಕ್ಕರ್ಸ್) ಮಕ್ಕಳು ಮತ್ತು ಮಹಿಳೆಯರ ಬಗ್ಗೆ ಒಂದು ಸಮೀಕ್ಷೆ ನಡೆಸಲಾಗಿದೆಯೇ; ಹಾಗಿದ್ದಲ್ಲಿ, ಸಮೀಕ್ಷಾ ವರದಿಯ ಮುಖ್ಯಾಂಶಗಳಾವುವು.

**ಆ)** ಈ ಚಿಂದಿ ಆಯುವ ಮಹಿಳೆಯರು ಮತ್ತು ಮಕ್ಕಳ ಪುನರ್ ವಸತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇದುವರಗೆ ಎಷ್ಟು ಮಹಿಳೆಯರು ಮತ್ತು ಮಕ್ಕಳಿಗೆ ಪುನರ್ ವಸತಿ ಕಲ್ಪಿಸಲಾಗಿದೆ;

**ಇ)** ಚಿಂದಿ ಆಯುವ ಮಕ್ಕಳು ಮತ್ತು ಮಹಿಳೆಯರಿಗೆ ಪುನರ್ ವಸತಿ ಕಲ್ಪಿಸುವ ಬಗ್ಗೆ ಸರ್ಕಾರದಲ್ಲಿ ನೋಂದಾಯಿಸಿ ಕೊಂಡಿರುವ ಸರ್ಕಾರೇತರ ಸಂಸ್ಥೆಗಳು (ಎನ್.ಜಿ.ಒ) ಯಾವುವು; (ಹೆಸರು ಮತ್ತು ವಿಳಾಸದ ವಿವರ ನೀಡುವುದು)

**ಈ)** ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ಅವುಗಳಿಗೆ ನೀಡಿರುವ ಸಹಾಯಧನ ಎಷ್ಟು; (ವಿವರ ಒದಗಿಸುವುದು)

**ಉ)** ಈ ವಿಚಾರದಲ್ಲಿ ಸಾಧಿಸಿರುವ ಪ್ರಗತಿಯನ್ನು ಸರ್ಕಾರಕ್ಕೆ ಸಲ್ಲಿಸಿವೆಯೇ; ಸಲ್ಲಿಸಿದ್ದಲ್ಲಿ ಅದರ ಪ್ರತಿಯನ್ನು ಒದಗಿಸುವುದು.

**ಊ)** ಈ ಚಿಂದಿ ಆಯುವ ಮಕ್ಕಳು ಮಹಿಳೆಯರು ಪುನರ್‌ವಸತಿಗೆ ಬೆಂಗಳೂರು ಮಹಾನಗರದ ವ್ಯಾಪ್ತಿಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಯಾವುದಾದರೂ ಪುನರ್ ವಸತಿ ಕೇಂದ್ರಗಳನ್ನು ನಡೆಸಲಾಗುತ್ತಿದೆಯೇ; ಸದರಿ ಕೇಂದ್ರಗಳಲ್ಲಿ ಆಶ್ರಯ ಪಡೆದಿರುವ ಮಹಿಳೆ ಮತ್ತು ಮಕ್ಕಳ ಸಂಖ್ಯೆ ಎಷ್ಟು; (ವಿವರ ನೀಡುವುದು)

**ಶ್ರೀ ಕಳಕಪ್ಪ ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

**ಅ)** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಚಿಂದಿ ಆಯುವ ಮಕ್ಕಳು ಮತ್ತು ಮಹಿಳೆಯರಿಗಾಗಿ ಯಾವುದೇ ಕಾರ್ಯಕ್ರಮ ಜಾರಿಯಲ್ಲಿರುವುದಿಲ್ಲ. ಆದ್ದರಿಂದ ಸಮೀಕ್ಷೆಯನ್ನು ಕೈಗೊಂಡಿರುವುದಿಲ್ಲ.

**ಆ)** ಅನ್ವಯಿಸುವುದಿಲ್ಲ.

**ಇ)** ಈ ವರ್ಗದ ಮಕ್ಕಳು ಮತ್ತು ಮಹಿಳೆಯರುಗಾಗಿ ಪ್ರಸ್ತುತ ಇಲಾಖೆಯಲ್ಲಿ ಯಾವುದೇ ಕಾರ್ಯಕ್ರಮ ಜಾರಿಯಲ್ಲಿರುವುದಿಲ್ಲ. ಆದರೆ ಭಾರತ ಸರ್ಕಾರದ ಯೋಜನೆಯಾದ ಬೀದಿ ಮಕ್ಕಳ ಸಮಗ್ರ ಕಾರ್ಯಕ್ರಮ (An Integrated Programme for Street children) ಜಾರಿಯಲ್ಲಿದ್ದು, ಈ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆ ಯಾಗುತ್ತಿಲ್ಲ. ಈ ಕಾರ್ಯಕ್ರಮವು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಗೆ ಶೇಕಡಾ 90 ರಷ್ಟು ವೆಚ್ಚವನ್ನು ಭಾರತ ಸರ್ಕಾರ ಹಾಗೂ ಶೇ.10 ರಷ್ಟು ವೆಚ್ಚವನ್ನು ಸ್ವಯಂ ಸೇವಾ ಸಂಸ್ಥೆಗಳು ಭರಿಸಬೇಕಾಗಿರುತ್ತದೆ. ರಾಜ್ಯದಲ್ಲಿ ಪ್ರಸ್ತುತ ಕೆಳಕಂಡ 5 ಸರ್ಕಾರೇತರ ಸಂಸ್ಥೆಗಳ ಯೋಜನೆಯನ್ನು ಅನುಷ್ಟಾನಗೊಳಿಸುತ್ತಿವೆ.

**ಈ)** ಈ ವರ್ಗದ ಮಕ್ಕಳು ಮತ್ತು ಮಹಿಳೆಯರುಗಾಗಿ ಪ್ರಸ್ತುತ ಇಲಾಖೆಯಲ್ಲಿ ಯಾವುದೇ ಕಾರ್ಯಕ್ರಮ ಜಾರಿಯಲ್ಲಿರುವುದಿಲ್ಲ. ಆದರೆ ಭಾರತ ಸರ್ಕಾರದ ಯೋಜನೆಯಾದ ಬೀದಿ ಮಕ್ಕಳ ಸಮಗ್ರ ಕಾರ್ಯಕ್ರಮ (An Integrated Programme for Street Children) ಜಾರಿಯಲ್ಲಿದ್ದು, ಈ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗುತ್ತಿಲ್ಲ. ಈ ಕಾರ್ಯಕ್ರಮವು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಗೆ ಶೇಕಡಾ 90 ರಷ್ಟು ವೆಚ್ಚವನ್ನು ಭಾರತ ಸರ್ಕಾರ ಹಾಗೂ ಶೇ. 10 ರಷ್ಟು ವೆಚ್ಚವನ್ನು ಸ್ವಯಂ ಸೇವಾ ಸಂಸ್ಥೆಗಳು ಭರಿಸಬೇಕಾಗುತ್ತದೆ. ರಾಜ್ಯದಲ್ಲಿ ಪ್ರಸ್ತುತ ಕೆಳಕಂಡ 5 ಸರ್ಕಾರೇತರ ಸಂಸ್ಥೆಗಳ ಯೋಜನೆಯನ್ನು ಅನುಷ್ಟಾನಗೊಳಿಸುತ್ತಿವೆ.

ಉ) ಈ ವರ್ಗದ ಮಕ್ಕಳು ಮತ್ತು ಮಹಿಳೆಯರುಗಾಗಿ ಪ್ರಸ್ತುತ ಇಲಾಖೆಯಲ್ಲಿ ಯಾವುದೇ ಕಾರ್ಯಕ್ರಮ ಜಾರಿಯಲ್ಲಿರುವುದಿಲ್ಲ. ಆದರೆ ಭಾರತ ಸರ್ಕಾರದ ಯೋಜನೆಯಾದ ಬೀದಿ ಮಕ್ಕಳ ಸಮಗ್ರ ಕಾರ್ಯಕ್ರಮ (An Integrated Programme for Street children) ಜಾರಿಯಲ್ಲಿದ್ದು, ಈ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆ ಯಾಗುತ್ತಿಲ್ಲ. ಈ ಕಾರ್ಯ ಕ್ರಮವು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಗೆ ಶೇಕಡಾ 90 ರಷ್ಟು ವೆಚ್ಚವನ್ನು ಭಾರತ ಸರ್ಕಾರ ಹಾಗೂ ಶೇ.10 ರಷ್ಟು ವೆಚ್ಚವನ್ನು ಸ್ವಯಂ ಸೇವಾ ಸಂಸ್ಥೆಗಳು ಭರಿಸಬೇಕಾಗುತ್ತದೆ. ರಾಜ್ಯದಲ್ಲಿ ಪ್ರಸ್ತುತ ಕೆಳಕಂಡ 5 ಸರ್ಕಾರೇತರ ಸಂಸ್ಥೆಗಳ ಯೋಜನೆಯನ್ನು ಅನುಷ್ಟಾನಗೊಳಿಸುತ್ತಿವೆ.

ಊ)

1) ಬಸವ ಕಾರ್ಯಸಮಿತಿ, ಕೊಟ್ಟಗಾಯಲ್, ನಿಟ್ಟೂರು ಪೋಸ್ಟ್, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ.
2) ಶ್ರೀ ಮೈತ್ರಿ ಮಹಿಳಾ ಮಂಡಳಿ, ಶ್ರೀ ಮೈತ್ರಿ ಅಸೋಸಿಯೇಷನ್, ಸಕ್ಕರೆ ಕಾರ್ಖಾನೆ ರಸ್ತೆ, ದೊಡ್ಡಬಾತಿ ಅಂಚೆ, ದಾವಣಗೆರೆ ಜಿಲ್ಲೆ.
3) ಶ್ರೀ ಶಕ್ತಿ ಅಸೋಸಿಯೇಷನ್, ಗುಟ್ಟೂರು, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.
4) ಅನ್ನಪೂರ್ಣ ಅಸೋಸಿಯೇಷನ್, ಚಿಂತಾಮಣಿ ನಗರ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.
5) ಸುರಭಿ ಮಹಿಳಾ ಮಂಡಳಿ, ಶಿವಮೊಗ್ಗ.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ತಜ್ಞ ವೈದ್ಯರುಗಳ ಬಗ್ಗೆ

### 796; ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)

**ಅ)** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ವೈದ್ಯರು ಮತ್ತು ತಜ್ಞ ವೈದ್ಯರುಗಳ ಸಂಖ್ಯೆ ಎಷ್ಟು; (ದಿನಾಂಕ ಸಹಿತ ಹುದ್ದೆವಾರು ವಿವರ ನೀಡುವುದು)

**ಆ)** ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯರ ಸಂಖ್ಯೆ ಎಷ್ಟು; (ದಿನಾಂಕ ಸಹಿತ ಹುದ್ದೆವಾರು ವಿವರ ನೀಡುವುದು)

**ಇ)** ಖಾಲಿ ಇರುವ ವೈದ್ಯರು ಹಾಗೂ ತಜ್ಞ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಅನುಸರಿಸುತ್ತಿರುವ ನಿಯಮಗಳೇನು; ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು;

**ಈ)** ಗುತ್ತಿಗೆ ವೈದ್ಯರನ್ನು ಖಾಯಂಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ನಿಯಮಾವಳಿಗಳ ಅಡಿಯಲ್ಲಿ ಯಾವ ಕಾಲಮಿತಿಯಲ್ಲಿ ಸಕ್ರಮಗೊಳಿಸಲಾಗವುದು; (ವಿವರ ನೀಡುವುದು)?

### ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

**ಅ)** ಆರೋಗ್ಯ ಮತ್ತು ಕುಟಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಆಸ್ಪತ್ರೆ ಗಳಲ್ಲಿ 155 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು 738 ತಜ್ಞ ವೈದ್ಯರುಗಳ ಹುದ್ದೆಗಳು ಖಾಲಿ ಇವೆ. (ವಿವರಗಳನ್ನು ಅನುಬಂಧ– 1 ಮತ್ತು 2 ರಲ್ಲಿ ನೀಡಿದೆ).

**ಆ)** ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ವೈದ್ಯರ ವಿವರಗಳು ಕೆಳಕಂಡಂತಿವೆ:

| ಕ್ರ. ಸಂ | ಹುದ್ದೆ | ಸಂಖ್ಯೆ |
|---|---|---|
| 1. | ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು (ಅಲೋಪತಿಕ್) | 113 |
| 2. | ಆಯುಷ್ ವೈದ್ಯರು | 194 |
| 3. | ಎನ್.ಆರ್.ಹೆಚ್.ಎಂ./ಕೆ.ಹೆಚ್.ಎಸ್.ಡಿ. ಆರ್.ಪಿ.ಯೋಜನೆಗಳಡಿಯಲ್ಲಿ | |
| | (ಎ) ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು | 20 |
| | (ಬಿ) ಮಕ್ಕಳ ತಜ್ಞರು | 23 |
| | (ಸಿ) ಅರವಳಿಕೆ ತಜ್ಞರು | 21 |
| | (ಡಿ) ಇತರೆ ತಜ್ಞರು | 17 |
| | **ಒಟ್ಟು** | **81** |

ಇ) ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ, ಕಾಲ-ಕಾಲಕ್ಕೆ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಇದು ನಿರಂತರ ಪ್ರಕ್ರಿಯೆಯಾಗಿದೆ.

**ಈ)** ದಿನಾಂಕ: 31-10-2008 ರಲ್ಲಿ ಇದ್ದಂತೆ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ (ಅಲೋಪತಿಕ್) ಮತ್ತು ದಂತ ವೈದ್ಯಾಧಿಕಾಯಾಗಿ ಗುತ್ತಿಗೆ ಆಧಾರದ ಮೇಲೆ ಇಲಾಖೆಯಲ್ಲಿ ನೇಮಕಗೊಂಡು ಯಾವುದೇ ಸೇವಾ ವಿಚ್ಛಿನ್ನತೆ ಇರದೆ ಕನಿಷ್ಟ ಮೂರು ವರ್ಷಗಳ ಸೇವೆ ಸಲ್ಲಿಸಿದಂತಹ 426 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು (ಅಲೋಪತಿಕ್) ಮತ್ತು 107 ದಂತ ವೈದ್ಯರನ್ನು ವಿಶೇಷ ನಿಯಮಗಳನ್ನು ರಚಿಸುವ ಮೂಲಕ ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಲು ದಿನಾಕ:25-9-2009 ರಂದು ತೀರ್ಮಾನಿಸಲಾಗಿತ್ತು. ಮುಂದುವರೆದು, ದಿನಾಂಕ:31-10-2010 ಗುತ್ತಿಗೆ ಆಧಾರದ ಮೇಲೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ (ಅಲೋಪತಿಕ್)/ದಂತ ವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದವರ ಪೈಕಿ ಮೂರು ವರ್ಷಗಳ ಕನಿಷ್ಠ ಸೇವೆಯನ್ನು ಪೂರ್ಣಗೊಳಿಸದೆ ಇದ್ದಲ್ಲಿ ಅವರುಗಳು ಸದರಿ ಕನಿಷ್ಠ ಮೂರು ವರ್ಷಗಳ ಸೇವೆ ಪೂರ್ಣಗೊಳಿಸಿದ ನಂತರ ವಿಲೀನಗೊಳಿಸಲು ಸಹ

ತೀರ್ಮಾನಿಸಲಾಗಿತ್ತು. ಅದರಂತೆ, ಕರ್ನಾಟಕ ನಾಗರೀಕ ಸೇವಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ವೈದ್ಯಾಧಿಕಾರಿಗಳ ವಿಲೀನಾತಿ, (ವಿಶೇಷ) ನಿಯಮಗಳು 2009 ಮತ್ತು 2010 ದಿನಾಂಕ :29–1–2010 ಮತ್ತು 7–8–2010 ರಲ್ಲಿ ಕ್ರಮವಾಗಿ 306 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾಗಳು (ಅಲೋಪತಿಕ್) ಮತ್ತು 82 ದಂತ ವೈದ್ಯರನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ.

**ಅನುಬಂಧ–1**

**District wise Vacancy Position of GDMOs**

| Sl. No. | Type | Name of Hospital | Taluk | Total |
|---|---|---|---|---|
| | **BANGALORE URBAN DISTRICT** | | | |
| | | NIL | | |
| | **BANGALORE RURAL DISTRICT** | | | |
| | | NIL | | |
| | **RAMANAGARA DISTRICT** | | | |
| | | NIL | | |
| | **TUMKUR DISTRICT** | | | |
| 1 | PHC | Doddaguni | Gubbi | |
| 2 | PHC | Handakere | Chikkanayakanahalli | |
| 3 | PHC | Chirate halli | Shira | |
| 4 | PHC | Hosakere | Madhugiri | |
| 5 | PHC | Kodlapura | Madhugiri | |
| 6 | PHC | Mangalvada | Pavagada | |
| 7 | PHC | Tharuru | Shira(KAT) | 7 |
| | **KOLAR DISTRICT** | | | |
| 1 | PHC | Nangali | Mulabagalu Tq | 1 |
| | **CHIKABALLAPUR DISTRICT** | | | |
| 1 | PHC | Chelur | Bagepalli | |

| | | | | |
|---|---|---|---|---|
| 2 | PHC | Meluru | Shidlagatta | |
| 3 | PHC | Dibburu | Chikkaballpura | 3 |
| | **CHITRADURGA DISTRICT** | | | |
| | | NIL | | |
| | **DAVANAGERE DISTRICT** | | | |
| 1 | PHC | Kerekatte | Channagiri | |
| 2 | UPHC | H.K.R.Nagara | | |
| 3 | PHC | Hemmabeturu | | |
| 4 | PHC | Kyasinkere | | |
| 5 | PHC | Bhidarkere | | |
| 6 | PHC | Sokke | | |
| 7 | PHC | Mallapura | | |
| 8 | PHC | Hodigere | | |
| 9 | PHC | Baanali | | 9 |
| | **SHIMOGA DISTRICT** | | | |
| 1 | PHC | Sampekatte | Hosanagar | |
| 2 | PHC | Guduvi | Soraba | |
| 3 | PHC | Bharangi | Soraba | |
| 4 | PHC | Mudidoddikoppa | Soraba | 4 |
| **MYSORE DISTRICT** | | | | |
| 1 | PHC | Mundur | K.R.Nagar | 1 |
| | **MANDYA DISTRICT** | | | |
| 1 | NLCC | Malavalli | | |
| 2 | PHC | Biruhalli | K.R.Pet | |
| 3 | PHC | Sindhagnatta | | 3 |
| **CHAMARAJANAGARA DISTRICT** | | | | |
| 1 | PHC | Mangala | Gundlupet | |
| 2 | PHC | Angala | Gundlupet | |
| 3 | PHC | Amachawadi | C.R.Nagar | |
| 4 | PHC | Ummatur | C.R.Nagar | |
| 5 | PHC | Kagalawadi | C.R.Nagar | 5 |

| | | | | |
|---|---|---|---|---|
| | **KODAGU DISTRICT** | | | |
| 1 | MTHU | Kallahalli | | |
| 2 | PHC | Hudikere | | |
| 3 | PHC | Alur Siddapura | | |
| 4 | PHC | Cherambadi | | |
| 5 | PHC | Napoklu-2 | | 6 |
| | **DAKSHINA KANNADA DISTRICT** | | | |
| 1 | MTHU | Neriya | Belthangadi | |
| 2 | MTHU | Bantwala | | |
| 3 | PHC | Surathkal | Mangalore | |
| 4 | ICDS | Belthangadi | | |
| 5 | PHC | Kaniyuru | Puttur | 5 |
| | **UDUPI DISTRICT** | | | |
| 1 | PHC | Hallihole | Kundapur | |
| 2 | PHC | Siddapur-3 | Kundapur | |
| 3 | PHC | Belve | Kundapur | |
| 4 | PHC | Ajeker | | 6 |
| | **HASSAN DISTRICT** | | | |
| 1 | PHC | Abbana | Alur NO Salary | |
| 2 | PHC | Rudrapatna | Arakalgudu | |
| 3 | PHC | Navile | Channarayanapatna | |
| 4 | PHC | Heragu | Hassan | 4 |
| | **CHIKKAMAGALUR DISTRICT** | | | |
| 1 | MTHU | Mudigere | Mudigere | |
| 2 | PHC | Ballavara | | |
| 3 | PHC | Balehonnur | | |
| 4 | PHC | Panchanahalli | | 4 |
| | **BELGUAM DISTRICT** | | | |
| 1 | PHC | Hulakunda | Ramadurga | |
| 2 | PHC | Bedi | Khanapura | |

| | | | | |
|---|---|---|---|---|
| 3 | PHC | Ashoknagara | Khanapura | |
| 4 | PHC | Nandagada | Khanapura | |
| 5 | PHC | Itagi | Khanapura | |
| 6 | PHC | Madabhavi | Athani | |
| 7 | PHC | Mole | Athani | |
| 8 | PHC | Melavanaki | Gokak | |
| 9 | PHC | Byranatti | Gokak | |
| 10 | PHC | Kanagao | Gokak | 10 |
| | **GADAG DISTRICT** | | | |
| 1 | PHC | Lakkundi | Gadag | |
| 2 | PHC | Chichali | Gadag | |
| 3 | PHC | Harti | Gadag | |
| 4 | PHC | Huligola | Gadag | |
| 5 | PHC | Dambala | Mundaragi | |
| 6 | PHC | Holealur | Rona | |
| 7 | PHC | Hirehal | Rona | |
| 8 | PHC | Belavanaki | Rona | |
| 9 | 10 Beded | Meternity Hospital B Shiratti | | 9 |
| | **HAVERI DISTRICT** | | | |
| 1 | PHC | Chikabasura-1 | Bydagi | |
| 2 | PHC | Kadur | Hirekerur | |
| 3 | PHC | Koda | Hirekerur | |
| 4 | PHC | Konanakeri | Shiggaon | |
| 5 | PHC | Kadakola | Savanur | |
| 6 | PHC | Tiluvalli | Hanagal | |
| 7 | PHC | Kalakeri | Hanagal | |
| 8 | PHC | Araleshwara | Hanagal | 9 |
| | **DHARWAD DISTRICT** | | | |
| | | NIL | | |
| | **KARWAR DISTRICT** | | | |
| 1 | PHC | Angadi | Karwar | |

| | | | | |
|---|---|---|---|---|
| 2 | PHC | Ulaga | Karwar | |
| 3 | PHC | Ramanguli | Ankola | |
| 4 | PHC | Hosadu | Honnavar | |
| 5 | PHC | Samshi | Honnavar | |
| 6 | PHC | Bylura | Bhatkala | |
| 7 | PHC | Kiruvatti | Yellapura | |
| 8 | PHC | Manchikeri-2 | Yellapura | |
| 9 | PHC | Kundargi | Yellapura | |
| 10 | PHC | Chavati | Yellapura | |
| 11 | PHC | Hiregutti-2 | Kumta | |
| 12 | PHC | Katuar | Mundagoda | |
| 13 | PHC | Hunagunda | Mundagoda | |
| 14 | PHC | Bilagi | Siddapura | |
| 15 | PHC | Joida | Joida | 19 |
| | **BIJAPUR DISTRICT** | | | |
| | | NIL | | |
| | **BAGALKOT DISTRICT** | | | |
| | | NIL | | |
| | **GULBARGA DISTRICT** | | | |
| | | NIL | | |
| | **RAICHUR DISTRICT** | | | |
| 1 | PHC | Potnal | Manvi | |
| 2 | PHC | Kalmala | Raichur | |
| 3 | PHC | Javalagera-1 | Sindanur | |
| 4 | PHC | Hirebudnur | Devadurga | |
| 5 | PHC | Makapur | Lingasur | |
| 6 | PHC | Santekallur | Lingasur | |
| 7 | PHC | Gejalgatta | Lingasur | |
| 8 | PHC | Paparaocamp | Sindhanur | |
| 9 | PHC | Ragalaparvi | Lingasur | |
| 10 | PHC | R.H.Camp | Sindhanur | |

| | | | | |
|---|---|---|---|---|
| 11 | PHC | Belaganur | Sindhanur | |
| 12 | PHC | Harapur | Sindhanur | |
| 13 | PHC | Salgunta | Sindhanur | |
| 14 | PHC | Ichanal | Lingasur | |
| 15 | PHC | Mudgal | | |
| 16 | PHC | Kuradi | Manvi | |
| 17 | PHC | Anehosur | | |
| 18 | PHC | Sajjalgudda | | |
| 19 | PHC | Rodalbanda | | |
| 20 | MLCU | Mudgal | | |
| 21 | PHC | Algunda | | |
| 22 | PHC | Badarli | | 23 |
| | **BIDAR DISTRICT** | | | |
| 1 | NLCC | Humanabad | | |
| 2 | PHC | Nittur B | | 2 |
| | **BELLARY DISTRICT** | | | |
| 1 | PHC | Magala | Hadagali | |
| 2 | PHC | Kudtini | Bellary | |
| 3 | PHC | Anasi | Hagaribommanahalli | |
| 4 | PHC | Kamalapur | Hospet | |
| 5 | PHC | Ravihal | Siraguppa | |
| 6 | PHC | Hachchohalli | Siraguppa | |
| 7 | PHC | Bellgatta | Kudlgi | 7 |
| | **KOPPAL DISTRICT** | | | |
| 1 | NLCC | Koppal | | |
| 2 | NLCC | Yalaburga | | |
| 3 | PHC | Hirebomnal | Koppal | |
| 4 | PHC | Kavaluru-1 | Koppal | |
| 5 | PHC | Musalapura | Gangavathi | |
| 6 | PHC | Ballotagi | Yalaburga | |
| 7 | PHC | Bannikuppa | Yalaburga | |

| | | | | |
|---|---|---|---|---|
| 8 | PHC | Chikkenakoppa | Yalaburga | |
| 9 | PHC | Ganadala | Yalaburga | |
| 10 | PHC | Gunnala | Yalaburga | |
| 11 | PHC | Benakal | Yalaburga | |
| 12 | PHC | Challagere-1 | Kustagi | |
| 13 | PHC | Hiregonnagara | Kustagi | |
| 14 | PHC | Bannura | | |
| 15 | PHC | Bandihala | | 17 |
| | **YADGIRI DISTRICT** | | | |
| 1 | PHC | Madhavara | | 1 |
| | | **TOTAL** | | **155** |

## ಅನುಬಂಧ–2

### District wise vacancy position of speciality

| Sl No. | Type | Name of Hospital | Vacant |
|---|---|---|---|
| **1** | **2** | **3** | **4** |
| **BANGALORE URBAN** | | | |
| 2 | GH | Anekal (GOIP) | 2 |
| 4 | GH | Yelahanka | 1 |
| 5 | HOSP | K.C.Genaral Hospital, Malleshwaram,Bangalore | 3 |
| 6 | HOSP | Genaral Hospital, Jayanagara,Bangalore | 3 |
| **RAMANAGARA** | | | |
| 1 | CHC | Bidari,Ramanagara Tq | 1 |
| 3 | CHC | Sathanoor, Kanakapura Tq | 3 |
| 4 | CHC | Solur,Magadi | 3 |
| 5 | DH | Ramanagar | 1 |
| 6 | GH | Magadi(GOIP) | 1 |

| | | | |
|---|---|---|---|
| 7 | GH | Channapatna | 1 |
| **CHITRADURGA** | | | |
| 1 | CHC | B Durga, Holalkere Tq | 2 |
| 2 | CHC | Belguru,Hosadurga Tq | 3 |
| 3 | CHC | K.Kenchanpura, Hosadurga Tq | 3 |
| 4 | CHC | Srirampur | 2 |
| 5 | CHC | Rampur | 2 |
| 6 | CHC | Dharamapura, Hiriyur Tq | 2 |
| 7 | CHC | Maradihalli, Hiriyur Tq | 1 |
| 8 | CHC | Bharama Sagara | 2 |
| 9 | CHC | Nayakanahatti | 2 |
| 10 | CHC | Parashurampura (GOIP) | 1 |
| 11 | CHC | Sirigere (GOIP) | 2 |
| 12 | GH | Challakere | 2 |
| 13 | GH | Hiriyur | 3 |
| 14 | GH | Holalkere(GOIP) | 5 |
| 15 | GH | Hosadurga | 5 |
| 16 | GH | Molakalmuru(GOIP) | 5 |
| 17 | DH | Chitradurga | 2 |
| **DAVANAGERE** | | | |
| 1 | CHC | Arasikere,Harapanahalli Tq | 1 |
| 2 | CHC | Telagi, Harapanahalli Tq | 1 |
| 3 | CHC | Kerebilchi | 3 |
| 4 | CHC | Malebennur,Harihar Tq | 2 |
| 5 | CHC | Santhebennur, Channagiri Tq | 1 |
| 6 | GH | Channagiri | 4 |
| 7 | GH | Harapanahalli | 5 |
| 8 | GH | Harihara(GOIP) | 1 |
| 9 | GH | Honnali (GOIP) | 3 |
| 13 | DH | Chigateri Genaral Hospital | 4 |
| **CHIKKABALLAPURA** | | | |

| | | | |
|---|---|---|---|
| 1 | CHC | Batlahalli | 1 |
| 2 | CHC | Guluru, Bagepalli Tq | 2 |
| 3 | GH | Bagepalli | 6 |
| 4 | GH | Chikkaballapur | 1 |
| 5 | GH | Chintamani | 2 |
| 6 | GH | Gouribidanur | 1 |
| 7 | GH | Gudibande | 4 |
| 8 | GH | Shidlaghatta | 1 |
| | | **KOLAR** | |
| 1 | CHC | Bethamangala, Bangarpet Tq | 2 |
| 2 | CHC | Gounapalli, Chintamani Tq | 2 |
| 7 | GH | K.G.F Kolar | 3 |
| 9 | DH | S.N.R Hospital Kolar | 3 |
| | | **SHIMOGA** | |
| 3 | CHC | Kannangi | 1 |
| 4 | CHC | Shiralkoppa (GOIP) | 1 |
| 5 | GH | Bhadravathi | 2 |
| 6 | GH | Hosanagara (GOIP) | 2 |
| 7 | DH | Shikaripura (Total 31) | 2 |
| 8 | GH | Sorab (GOIP) | 4 |
| 9 | GH | Thirthahalli | 2 |
| 10 | GH | Sagar | 4 |
| | | **TUMKUR** | |
| 1 | CHC | Amruturu, Kunigal Tq | 2 |
| 2 | CHC | M.N.Kote Gubbi Tq | 1 |
| 3 | CHC | Tirumani,Pavagada Tq | 2 |
| 4 | CHC | Y.N.Hoskote, Pavagada Tq | 2 |
| 5 | GH | Chikkanayakanahalli (GOIP) | 2 |
| 6 | GH | Gubbi (GOIP) | 1 |
| 7 | GH | Koratagere | 1 |
| 8 | GH | Kunigal (GOIP) | 1 |

| | | | |
|---|---|---|---|
| 9 | GH | Madhugiri | 4 |
| 10 | GH | Pavagada (GOIP) | 2 |
| 11 | GH | Sira (GOIP) | 1 |
| 12 | GH | Tiptur | 1 |
| 13 | GH | Turuvekere (GOIP) | 2 |
| 14 | DH | Tumkur | 3 |
| **BELGAUM-1** | | | |
| 1 | CHC | Sankeshwar, Hukkeri Tq | 1 |
| 2 | CHC | Hirebagewadi, Belguam Tq | 1 |
| 3 | CHC | Kithur (GOIP) | 1 |
| 4 | CHC | Kuduchi, Raibag Tq | 3 |
| 5 | CHC | Examba, Chikkodi Tq | 1 |
| 6 | CHC | Nippani,Chikkodi Tq | 1 |
| 7 | CHC | Yaragatti (GOIP) | 1 |
| 8 | GH | Athani | 2 |
| 9 | GH | Bailhongala | 4 |
| 10 | GH | Chikkodi | 2 |
| 11 | GH | Gokak | 5 |
| 12 | GH | Hukkeri | 3 |
| 13 | GH | Khanapur | 2 |
| 14 | GH | Raibag (GOIP) | 5 |
| 15 | GH | Ramadurga | 5 |
| 16 | GH | Savadatti | 5 |
| **BAGALKOTE-2** | | | |
| 1 | 50 Beded | Bagalkote | 1 |
| 3 | CHC | Guledgudda, Badami Tq | 2 |
| 4 | CHC | Kerur, Badami Tq | 2 |
| 5 | CHC | Kudala Sangama, Hungund | 2 |
| 6 | CHC | Mahalingapur, Mudhol Tq | 2 |
| 7 | GH | Ilkal Hungund Tq | 2 |
| 8 | GH | Badami | 6 |

| | | | |
|---|---|---|---|
| 9 | GH | Bilagi | 7 |
| 10 | GH | Hungund (GOIP) | 8 |
| 11 | GH | Jamakhandi | 6 |
| 12 | DH | Bagalkote (Addl 10) | 8 |
| **BIJAPUR-3** | | | |
| 2 | CHC | Kalagi | 2 |
| 3 | CHC | Nalathwada | 3 |
| 4 | CHC | Almelu, Sindagi Tq | 2 |
| 5 | CHC | Kalkere, Sindagi Tq | 2 |
| 6 | CHC | Maratagi, Sindagi Tq | 2 |
| 7 | CHC | Chadachan, Indi Tq | 1 |
| 8 | CHC | Nidagundi, B Bagewadi Tq | 1 |
| 9 | CHC | Tadawalaga Indi Tq | 2 |
| 10 | GH | Basavana Bagewadi | 3 |
| 11 | GH | Indi (GOIP) | 4 |
| 12 | GH | Muddebihal | 7 |
| 13 | GH | Sindagi | 3 |
| 14 | DH | Bijapur | 6 |
| **DHARWAD** | | | |
| 1 | GH | Kalghatagi (GOIP) | 6 |
| 2 | GH | Kundgol(GOIP) | 4 |
| 3 | GH | Navalgund | 6 |
| 4 | GH | Dharwad | 1 |
| **GADAG-5** | | | |
| 3 | GH | Mundargi | 6 |
| 4 | GH | Nargund | 5 |
| 5 | GH | Rona | 6 |
| 6 | GH | Shirahatti (GOIP) | 6 |
| 7 | DH | Gadag | 3 |
| **HAVERI-6** | | | |
| 1 | CHC | Akki Alur, Haveri Tq | 2 |

| | | | |
|---|---|---|---|
| 2 | CHC | Bankapura, Shiggaon Tq | 2 |
| 3 | CHC | Guttal, Haveri Tq | 2 |
| 4 | CHC | Masur, Hirekerur Tq | 2 |
| 5 | CHC | Rattihalli, Hirekerur Tq | 2 |
| 6 | GH | Byadagi | 4 |
| 7 | GH | Hangal | 4 |
| 8 | GH | Hirekerur | 8 |
| 9 | GH | Ranibennur | 3 |
| 10 | GH | Savanur | 5 |
| 11 | GH | Shiggaon (GOIP) | 4 |
| 12 | DH | Haveri | 1 |
| **UTTARA KANNADA (Karwara)** | | | |
| 3 | GH | Ankola | 6 |
| 4 | GH | Bhatkal | 5 |
| 5 | GH | Honnavar | 4 |
| 6 | GH | Kumta | 3 |
| 7 | GH | Mundgod (GOIP) | 5 |
| 8 | GH | Siddapura | 6 |
| 9 | GH | Sirsi | 2 |
| 10 | GH | Supa (Joida (GOIP) | 7 |
| 11 | GH | Yellapura | 7 |
| 12 | DH | Karwar | 6 |
| 13 | GH | Dandeli | 4 |
| 14 | GH | Haliyal | 5 |
| **GULBARGA** | | | |
| 4 | CHC | D Gangapura, Afzalpur Tq | 1 |
| 5 | CHC | Gadakeshwar | 2 |
| 7 | CHC | Hebbal | 1 |
| 8 | CHC | Kalgi \|(GOIP) | 1 |
| 9 | CHC | Kunchavaram, Chincholi Tq | 1 |
| 10 | CHC | Madanahipparagi (GOIP) | 2 |

| | | | |
|---|---|---|---|
| 11 | CHC | Narona,Aland Tq | 1 |
| 12 | CHC | Nelogi, Jevargi Tq | 1 |
| 13 | CHC | Nimbarga | 2 |
| 14 | CHC | S Gangapura, Afzalpur Tq | 1 |
| 15 | CHC | Shahbad | 1 |
| 16 | CHC | Wadi, Chittapur Tq | 1 |
| 17 | CHC | Yadrami | 1 |
| 18 | CHC | Mudhol, Sedam Tq | 2 |
| 19 | CHC | Malkhed, Sedam Tq | 2 |
| 20 | GH | Afzalpur | 6 |
| 21 | GH | Aland | 3 |
| 22 | GH | Chincholi | 6 |
| 23 | GH | Chittapur | 5 |
| 25 | GH | Sedam | 3 |
| 26 | DH | Gulbarga | 5 |
| **BELLARY** | | | |
| 1 | CHC | Chikkajogihalli | 3 |
| 2 | CHC | Hampasagar, H.B Halli Tq | 2 |
| 3 | CHC | Itagi, Hadagali Tq | 1 |
| 5 | CHC | Kottur (GOIP) | 1 |
| 6 | CHC | Tekkalkote, Siraguppa Tq | 1 |
| 7 | CHC | Torangal | 1 |
| 8 | CHC | Ujjani, Kudlagi Tq | 1 |
| 9 | GH | Hadagali | 3 |
| 10 | GH | Hagaribommana halli | 3 |
| 11 | GH | Kudligi | 6 |
| 12 | GH | Sandur | 6 |
| 13 | GH | Hospet | 2 |
| 15 | GH | Siruguppa (GOIP) | 3 |
| **YADGIRI** | | | |
| 1 | CHC | Wadagere (Shahapur Tq) | 1 |

| | | | |
|---|---|---|---|
| 2 | CHC | Doranahalli ( Shahapur Tq) | 1 |
| 3 | CHC | Hunsangi (Surpur Tq) | 2 |
| 4 | CHC | Gurmitkal (yadgiri Tq) | 3 |
| 5 | CHC | Saidapura (yadgiri Tq) | 2 |
| 6 | CHC | Arakera-B (Shorapur Tq) | 1 |
| 7 | CHC | Arakera, Yadgir Tq | 1 |
| 3 | GH | Shahapur | 3 |
| 4 | GH | Shorapur/Surpur | 4 |
| 11 | GH | Yadgir | 2 |
| **BIDAR** | | | |
| 1 | CHC | Chitaguppa | 1 |
| 3 | CHC | Mannekhalli | 1 |
| 4 | CHC | Nitturu, Bhalki Tq | 1 |
| 7 | GH | Aurad | 1 |
| 8 | GH | Basavakalyana | 2 |
| 9 | GH | Bhalki | 1 |
| 10 | GH | Humnabad | 3 |
| **KOPPAL** | | | |
| 1 | CHC | H. Vankalakunte, Yalaburga Tq | 2 |
| 2 | CHC | Hiresindagi, Koppal Tq | 1 |
| 3 | CHC | Kanakagiri (HOIP) | 2 |
| 4 | CHC | Kartagi | 2 |
| 5 | CHC | Kukanoor (GOIP) | 1 |
| 6 | CHC | Mangalore,Koppal | 1 |
| 7 | CHC | Munirabad, Koppal | 1 |
| 9 | CHC | Sri Ramnagara, Gangawathi Tq | 2 |
| 10 | CHC | Tavargera, Kushtagi Tq | 1 |
| 11 | GH | Gangavathi | 1 |
| 13 | GH | Yelburga | 2 |
| 14 | GH | Talkal | 1 |
| 15 | DH | Koppal | 1 |

| | | | |
|---|---|---|---|
| **RAICHUR** | | | |
| 1 | CHC | Annehosuru, Lingasuguru Tq | 1 |
| 2 | CHC | Arakere, Devadurga Tq | 1 |
| 3 | CHC | Jalahalli, Devadurga Tq | 1 |
| 4 | CHC | J Mallapur, Raichur Tq | 1 |
| 5 | CHC | Kavital,Manvi Tq | 2 |
| 6 | CHC | Mudgal (GOIP) | 2 |
| 7 | GH | Devadurga | 3 |
| 8 | GH | Lingasugur | 1 |
| 9 | GH | Manvi | 2 |
| 10 | GH | Sindanoor | 3 |
| **MYSORE** | | | |
| 1 | CHC | Ashokapuram, Mysore | 1 |
| 2 | CHC | Bannur | 2 |
| 3 | CHC | Hullahalli, Nanjanagud Tq | 3 |
| 4 | CHC | Tagadur, Nanjanagud Tq | 1 |
| 5 | CHC | Jayanagara, Mysore | 1 |
| 6 | CHC | Jayapura, Mysore | 2 |
| 7 | CHC | Mugur, Mysore | 2 |
| 9 | CHC | Saligrama | 2 |
| 11 | CHC | Talkad (GOIP) | 1 |
| 13 | GH | Hunsur (GOIP) | 2 |
| 14 | GH | K.R.Nagar | 3 |
| 15 | GH | Nanjangudu | 2 |
| 16 | GH | H.D.Kote | 1 |
| 17 | GH | Periyapatna | 1 |
| 18 | GH | T.Narasipura | 1 |
| | | | |
| **MANDYA** | | | |
| 3 | CHC | Kiragavalu,Malvalli Tq | 1 |
| 4 | CHC | Bindiganavile | 1 |

| | | | |
|---|---|---|---|
| 5 | CHC | Bellur | 1 |
| 6 | CHC | Arakere | 2 |
| 7 | CHC | Chinakurali | 1 |
| 8 | GH | Maddur | 1 |
| 9 | GH | Krishnarajapete (GOIP) | 3 |
| 10 | GH | Malavalli | 2 |
| 11 | GH | Nagamangala | 2 |
| 12 | GH | Pandavpura (GOIP) | 2 |
| 13 | GH | Sri Rangapatna | 5 |
| **CHAMARAJANAGARA** | | | |
| 1 | CHC | Kabballi | 1 |
| 3 | GH | Gundlupet (GOIP) | 2 |
| 4 | GH | Kollegala | 2 |
| 5 | GH | Yelandur (GOIP) | 1 |
| 6 | DH | Chamarajanagara (GOIP) | 1 |
| **KODAGU** | | | |
| 1 | CHC | Kutta | 2 |
| 2 | CHC | NapOkul, Madikere Tq | 1 |
| 3 | CHC | Palibetta (50 Bed) | 3 |
| 4 | CHC | Shanivarsanthe | 3 |
| 5 | CHC | Siddapura | 3 |
| 8 | GH | Kushalnagar | 2 |
| 9 | GH | Somawarpet | 3 |
| 10 | GH | Virajpet | 3 |
| 11 | DH | Madikeri | 7 |
| **CHIKKAMAGALUR** | | | |
| 1 | CHC | Ajjampura, Tarikere Tq | 2 |
| 2 | CHC | Kalasa, Mudugere Tq | 1 |
| 3 | GH | Birur | 1 |
| 4 | GH | Kadur | 4 |
| 5 | GH | Koppa (GOIP) | 1 |

| | | | |
|---|---|---|---|
| 6 | GH | Mudigere | 4 |
| 7 | GH | Narasimharajapura (GOIP) | 4 |
| 9 | GH | Tarikere (GOIP) | 2 |
| 10 | DH | Chikkamagaluru | 3 |
| **DAKSHINA KANNADA (Mangalore)** | | | |
| 1 | CHC | Mudubidire, Mangalore | 1 |
| 2 | CHC | Mulki, Mangalore | 1 |
| 3 | CHC | Vamanapaduvu, Mangalore | 1 |
| 5 | GH | Bantwal | 1 |
| 6 | GH | Belthangadi (GOIP) | 1 |
| 7 | GH | Puttur | 4 |
| 8 | GH | Sulla (GOIP) | 2 |
| **HASSAN** | | | |
| 1 | CHC | Paduvalhippe | 3 |
| 2 | CHC | Dudda | 2 |
| 4 | CHC | Halli Mysore | 2 |
| 5 | CHC | Hirisave | 1 |
| 6 | CHC | J.C.Pura, Arasikere Tq | 2 |
| 7 | CHC | Halebedu | 2 |
| 8 | CHC | Konanur | 2 |
| 9 | CHC | Dooddakuche | 2 |
| 10 | CHC | Sravanabelagola | 1 |
| 11 | CHC | Udayapura | 2 |
| 12 | CHC | Nuggehalli | 1 |
| 13 | GH | Alur (GOIP) | 4 |
| 14 | GH | Arasikere | 1 |
| 15 | GH | Arakalgudu | 3 |
| 16 | GH | Belur | 4 |
| 17 | GH | Channarayapatna | 1 |
| 18 | GH | Sakaleshpura | 2 |
| 19 | GH | Holenarasipura | 4 |

| UDUPI | | | |
|---|---|---|---|
| 1 | CHC | Brahmavara, Udupi Tq | 2 |
| 2 | CHC | Hebri,Karkala Tq | 2 |
| 3 | CHC | Nitte (GOIP) | 2 |
| 4 | CHC | Shirva | 2 |
| 6 | CHC | Byindur | 2 |
| 7 | CHC | Kota | 2 |
| 11 | DH | Udupi | 1 |
| | | **GRAND TOTAL** | **738** |

**ಅಂಗನವಾಡಿ ಕೇಂದ್ರಗಳಿಂದ ಮಕ್ಕಳಿಗೆ ನೀಡುವ ಆಹಾರಗಳ ಬಗ್ಗೆ**

**717; ಪ್ರೊ. ಕೆ.ಆರ್.ಮಲ್ಲಿಕಾರ್ಜುನಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**1)** ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಅಂಗನವಾಡಿ ಕೇಂದ್ರಗಳಿಂದ ಪ್ರತಿ ಮಗುವಿಗೆ ನೀಡುವ ಆಹಾರ ಧಾನ್ಯಗಳಾವುವು (ವಿವರ ನೀಡುವುದು)

**2)** ಪ್ರತಿ ಮಗುವಿಗೆ ನೀಡುವ ಪ್ರಮಾಣ ಎಷ್ಟು (ವಿವರ ನೀಡುವುದು)

**3)** ಇವುಗಳ ವಿತರಣೆಯ ಸಮರ್ಪಕವಾಗಿ ನಡೆಯುತ್ತದೆಯೇ (ವಿವರ ನೀಡುವುದು)

**ಶ್ರೀ ಕಳಕಪ್ಪ ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

**1)** ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

**2)** ಪ್ರಶ್ನೆ 1ರ ಉತ್ತರದಲ್ಲಿಯೇ ವಿವರ ಒದಗಿಸಲಾಗಿದೆ.

**3)** ಹೌದು.

137 ಮಹಿಳಾ ಪೂರಕ ಪೌಷ್ಠಿಕ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳಿಂದ ಆಹಾರವನ್ನು ವಿತರಿಸಲಾಗುತ್ತಿದೆ. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಅಂಗನವಾಡಿ ಕೇಂದ್ರದ ಫಲಾನುಭವಿಗಳ ಸಂಖ್ಯೆಗನುಗುಣವಾಗಿ ಬೇಡಿಕೆಯನ್ನು ಸಿದ್ಧಪಡಿಸಿ ಮಹಿಳಾ ಪೂರಕ

ಪೌಷ್ಠಿಕ ಉತ್ಪಾದನೆ ಮತ್ತು ತಯಾರಿಕ ಕೇಂದ್ರಗಳಗೆ ನೀಡುತ್ತಾರೆ ಅವರು ನೀಡುವ ಬೇಡಿಕೆಗನುಗುಣವಾಗಿ ಆಹಾರವನ್ನು ಸಿದ್ಧಪಡಿಸಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಯವರ ಗೋದಾಮಿಗೆ MSPTC ಯವರು ಸರಬರಾಜು ಮಾಡುತ್ತಾರೆ. ಅಲ್ಲಿಂದ ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳು ಸಾಗಾಣಿಕೆದಾರರ ಮೂಲಕ ಸರಬರಾಜಾಗುತ್ತದೆ.

## ಅನುಬಂಧ

| ಪೂರಕ ಪೌಷ್ಠಿಕ ಆಹಾರದ ವಿವರ ಹಾಗೂ ಪೌಷ್ಠಿಕಾಂಶಗಳ ವಿವರ | | | | | | |
|---|---|---|---|---|---|---|
| ಕ್ರ. ಸಂ | ಫಲಾನುಭವಿಗಳ ವಿವರ | ಪೂರಕ ಪೌಷ್ಠಿಕ ಆಹಾರ | ಪ್ರತಿ ದಿನ ನೀಡಬೇಕಾದ ಪೌಷ್ಠಿಕಾಂಶಗಳ ಪ್ರಮಾಣ | | ಪ್ರತಿ ದಿನ ನೀಡುತ್ತಿರುವ ಪೌಷ್ಠಿಕಾಂಶಗಳ ಪ್ರಮಾಣ | |
| | | | ಪ್ರೋಟೀನ್ | ಕ್ಯಾಲೋರಿ | ಪ್ರೋಟೀನ್ | ಕ್ಯಾಲೋರಿ |
| **1** | **6ತಿಂಗಳಿಂದ–3ವರ್ಷದ ಮಕ್ಕಳು** | **ವಾರದಲ್ಲಿ 6ದಿನ AREF** | **12ರಿಂದ 15ಗ್ರಾಂ** | **500** | **12.25** | **367.50** |
| 3 | 3ವರ್ಷದಿಂದ–6 ವರ್ಷದ ಮಕ್ಕಳು | | | | | |
| | ಬೆಳಿಗ್ಗೆ | ನ್ಯೂಟ್ರಿ ಕಾರನ್ ಪಾಪ್ | 7ರಿಂದ 8 | 250 | 3.63 | 128 |
| | ಮಧ್ಯಾಹ | ನ್ಯೂಟ್ರಿ ಕೇಸರಿಭಾತ್ | 7ರಿಂದ 8 | 250 | 4.20 | 100 |
| | | ಒಟ್ಟು 1ದಿನಕ್ಕೆ | 15ಗ್ರಾಂ | 500 | 7.83 | 228.00 |
| | ಬೆಳಿಗ್ಗೆ | : **EF** | 7ರಿಂದ 8 | 250 | 6.25 | 187.5 |
| | ಮಧ್ಯಾಹ | ನ್ಯೂಟ್ರಿ ಬಿಸಿಬೇಳೆಭಾತ್ | 7ರಿಂದ 8 | 250 | 4.75 | 152 |
| | | ಒಟ್ಟು 1ದಿನಕ್ಕೆ | | 500 | 11 | 339.5 |

| | | | | | | |
|---|---|---|---|---|---|---|
| 2 | ಗರ್ಭಿಣಿ/ಬಾಣಂತಿ/ ಪ್ರಾಯಪೂರ್ವ ಬಾಲಕಿಯರು ಹಾಗೂ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು | ವಾರದಲ್ಲಿ 2 ದಿನ ಶಕ್ತಿಯುತ ಆಹಾರ | 18ರಿಂದ 20 ಗ್ರಾಂ | 600 | 15.25 | 457.5 |
| | | 2 ದಿನ ನ್ಯೂಟ್ರಿ ಕೇಸರಿಭಾತ್ | 18ರಿಂದ 20 ಗ್ರಾಂ | 600 | 12.48 | 331.5 |
| | | 2 ದಿನ ನ್ಯೂಟ್ರಿ ಬಿಸಿಬೇಳೆಭಾತ್ | 18ರಿಂದ 20 ಗ್ರಾಂ | 600 | 12.21 | 319.8 |

## ಮಕ್ಕಳ ಸಮಗ್ರ ಅಭಿವೃದ್ಧಿ ಯೋಜನೆಗಳ ಬಗ್ಗೆ

## 718; ಪ್ರೊ: ಕೆ.ಆರ್. ಮಲ್ಲಿಕಾರ್ಜುನಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಅ)** ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಾವುವು? ಇದಕ್ಕೆ ನಿಗದಿಪಡಿಸಿರುವ ಅನುದಾನದ ಮೊತ್ತ ಎಷ್ಟು? (ಯೋಜನೆವಾರು ವಿವರ ನೀಡುವುದು)

**ಆ)** 2008 ರಿಂದ ಈವರೆವಿಗೂ ಬಡ ಹಾಗೂ ಜೀತ ಮುಕ್ತ ಎಷ್ಟು ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗಾವಕಾಶವನ್ನು ಕಲ್ಪಿಸಲಾಗಿದೆ? (ಯೋಜನಾ ವಾರು ವಿವರ ನೀಡುವುದು)

**ಇ)** ಗ್ರಾಮಾಂತರ ಪ್ರದೇಶದ ಮಕ್ಕಳು ಶೈಕ್ಷಣಿಕವಾಗಿ ಮುನ್ನಡೆ ಸಾಧಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)

## ಶ್ರೀ ಕಳಕಪ್ಪ ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

**ಅ)** ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಈ ಕೆಳಕಂಡ ಯೋಜನೆಗಳನ್ನು ಜಾರಿಗೊಳಿಸಿದೆ.

| ಕ್ರ. ಸಂ | ಯೋಜನೆಯ ವಿವರ | ನಿಗದಿ ಪಡಿಸಿರುವ ಅನುದಾನ (ಲಕ್ಷ ರೂ.ಗಳಲ್ಲಿ) |
|---|---|---|
| 1 | **ಸಮಗ್ರ ಶಿಶು ಅಭಿವೃದ್ಧಿ ಯೋಜನೆ** | |
| | ಅ) ಪೂರಕ ಪೌಷ್ಟಿಕ ಆಹಾರ | 60934.85 |
| | ಆ)ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ವೈದ್ಯಕೀಯ ವೆಚ್ಚ/ಮರಣ ಪರಿಹಾರ | 40.00 |
| | ಇ) ಬಾಲಸಂಜೀವಿನಿ | 500.00 |
| | ಈ) ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ | 50.00 |
| | ಉ) ಕೀಶೋರಿಶಕ್ತಿ | 203.50 |

| | | |
|---|---|---|
| | ಊ) ಸಬಲ | 990.16 |
| 2 | ಭಾಗ್ಯಲಕ್ಷ್ಮಿ ಯೋಜನೆ | 35800.00 |
| 3 | ಸಮಗ್ರ ಮಕ್ಕಳ ರಕ್ಷಣಾ ಯೋಜನೆ<br>ಅ. ಬಾಲನ್ಯಾಯ ಕಾರ್ಯಕ್ರಮ<br>ಆ. ಅರ್ಹ ಸಂಸ್ಥೆ<br>ಇ. ಕೌಶಲ್ಯಾಭಿವೃದ್ಧಿ<br>ಈ. ಪ್ರಾಯೋಜಕತ್ವ<br>ಉ. ದತ್ತು<br>ಊ. ಮಕ್ಕಳ ಸಹಾಯವಾಣಿ | <br>520.52<br>45.00<br>10.00<br>36.10<br>32.47<br>50.00 |
| 4 | HIV/AIDS ಸೋಂಕಿತ ಮಕ್ಕಳಿಗಾಗಿ ವಿಶೇಷ ಪಾಲನಾ ಯೋಜನೆ | 100.00 |
| 5 | ಹಾಜರಾತಿ ಶಿಷ್ಯ ವೇತನ | 88.81 |
| 6 | ಬಾಲಕಿಯರ ವಸತಿ ನಿಲಯ | 258.49 |
| 7 | ನಿರ್ಗತಿಕ ಮಕ್ಕಳ ಕುಟೀರ | 433.63 |

**ಆ)** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ವತಿಯಿಂದ ನಡೆಯುತ್ತಿರುವ ಬಾಲಮಂದಿರಗಳಲ್ಲಿ ರಕ್ಷಣೆ ಮತ್ತು ಪೋಷಣೆ ಕೋರಿ ಬರುವ ಬಾಲಕಾರ್ಮಿಕ ಮಕ್ಕಳಿಗೆ (ಏಕ ಪೋಷಕರ ಮಕ್ಕಳು, ಬಡತನದ ಕುಟುಂಬದ ಮಕ್ಕಳು, ಅನಾಥರು, ನಿರ್ಗತಿಕರಿಗೆ) ವಸತಿ, ಆಹಾರ, ಶಿಕ್ಷಣ, ವೈದ್ಯಕೀಯ ಸೌಲಭ್ಯದೊಂದಿಗೆ ಪುನರ್ ವಸತಿ ಕಲ್ಪಿಸಲಾಗುತ್ತದೆ. 2008 ರಿಂದ ಈವರೆಗೆ ಈ ಬಾಲಮಂದಿರಗಳಲ್ಲಿ ದಾಖಲಾಗಿರುವ 6552 ಮಕ್ಕಳು ಶಿಕ್ಷಣ ಪಡೆದಿರುತ್ತಾರೆ.

ಇ)

1. **ಶಾಲಾಪೂರ್ವ ಶಿಕ್ಷಣ :–** ಕೇಂದ್ರ ಪುರಸ್ಕೃತ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಉದ್ದೇಶ ಸಮಾಜದ ಶೋಷಿತ ವರ್ಗದ 0–6 ವರ್ಷದ ಮಕ್ಕಳ ಸರ್ವತೋಮುಖ ಅಭಿವೃದ್ಧಿ, ಶಾಲೆಗೆ ಸಿದ್ಧಗೊಳಿಸುವುದು ಹಾಗೂ ಶಿಕ್ಷಣದ ಬಗ್ಗೆ ಧನಾತ್ಮಕ ಮನೋಭಾವವನ್ನು ಅಭಿವೃದ್ಧಿ ಪಡಿಸುವುದು ಶಾಲಾಪೂರ್ವ

ಶಿಕ್ಷಣದ ಒಂದು ಅಂಶ. ಅಂಗನವಾಡಿ ಕೇಂದ್ರಗಳಲ್ಲಿ ರೂಢಿಗತವಲ್ಲದ ಶಾಲಾಪೂರ್ವ ಶಿಕ್ಷಣವನ್ನು ಆಟದ ಮೂಲಕ ನೀಡಲಾಗುತ್ತಿದೆ. ರಾಷ್ಟ್ರೀಯ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಸಾಧಿಸಬೇಕಾಗಾದರೆ ಅಂಗನವಾಡಿ ಕೇಂದ್ರಗಳಲ್ಲಿ ಶಾಲಾ ಪೂರ್ವ ಶಿಕ್ಷಣವನ್ನು ಬಲಪಡಿಸಬೇಕು. ಕೇಂದ್ರ ಸರ್ಕಾರದ ಮಾರ್ಗ ಸೂಚಿಯನ್ವಯ ಪ್ರತಿ ಅಂಗನವಾಡಿ ಕೇಂದ್ರಕ್ಕೆ ₹ 1000/– ಒದಗಿಸಲಾಗಿದೆ.

ಸಮಗ್ರ ಪದ್ಧತಿಯಲ್ಲಿ ಶಾಲಾಪೂರ್ವ ಶಿಕ್ಷಣವನ್ನು ಅಂಗನವಾಡಿ ಕೇಂದ್ರಗಳಲ್ಲಿ ನೀಡಲು 42 ವಿಷಯಗಳ ಪರಿಚಯ ಮಾಡಿಕೊಡಲಾಗುತ್ತಿದೆ. **ಚಿಲಿಪಿಲಿ** ಚಟುವಟಿಕೆ ಭಂಢಾರವನ್ನು ಅಭಿವೃದ್ಧಿಪಡಿಸಿದ್ದು ಇದು ಕಥೆ, ಹಾಡು, ಚಟುವಟಿಕೆಗಳನ್ನು ಒಳಗೊಂಡಿದೆ.

2. **ಗ್ರಾಮಾಂತರ ಹೆಣ್ಣು ಮಕ್ಕಳ ಹಾಜರಾತಿ ಶಿಷ್ಯವೇತನ:–** ಗ್ರಾಮಾಂತರ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳು ಶಾಲೆಯನ್ನು ಬಿಡುವುದನ್ನು ತಪ್ಪಿಸುವುದು ಹಾಗೂ ಹೆಣ್ಣು ಮಕ್ಕಳ ಸಾಕ್ಷರತೆಯನ್ನು ಹೆಚ್ಚಿಸುವ ಸಲುವಾಗಿ ಆರ್ಥಿಕ ಸಹಾಯ ನೀಡಲಾಗುವುದು. ಮಾನ್ಯತೆ ಪಡೆದ ವಿದ್ಯಾ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 20,000 ಜನ ಸಂಖ್ಯೆಗಿಂತ ಕಡಿಮೆ ಇರುವ ಗ್ರಾಮದಲ್ಲಿ ವಾಸಿಸುತ್ತಿರುವ ಮೊದಲನೇ ಪ್ರಯತ್ನದಲ್ಲಿ ಉತ್ತೀರ್ಣರಾಗಿ ಶೇಕಡ 80 ರಷ್ಟು ಹಾಜರಾತಿ ಪಡೆದಿರುವ 5 ನೇ ತರಗತಿಯಿಂದ 10ನೇ ತರಗತಿಯವರೆಗಿನ ವಿದ್ಯಾರ್ಥಿನಿಯರಿಗೆ ಈ ಶಿಷ್ಯ ವೇತನವನ್ನು ನೀಡಲಾಗುವುದು. 5 ರಿಂದ 7ನೇ ತರಗತಿಯವರೆಗೆ ತಿಂಗಳಿಗೆ ₹ 25.00 ರಂತೆ ಮತ್ತು 8 ರಿಂದ 10ನೇ ತರಗತಿಯವರೆಗೆ 50.00 ರಂತೆ ಹತ್ತು ತಿಂಗಳಿಗೆ ನೀಡಲಾಗುವುದು.

3. **ಬಾಲಕಿಯರ ವಸತಿ ನಿಲಯ:** ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳು ಉನ್ನತ ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಡಲು ಇಲಾಖಾ

ವತಿಯಿಂದ ಹಿಂದುಳಿದ ಪ್ರದೇಶಗಳಲ್ಲಿ ಬಾಲಕಿಯರ ವಸತಿ ನಿಲಯಗಳನ್ನು ನಡೆಸಲಾಗುತ್ತಿದೆ. ಸರ್ಕಾರ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಲ್ಲಿ 6ನೇ ತರಗತಿ ಮೇಲ್ಪಟ್ಟು ಮೆಟ್ರಿಕ್ ನಂತರದ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಗ್ರಾಮಾಂತರ ಪ್ರದೇಶದಲ್ಲಿ ವಾಸವಾಗಿರುವ ಹಾಗೂ ವಾರ್ಷಿಕ ವರಮಾನ 10000 ರೂಪಾಯಿ ಮೀರದ ಕುಟುಂಬದಲ್ಲಿನ ಹೆಣ್ಣು ಮಕ್ಕಳಿಗೆ ಈ ವಸತಿ ನಿಲಯಗಳಲ್ಲಿ ಪ್ರವೇಶ ಅವಕಾಶ ಲಭ್ಯವಿರುತ್ತದೆ.

## ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯವನ್ನು ಸ್ಥಾಪಿಸುವ ಬಗ್ಗೆ

**730; ಪ್ರೊ॥ ಕೆ.ಆರ್. ಮಲ್ಲಿಕಾರ್ಜುನಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿರುವ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

**ಆ)** ಮೇಲ್ಕಂಡ ಜಿಲ್ಲೆಗಳಲ್ಲಿ ಹೊಸದಾಗಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರ ಉದ್ದೇಶಿಸಿದೆಯೇ; (ಉದ್ದೇಶಿಸಲಾದ್ದಲ್ಲಿ, ಗೊತ್ತುಪಡಿಸಿರುವ ಸ್ಥಳಗಳ ವಿವರ ನೀಡುವುದು).

**ಇ)** ಮೈಸೂರು ತಾಲ್ಲೂಕಿನ ಜಯಪುರ ಹೋಬಳಿಯ ಮದ್ದೂರು ಗ್ರಾಮದಲ್ಲಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯವನ್ನು ಪ್ರಾರಂಭಿಸಲು ಜನಪ್ರತಿನಿಧಿಗಳಿಂದ, ಸಾರ್ವಜನಿಕ ಬೇಡಿಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವಾಗ ಪ್ರಾರಂಭಿಸುವುದು?

**ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

**ಅ)** ಮೈಸೂರು ಜಿಲ್ಲೆಯಲ್ಲಿ 30, ಚಾಮರಾಜನಗರ ಜಿಲ್ಲೆಯಲ್ಲಿ 10 ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿವೆ.

**ತಾಲ್ಲೂಕುವಾರು ಆಯುರ್ವೇದ ಚಿಕಿತ್ಸಾಲಯಗಳ ವಿವರ:**

| **ಮೈಸೂರು ಜಿಲ್ಲೆ:** | | **ಚಾಮರಾಜನಗರ:** | |
|---|---|---|---|
| ಮೈಸೂರು ತಾಲ್ಲೂಕು | – 6 | ಚಾಮರಾಜನಗರ ತಾಲ್ಲೂಕು | – 2 |
| ಹುಣಸೂರು ತಾಲ್ಲೂಕು | – 3 | ಗುಂಡ್ಲುಪೇಟೆ ತಾಲ್ಲೂಕು | – 5 |
| ಪಿರಿಯಾಪಟ್ಟಣ ತಾಲ್ಲೂಕು | – 4 | ಕೊಳ್ಳೆಗಾಲ ತಾಲ್ಲೂಕು | – 2 |
| ಕೃಷ್ಣರಾಜನಗರ ತಾಲ್ಲೂಕು | – 4 | ಯಳಂದೂರು ತಾಲ್ಲೂಕು | – 1 |
| ನಂಜನಗೂಡು ತಾಲ್ಲೂಕು | – 8 | **ಒಟ್ಟು** | **– 10** |
| ಟಿ.ನರಸೀಪುರ ತಾಲ್ಲೂಕು | – 5 | | |
| **ಒಟ್ಟು** | **– 30** | | |

**ಆ) ಮತ್ತು ಇ)** ಮೈಸೂರು ಜಿಲ್ಲೆಯ ಟಿ. ನರಸಿಂಹಪುರ ತಾಲ್ಲೂಕು, ತಲಕಾಡು ಗ್ರಾಮದಲ್ಲಿ, ಕೆ ಆರ್. ನಗರ ತಾಲ್ಲೂಕು/ ಟೌನ್‌ನಲ್ಲಿ ಹಾಗೂ ಮೈಸೂರು ತಾಲ್ಲೂಕಿನ ಜಯಪುರ ಹೋಬಳಿಯ ಮದ್ದೂರು ಗ್ರಾಮದಲ್ಲಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯವನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿವೆ.

**ಸಭಾಪತಿಯವರು:–** ಮಾನ್ಯ ಎಂ.ಸಿ. ನಾಣಯ್ಯನವರೆ, ತಾವು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬೇಕೆಂದು ಕಳುಹಿಸಿರುವಂತಹ ವಿಷಯವನ್ನು ಶ್ರೀ ಎಸ್.ಆರ್. ಪಾಟೀಲ್‌ರವರು ಸಹ ಕಳುಹಿಸಿಕೊಟ್ಟಿದ್ದಾರೆ. ಜೊತೆಗೆ ಇದೇ ವಿಷಯವನ್ನು ಉಪ ಸಭಾಪತಿಯವರು ಕೂಡ ಪ್ರಸ್ತಾಪ ಮಾಡುತ್ತೇನೆಂದು ಹೇಳುತ್ತಿದ್ದಾರೆ. ಆದುದರಿಂದ ತಾವುಗಳೇ ನಿರ್ಣಯ ಮಾಡಿಕೊಂಡು ಪ್ರಸ್ತಾಪ ಮಾಡಿ.

## 2) ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನಾ ವಿಭಾಗದ ವಿದ್ಯಾರ್ಥಿನಿಗೆ ಒಬ್ಬ ಪ್ರಾಧ್ಯಾಪಕರು ಮಾನಸಿಕವಾಗಿ ಹಾಗೂ ಲೈಂಗಿಕ ಕಿರುಕುಳ ನೀಡುತ್ತಿರುವ ಆಪಾದನೆ ಕುರಿತು:–

**ಶ್ರೀ ಎಂ.ಸಿ. ನಾಣಯ್ಯ (ವಿಧಾನ ಸಭಾ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ಇವತ್ತು ಎಲ್ಲಾ ಪತ್ರಿಕೆಗಳಲ್ಲಿಯೂ ಕೂಡ ಇದೇ ವಿಷಯ ವರದಿಯಾಗಿದೆ. ಮಾನ್ಯ ಸಭಾ ನಾಯಕರು ಕೂಡ ಈ ವಿಷಯವನ್ನು ಓದಿರಬೇಕೆಂದು ಭಾವಿಸುತ್ತೇನೆ. ನಿಮ್ಮಿಂದಲೇ ಮಾರ್ಗದರ್ಶನವನ್ನು ಸರ್ಕಾರಕ್ಕೆ ಕೊಡಬೇಕೆಂದು ಬಯಸುತ್ತೇನೆ. ನಿಮ್ಮಿಂದಲೇ ನಮ್ಮ ಉನ್ನತ ಶಿಕ್ಷಣ ಸಚಿವರು, ನಮ್ಮ ಸಭಾ ನಾಯಕರು, ಇದು ಕೊಡದೇ ಹೋದರೆ, ಬಹುಶಃ ನಾನು ಹೇಳುವುದೇನೆಂದರೆ, ಇವತ್ತು ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ, ಕಾಲೇಜುಗಳಲ್ಲಿ ಈ ಪ್ರೊಫೆಸರ್‌ಗಳು ಮತ್ತು ಮಾರ್ಗದರ್ಶಕರು ಎಂದು ಹೇಳುತ್ತಿರುವಂತಹ ಈ ಕಾಮುಕರಿಗೆ, ಎಲ್ಲರೂ ಅಲ್ಲ, ಕೆಲವು ಜನ ಇದ್ದಾರೆ. ಹತ್ತಾರು ವರ್ಷಗಳಿಂದ ಇದು ಗಮನಕ್ಕೆ ಬಂದರೂ ಕೂಡ ಏಕೆ ಇದರ ಬಗ್ಗೆ ಗಮನ ಹರಿಸಲಿಲ್ಲ. ಬಹುಶಃ ಇದರ ಬಗ್ಗೆ ಒಂದು ಕಾನೂನನ್ನೇ ತೆಗೆದುಕೊಂಡು ಬರಬೇಕಾಗುತ್ತದೆ. ಇವತ್ತು ನಾವು ತಂದಿರತಕ್ಕಂತಹ ವಿಷಯವನ್ನು ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ನೋಡಿದ್ದೇವೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅವರು ಸಂಶೋಧನೆ ಮಾಡುತ್ತಿರತಕ್ಕಂತಹ ಒಂದು ಹೆಣ್ಣು ಮಗಳು, ಮದುವೆಯಾಗಿದ್ದಾಳೆ ಅವಳಿಗೆ ಇಬ್ಬರು ಮಕ್ಕಳಿದ್ದಾರೆ. ಆ ಮಾರ್ಗದರ್ಶಕ ಎನ್ನುವಂತಹ ಒಬ್ಬ ಕಾಮುಕ, ಬಹುಶಃ ನಾವು ಇದನ್ನು ಏಕೆ ಹೇಳಬೇಕೆಂದು, ಈ ವಿಷಯ ಪತ್ರಕೆಗಳಲ್ಲಿ ವರದಿಯಾಯಿತು. ವೈಸ್ ಛಾನ್ಸಲ್‌ರವರು ಮೂರ್‍ನಾಲ್ಕು ದಿವಸಗಳ ಹಿಂದೆ ಅವರನ್ನು ಕರೆದು ಚರ್ಚೆ ಮಾಡಿದ್ದಾರೆಂದು ಹೇಳುತ್ತಾರೆ. ಚರ್ಚೆ ಮಾಡಿಯಾದ ಮೇಲೆ, ಇಲ್ಲ, ಬೇಕಾದರೆ "Guide" ನ್ನು ಬದಲಾವಣೆ ಮಾಡಿ ಎಂದು ಹೇಳುತ್ತಾರೆ.ಏನು "Guide" ನ್ನು ಬದಲಾವಣೆ ಮಾಡುವಂಥದ್ದು, ಹೆಣ್ಣು ಮಕ್ಕಳು ಏನು ಯಂತ್ರವೇ, ಅವರೇನಾದರು ಮಾರಾಟಕ್ಕೆ ಇರುವಂತಹ ವಸ್ತುಗಳೇ? ರಾಜಕಾರಣಿಗಳಾದರು

ಮಾರಾಟಕ್ಕಿದ್ದಾರೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ಲೋಕಕ್ಕೆ ಗೊತ್ತಾಗಿ ಬಿಟ್ಟಿದೆ. ಆದರೆ ಹೆಣ್ಣು ಮಕ್ಕಳು, ಸಂಶೋಧನೆ ಮಾಡುತ್ತಿರುವಂತಹ ಹೆಣ್ಣು ಮಗಳು, ಅದರಲ್ಲಿಯೂ ಗೌರವಸ್ಥ ಕುಟುಂಬದಿಂದ ಬಂದಿರುವಂತಹ ಬಹಳಷ್ಟು ಹೆಣ್ಣು ಮಕ್ಕಳು ಇವತ್ತು ಮರ್ಯಾದೆಗೋಸ್ಕರವಾಗಿ ಏನು ಮಾಡುತ್ತಾರೆಂದರೆ, ಎಲ್ಲವನ್ನೂ ಮುಚ್ಚಿಟ್ಟು ಕೊಳ್ಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಇಂತಹ ಕಾಮುಕರುಗಳು, ಪ್ರಾಶುಂಪಾಲರುಗಳು ವಿದ್ಯಾರ್ಥಿಗಳ ಮೇಲೆ ಲೈಂಗಿಕ ಕ್ರಿಯೆ ಮಾಡುತ್ತಿರತಕ್ಕಂಥದ್ದು, ಮಾರ್ಗದರ್ಶಕರುಗಳು ನೋಡಿದರೆ ವಿದ್ಯಾರ್ಥಿಗಳ ಮೇಲೆ ಈ ರೀತಿಯಾಗಿ ಮಾಡುತ್ತಿರಕ್ಕಂಥದ್ದು. ಪಾಪ ಈ ಹೆಣ್ಣು ಮಗಳಿಗೆ ಗಂಡ ಮತ್ತು ಎರಡು ಮಕ್ಕಳಿದ್ದಾರೆ. ಇವತ್ತು ತಡೆಯುವುದಕ್ಕಾಗದೇ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾದಾಗ ನಾನು ತಮ್ಮ ಮುಖಾಂತರ ಸಭಾ ನಾಯಕರನ್ನು ಕೇಳುವುದೇನೇಂದರೆ. ದಯವಿಟ್ಟು ಇದರ ಬಗ್ಗೆ ಏನು ಮಾಡುತ್ತೀರಿ ಎನ್ನುವುದನ್ನು ಹೇಳಬೇಕು. ಇದಕೆಲ್ಲಾ ಕಾರಣ ಏನೆಂದರೆ, ಕೆಲವು ಜನ ಪ್ರೊಫೆಸರ್‌ಗಳಿದ್ದಾರೆ. ನಾನು ಎಲ್ಲರು ಎಂದು ಹೇಳುವುದಿಲ್ಲ. ಕೆಲವು ಜನ ಬಹಳ ಯೋಗ್ಯರಿದ್ದಾರೆ, ಗೌರವಾನ್ವಿತರಿದ್ದಾರೆ. ಬಹಳ ಒಳ್ಳೆಯವರಿದ್ದಾರೆ. ಆದರೆ ಕೆಲವು ವರ್ಗದ ಜನರು ಹಣೆ ಪಟ್ಟಿಯನ್ನು ಕಟ್ಟಿಕೊಂಡು ಬಿಡುವುದು. ಅವರ ಜಾತಿಯ ಹೆಸರನ್ನು ತೆಗೆದುಕೊಂಡು ಬಿಟ್ಟು ಅವರ ಜಾತಿಯವರೆಲ್ಲರೂ ಒಂದಾಗಿ ಬಿಡುವುದು. ಇಂತಹ ಪರಿಸ್ಥಿತಿ ನಿರ್ಮಾಣವಾದರೆ, ನಾನು ಹೇಳುವುದೇನೆಂದರೆ, ಇಂತವರನ್ನೆಲ್ಲಾ ಶಾಲಾ ಕಾಲೇಜುಗಳಿಂದ, ವಿಶ್ವವಿದ್ಯಾನಿಲಯಗಳಿಂದ, ನಾನು ಭಾಷೆಯನ್ನು ಬಳಸಬಾರದು. ಆ ಭಾಷೆಯನ್ನು ಈ ಸದನದಲ್ಲಿ ಬಳಸಿದರೆ ತಪ್ಪಾಗುತ್ತದೆ. ಅವರು ಯಾರೇ ಆಗಲಿ, ಇವರ ಮೇಲೆ ಸರ್ಕಾರ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ, ವಿಶ್ವವಿದ್ಯಾನಿಲಯದಲ್ಲಿ ಆಗುತ್ತಿರುವುದು ಪೂರ್ಣ ರಾಜಕಾರಣವೇ. ದಿನ ಬೆಳಗಾದರೆ ಜಾತಿ ರಾಜಕಾರಣ, ಗುಂಪು ರಾಜಕಾರಣವನ್ನು ಮಾಡಿಕೊಂಡು ಅವರೇ ಒಟ್ಟಾರೆ ಸೇರಿಕೊಳ್ಳುತ್ತಿರುವಂಥದ್ದು. ನಾನು ಎಂಟು ವರ್ಷಗಳ ಕಾಲ ಮಂಗಳೂರು

ವಿಶ್ವವಿದ್ಯಾನಿಲಯದಲ್ಲಿದೆ. ಆದುದರಿಂದ ನನಗೆ ಅನುಭವ ಇದೆ. ಅದು ಬಹಳ ಉತ್ತಮವಾಗಿರುವಂತಹ ಒಂದು ವಿಶ್ವವಿದ್ಯಾನಿಲಯ. ಅಲ್ಲಿಯೂ ಕೂಡ ಒಂದೆರಡು ಘಟನೆಗಳು ಈ ರೀತಿಯಾಗಿ ಬಂದಾಗ, ಕಟ್ಟುನಿಟ್ಟಾಗಿ ನಾನು ವೈಸ್ ಛಾನ್ಸಲರ್‌ಗೆ ಹೇಳಿ ಅವರನ್ನು ಹೊರಗೆ ಹಾಕಲಾಯಿತು. ಅವರನ್ನು ಕರೆದು ಸಿಂಡಿಕೇಟ್ ಮೀಟಿಂಗ್‌ನಲ್ಲಿ ಎಚ್ಚರಿಕೆಯನ್ನು ಕೊಡುವಂಥದ್ದಲ್ಲ. ತಕ್ಷಣ ಅವರನ್ನು dismiss ಮಾಡುವಂತಹ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ? ಕೆಲವು ಪ್ರಕರಣಗಳು ಮಾತ್ರ ಹೊರಗೆ ಬರುವಂಥದ್ದು. ಇಂತಹ ನೂರಾರು ಪ್ರಕರಣಗಳು ಹೊರಗೆ ಬರದೇ ಅವರು ಎಷ್ಟರ ಮಟ್ಟಿಗೆ ಒಂದು PhD ಗೋಸ್ಕರವಾಗಿ ಬೆಂದು, ಬೆಂದು ಸಾಯಬೇಕು? ಇದು ಬರೀ ಹೆಣ್ಣು ಮಕ್ಕಳಿಗೆ ಮಾತ್ರವಲ್ಲ. ಗಂಡು ಮಕ್ಕಳು ಕೂಡ PhD ಯನ್ನು ಮಾಡಬೇಕಾದರೆ, ಪ್ರೊಫೆಸರ್‌ಗಳ ಮನೆಗೆ ಜೀತದಾಳುಗಳಾಗಿ ಅಡ್ಡಾಡಬೇಕು. ಅದನ್ನು ಅವರು ಹೇಳುವ ಹಾಗಿಲ್ಲ. ಪ್ರೊಫೆಸರ್‌ಗಳು ಹೇಳಿದ್ದನ್ನೆಲ್ಲಾ ತಂದು ಕೊಡಬೇಕು. ಅವರ ಮನೆಗೆ ಹೋಗಿ ಅವರ ಮನೆಯ ಕೆಲಸವನ್ನು ಮಾಡಬೇಕಾಗುತ್ತದೆ. ಕಡೆಗೆ ಎರಡು ವರ್ಷಗಳ ನಂತರ ಒಂದು PhD ಆ PhD ಯ dissertation ಗೆ certify ಮಾಡಬೇಕಲ್ಲಾ? ಶ್ರೀಮತಿ ಲೀಲಾರವರು ಸದನದಲ್ಲಿದ್ದಾರೆ. ಪ್ರೋಫೆಸರ್ ಅಗಿ ಬಹಳ ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಇಂತಹ ಪರಿಸ್ಥಿತಿಯನ್ನು ಕಣ್ಣಾರೆ ನೋಡಿಕೊಂಡಿದ್ದರೂ ಕೂಡ, ಪ್ರತಿ ದಿವಸ ಒಂದಲ್ಲ ಒಂದು ಶಾಲಾ–ಕಾಲೇಜಿನಲ್ಲಿ, ವಿಶ್ವವಿದ್ಯಾನಿಲಯದಲ್ಲಿ ಕಾಮುಖರನ್ನು ನೋಡುತ್ತಿರುವಂಥದ್ದು. ನೆನ್ನೆಯ ದಿವಸ ಟಿ.ವಿ.ಯಲ್ಲಿ ನೋಡಿದೆ. ಅವನ್ಯಾರೋ ಒಬ್ಬ ಪ್ರೊಫೆಸರ್ ಅಂತೆ, ಎರಡು ಹೆಣ್ಣು ಮಕ್ಕಳು, ಕಡೆಗೆ ಒಂದು ಹೆಣ್ಣು ಮಗಳು ಚಪ್ಪಲಿಯನ್ನು ತೆಗೆದುಕೊಂಡು ಹೊಡೆಯುವುದನ್ನು ನೋಡಿದೆ. ನಾನು ಇಂತಹವರನ್ನು ಒದ್ದು ಒದ್ದು ಕೆಳಗೆ ಹಾಕಬೇಕೆಂದು ಹೇಳುವವನು. ಇದೊಂದು ನಿದರ್ಶನವಲ್ಲ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಂದಿರುವಂಥದ್ದು ಆ ವೈಸ್ ಛಾನ್ಸಲರ್ ಇದ್ದರಲಾ ಅವರಿಗೆ ಗೊತ್ತಾದ ಮೇಲೆ ಅವರನ್ನು ಮೂರ್ನಾಲ್ಕು ದಿವಸದ ನಂತರ ಕರೆಯುತ್ತಾರಂತೆ, ಕರೆದು ಅವರ ಜೊತೆಯಲ್ಲಿ ಚರ್ಚೆ ಮಾಡಿಯಾದ

ಮೇಲೆ ‘Guide’ ಅನ್ನು ಬದಲಾವಣೆ ಮಾಡಿಕೊಡುತ್ತೇನೆಂದು ಹೇಳುತ್ತಾರೆ. ‘Guide’ ಅನ್ನು ಬದಲಾವಣೆ ಮಾಡುವಂಥದ್ದು ಉತ್ತರವೇ? ಆ ಒಂದು ಸಂಶೋಧನೆಯನ್ನು ಮಾಡುತ್ತಿರುವಂತಹ ಹೆಣ್ಣು ಮಗಳು, ಸೆಂಟ್ರಲ್ ಗೌರ್ನಮೆಂಟನಲ್ಲಿ 100 ಕೋಟಿ ರೂಪಾಯಿಗಳ Scholarship ಅಡಿಯಲ್ಲಿ ಕೆಲಸ ಮಾಡಿ, ಅಂತಹ ಒಂದು ಉತ್ತಮವಾದಂತಹ ಕೆಲಸವನ್ನು ಮಾಡುವಾಗ, ಅವಳು ಮಾನಸಿಕವಾಗಿ ಹಿಂಸೆಗೆ ಒಳಪಟ್ಟು ಅಲ್ಲಿಗೆ ಹೋಗಿ ಹೇಳಿದಾಗ, ವೈಸ್ ಛಾನ್ಸಲರ್‌ರವರು ಮಾಡಬೇಕಾದಂತಹ ಕೆಲಸವೇನು ಎಂಬುದನ್ನು ದಯವಿಟ್ಟು ಹೇಳಿ. ದಯವಿಟ್ಟು ಸಭಾ ನಾಯಕರು ತೆಗೆದುಕೊಳ್ಳಬೇಕು. ಎಲ್ಲರೂ ಆ ವಿಶ್ವವಿದ್ಯಾನಿಲಯಕ್ಕೆ ಹೋಗಬೇಕಾಗಿ ಕೇಳಬೇಕಾಗುತ್ತದೆ. ವೈಸ್ ಛಾನ್ಸಲರ್ ಆ ಪ್ರೊಫೆಸರ್‌ಗೆ ಆಂತರಿಕ ತನಿಖೆಯನ್ನು ಮಾಡಿಸಿ, 24 ಗಂಟೆಗಳ ಒಳಗೆ after an internal inquiry, he should have been kept under suspension. ವೈಸ್ ಛಾನ್ಸಲರ್ ಆ ಕೆಲಸವನ್ನು ಮಾಡಬೇಕಾಗಿತ್ತು. ಆ ಕೆಲಸವನ್ನು ಮಾಡುವುದರ ಬದಲು ಅವನು Guide ಅನ್ನು ಬದಲಾವಣೆ ಮಾಡಿ ಎಂದರೆ ಅದು ಪರಿಹಾರವಾಗುತ್ತದೆಯೇ. ಆ ಹೆಣ್ಣು ಮಗಳಿಗೆ ಹಿಂಸೆಯಾಗಿರುವುದರಿಂದ ಗಂಡನ ಜೊತೆಯಲ್ಲಿ ಹೋಗುತ್ತಾಳೆ. ಪಾಪ ಎರಡು ಚಿಕ್ಕ ಮಕ್ಕಳಿದ್ದಾರೆ. ಗಂಡನ ಜೊತೆಯಲ್ಲಿ ಬರಬೇಕಾದರೆ ನಿದ್ರೆಯ ಮಾತ್ರೆಗಳನ್ನು ತೆಗೆದುಕೊಂಡಳು. ಆ ಪರಿಸ್ಥಿತಿ ನಿರ್ಮಾಣವಾದರೆ, ಯಾರಿಗೆ ನಮ್ಮ ವಿಶ್ವವಿದ್ಯಾನಿಲಯಗಳ ಬಗ್ಗೆ ಗೌರವ ಬರುತ್ತದೆಂದು ಹೇಳಿ. ಈ ವಿಶ್ವವಿದ್ಯಾನಿಲಯಗಳು Terrorist centers ಅಗಿಬಿಟ್ಟಿದೆ. ಇದೇ ಪ್ರೊಫೆಸರ್‌ಗಳು, ಉಪನ್ಯಾಸಕರುಗಳು terrorist ಆಗಿ ಬಿಟ್ಟಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ತಮ್ಮ ಮುಖಾಂತರ ನಾನು ಉನ್ನತ ಶಿಕ್ಷಣ ಸಚಿವರನ್ನು ಕೇಳುವುದೇನೆಂದರೆ, ದಯವಿಟ್ಟು ಇದನ್ನು ತಡೆಗಟ್ಟುವುದಕ್ಕೆ ಅವರೊಬ್ಬರಿಂದ ಸಾಧ್ಯವಾಗುವುದಿಲ್ಲ. ನೀವೆಲ್ಲರೂ ಒಟ್ಟಾರೆ ಸೇರಿ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ, ಕಾಲೇಜುಗಳಲ್ಲಿ ಪ್ರೊಫೆಸರಗಳಿಂದ, ಉಪನ್ಯಾಸಕರುಗಳಿಂದ ವಿದ್ಯಾರ್ಥಿಗಳಿಗೆ ಅಗುತ್ತಿರುವಂತಹ ಹಿಂಸೆಯನ್ನು

ತಡೆಗಟ್ಟುವಂತಹ ಪರಿಶ್ಥಿತಿಯನ್ನು ನಿರ್ಮಾಣ ಮಾಡಿ. ಇಂತಹ ಕಾಮುಕರ ಮೇಲೆ ಕಟ್ಟು ನಿಟ್ಟಿನ ಕ್ರಮವನ್ನು ಕೈಗೊಳ್ಳದೇ ಹೋದರೆ, ಬಹುಶ: ಈ ರೀತಿಯ ವಿಚಾರಗಳು ಬಹಳಷ್ಟು ಅಗುತ್ತದೆ. ತಮ್ಮಿಂದಲೇ ಸರ್ಕಾರಕ್ಕೆ ಮಾರ್ಗದರ್ಶನ ಹೋಗಲಿ. ಅವರು ಇದರ ಬಗ್ಗೆ ವರದಿಯನ್ನು ತರಿಸಬೇಕಾಗುತ್ತದೆ. ಇದೊಂದೇ ಸಂಸ್ಥೆಯಿಂದಲ್ಲ. ಇಂತಹ ಹತ್ತಾರು ವಿಚಾರಗಳು ಹಲವಾರು ದಿನಗಳಿಂದ ವರದಿಯಾಗುತ್ತಲೇ ಇರುತ್ತದೆ. ಇದೆಲ್ಲವನ್ನಿಟ್ಟುಕೊಂಡು ಈ ಸಭೆಗೆ ಒಂದು ವರದಿಯನ್ನು ತರಿಸಲೇಬೇಕು. ಮತ್ತು ವಿಶ್ವವಿದ್ಯಾನಿಲಯದಲ್ಲಿ ಕೆಲವು ಪ್ರೊಫೆಸರುಗಳು ಬಹಳ ಗೌರವಾನ್ವಿತರಿದ್ದಾರೆ. ನಾವುಗಳು ಬಹಳ ಒಳ್ಳೆಯ ಪ್ರೊಫೆಸರ್‌ಗಳ ಜೊತೆಯಲ್ಲಿ ಕೆಲಸ ಮಾಡಿದ್ದೇವೆ. ಇನ್ನು ಕೆಲವರು ಇದ್ದಾರೆ. ಅವರುಗಳ ಜೊತೆಯಲ್ಲಿ ಕೆಲಸ ಮಾಡಿದವರೆಲ್ಲರೂ ಟೆರರಿಸ್ಟ್‌ಗಳೇ ಆಗುವುದು, ಬಾಕಿ ಏನು ಅಗುವುದಿಲ್ಲ. ಲೈಂಗಿಕ ಕಾಮಿಗಳಾಗುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಶಾಲಾ ಕಾಲೇಜುಗಳಿಗೆ ಹೋಗುವಂತಹ ಹೆಣ್ಣು ಮಕ್ಕಳುಗಳನ್ನು ಮಾರಾಟದ ವಸ್ತುಗಳೆಂದು ತಿಳಿದುಕೊಂಡು ಬಿಟ್ಟಿದ್ದಾರೆ. ದಯವಿಟ್ಟು ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕು.

**ಶ್ರೀ ಎಸ್.ಆರ್. ಪಾಟೀಲ್:–** (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಮಾನ್ಯ ಸಭಾಪತಿಯವರೇ, ಶಿಕ್ಷಕರು ಎನ್ನುವವರು ರಾಷ್ಟ್ರದ ರೂವಾರಿಗಳೆಂದೆ ನಿಸಿಕೊಳ್ಳುತ್ತಾರೆ. ಈ ರಾಷ್ಟ್ರದ ಆಡಳಿತ ಸೂತ್ರ ಹಿಡಿದವರಾಗಲಿ, ರಾಜ್ಯದ ಆಡಳಿತ ಸೂತ್ರ ಹಿಡಿದವರಾಗಲಿ ಅವರೆಲ್ಲರಿಗೂ ಆಗದೇ ಇರುವಂತಹ ಕೆಲಸ ಈ ರಾಷ್ಟ್ರ ರೂವಾರಿಗಳಿಂದ, ಶಿಕ್ಷಕರುಗಳಿಂದ ಈ ನಾಡು, ರಾಷ್ಟ್ರ ಅಭಿವೃದ್ಧಿ ಹೊಂದುವುದಕ್ಕೆ ಸಾಧ್ಯವಿದೆ ಎನ್ನುವ ಭಾವನೆ ಇರುವಂತಹ ಸಂದರ್ಭದಲ್ಲಿ, ಅತ್ಯಂತ ಪವಿತ್ರವಾಗಿರುವಂತಹ ಪ್ರಾಧ್ಯಾಪಕರ ಹುದ್ದೆಯಲ್ಲಿರತಕ್ಕಂತಹ ಇಂತಹ ಒಂದು ಕೀಳು ಮಟ್ಟದ ಕಾಮುಕ ವ್ಯವಸ್ಥೆಗೆ ಒಳಗಾದರೆ, 'ಬೇಲಿಯೇ ಇದ್ದು ಹೊಲ ಮೇಯ್ದು ಹಾಗೆ' ಎಂದೆನಿಸುತ್ತದೆ. ಆ ದೃಷ್ಟಿಯಿಂದ ಇವತ್ತು ಆ ಮಹಿಳೆ, ಅದರಲ್ಲಿಯೂ ಮದುವೆಯಾಗಿ ಎರಡು ಮಕ್ಕಳನ್ನು ಹೊಂದಿರುವಂತವಳು, ಪತಿಯ ಜೊತೆಯಲ್ಲಿ ಇರಬೇಕಾದಂತವಳು

ತೊಂದರೆಗೊಳಗಾಗಿ ನಿದ್ರೆ ಗುಳಿಗೆಯನ್ನು ತೆಗೆದುಕೊಂಡು ಆತ್ಮಹತ್ಯೆ ಮಟ್ಟಕ್ಕೆ ಬಂದಿದೆ ಎಂದರೆ, ಇಂಥದ್ದು ಕೇವಲ ಇದೊಂದು ವಿಶ್ವವಿದ್ಯಾನಿಲಯಕ್ಕೆ ಸೀಮಿತವಾಗಿದೆ ಎಂದು ನಾನು ಹೇಳುವುದಿಲ್ಲ. ಪ್ರಾಥಮಿಕ ಶಾಲಾ ಶಿಕ್ಷಕರಿಂದ ಹಿಡಿದು, ವಿಶ್ವವಿದ್ಯಾನಿಲಯದ ಮಟ್ಟದವರೆಗೂ ಇಂತಹ ಘಟನೆಗಳು ನಡೆಯುತ್ತದೆ. ಇಡೀ ರಾಷ್ಟ್ರದ ಜನ ಮತ್ತು ಇಡೀ ಪ್ರಪಂಚವೇ ಶಿಕ್ಷಕರ ಬಗ್ಗೆ ಬಹಳ ಗೌರವ ಮತ್ತು ಅಭಿಮಾನವನ್ನು ಇಟ್ಟುಕೊಂಡಿದ್ದಾರೆ. ಶಿಕ್ಷಕರಿಗೆ ನಾವು ತಲೆಬಾಗುತ್ತೇವೆ. ಅವರು ನಮಗೆ ನಾಲ್ಕು ಅಕ್ಷರವನ್ನು ಕಲಿಸಿದ್ದಕ್ಕೆ ನಾನು ಇವತ್ತು ವಿಧಾನ ಪರಿಷತ್ತಿನ ಸದಸ್ಯನಾಗಿಯೂ ಕೂಡ ಕೆಲಸ ಮಾಡುವುದಕ್ಕೆ ಸಾಧ್ಯವಾಯಿತು. ತಾವು ಸಹ ಸಭಾಪತಿಯಾಗಿ ಆ ಪೀಠವನ್ನು ಅಲಂಕರಿಸಿದ್ದೀರಿ. ಅತ್ಯಂತ ಪವಿತ್ರವಾದಂತಹ ಹುದ್ದೆಯಲ್ಲಿರತಕ್ಕಂಥವರು ರಾಷ್ಟ್ರದ ರೂವಾರಿಗಳೆಂದು ಅನ್ನಿಸಿಕೊಳ್ಳುವವರು ಕಾಮುಕ ದಂಧೆಗೆ ಇಳಿದರೆ, ಇವತ್ತು ಈ ದೇಶವನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ನಾಳೆ ದಿವಸ ಸತ್ವಶಾಲಿ, ಜವಾಬ್ದಾರಿಯುತವಾದಂತಹ ನಾಗರೀಕರನ್ನು ತಯಾರು ಮಾಡುವಂತಹ ಗುರುತರವಾದಂತಹ ಜವಾಬ್ದಾರಿಯನ್ನು ಹೆಗಲ ಮೇಲೆ ಹೊತ್ತಂತಹ ಈ ಶಿಕ್ಷಕ ವೃಂದ ಇಂತಹ ಕಾಮುಕ ಅತ್ಯಂತ ಹೀನವಾದಂತಹ ಕೃತ್ಯಕ್ಕೆ ಇಳಿದಿರುವಂಥವರ ಮೇಲೆ ತಕ್ಷಣ ಕ್ರಮ ಜರುಗಿಸಬೇಕು.

**ಶ್ರೀಮತಿ ಭಾರತಿಶೆಟ್ಟಿ (ವಿಧಾನಸಭಾ ಕ್ಷೇತ್ರ):** ಸನ್ಮಾನ್ಯ ಸಭಾಪತಿಯವರೇ, ನೆನ್ನೆಯಷ್ಟೇ ನಡೆದಂತಹ ಘಟನೆಯ ಬಗ್ಗೆ ಈಗಾಗಲೇ ಈ ಸದನದ ಅನೇಕ ಸದಸ್ಯರು ಬೆಳಕನ್ನು ಚೆಲ್ಲಿದ್ದಾರೆ. ಇವರು ಕೇವಲ ಪ್ರೊಫೆಸರ್ ಅಷ್ಟೇ ಅಲ್ಲ, ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥರು ಕೂಡ ಹೌದು. ಹೀಗಾಗಿ ಇವರು ಪ್ರೊಫೆಸರ್‌ಗಿಂತ ಒಂದು ಅಂಶ ಹೆಚ್ಚಿನವರು ಎಂದು ಹೇಳಬಹುದು. ಇಂತಹ ಒಂದು ಉನ್ನತ ಸ್ಥಾನದಲ್ಲಿದ್ದವರೇ ಈ ರೀತಿ ನಡೆದುಕೊಂಡಿರುವುದರಿಂದ 'ಬೇಲಿಯೇ ಎದ್ದು ಹೊಲವನ್ನು ಮೇದಂತಾಗಿದೆ'. ಅಷ್ಟು ಮಾತ್ರವಲ್ಲದೆ ಆ ಹೆಣ್ಣುಮಗಳು ತನಗೆ ನೀಡಲಾಗುತ್ತಿದ್ದ ಕಿರುಕುಳದ ಬಗ್ಗೆ ಸುಮಾರು ಮೂರು ತಿಂಗಳ ಹಿಂದೆಯೇ ಕುಲಪತಿಯವರಿಗೆ ದೂರು ಸಲ್ಲಿಸಿದ್ದರೂ ಸಹ ಆ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಸಮಸ್ಯೆಗೆ ಪರಿಹಾರ ಸಿಗುವುದಕ್ಕೆ ಬದಲಾಗಿ ಆ

ಕಿರುಕುಳ ಇನ್ನೊಂದು ಹೆಜ್ಜೆ ಮುಂದೆ ಹೋಗಿದೆ, ಅಂದರೆ ಈ ಪ್ರೊಫೆಸರ್ ಆಕೆಯ ಮನೆಗೆ ಹೋಗುತ್ತಾರೆ. ಎಂದರೆ ನಮ್ಮ ಒಂದು ಕಾನೂನಿನಲ್ಲಿ ಈ ರೀತಿ ಆಗುವಂತಹ ಘಟನೆಗಳಿಗೆ ಎಷ್ಟು loopholes ಇವೆ ಎಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಇದು ಕೇವಲ ಪ್ರೌಢ ಮಹಿಳೆಗೆ ಆದಂತಹ ಒಂದು ಕಿರುಕುಳ. ಇಂತಹ ಕಿರುಕುಳ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಮಕ್ಕಳು, ವಯಸ್ಸಿಗೆ ಬಂದ ಹುಡುಗಿಯರಿಂದ ಹಿಡಿದು ಪ್ರತಿಯೊಂದು ಹಂತದ ಮಹಿಳೆಯರು ಈ ರೀತಿಯ ಕಿರುಕುಳವನ್ನು ಎದುರಿಸುತ್ತಿದ್ದಾರೆ. ಈ ರೀತಿಯ ಘಟನೆಗಳು ದಿನೇದಿನೇ ಹೆಚ್ಚಾಗುತ್ತಿವೆಯೇ ಹೊರತು ಕಡಿಮೆಯಾಗುತ್ತಿಲ್ಲ. ಇಂತಹ ಘಟನೆಗೆ ಒಳಗಾದವರು ಪತ್ರಿಕೆ, ದೂರದರ್ಶನ ಇಂತಹ ಮಾಧ್ಯಮಗಳ ಮುಂದೆ ಬರಲು ಹೆದರುತ್ತಾರೆ. ಏಕೆಂದರೆ ಈ ರೀತಿಯ ಕಿರುಕುಳಕ್ಕೆ ಒಳಗಾದ ನಮ್ಮನ್ನು ಸಮಾಜದಲ್ಲಿ ಬೇರೆಯವರು ಯಾವ ರಿತಿ ನೋಡಬಹುದು ಎನ್ನುವಂತಹ ಮನ:ಸ್ಥಿತಿ ಇರುವುದರಿಂದ ನಮಗೆ ಗೊತ್ತಿಲ್ಲದೆಯೇ ಕೆಲವು ಬೆರಳೆಣಿಕೆಯಷ್ಟು ಘಟನೆಗಳು ಮಾತ್ರ ಮಾಧ್ಯಮದಲ್ಲಿ ವರದಿಯಾಗುತ್ತವೆ. ಅನೇಕ ಘಟನೆಗಳಲ್ಲಿ ಸ್ವತ: ಕಿರುಕುಳವನ್ನು ಅನುಭವಿಸಿದಂತಹ ಅನೇಕ ಹೆಣ್ಣುಮಕ್ಕಳು ನಮ್ಮ ಮುಂದೆ ಈ ವಿಚಾರವನ್ನು ಹೇಳುತ್ತಾರೆ. ಹೀಗಾಗಿ ನಾವು ಅಲ್ಲಲ್ಲಿಯೇ ಮಾತನಾಡಿ ಬಗೆಹರಿಸಬೇಕಾಗುತ್ತಿದೆ. ಪತ್ರಿಕೆಗಳಿಗೆ ಹೋಗುವುದು ಬೇಡ, ಪೊಲೀಸ್ ಠಾಣೆಗೆ ಹೋಗುವುದು ಬೇಡ, ಈ ರೀತಿಯ ವಿಷಯವನ್ನು ಹೇಳುತ್ತಿದ್ದಾರೆ. ನನಗೆ ಅನಿಸುವುದೇನೆಂದರೆ ಇದು ಕೇವಲ ಉನ್ನತ ಶಿಕ್ಷಣ ಸಚಿವರಿಂದ ಬಗೆಹರಿಸುವಂತಹ ಸಮಸ್ಯೆಯಲ್ಲ. ಆದ್ದರಿಂದ ಸಂಬಂಧಪಟ್ಟ ಕಾನೂನಿಗೆ ತಿದ್ದುಪಡಿಯನ್ನು ತರಬೇಕಾದಂತಹ ಅಗತ್ಯತೆ ಕೂಡ ಇದೆ. ಏಕೆಂದರೆ ಹೆಣ್ಣುಮಗಳೊಬ್ಬಳ ಮೇಲೆ ಅತ್ಯಾಚಾರ ನಡೆದರೆ ಆರೋಪಿಗೆ ಜೀವಾವಧಿ ಅಥವಾ ಮರಣದಂಡನೆ ಶಿಕ್ಷೆಯನ್ನೇ ವಿಧಿಸಬಹುದು, ಆದರೆ ಅತ್ಯಾಚಾರಕ್ಕೊಳಗಾದ ಹೆಣ್ಣುಮಗಳು ಸತ್ತು ಹೋದರೆ ಪರವಾಗಿಲ್ಲ, ಒಂದು ವೇಳೆ ಆ ಹೆಣ್ಣುಮಗಳು ಬದುಕಿದರೆ ಸಾಯುವವರೆಗೆ ಚಿತ್ರಹಿಂಸೆ ಅನುಭವಿಸುವಂತಹ ಒಂದು ಕೃತ್ಯ ಆಕೆಯ ಮೇಲಾಗಿರುತ್ತದೆ. ಆದ್ದರಿಂದ

ನಾವಿಲ್ಲಿ ಇವೊತ್ತು ಈ ವಿಷಯದ ಬಗ್ಗೆ ಚರ್ಚೆ ಮಾಡುವುದಷ್ಟೆ ಅಲ್ಲದೆ ಸಂಬಂಧಪಟ್ಟ ಕಾನೂನಿಗೆ ಸೂಕ್ತ ತಿದ್ದುಪಡಿಯನ್ನು ಸಹ ತರಬೇಕಾಗುತ್ತದೆ. ಲೈಂಗಿಕ ಕಿರುಕುಳ ಅಥವಾ ಅತ್ಯಾಚಾರ ಮಾಡಿದಂತಹ ವ್ಯಕ್ತಿಗೆ ಕೇವಲ ಮರಣದಂಡನೆ, ಜೀವಾವಧಿ ಅಥವಾ 5 ವರ್ಷಗಳ ಶಿಕ್ಷೆ ಅಷ್ಟು ಮಾತ್ರವಲ್ಲದೆ ಅವರ ಕೈಕಾಲುಗಳನ್ನು ತುಂಡರಿಸಿ ಸಮಾಜಕ್ಕೆ ಬಿಡಬೇಕು, ಅವಾಚ್ಯ ಶಬ್ದಗಳನ್ನು ಮಾತನಾಡಿದಂತಹ ಅವರ ನಾಲಿಗೆಯನ್ನು ಕತ್ತರಿಸಿ ಅವರಿಗೆ ಮುಂದೆ ಮಾತನಾಡುವುದಕ್ಕಾಗದಂತೆ ಮಾಡಬೇಕು. ಇಂತಹ ಒಂದು ಕಠಿಣವಾದ ಶಿಕ್ಷೆಯನ್ನು ಕೊಟ್ಟರೆ ಆ ಮನುಷ್ಯ ಮತ್ತೊಮ್ಮೆ ಅಂತಹ ತಪ್ಪನ್ನು ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲವಾದರೆ ಈ ಕಾನೂನಿನಲ್ಲಿ ಇದಕ್ಕೆ ಏನು ಶಿಕ್ಷೆಯನ್ನು ವಿಧಿಸಿದ್ದೀರಿ ಅದರಿಂದ ಯಾರಿಗೂ ಭಯ ಬರುವುದಿಲ್ಲ. ಹೀಗಾಗಿ ಇಂತಹ ಘಟನೆಗಳು ಪುನರಾವರ್ತನೆಗೊಳ್ಳುತ್ತಿರುತ್ತವೆ, ಇದಕ್ಕೆ ಅಂತ್ಯವೆಂಬುದೇ ಇಲ್ಲದಂತಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಕಾನೂನಿಗೆ ಸೂಕ್ತವಾದಂತಹ ತಿದ್ದುಪಡಿಯನ್ನು ತಂದು ಕಾನೂನು ಇಲಾಖೆ ಹಾಗೂ ಶಿಕ್ಷಣ ಇಲಾಖೆ ಎರಡು ಇಲಾಖೆಗಳಿಂದಲೂ ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

ಮಾನ್ಯ ಸಭಾಪತಿಯವರೇ, ನೆನ್ನೆ ನಡೆದಿರುವಂತಹ ಈ ಘಟನೆಗೆ ಸಂಬಂಧಿಸಿದಂತೆ ಹೇಳುವುದಾದರೆ ಕುಲಪತಿಯವರಿಗೆ ದೂರನ್ನು ಕೊಟ್ಟರೂ ಕೂಡ ಆ ವ್ಯಕ್ತಿ ಮತ್ತೆ ಆಕೆಯ ಮನೆಗೆ ಹೊಗುತ್ತಾನೆ ಎಂದರೆ ಇದು ಎಂತಹ ಉದ್ಧಟತನದ ವರ್ತನೆಯಲ್ಲವೆ? ಈಗಾಗಲೇ ಮಾನ್ಯ ನಾಣಯ್ಯನವರು ತಿಳಿಸಿರುವಂತೆ ಇಂತಹ ತಪ್ಪಿತಸ್ಥರನ್ನು ಸಸ್ಪೆಂಡ್ ಮಾಡಿದರೆ ಅದರಿಂದ ಯಾವುದೇ ಪ್ರಯೋಜನವಿಲ್ಲ. ಆ ರೀತಿ ಮಾಡಿದರೆ ಆತ ಯಾರಿಂದಲಾದರೂ ಪ್ರಭಾವ ತಂದು ಇನ್ನೊಬ್ಬರ ಹತ್ತಿರ ಏನೋ ಒಂದು ಕತೆ ಹೇಳಿ ಯಾವುದಾದರೂ ಇನ್ನೊಂದು ಕಾಲೇಜಿಗೆ ವರ್ಗಾವಣೆ ಪಡೆಯುತ್ತಾನೆ. ಆದ್ದರಿಂದ ಇನ್ನು ಮುಂದೆ ಶಿಕ್ಷಣವನ್ನು ನೀಡುವಂತಹ ಅವಕಾಶವನ್ನೇ ಆತನಿಗೆ ಕೊಡಬಾರದು. ಆ ಪ್ರೊಪೇಸರ್ ಇನ್ನು ಮುಂದೆ ಮನೆಯಲ್ಲಿಯೇ ಕುಳಿತಿರಲಿ, ಕೂಲಿ ಮಾಡಲಿ. ಇಂತಹ ಒಂದು ಕಠಿಣ ಶಿಕ್ಷೆಯನ್ನು ಕೊಡಬೇಕು. ಈ ಪ್ರೊಫೆಸರ್‌ಗೆ ಯಾವುದೇ ಕಾಲೇಜಿಗೆ ಹೋಗಿ ಉಪನ್ಯಾಸ

ಕೊಡುವಂತಹ ಒಂದು ಅವಕಾಶ ಕೊಡಬಾರದು. ಈ ರೀತಿ ನಡೆದುಕೊಂಡರೆ ಮುಂದೆ ಅವರು ತಮ್ಮ ಜೀವಮಾನಪೂರ್ತಿ ತಮ್ಮ ಪ್ರೊಫೆಸರ್ ಉದ್ಯೋಗವನ್ನೇ ಕಳೆದುಕೊಳ್ಳುವಂತಹ ಪರಿಸ್ಥಿತಿ ಬರುತ್ತದೆ ಎನ್ನುವಂತಹ ಹೆದರಿಕೆಯಿಂದ ಸ್ವಲ್ಪವಾದರೂ ಇಂತಹ ಘಟನೆಗಳು ಕಡಿಮೆಯಾಗಬಹುದು ಎನ್ನುವುದು ನನ್ನ ಅನಿಸಿಕೆ. ಆದ್ದರಿಂದ ಈ ನಿಟ್ಟಿನಲ್ಲಿ ಕೂಡ ಸರ್ಕಾರ ಯೋಚನೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳಿಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ವೈದ್ಯರು ಮತ್ತಿತರನ್ನೆಲ್ಲಾ ಕರೆಸಿ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗುವಂತಹ ರೀತಿಯಲ್ಲಿ ಈ ಕಾನೂನಿಗೆ ತಿದ್ದುಪಡಿಯನ್ನು ತರಬೇಕು.

**ಶ್ರೀಮತಿ ವಿಮಲಾ ಗೌಡ (ಉಪಸಭಾಪತಿಯವರು):–** ಸನ್ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಪ್ರಸ್ತಾಪ ಮಾಡಿರುವಂತೆ ನಿನ್ನೆಯ ದಿವಸ ದೂರದರ್ಶನದ ಎಲ್ಲ ಚಾನಲ್‌ಗಳಲ್ಲಿ ಈ ಪ್ರಕರಣದ ಬಗ್ಗೆ ವರದಿಯಾಗುತ್ತಿದ್ದಾಗ ನನಗಂತೂ ಬಹಳ ನೋವಾಯಿತು. ಕಳೆದ ವರ್ಷ, "ಅಂತರರಾಷ್ಟ್ರೀಯ ಮಹಿಳಾ ವರ್ಷದ" ದಿನದಂದು ಕಾರ್ಮಿಕ ಇಲಾಖೆಯಲ್ಲಿನ ಇಂಥದ್ದೇ ಒಂದು ಪ್ರಕರಣದ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನು. ಕಾರ್ಮಿಕ ಇಲಾಖೆಯಲ್ಲಿ ಹೆಣ್ಣುಮಗಳೊಬ್ಬಳಿಗೆ ನೀಡಲಾಗುತ್ತಿದ್ದ ಲೈಂಗಿಕ ಕಿರುಕುಳದ ಬಗ್ಗೆ ನಮ್ಮ ಮೇಲ್ಮನೆಯಲ್ಲಿಯೇ ಪ್ರಸ್ತಾಪ ಮಾಡಿದ ನಂತರ ಆ ಹೆಣ್ಣುಮಗಳಿಗೆ ನ್ಯಾಯ ಸಿಕ್ಕಿತು. ನಾಳೆ ಕೂಡ ಅಂತರ ರಾಷ್ಟ್ರಿಯ ಮಹಿಳಾ ದಿನಾವಾಗಿದ್ದು ಅದು 100ನೇ ವರ್ಷಕ್ಕೆ ಕಾಲಿಡುತ್ತಿದೆ. ಇಂತಹ ಸಂದರ್ಭದಲ್ಲಿ ನಿನ್ನೆಯ ದಿವಸ ವಿದ್ಯೆ ಕಲಿಸುವಂತಹ ಗುರುವೇ ಇಂತಹ ಕೆಲಸವನ್ನು ಮಾಡಿದ್ದಾರೆ. 'ಗುರುದೇವೋಭವ' ಎಂದು ನಾವು ಹೇಳುತ್ತೇವೆ. ಗೌರವಾನ್ವಿತ ಕುಟುಂಬದಿಂದ ಬಂದಂತಹ ಆ ಹೆಣ್ಣುಮಗಳು ಎರಡು ಮಕ್ಕಳ ತಾಯಿ ಕೂಡಹೌದು. ಆಕೆ ಅರೆಕಾಲಿಕ ಉಪನ್ಯಾಸಕಿಯಾಗಿ ಕೆಲಸಮಾಡುತ್ತಿದ್ದು ಪಿ.ಎಚ್.ಡಿ. ಮಾಡಿ, ಸಂಶೋಧನೆ ಮಾಡಿ ಡಾಕ್ಟರೇಟ್ ಪದವಿಯನ್ನು ಪಡೆದು ಮುಂದೆ ಒಳ್ಳೆಯ ಸ್ಥಾನಕ್ಕೆ ಹೋಗಬೇಕೆಂಬ ಆಸೆ ಇಟ್ಟುಕೊಂಡಿದ್ದವಳು.

ಇಂತಹ ಆಸೆ ಎಲ್ಲರಿಗೂ ಇರುತ್ತದೆ. ಆ ಹೆಣ್ಣುಮಗಳ ಗಂಡ ಕೂಡ ಡಾಕ್ಟರ್. ಆಕೆ ಈ ಪ್ರೊಫೆಸರ್ ತನಗೆ ಮೊದಲಿನಿಂದಲೂ ಕಿರುಕುಳ ನೀಡುತ್ತಿದ್ದರು ಎನ್ನುವಂತಹ ವಿಚಾರವನ್ನು ಈ ಮೊದಲೇ ಕುಲಪತಿಗಳ ಗಮನಕ್ಕೆ ತಂದಿದ್ದಾಳೆ, ಅವರ ಹೆಸರನ್ನು ಕೇಳಿದ ನಂತರ ನನಗೆ ಬಹುಶ: ಈ ಕುಲಪತಿಗಳು ಈ ಹಿಂದೆ ಟೆಕ್ನಿಕಲ್ ಬೋರ್ಡ್‌ನಲ್ಲಿ ಸಹ ಇದ್ದರು ಎನಿಸುತ್ತಿದೆ. ಅವರು ಟೆಕ್ನಿಕಲ್ ಬೋರ್ಡ್‌ನಲ್ಲಿದ್ದಾಗಲೇ ಅವರ ಬಗ್ಗೆ ಬಹಳ ದೂರುಗಳಿದ್ದವು. ನಾನೇ ಆಗಿನ ಸಚಿವರಲ್ಲಿ ಆ ಬಗ್ಗೆ ಮಾತನಾಡಿದ್ದೆ. ಆ ಕುಲಪತಿಗಳು ವಿಶ್ವವಿದ್ಯಾನಿಲಯಕ್ಕೇ ದೊಡ್ಡವರು, ಅಂತಹವರೇ ಈ ವಿಚಾರದಲ್ಲಿ ನಿನ್ನದೇನೋ ತಪ್ಪಿರಬೇಕು ಎಂದರೆ, ಆ ಹೆಣ್ಣುಮಗಳ ಚಾರಿತ್ರ್ಯದ ಬಗ್ಗೆ ಸರ್ಟಿಫಿಕೇಟ್ ಕೊಡುವುದಕ್ಕೆ ಇವರು ಯಾರು? ಅದು ಕುಲಪತಿಗಳ ಕೆಲಸವೇ? ಯಾವುದೇ ವಿಷಯದಲ್ಲಿ ದೂರು ಕೊಟ್ಟಾಗ ಯಾವುದು ಸರಿ, ಯಾವುದು ತಪ್ಪಿದೆ ಎಂಬುದನ್ನು ವಿವೇಚಿಸಿ ಆ ಪ್ರೊಫೆಸರನ್ನು ಕರೆಸಿ ವಿಚಾರಣೆ ಮಾಡಿ ಅವರಿಗೆ ತಾಕೀತು ಮಾಡಿದ್ದರೆ ಇವೊತ್ತು ಈ ಪ್ರಕರಣ ನಡೆಯುತ್ತಿತ್ತೇ? ಆ ಹೆಣ್ಣುಮಗಳು ನಿದ್ರೆ ಗುಳಿಗೆಗಳನ್ನು ಸೇವಿಸುತ್ತಿದ್ದಳೇ? ಆ ಹೆಣ್ಣುಮಗಳು ತನ್ನ ಮಗುವಿಗೆ ಆರೋಗ್ಯ ಸರಿಯಿಲ್ಲ ಎಂದು ನೆಪ ಮಾಡಿ ರಜೆ ಹಾಕಿದಾಗ ಆಕೆಯ ಮನೆಗೆ ಹೋಗಿ ಆಕೆಯ ಕೈಹಿಡಿದು ನಿನ್ನ ಗಂಡ ಪಾರ್ಟಿ ಕೊಟ್ಟಿದ್ದಾರೆ, ಪಾರ್ಟಿಗೆ ಅದು ಮುಗಿದುಹೋಗುವುದಿಲ್ಲ, ನೀನು ನನ್ನ ಆಸೆಯನ್ನು ತೀರಿಸಬೇಕಾಗುತ್ತದೆ ಎನ್ನುವಂತಹ ಮಾತುಗಳನ್ನು ಹೇಳಿ ಮಾನಸಿಕವಾಗಿ ಕೂಡ ಕಿರುಕುಳ ನೀಡಿದ್ದಾನೆ. ಲೈಂಗಿಕ ದೌರ್ಜನ್ಯದಲ್ಲಿ ಮಾನಸಿಕ ಕಿರುಕುಳ ಹಾಗೂ ದೈಹಿಕ ಕಿರುಕುಳ ಎರಡೂ ಇವೆ. ದ್ವಂದ್ವಾರ್ಥಗಳನ್ನು ನೀಡುವಂತಹ ಮಾತುಗಳನ್ನಾಡುವುದು ಮಾನಸಿಕ ಕಿರುಕುಳವಾಗುತ್ತದೆ. ಈ ಎಲ್ಲ ವಿಚಾರಗಳನ್ನು ಸಹ ಆ ಹೆಣ್ಣುಮಗಳ ಕಡೆಯವರು ಬಂದು ನನನ್ನೊಡನೆ ಹೇಳಿಕೊಂಡಿದ್ದಾರೆ. ನಾನು ಆ ಎಲ್ಲ ಮಾತುಗಳನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಈ ರೀತಿ ದ್ವಂದ್ವಾರ್ಥಗಳನ್ನು ಕೊಡುವಂತಹ ಮಾತುಗಳನ್ನು ಪ್ರತಿ ಸಲವೂ ಆಡುತ್ತಿದ್ದರೆ ಆ ಹೆಣ್ಣು ಮಗಳ ಮಾನಸಿಕ ಸ್ಥಿತಿ ಹೇಗಿರಬಹುದು ತಾವೇ ಯೋಚಿಸಬೇಕು.

ಹೆಣ್ಣು ಮಕ್ಕಳು ಎಂದರೆ ಇವರು ಭೋಗದ ವಸ್ತುಗಳೆಂದು ತಿಳಿದುಕೊಂಡಿದ್ದಾರೆಯೇ?

ಇವೊತ್ತು ಪತ್ರಿಕೆಯನ್ನು ತೆಗೆದು ನೋಡಿದರೆ ಬೆಂಗಳೂರಿನ ಪ್ರೊಫೆಸರ್ ಮೂರು ವರ್ಷದ ಹಿಂದೆ ಪಿ.ಎಚ್.ಡಿ. ಮಾಡುವುದಕ್ಕೆ ಬಂದಂತಹ ವಿದ್ಯಾರ್ಥಿನಿಯನ್ನು ಕದ್ದುಮುಚ್ಚಿ ಮದುವೆಯಾಗಿದ್ದಾನೆ. ಬೇರೆ ಕಡೆ ಸಂಸಾರ ಮಾಡುತ್ತಿದ್ದಾನೆ. ಆ ವಿಷಯ ಪ್ರೊಫೆಸರ್ ಹೆಂಡತಿಗೆ ಗೊತ್ತಾಗಿ ಆಕೆ ಅವರಿದ್ದ ಮನೆಗೆ ಹೋಗಿ ಅವರಿಬ್ಬರಿಗೂ ಪೊರಕೆ, ಚಪ್ಪಲಿಯಿಂದ ಥಳಿಸಿದ್ದಾಳೆ. ಮದುವೆಯಾದ ಮೊದಲ ಹೆಂಡತಿಗೆ ಆ ಪ್ರೊಫೆಸರ್ ನೀನು ನೋಡುವುದಕ್ಕೆ ಚೆನ್ನಾಗಿಲ್ಲ, ನನಗಿಷ್ಟ ಇಲ್ಲ. ನಿನ್ನನ್ನು ಹೊರಗಡೆ ಕರೆದುಕೊಂಡು ಹೋಗುವುದಕ್ಕಾಗುವುದಿಲ್ಲ ಎಂದು ಹೇಳುತ್ತಾನಂತೆ. ಆತ ಇನ್ನೆಂತಹ ಮನುಷ್ಯ ಇರಬೇಕು? ಹೆಂಡತಿಯಾದವಳು ಇವನ ಬಗ್ಗೆ ಅದೇ ಮಾತುಗಳನ್ನಾಡಿದರೆ ಏನಾಗುತ್ತದೆ?

ಮಾನ್ಯ ಸಭಾಪತಿಯವರೇ, ನಾನು ಸದನದ ಒಳಗಡೆ ಬರುತ್ತಿದ್ದಂತಹ ಸಂದರ್ಭದಲ್ಲಿ ಜನಶ್ರೀ ವಾಹಿನಿಯವರು ನನ್ನನ್ನು ನಿಲ್ಲಿಸಿ ಒಂದು ಪ್ರಕರಣದ ಬಗ್ಗೆ ಹೇಳಿದರು. ಮಡಿವಾಳದಲ್ಲಿ ಒಂದು ಕೊಠಡಿಯಲ್ಲಿ ಚಿಂದಿ ಆಯುವಂತಹ ಇಬ್ಬರು ಯುವತಿಯರನ್ನು ಎಳೆದುಕೊಂಡು ಹೋಗಿ ಗೂಂಡಾಗಳು ಕೊಠಡಿಯೊಂದರಲ್ಲಿ ಕೂಡಿಹಾಕಿ ಕೈಕಾಲುಗಳಿಗೆ ಸುಮಾರು ಐದು ಕೆ.ಜಿ. ತೂಕದ ಸರಪಳಿಗಳನ್ನು ಹಾಕಿದ್ದರಂತೆ. ಈ ವಿಷಯ ತಿಳಿದ ಜನಶ್ರೀ ವಾಹಿನಿಯವರು ಪ್ಲಾನ್ ಮಾಡಿ ಅಲ್ಲಿಗೆ ಹೋಗಿ ಆ ಯುವತಿಯರನ್ನು ಬಿಡುಗಡೆಗೊಳಿಸಿ ಆ ಬಗ್ಗೆ ಪೊಲೀಸ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ನಮ್ಮ ಸಮಾಜದಲ್ಲಿ ಏನು ನಡೆಯುತ್ತಿದೆ? ವಿದ್ಯಾವಂತ ಗೌರವಾನ್ವಿತ ಕುಟುಂಬದಲ್ಲಿರುವಂತಹ ಹೆಣ್ಣುಮಕ್ಕಳಿಂದ ಹಿಡಿದು ವಿಶ್ವವಿದ್ಯಾ ನಿಯದಿಂದ ಹಿಡಿದು ಚಿಂದಿ ಆರಿಸುವ ಮಕ್ಕಳವರೆಗೆ ಈ ಲೈಂಗಿಕ ದೌರ್ಜನ್ಯ ನಡೆಯುತ್ತಲೇ ಇದ್ದರೆ, ಹೆಣ್ಣುಮಕ್ಕಳನ್ನು ಬೇರೆ ಬೇರೆ ಉದ್ದೇಶಗಳಿಗೆ ಬಳಸಿಕೊಳ್ಳುವುದೇ ಆದರೆ ಮುಂದೆ ಈ ಸಮಾಜದ ಗತಿಯೇನು? 'ಮಾತೃದೇವೋಭವ' ಎಂದು ಹೇಳುತ್ತೇವೆ, ಆದರೆ ಇವೊತ್ತು ಸಮಾಜದಲ್ಲಿ

ನಡೆಯುತ್ತಿರುವುದೇನು? ನಾನು ಈಗಾಗಲೇ ಉಲ್ಲೇಖ ಮಾಡಿರುವಂತೆ ಇದೇ ಮೇಲ್ಮನೆಯಲ್ಲಿ ಕಳೆದ ವರ್ಷ ಮಹಿಳಾದಿನಾಚರಣೆಯ ದಿವಸವೇ ವಿಷಯ ವನ್ನು ಪ್ರಸ್ತಾಪ ಮಾಡಿ ಕಾರ್ಮಿಕ ಇಲಾಖೆಯ ಅಧಿಕಾರಿಯೊಬ್ಬರಿಂದ ಹೆಣ್ಣುಮಗಳೊಬ್ಬಳಿಗೆ ಆಗುತ್ತಿದ್ದಂತಹ ಕಿರುಕುಳದ ಬಗ್ಗೆ ಪ್ರಸ್ತಾಪ ಮಾಡಿದಾಗ ಸನ್ಮಾನ್ಯ ಸಚಿವರು ಇಲ್ಲಿಯೇ ಅದರ ಬಗ್ಗೆ ಮಾತನಾಡಿ ತಕ್ಷಣವೇ ಕ್ರಮ ತೆಗೆದುಕೊಂಡರು, ಆ ಹೆಣ್ಣುಮಗಳಿಗೆ ನ್ಯಾಯ ದೊರಕಿಸಿಕೊಟ್ಟು ಅದರ ಬಗ್ಗೆ ನನಗೆ ನಂತರ ವರದಿ ಸಹ ಬಂತು. ಇವತ್ತು ಕಾನೂನಿದೆ, ಕಾನೂನಿನಲ್ಲಿ ಅನೇಕ ಸುಧಾರಣೆಗಳನ್ನು ತರುತ್ತಾರೆ. ಒಂದು ಕಾನೂನಿಗೆ ಅನೇಕ ಕಣ್ಣುಗಳಿರುತ್ತವೆ. ಅಪರಾಧ ಮಾಡಿದವರು ತಪ್ಪಿಸಿಕೊಳ್ಳುವುದಕ್ಕೆ ಅನೇಕ ದಾರಿಗಳಿರುತ್ತವೆ. ವಕೀಲರು ತಮ್ಮ ವೃತ್ತಿಧರ್ಮದ ಪ್ರಕಾರ ಕಕ್ಷಿದಾರರಿಗೆ ನೂರಾರು ದಾರಿಗಳನ್ನು ತೋರಿಸುತ್ತಾರೆ. ಹೀಗಾಗಿ ತಪ್ಪಿತಸ್ಥರು ಬಿಡುಗಡೆಯಾಗಿ ಬಂದು ಮತ್ತೆ ಅದೇ ಛಾಳಿಯನ್ನು ಮುಂದುವರೆಸುತ್ತಾರೆ. ತಾವು ಗೌರವಾನ್ವಿತ ಸಭಾಪತಿಯವರಾಗಿದ್ದೀರಿ, ಹೆಣ್ಣು ಮಕ್ಕಳಿಗೆ ಅತ್ಯಂತ ಎತ್ತರದ ಗೌರವದ ಸ್ಥಾನವನ್ನು ಕೊಟ್ಟಿದ್ದೀರಿ,ತಾವು ಹೆಣ್ಣು ಮಕ್ಕಳ ಜೊತೆ ಅತ್ಯಂತ ಗೌರವಯುತವಾಗಿ ನಡೆದುಕೊಳ್ಳುತ್ತೀರಿ. ಆದಕಾರಣ ತಾವು ಸಭಾ ಪೀಠದಿಂದ ಒಂದು ಆದೇಶವನ್ನು ಹೊರಡಿಸಬೇಕು, ಈ ರೀತಿ ನಿರಂತರವಾಗಿ ನಡೆಯುತ್ತದೆ ಖಂಡಿತ ಇನ್ನು ಮುಂದೆ ಈ ರೀತಿ ನಡೆಯುದನ್ನು ತಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಹೆಣ್ಣುಮಕ್ಕಳು ಬೋಗದ ವಸ್ತುವಲ್ಲ. ಆಕೆಯನ್ನು ಒಬ್ಬ ತಾಯಿಯಾಗಿ, ಅಕ್ಕ–ತಂಗಿಯರಾಗಿ ನೋಡುತ್ತೀರಿ. ಇಡೀ ಸಮಾಜಕ್ಕೆ ಕಣ್ಣಾಗಿರುವಂತಹ ಹೆಣ್ಣು ಮಕ್ಕಳ ಮೇಲೆ ಈ ರೀತಿಯಾದಂತಹ ದೌರ್ಜನ್ಯ ನಡೆಯುತ್ತಿದ್ದರೆ ಎಲ್ಲಾ ಮಹಿಳಾ ಸಂಘ ಸಂಸ್ಥೆಗಳು ಬೀದಿಗಿಳಿಯ ಬೇಕಾಗುತ್ತದೆ, ಹೋರಾಟ ಮಾಡಬೇಕಾಗುತ್ತದೆ. ಇದನ್ನು ನೋಡಿಕೊಂಡು ಕಣ್ಣುಮುಚ್ಚಿ ಕುಳಿತುಕೊಂಡಿರುವುದಕ್ಕೆ ಆಗುವುದಿಲ್ಲ. ಪುರಾಣ ಕಾಲದಿಂದಲೂ ಹೆಣ್ಣು ಮಕ್ಕಳ ಮೇಲೆ ನಿರಂತರವಾಗಿ ಶೋಷಣೆ ನಡೆಯುತ್ತಲೇ ಬಂದಿದೆ. ನಾವು ಈಗ 21ನೇ ಶತಮಾನದಲ್ಲಿದ್ದರೂ ಸಹ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಡೆಯುತ್ತಲೇ ಇದೆ. ಅದರ ಬಗ್ಗೆ ತಾವು ಆದೇಶ ಕೊಡಬೇಕು,

ಕಾನೂನಿನಲ್ಲಿ ತೀವ್ರ ಮಾರ್ಪಾಡಾಗಬೇಕು. ಈಗ ಆ ಪ್ರೊಫೆಸರ್ ತಲೆಮರೆಸಿ ಕೊಂಡಿದ್ದಾನಂತೆ. ಆದರೆ ಕೇವಲ ಆ ಒಬ್ಬ ಪ್ರೊಫೆಸರ್ ಮೇಲೆ ಮಾತ್ರ ಕ್ರಮ ತೆಗೆದುಕೊಳ್ಳುವುದಲ್ಲ, ಆ ಕುಲಪತಿಗಳ ಮೇಲೆಯೂ ಸಹ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆ ಹೆಣ್ಣು ಮಗಳ ಮೇಲೆ ಸರ್ಟಿಫಿಕೇಟ್ ಕೊಡುವುದಕ್ಕೆ ಅವರ್‍ಯಾರು ಸಾರ್. ಆ ಹೆಣ್ಣು ಮಗಳಿಗೆ ನೀನೆ ಸರಿ ಇಲ್ಲ ಎಂದು ಹೇಳುವುದಕ್ಕೆ ಇವರ್‍ಯಾರು? ಇವರೇನಾದರು ಸರಿ ಇದ್ದಾರೆಯೇ? ಇವರು ಸರಿ ಇದ್ದಾರೆಯೇ ಎಂದು ತಿಳಿದುಕೊಳ್ಳುವುದಕ್ಕೆ ನಾವೇನು ಮಾಡಬೇಕು? ನುಗ್ಗಬೇಕಾ? ಮಾನ್ಯ ಸಭಾಪತಿಯವರೇ, ನಾನು ಈ ಪೀಠದಲ್ಲಿ ಕುಳಿತುಕೊಂಡು ಈ ರೀತಿ ಮಾತನಾಡಬಾರದು. ನಿರಂತರ ಈ ರೀತಿಯಾದಂತಹ ಶೋಷಣೆಯ ವಿರುದ್ಧ ನನಗೆ ರಕ್ತ ಕುದಿಯುತ್ತಿದೆ. ಇದರ ಬಗ್ಗೆ ತೀವ್ರತರವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು, ಕುಲಪತಿಗಳ ಬಗ್ಗೆಯೂ ಸಹ ಸರ್ಕಾರ ಕ್ರಮ ತೆಗೆದು ಕೊಳ್ಳಬೇಕು. ಆ ಪ್ರೊಫೆಸರ್ ಎಲ್ಲಿದ್ದಾರೆಂದು ಹುಡುಕಿಸಿ ಅವರನ್ನು ಅರೆಸ್ಟ್ ಮಾಡಿಸಿ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕು. ಶ್ರೀಮತಿ ಭಾರತಿ ಶೆಟ್ಟಿಯವರು ಹೇಳಿದಂತೆ ಅವನು ಇನ್ನು ಮುಂದೆ ಯಾರಿಗೂ ಉಪನ್ಯಾಸ ಮಾಡುವಂತಿಲ್ಲ. ಅವನನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಶಿಫಾರಸ್ಸು ಮಾಡಬಾರದು. ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ಕೆಲಸ ಮಾಡುತ್ತದೆ. ಆದರೆ ಇಲ್ಲಿ ಜಾತಿ ಕೆಲಸ ಮಾಡಬಾರದು, ಶಿಕ್ಷಣ ಸಂಸ್ಥೆ ಅಪವಿತ್ರವಾಗಿದೆ, ಈ ರೀತಿ ಆಗಬಾರದು.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ....

**ಸಭಾಪತಿಯವರು:–** ಈಗ ಶೂನ್ಯ ವೇಳೆಯಲ್ಲಿ ಬಹಳ ಗಂಭೀರ ವಾದಂತಹ ವಿಷಯ ಪ್ರಸ್ತಾಪವಾಗಿದೆ. ಇದರ ಬಗ್ಗೆ ಮಾನ್ಯ ಸಚಿವರು ಸರ್ಕಾರದ ಪರವಾಗಿ ಏನು ಹೇಳುತ್ತಾರೆ ಎಂಬುದನ್ನು ಕೇಳೋಣ. ಈ ವಿಷಯ ನಿಮಗೆ ಬೇಡವೆ? ಮಾನ್ಯ ಸದಸ್ಯರು ಇನ್ನೊಂದು ಬೇರೆ ವಿಷಯದ ಬಗ್ಗೆ ನೊಟೀಸ್ ಕೊಟ್ಟಿದ್ದಾರೆ. ಆ ನೊಟೀಸ್ ಬೇಡ ಈ ವಿಷಯದ ಮೇಲೆಯೇ ಮಾತನಾಡುತ್ತೇನೆಂದು ಹೇಳುತ್ತಿದ್ದಾರೆ. ಮೊದಲು ಈ ವಿಷಯವನ್ನು ಮುಗಿಸೋಣ.

**ಡಾ॥ ವಿ.ಎಸ್. ಆಚಾರ್ಯ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದಂತಹ ಮಾನ್ಯ ಎಂ.ಸಿ. ನಾಣಯ್ಯನವರು ಮತ್ತು ಇಬ್ಬರು ಮಾನ್ಯ ಸದಸ್ಯರುಗಳು ಹಾಗೂ ನಮ್ಮ ಉಪ ಸಭಾಪತಿಯವರು ಎಲ್ಲರೂ ಆ ವಿಷಯದ ಮಹತ್ವವನ್ನರಿತು ಆ ವಿಷಯವನ್ನೇನು ಮಂಡನೆ ಮಾಡಿದ್ದಾರೆ ಅದರ ಬಗ್ಗೆ ನಾನು ನಿನ್ನೆ ದಿವಸ ಮತ್ತು ಇವತ್ತಿನ ದಿವಸ ಪತ್ರಿಕೆಯಲ್ಲಿ ಹಾಗೂ ಮಾಧ್ಯಮಗಳಲ್ಲಿ ವಿಷಯ ಬಂದ ತಕ್ಷಣ ಸಂಬಂಧಪಟ್ಟಂತಹ ಉಪ ಕುಲಪತಿಗಳನ್ನು ಸಂಪರ್ಕ ಮಾಡಿ ಆ ಬಗ್ಗೆ ಮಾಹಿತಿಯನ್ನು ಕಳುಹಿಸಿಕೊಡಿ ಎಂದು ಅವರಿಗೆ ಆದೇಶ ಕೊಟ್ಟಿದ್ದೆ ಅದರಂತೆ ಕೆಲವು ಮಾಹಿತಿಗಳು ಬಂದಿವೆ. ವಿಷಯ ಬಹಳ ಗಂಭೀರವಾಗಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ 'Institute of Excellence' ಯೋಜನೆ ಅಡಿಯಲ್ಲಿ 'Biodiversity' ಮತ್ತು 'Bioprospecting and Sustainable Development' ಎನ್ನುವಂತಹ ವಿಚಾರದಲ್ಲಿ ಒಂದು ಸಂಶೋಧನೆ ಮಾಡುವುದಕ್ಕೆ ಪಿ.ಹೆಚ್.ಡಿ.ಗೆ ನೋದಣಿ ಆದಂತಹ ಒಬ ವಿದ್ಯಾರ್ಥಿನಿ ಮೇಲೆ ಒಬ್ಬ ಪ್ರೊಫೆಸರ್ ಮಾನಸಿಕ ಹಾಗೂ ಲೈಂಗಿಕ ಕಿರುಕುಳ ನೀಡಿದರು ಎಂದು ಒಂದು ದೂರು ಕೊಟ್ಟರು, ಆ ದೂರು ಕೊಟ್ಟ ನಂತರ ದಿನಾಂಕ;2ನೇ ತಾರೀಖು ರಜೆ ಇತ್ತು ನಂತರ 3ನೇ ತಾರೀಖು ಸಂಬಂಧಪಟ್ಟವರನ್ನು ಕರೆಸಿ ನಾನು ಮಾತನಾಡಿ ಅವರಿಗೆ ನೋಟೀಸ್ ಕೊಟ್ಟಿದ್ದೇನೆ, ಆ ವಿಷಯವನ್ನೆಲ್ಲಾ ಇದರಲ್ಲಿ ಬರೆದಿದ್ದಾರೆ. ಅದರ ಬಗ್ಗೆ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ವಿಷಯ ಬಹಳ ಗಂಭೀರವಾಗಿದೆ ಮತ್ತು ಇದೇ ರೀತಿಯಾದಂತಹ ಪ್ರಕರಣಗಳು ಏನು ನಡೆಯುತ್ತಿದೆ ಅದನ್ನು ನಿಲ್ಲಿಸಬೇಕು, ವಿಶ್ವವಿದ್ಯಾನಿಲಯದಲ್ಲಿ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಬೇಕು, ಒಳ್ಳೆಯ educational climate ಇರಬೇಕು ಎನ್ನುವಂಥದ್ದು ಸದಸ್ಯರ ಹಾಗೂ ನಮ್ಮೆಲ್ಲರ ಭಾವನೆಯಾಗಿದೆ. ಈ ರೀತಿಯಾದಂತಹ teaching programmes ಆರೋಗ್ಯಕರವಾಗಿ ನಡೆಯಬೇಕು ಎಂದು ಎಲ್ಲಾ ರೀತಿಯಾದಂತಹ ಪ್ರಯತ್ನೆ ವನ್ನು ಮಾಡುತ್ತಿದ್ದೇವೆ. ಇವತ್ತೇನು ಈ ಘಟನೆ ವರದಿಯಾಗಿದೆ ಇದು ಬಹಳ ಖಂಡನೀಯ. ಇದರ ಬಗ್ಗೆ ಇನ್ನಷ್ಟು ಮಾಹಿತಿಯನ್ನು ತಿಳಿದುಕೊಂಡು ನಾಳೆ

ಸಂಜೆಯೊಳಗಾಗಿ ವಿವರವಾದಂತಹ ಹೇಳಿಕೆಯನ್ನು ಕೊಡುತ್ತೇನೆ ಮತ್ತು ಇಂತಹ ತಪ್ಪಿತಸ್ಥರ ವಿರುದ್ಧ ಸರ್ಕಾರ ಅತ್ಯಂತ ಕಠಿಣವಾದಂತಹ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಬದ್ಧರಾಗಿದ್ದೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಚ್ಚಿಸುತ್ತೇನೆ.

**ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ. ಇದಕ್ಕೆ ಸಂಬಂಧಪಟ್ಟಂತೆ ನಾನು ಜಿಲ್ಲಾ ಸಚಿವನಾಗಿ ಈ ಪ್ರಕರಣದ ಬಗ್ಗೆ ಒಂದು ವಿಷಯವನ್ನು ಸದನದ ಗಮನಕ್ಕೆ ತರಬಯಸುತೇನೆ. ನಿನ್ನೆ ದಿವಸ ನಾನು ಮೈಸೂರಿಗೆ ಹೋದಂತಹ ಸಂದರ್ಭದಲ್ಲಿ ಈ ವಿಚಾರ ವರದಿಗೆ ಬಂದ ಕೂಡಲೆ ಅವರ ಯಜಮಾನರಾದಂತಹ ಡಾ॥ ವಿಜಯಕುಮಾರ್ ಅವರನ್ನು ನಮ್ಮ ಕಛೇರಿಗೆ ಕರೆಸಿ ಚರ್ಚೆ ಮಾಡಿ, ಆನಂತರ ಪ್ರಕರಣಗಳ ಬಗ್ಗೆ ವೈಸ್–ಚಾನ್ಸಲರ್ ಅವರನ್ನು ಕರೆಸಿ ಚರ್ಚೆ ಮಾಡಿದಾಗ ಇದರಲ್ಲಿ ಹೆಣ್ಣುಮಗಳು ಬಹಳ ನೊಂದಿದ್ದಾಳೆಂದು ಎನ್ನುವ ದೃಷ್ಟಿಯಲ್ಲಿ ಆಸ್ಪತ್ರೆಗೆ ಭೇಟಿ ಕೊಟ್ಟಂತಹ ಸಂದಂರ್ಭದಲ್ಲಿ ಆಕೆಗೆ ಪ್ರಜ್ಞೆ ಇಲ್ಲದ ಕಾರಣ ಆಕೆಯಿಂದ ಹೇಳಿಕೆಯನ್ನು ಪಡೆದುಕೊಳ್ಳುವುದಕ್ಕೆ ಆಗಲಿಲ್ಲ. ಈಗಾಗಲೇ ಅಲ್ಲಿಯ ಪೊಲೀಸಿನವರು ರಾತ್ರಿ 9 ಗಂಟೆಗೆ ಬಂದು ಇದಕ್ಕೆ ಸಂಬಂಧಪಟ್ಟಂತೆ ವಿಜಯನಗರ ಪೊಲೀಸ್ ಸ್ಟೇಷನ್ ಮೈಸೂರಿನಲ್ಲಿ ಈಗಾಗಲೇ ಕೇಸನ್ನು ರಿಜಿಸ್ಟರ್ ಮಾಡಲಾಗಿದೆ. ಆ ಕೇಸಿನಲ್ಲಿ ಪ್ರಮುಖವಾಗಿ ಇಬ್ಬರನ್ನು ಆರೋಪಿಗಳನ್ನಾಗಿ ತೆಗೆದುಕೊಂಡಿದ್ದಾರೆ. ಅವರುಗಳು ಯಾರೆಂದರೆ ಪ್ರೊ॥ ಶಿವಬಸವಯ್ಯ, ಮತ್ತೊಬ್ಬರು ಆ ಇಲಾಖೆಯ ಛೇರ್ಮನ್, ಹಾಗೂ ವೈಸ್‌ಚಾನ್ಸ್‌ಲರ್ ಮೇಲೆಯೂ ಸಹ ಕಂಪ್ಲೇಟ್ ಕೊಟ್ಟಿರುವುದರಿಂದ ಈಗಾಗಲೇ, ಪೊಲೀಸ್ ಸ್ಟೇಷನ್‌ನಲ್ಲಿ Sections 107, 354 read with Section 34 of IPC, ಇದರ ಅಡಿಯಲ್ಲಿ ನಿನ್ನೆ ದಿವಸ ಕೇಸ್ ರಿಜಿಸ್ಟರ್ ಆಗಿದೆ. ಇದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ತನಿಖೆಯನ್ನು ಪ್ರಾರಂಭ ಮಾಡಿದ್ದಾರೆ. ಅವರಿಗೆ ಇನ್ನು ಪ್ರಜ್ಞೆ ಬಂದಿಲ್ಲದೆ ಇರುವುದರಿಂದ ಈಗಲೂ ಸಹ ಆಸ್ಪತ್ರೆಯಲ್ಲಿ ಪೊಲೀಸಿನವರು ಇದ್ದಾರೆ, ಇದಕ್ಕೆ ಸಂಬಂಧಪಟ್ಟಂತಹ ವಿಚಾರಗಳು ಬಂದ ಕೂಡಲೆ ತಮಗೆ ತಿಳಿಸುತ್ತೇನೆ.

**ಸಭಾಪತಿಯವರು:** ಇದು ಬಹಳ ಗಂಭೀರವಾಗಿರುವಂತಹ ವಿಷಯ. ನಾನು ಸಹ ಈ ವಿಷಯದ ಬಗ್ಗೆ ಪತ್ರಿಕೆಯಲ್ಲಿ ಓದಿ ತುಂಬಾ ಮನನೊಂದೆ. ನಾನು ಉನ್ನತ ಶಿಕ್ಷಣ ಸಚಿವನಾಗಿದ್ದಾಗಲೂ ಸಹ ಈ ರೀತಿಯಾದಂತಹ ಒಂದು ಘಟನೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದಾಗ ಆ ವಿದ್ಯಾರ್ಥಿನಿ, ಪ್ರೊಫೆಸರ್ ಮತ್ತು ವೈಸ್-ಚಾನ್ಸಲರ್ ಈ ಮೂರು ಜನರನ್ನು ನನ್ನ ಕೊಠಡಿಗೆ ಕರೆಸಿ ಕಡೆಗೆ ಇದನ್ನು ಶ್ರೀಮತಿ ಭಾರತಿಶೆಟ್ಟಿಯವರು ಒಂದು ಮಾತನ್ನು ಹೇಳಿದರು, ಅದೇ ಮಾತನ್ನು ಆ ವಿದ್ಯಾರ್ಥಿನಿ ಹೇಳಿದಳು. ಏನೆಂದರೆ, ನಾನು ಈ ವಿಷಯವನ್ನು ಈಗ ಪಬ್ಲಿಸಿಟಿ ಕೊಟ್ಟರೆ ನನಗೆ ಇನ್ನು ಮದುವೆ ಸಹ ಆಗಿಲ್ಲ. ನಾನು ನೋಡುವುದಕ್ಕೆ ಚನ್ನಾಗಿದ್ದೇನೆ, ಹಾಡು ಚನ್ನಾಗಿ ಹೇಳುತ್ತೇನೆಂದು ಜನ ಹೇಳುತ್ತಾರೆ ಈ ರೀತಿ ಇರುವಾಗ ನನ್ನ ಮರ್ಯಾದೆಯ ಪ್ರಶ್ನೆ ಏನು ಎಂದು ಕೇಳಿದಾಗ ನನಗೆ ಏನು ಮಾಡ ಬೇಕೆಂದು ಗೊತ್ತಾಗಲಿಲ್ಲ. ಆಗ ನನ್ನ ಕಣ್ಣಲ್ಲಿಯೂ ಸಹ ನೀರು ಬಂತು. ಅದಕ್ಕಾಗಿ ಅವಳಿಗೆ ಪರಿಹಾರ ಕೊಡಿಸಿ ಡಿಗ್ರಿ ಕೊಡುವುದಕ್ಕೆ ಏನು ಸಾಧ್ಯವೋ ಅಷ್ಟನ್ನು ಮಾತ್ರ ನಾನು ಮಾಡಿದೆ. ವೈಸ್-ಛಾನ್ಸಲರ್ ಅವರನ್ನು ಕೇಳಿದಾಗ ಅವರು ಒಂದು ಮಾತು ಹೇಳಿದರು. ಇವತ್ತು ಆ ವೈಸ್-ಛಾನ್ಸಲರ್ ಇಲ್ಲಿ ಇಲ್ಲ. ಅವರು ಬೇರೆ ಹುದ್ದೆಯಲ್ಲಿದ್ದಾರೆ. ಆಗ ಅವರ ಕಣ್ಣಿನಲ್ಲಿಯೂ ಸಹ ನೀರು ಬಂದಿತ್ತು. ಅವರು ಹಿರಿಯರು ಹಾಗೂ ಗೌರವಾನ್ವಿತರಾಗಿದ್ದರು. ಅವರು ಹೇಳಿದಂತಹ ಪದ ಈ ರೀತಿ ಇತ್ತು. “ವಿಶ್ವವಿದ್ಯಾನಿಲಯಗಳಲ್ಲಿ ಪೊರಕೆ ಹಿಡಿದು ಚೊಕ್ಕ ಮಾಡಬೇಕಾದಂತಹ ಕಾಲ ಬಂದಿದೆ” ತಾವೆಲ್ಲರೂ ಗಮನಿಸಬೇಕು ಎಂಬ ಮಾತನ್ನು ಹೇಳಿದರು. ಇವತ್ತು ಮಾನ್ಯ ಸಭಾನಾಯಕರು ಅದರ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದಾರೆ. ಮಾನ್ಯ ಸಚಿವರು ಹೇಳಿಕೆಯನ್ನು ಕೊಟ್ಟ ಮೇಲೆ ಗೌರವಾನ್ವಿತ ಸಚಿವರು ಈ ವಿಷಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ನಾನು ಖಂಡಿತ ಅವಕಾಶ ಕೊಡುತ್ತೇನೆ. ಈಗ ಈ ವಿಷಯವನ್ನು ಇಲ್ಲಿಗೆ ಮುಗಿಸೋಣ.

**ಶ್ರೀ ಶ್ರೀನಾಥ:–** ಮಾನ್ಯ ಸಭಾಪತಿಯವರೇ, ನಾಳೇ ದಿವಸ ಅಂತರ ರಾಷ್ಟ್ರೀಯಾ ಮಹಿಳಾ ದಿನಾಚಾರಣೆ ಇದೆ. ಆದಕಾರಣ ಇವತ್ತು ಏನಾದರು ಒಂದು ತೀರ್ಮಾನವಾಗಬೇಕು. ಈ ರೀತಿ ತಪ್ಪು ಮಾಡಿದವರಿಗೆ ಬುದ್ದಿ ಕಲಿಸುತ್ತೇವೆಂದು ಗೊತ್ತಾದರೆ ನಮ್ಮ ಸ್ತ್ರೀ ವರ್ಗವೆಲ್ಲಾ ನಮ್ಮ ಬೆನ್ನ ಹಿಂದೆ ಈ ಸದನ ನಿಲ್ಲುತ್ತದೆ ಎನ್ನುವುದು ಗೊತ್ತಾದಾಗ ಅವರಿಗೆ ಒಂದು ರೀತಿ ಮಾನಸಿಕ ಸ್ಥೈರ್ಯ ಕೂಡ ಬರುತ್ತದೆ. ಅದು ಬಿಟ್ಟು ಇದನ್ನು ಪರಿಶೀಲನೆ ಮಾಡುತ್ತೇವೆ, ಅವರನ್ನು ಹಿಡಿಯುತ್ತೇವೆ, ಆಮೇಲೆ ನೋಡುತ್ತೇವೆ ಎನ್ನುವುದಕ್ಕಿಂತ ನಾವೇ ಒಂದು ತೀರ್ಮಾನ ತೆಗೆದುಕೊಂಡ ಆ ಮನುಷ್ಯನನ್ನು ಎಲ್ಲಿಗೆ ಕಳುಹಿಸಬೇಕೋ ಅಲ್ಲಿಗೆ ಕಳುಹಿಸುವಂತಹ ಒಂದು ತೀರ್ಮಾನ ತೆಗೆದು ಕೊಂಡರೆ ಇಡೀ ಸ್ತ್ರೀ ಕುಲಕೆ ನಾವು ಗೌರವ ಕೊಟ್ಟಂತೆ ಆಗುತ್ತದೆ. ಆ ಕೆಲಸ ತಮ್ಮ ಮುಖಾಂತರ ಈ ಸದನ ಮಾಡಬೇಕಾಗುತ್ತದೆ.

**ಸಭಾಪತಿಯವರು:–** ಮುಂದಿನ ಶೂನ್ಯ ವೇಳೆಯ ಪ್ರಸ್ತಾಪ ಮಾನ್ಯ ನಾರಾಯಣಸ್ವಾಮಿ, ಮಾನ್ಯ ಪುಟ್ಟಣ್ಣನವರದು. ದಯಮಾಡಿ ಯಾರಾದರೊಬ್ಬರು ಓದಿ ಬಿಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಸಹ ಅದಕ್ಕೆ ಸಹಿ ಮಾಡಿದ್ದೇನೆ.

**ಸಭಾಪತಿಯವರು:–** ಹಾಗಾದರೆ ಯಾರಾದರೊಬ್ಬರು ಓದಿ ಬಿಡಿ.

**ಶ್ರೀ ಮರಿತಿಬ್ಬೇಗೌಡ:–** ಹಾಗಾದರೆ ನಾನೇ ಓದಿ ಬಿಡುತ್ತೇನೆ ಸಾರ್.

**ಸಭಾಪತಿಯವರು:–** ಮೂರು ಜನರಲ್ಲಿ ಯಾರಾದರೊಬ್ಬರು ಓದಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಸಹಿ ಮಾಡಿರುವುದು ನಾನು, ಹಾಗಾಗಿ ನಾನೇ ಓದುತ್ತೇನೆ.

**ಸಭಾಪತಿಯವರು:–** ಓದಿ ನಂತರ ನಿಮಗೂ ಸಹ ಓದುವುದಕ್ಕೆ ಅವಕಾಶ ಕೊಡುತ್ತೇನೆ.

(ಆ) ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಯ ಬೋಧಕ ಮತ್ತು ಬೋಧಕೇತರರಿಗೆ ಸಂಬಳ ಬಿಡುಗಡೆಯಾಗದಿರುವ ಬಗ್ಗೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಯ ಬೋಧಕ ಮತ್ತು ಬೋಧಕೇತರರಿಗೆ ಫೆಬ್ರವರಿ ತಿಂಗಳೀನ ಸಂಬಳ ಬಿಡುಗಡೆಯಾಗಿರುವುದಿಲ್ಲ ಮತ್ತು ಯೋಜನಾ ವೆಚ್ಚದಲ್ಲಿ ವೇತನ ಪಡೆಯುತ್ತಿರುವ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಯ ಬೋಧಕ ಮತ್ತು ಬೋಧಕೇತರರಿಗೆ ಕಳೆದ ಮೂರು ತಿಂಗಳಿನಿಂದ ವೇತನ ಬಿಡುಗಡೆಯಾಗಿಲ್ಲ ಹಾಗೂ ಹೊಸದಾಗಿ ಅನುದಾನಕ್ಕೊಳಪಟ್ಟಿರುವ ಅನುದಾನಿತ ಪ್ರೌಢಶಾಲಾ ಶಿಕ್ಷಕರಿಕೆ ಸುಮಾರು ಏಳು ತಿಂಗಳ ವೇತನ ಬಾಕಿ ಇರುತ್ತದೆ. ಡಿ.ಎ. ಬಾಕಿ ವೇತನ, ವೈದ್ಯಕೀಯ ವೆಚ್ಚ, ಮರುಪಾವತಿ ಹಣ, ಗಳಿಕೆ ರಜೆ ನಗದೀಕರಣ ಹಣ ಕಳೆದ ಒಂದು ವರ್ಷದಿಂದ ಬಿಡುಗಡೆಯಾಗಿರುವುದಿಲ್ಲ. ಬೋಧಕ ಮತ್ತು ಬೋಧಕೇತರರಿಗೆ ಪ್ರತಿ ತಿಂಗಳು ನಿಗದಿತ ಸಮಯದಲ್ಲಿ ಸರ್ಕಾರ ವೇತನ ಪಾವತಿಸದೆ ಇರುವುದರಿಂದ ಗುಣಮಟ್ಟ ಶಿಕ್ಷಣಕ್ಕೆ ತುಂಬಾ ಅಡ್ಡಿ ಉಂಟಾಗಿದೆ. ಇದರಿಂದ ವಿದ್ಯಾರ್ಥಿಗಳಿಗೂ ತುಂಬಾ ತೊಂದರಯಾಗಿದೆ. ಪ್ರತಿ ತಿಂಗಳು ವೇತನ ಪಾವತಿ ಮಾಡಲು ಸರ್ಕಾರ ಅನೇಕ ಆದೇಶಗಳು ಮತ್ತು ಸುಧಾರಣಾ ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಆ ಯೋಜನೆಗಳು ಪರಿಣಾಮಕಾರಿಯಾಗಿಲ್ಲ. ನಿಗಧಿತ ಸಮಯಕ್ಕೆ ಬೋಧಕ ಮತ್ತು ಬೋಧಕೇತರರಿಗೆ ವೇತನ ನೀಡದಿರುವುದು ಅತ್ಯಂತ ವಿಷಾದನೀಯ ಸಂಗತಿಯಾಗಿದೆ. ತಕ್ಷಣ ಮೇಲಿನ ಎಲ್ಲಾ ವರ್ಗದ ಭೋಧಕ ಮತ್ತು ಭೋಧಕೇತರರಿಗೆ ವೇತನ ಪಾವತಿಸಲು ಸರ್ಕಾರ ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಲ್ಲಿ ವಿಷಯ ಪ್ರಸ್ತಾಪಿಸ ಬಯಸುತ್ತೇನೆ.

**(2–00 ಗಂಟೆ)**

**ಸಭಾಪತಿಯವರು:–** ನಾರಾಯಣಸ್ವಾಮಿಯವರು ಈಗ ತಮ್ಮ ಶೂನ್ಯವೇಳೆಯ ವಿಚಾರವನ್ನು ಓದಲಿ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೇ. ಇದಕ್ಕೆ ಪೂರಕವಾಗಿ ಒಂದು ವಿಚಾರವನ್ನು ಹೇಳಬಯಸುತ್ತೇನೆ.

**ಸಭಾಪತಿಯವರು:–** ನಾನು ತಮಗೆ ಓದಲು ಅನುಮತಿಯನ್ನು ನೀಡಿದಾಗ ನೀವು ಓದಬೇಕು. ನಾನು ಏನು ಹೇಳುತ್ತೇನೆ ಅದನ್ನು ನೀವು ಮಾಡಬೇಕು. ಹಿಂದಿನ ವಿಚಾರದ ಗಾಂಭೀರ್ಯ ನೋಡಿ ನಾನು ಓದಲು ಹೇಳದೇ ಮಾತನಾಡಲು ಅನುಮತಿಯನ್ನು ನೀಡಿದ್ದೆನು. ತಮಗೆ ಓದಿ ಎಂದು ಹೇಳುತ್ತಿದ್ದೇನೆ, ನೀವು ಓದಿ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯಸಭಾಪತಿಗಳೇ, ತುಮಕೂರು ಜಿಲ್ಲೆಯಲ್ಲಿ ಶಿಕ್ಷಕರಿಗೆ ನೀಡಬೇಕಾಗಿರುವ ಗಳಿಕೆರಜೆಯ ಹಣ 19 ಕೋಟಿ ರೂಪಾಯಿಗಳು ಇನ್ನೂ ಬಾಕಿಯಿದೆ. ಒಂದು ವರ್ಷದಿಂದಲೂ ಅಲ್ಲಿನ ಶಿಕ್ಷಕರಿಗೆ ಗಳಿಕೆರಜೆಯ ನಗದೀಕರಣ ಬಾಕಿ ಹಣ ಮತ್ತು ಡಿ.ಎ. ಬಾಕಿ ವೇತನ, ಹಣವನ್ನು ನೀಡಿರುವುದಿಲ್ಲ. ತುಮಕೂರು ಜಿಲ್ಲೆಯ ಪದವಿಪೂರ್ವ ಕಾಲೇಜಿನ ಶಿಕ್ಷಕರ ಸಂಬಳ 310 ಲಕ್ಷ ರೂಪಾಯಿಗಳನ್ನು ನೀಡಬೇಕಾಗಿದ್ದ ಕಡೆಯಲ್ಲಿ ಕಳೆದ ತಿಂಗಳಿನಲ್ಲಿ 165 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅಂದರೆ ಈ ತಿಂಗಳ ವೇತನ ಇಲ್ಲ ಇದೇ ನಮ್ಮ ಮಾತಿನ ಸಾರಾಂಶ ಪ್ರತಿ ತಿಂಗಳು ಶಿಕ್ಷಕರಿಗೆ ಸಂಬಳವನ್ನು ನೀಡಬೇಕೆಂದು ನಾವು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತಿದ್ದೇವೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಯ ಭೋಧಕ ಮತ್ತು ಭೋಧಕೇತರರಿಗೆ ಫೆಬ್ರವರಿ ತಿಂಗಳಿನ ಸಂಬಳ ಬಿಡುಗಡೆಯಾಗಿರುವುದಿಲ್ಲ ಮತ್ತು ಯೋಜನಾ ವೆಚ್ಚದಲ್ಲಿ ವೇತನ ಪಡೆಯುತ್ತಿರುವ ಸರ್ಕಾರಿ ಹಾಗೂ ಅನುದಾನಿತ ಪ್ರೌಢಶಾಲೆಯ ಭೋಧಕ ಮತ್ತು ಭೋಧಕೇತರರಿಗೆ ಕಳೆದ

ಮೂರು ತಿಂಗಳಿನಿಂದ ವೇತನ ಬಿಡುಗಡೆಯಾಗಿಲ್ಲ ಹಾಗೂ ಹೊಸದಾಗಿ ಅನುದಾನಕ್ಕೊಳಪಟ್ಟಿರುವ ಅನುದಾನಿತ ಪ್ರೌಢಶಾಲಾ ಶಿಕ್ಷಕರಿಗೆ ಸುಮಾರು ಏಳು ತಿಂಗಳ ವೇತನ ಬಾಕಿ ಇರುತ್ತದೆ. ಡಿ.ಎ. ಬಾಕಿ ವೈದ್ಯಕೀಯ ವೆಚ್ಚ ಮರುಪಾವತಿ ಹಣ, ಗಳಿಕೆ ರಜೆ ನಗದೀಕರಣ ಹಣ ಕಳೆದ ಒಂದು ವರ್ಷದಿಂದ ಬಿಡುಗಡೆಯಾಗಿರುವುದಿಲ್ಲ. ಭೋಧಕ ಮತ್ತು ಭೋಧಕೇತರರಿಗೆ ಪ್ರತಿ ತಿಂಗಳು ನಿಗದಿತ ಸಮಯದಲ್ಲಿ ಸರ್ಕಾರ ವೇತನ ಪಾವತಿಸದೆ ಇರುವುದರಿಂದ ಗುಣಮಟ್ಟ ಶಿಕ್ಷಣಕ್ಕೆ ತುಂಬಾ ಅಡ್ಡಿ ಉಂಟಾಗಿದೆ. ಇದರಿಂದ ವಿದ್ಯಾರ್ಥಿಗಳಿಗೂ ತುಂಬಾ ತೊಂದರೆಯಾಗಿದೆ. ಪ್ರತಿ ತಿಂಗಳು ವೇತನ ಪಾವತಿ ಮಾಡಲು ಸರ್ಕಾರ ಅನೇಕ ಆದೇಶಗಳು ಮತ್ತು ಸುಧಾರಣಾ ಕಾರ್ಯಕ್ರಮಗಳನ್ನು ಜಾರಿಗೆ ತಂದರು ಆ ಯೋಜನೆಗಳು ಪರಿಣಾಮಕಾರಿಯಾಗಿಲ್ಲ. ನಿಗದಿತ ಸಮಯಕ್ಕೆ ಭೋಧಕ ಮತ್ತು ಭೋಧಕೇತರರಿಗರ ವೇತನ ನೀಡದಿರುವುದು ಅತ್ಯಂತ ವಿಷಾದನೀಯ ಸಂಗತಿಯಾಗಿದೆ. ತಕ್ಷಣ ಮೇಲಿನ ಎಲ್ಲಾ ವರ್ಗದ ಭೋಧಕ ಮತ್ತು ಬೋಧಕೇತರರಿಗೆ ವೇತನ ಪಾವತಿಸಲು ಸರ್ಕಾರ ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಲ್ಲಿ ವಿಷಯ ಪ್ರಸ್ತಾಪಿಸ ಬಯಸುತ್ತೇನೆ.

**ಸಭಾಪತಿಯವರು:–** ಸರ್ಕಾರದ ಪರವಾಗಿ ಸಭಾನಾಯಕರು ಉತ್ತರ ನೀಡಬೇಕು.

**ಡಾ॥ ವಿ.ಎಸ್. ಆಚಾರ್ಯ:–** ಮಾನ್ಯ ಸಭಾಪತಿಗಳೇ, ಈ ವಿಚಾರವನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನಕ್ಕೆ ತಂದು ನಾಳೆ ಸದನದಲ್ಲಿ ಉತ್ತರವನ್ನು ಕೊಡಿಸಲಾಗುವುದು. ಸಾಮಾನ್ಯವಾಗಿ ಕೊನೆಯ ಕ್ವಾಟರ್‌ನಲ್ಲಿ ಹಣಕಾಸಿನ ಹೊಂದಾಣಿಕೆಯಿಂದ ಉಂಟಾಗುವ ಸಮಸ್ಯೆಗಳು, ಇದನ್ನೆಲ್ಲ ನಾವು ಗಮನಿಸಿದ್ದೇವೆ. ಈ ಸಮಸ್ಯೆಗಳನ್ನೆಲ್ಲ ಅತೀ ಶೀಘ್ರದಲ್ಲಿ ಪರಿಹರಿಸಲು ಮಾನ್ಯ ಸಚಿವರು ನಾಳೆ ಸದನದಲ್ಲಿ ಉತ್ತರವನ್ನು ನೀಡುತ್ತಾರೆ.

~~~~~~~~~~~~
~~~~~~~~~~~~

**(ಇ) ಯಾದಗಿರಿ ಜಿಲ್ಲಾ ಗೋಗಿ ಗ್ರಾಮದ ಪ್ರಾಯೋಗಿಕ ಯುರೇನಿಯಂ ಗಣಿಗಾರಿಕೆಯಿಂದ ಉಂಟಾಗಿರುವ ಹಾನಿ ಕುರಿತು**

**ಶ್ರೀ ಮನೋಹರ ಮಸ್ಕಿ:** ಮಾನ್ಯ ಸಭಾಪತಿಗಳೇ, ಯಾದಗಿರಿ ಜಿಲ್ಲೆಯ ಗೋಗಿ ಗ್ರಾಮದಲ್ಲಿ ಪ್ರಾಯೋಗಿಕವಾಗಿ ನಡೆಯುತ್ತಿರುವ ಯುರೇನಿಯಂ ಗಣಿಗಾರಿಕೆಯಿಂದ ಹಾಗೂ ಅದರ ಅಣುವಿಕಿರಣ ಪ್ರಭಾವದಿಂದ ಅಲ್ಲಿನ ಜನರ ಹಾಗೂ ವಿಶೇಷವಾಗಿ ಮಕ್ಕಳ ಮೇಲೆ ಉಂಟಾಗಿರುವ ಭಯಾನಕ ಪರಿಣಾಮಗಳ ಬಗ್ಗೆ "ಜನಶ್ರೀ ಟಿ.ವಿ." ನಿನ್ನೆ ವಿಶೇಷ ತನಿಖಾ ವರದಿ ಪ್ರಸಾರ ಮಾಡಿ ನಮ್ಮೆಲ್ಲರನ್ನು ಬೆಚ್ಚಿ ಬೀಳಿಸಿದೆ.

ಗೋಗಿ ಗ್ರಾಮದಲ್ಲಿ ಗ್ರಾಮದ ಮಕ್ಕಳ ಅಂಗವೈಕಲ್ಯತೆ ದೃಷ್ಟಿದೋಷ ಸೇರಿದಂತೆ ಗ್ರಾಮದ ಹಲವರಲ್ಲಿ ಚರ್ಮ ವ್ಯಾದಿಗಳು ಕಾಣಿಸಿಕೊಂಡಿರುವುದನ್ನು ಟಿವಿ ವರದಿ ಸ್ಪಷ್ಟವಾಗಿ ರಾಜ್ಯದ ಜನತೆಯ ಮುಂದೆ ತೆರೆದಿಟ್ಟಿದೆ.

ಮಂಗಳೂರು ಹಾಗೂ ನೆರೆಯ ಕಾಸರಗೋಡು ಜಿಲ್ಲೆಗಳಲ್ಲಿಯ ಎಂಡೋಸಲ್ಫಾನ್‌ದಿಂದ ಉಂಟಾಗಿರುವ ತೊಂದರೆಗಳಿಗಿಂತ ಇದು ಹೆಚ್ಚಿನ ಪ್ರಮಾಣದ್ದಾಗಿದೆ.

ಈ ಯುರೇನಿಯಂ ಗಣಿಗಾರಿಕೆಯ ಸುರಕ್ಷತಾ ಕ್ರಮಗಳನ್ನು ಪಾಲಿಸಲಾಗಿದೆಯೇ? ಈ ಬಗ್ಗೆ ರಾಜ್ಯ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? ಗೋಗಿ ಗ್ರಾಮದಲ್ಲಿ ಉಂಟಾಗಿರುವ ಅಣುವಿಕಿರಣದ ಪ್ರಮಾಣದ ಎಷ್ಟು? ಈ ಸಂತ್ರಸ್ಥರಿಗೆ ಸೂಕ್ತ ಚಿಕಿತ್ಸೆಯ ವ್ಯವಸ್ಥೆ ಮಾಡಲಾಗಿದೆಯೇ? ಎನ್ನುವ ಪ್ರಶ್ನೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು ಈ ವಿಷಯದ ಪ್ರಸ್ತಾವನೆಗೆ ಅನುಮತಿ ಕೋರುತ್ತೇನೆ.

**ಡಾ|| ವಿ.ಎಸ್. ಆಚಾರ್ಯ ಸಭಾನಾಯಕರು:–** ಮಾನ್ಯ ಸಭಾಪತಿಗಳೇ, ಈ ಯುರೇನಿಯಂ ಗಣಿಗಾರಿಕೆ ಎನ್ನುವುದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಗಣಿಗಾರಿಕೆ ಇಲಾಖೆ ಮುಖ್ಯಮಂತ್ರಿಗಳ ಬಳಿಯಿದೆ ಈ ವಿಚಾರದಲ್ಲಿ ಏನಾಗಿದೆ

ಎಂಬುದರ ಬಗ್ಗೆ ವರದಿಯನ್ನು ತರಿಸಿ, ನಾನಾಗಲೀ ಅಥವಾ ಮುಖ್ಯಮಂತ್ರಿಗಳಾಗಲೀ ಸದನದಲ್ಲಿ ಉತ್ತರವನ್ನು ನೀಡುತ್ತೇವೆ.

## 3.ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ಇವತ್ತು ಬೆಳಿಗ್ಗೆ ನಮ್ಮ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ಸೇರಿ ಕೆಲವು ತೀರ್ಮಾನಗಳನ್ನು ಕೈಗೊಂಡಿದೆ. ಅದನ್ನು ಸಭೆಯ ಒಪ್ಪಿಗೆಗಾಗಿ ಸಭೆಯ ಮುಂದೆ ಮಂಡಿಸಬಯಸುತ್ತೇನೆ.

**(ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿಯ ಪ್ರತಿಯನ್ನು ಲಗತ್ತಿಸಲಾಗಿದೆ)**

## ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ

ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಸಲಹಾ ಸಮಿತಿಯು ದಿನಾಂಕ: 07.03.2011 ರಂದು ಸಭೆ ಸೇರಿ ಈ ಕೆಳಕಂಡಂತೆ ಕಾರ್ಯಕಲಾಪ ಗಳನ್ನು ನಡೆಸಲು ತೀರ್ಮಾನಿಸಿತು.

## ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ವಿವರ

| ಮಾನ್ಯ ಸದಸ್ಯರುಗಳಿಗೆ ಈಗಾಗಲೇ ವಿತರಿಸಲಾಗಿರುವ ಇಂದಿನ ಕಾರ್ಯ ಕಲಾಪಗಳ ಪಟ್ಟಿಯಲ್ಲಿರುವ ಕಾರ್ಯಕ್ರಮಗಳ ಪೈಕಿ ಪ್ರಶ್ನೋತ್ತರ, ಆಯವ್ಯಯದ ಮೇಲೆ ಚರ್ಚೆ ಮತ್ತು ವಿಧೇಯಕಗಳ ಮಂಡನೆಯನ್ನು ಮಾತ್ರ ತೆಗೆದುಕೊಳ್ಳಲಾಗುವುದು. | |
|---|---|
| 08.03.2011<br>ಮಂಗಳವಾರ | 1)ಪ್ರಶ್ನೋತ್ತರ<br>2)ಆಯವ್ಯಯದ ಮೇಲೆ ಚರ್ಚೆ;<br>3)ವಿಧೇಯಕಗಳ ಮಂಡನೆ |
| 09.03.2011<br>ಬುಧವಾರ | 1.ಪ್ರಶ್ನೋತ್ತರ<br>2.ಆಯವ್ಯಯದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ ಹಾಗೂ ಧನವಿನಿಯೋಗ, ಹಣಕಾಸು |

| | |
|---|---|
| | ವಿಧೇಯಕಗಳ ಮಂಡನೆ, ಪರ್ಯಾ ಲೋಚನೆ ಮತ್ತು ಅಂಗೀಕಾರ |
| 10.03.2011 ಗುರುವಾರ ಮತ್ತು 11.03.2011 ಶುಕ್ರವಾರ | ಉಪವೇಶನವಿರುವುದಿಲ್ಲ |
| 12.03.2011 ಶನಿವಾರ ಮತ್ತು 13.03.2011 ಭಾನುವಾರ | ರಜಾದಿನ |
| 14.03.2011 ಸೋಮವಾರ | 1.ಪ್ರಶ್ನೋತ್ತರ<br>2.ಗಮನ ಸೆಳೆಯುವ ಸೂಚನೆ, ನಿಯಮ 330ರ ಮೇರೆಗೆ ಹಾಗೂ ಇತರೆ<br>3.ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ |
| 15.03.2011 ಮಂಗಳವಾರ | 1.ಪ್ರಶ್ನೋತ್ತರ<br>2.ಗಮನ ಸೆಳೆಯುವ ಸೂಚನೆ, ನಿಯಮ 330ರ ಮೇರೆಗೆ ಹಾಗೂ ಇತರೆ<br>3.ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ |
| 16.03.2011 ಬುಧವಾರ | 1.ಪ್ರಶ್ನೋತ್ತರ<br>2.ಗಮನ ಸೆಳೆಯುವ ಸೂಚನೆ, ನಿಯಮ 330ರ ಮೇರೆಗೆ ಹಾಗೂ ಇತರೆ<br>3.ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ |
| 17.03.2011 ಗುರುವಾರ | 1.ಪ್ರಶ್ನೋತ್ತರ<br>2.ಗಮನ ಸೆಳೆಯುವ ಸೂಚನೆ, ನಿಯಮ 330ರ ಮೇರೆಗೆ ಹಾಗೂ ಇತರೆ |

| | |
|---|---|
| | 3.ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ |
| 18.03.2011<br>ಶುಕ್ರವಾರ | 1.ಪ್ರಶ್ನೋತ್ತರ<br>2.ಗಮನ ಸೆಳೆಯುವ ಸೂಚನೆ, ನಿಯಮ 330ರ ಮೇರೆಗೆ ಹಾಗೂ ಇತರೆ<br>3.ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ<br>4.ಖಾಸಗಿ ಕಾರ್ಯಕಲಾಪಗಳು |

ಕಾರ್ಯಕಲಾಪಗಳ ಸಲಹಾ ಸಮಿತಿಯ ಈ ವರದಿಯನ್ನು ಸದನವು ಅನುಮೋದಿಸುವುದೆಂದು ಭಾವಿಸುತ್ತೇನೆ.

**(ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿಗೆ ಸಭೆಯ ಒಪ್ಪಿಗೆಯನ್ನು ಪಡೆಯಲಾಯಿತು.)**

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಗಳೇ, 10ನೇ ತಾರೀಖಿನಂದು ಉಪವೇಶನ ಇರುವುದಿಲ್ಲವೆಂದು ತೀರ್ಮಾನ ಕೈಗೊಂಡಿರುವುದಾಗಿ ತಾವು ಹೇಳಿದಿರಿ. ನಾನು ಒಂದು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಕಾರಣ ಕಾರ್ಯಕಲಾಪಗಳ ಸಲಹಾ ಸಮಿತಿಗೆ ಹಾಜರಾಗಲು ಸ್ವಲ್ಪ ತಡವಾಯಿತು. ತಮ್ಮ ಮುಖಾಂತರ ನಾನು ಸರ್ಕಾರವನ್ನು ಕೇಳಬಯಸುವುದೇನೆಂದರೆ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಯಲಿದೆ. ಈ ಬಗ್ಗೆ ಶಾಸಕರ ಮಾಹಿತಿಗಾಗಿ ಸರ್ಕಾರದಿಂದ ಒಂದು ಹೇಳಿಕೆಯನ್ನು ನೀಡಲು ಏನು ತೊಂದರೆಯಿದೆ? ಈ ಸಮ್ಮೇಳನದ ವಿವರಗಳನ್ನು ಈ ಸದನದ ಮೂಲಕ ಈ ನಾಡಿನ ಜನತೆಗೆ ತಿಳಿಸಬೇಕಾಗುತ್ತದೆ. ವಿಶ್ವ ಕನ್ನಡ ಸಮ್ಮೇಳನದ ಉದ್ದೇಶಗಳೇನು, ಕಾರ್ಯಕ್ರಮಗಳೇನು ಎನ್ನುವ ಒಂದು ಹೇಳಿಕೆಯನ್ನು ಸದನಕ್ಕೆ ನೀಡುವ ವಿವೇಚನೆ ಸರ್ಕಾರಕ್ಕೆ ಇಲ್ಲವೇ? ಇದರ ಬಗ್ಗೆ ಸರ್ಕಾರಕ್ಕಿರುವ ತೊಂದರೆ

ಏನು? ಪತ್ರಿಕೆಗಳಲ್ಲಿರುವ ಜಾಹೀರಾತುಗಳನ್ನು ನೋಡಿಕೊಂಡು ನಾವು ಮಾಹಿತಿಯನ್ನು ಪಡೆಯಬೇಕೆ?

**ಸಭಾಪತಿಯವರು:–** ಸರ್ಕಾರದ ಪರವಾಗಿ ಸಭಾನಾಯಕರು ಉತ್ತರ ನೀಡಬೇಕು.

**ಡಾ|| ವಿ.ಎಸ್. ಆಚಾರ್ಯ:–** ಮಾನ್ಯ ಸಭಾಪತಿಗಳೇ, ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ ಸೂಕ್ತ ಸಮಯದಲ್ಲಿ ಸದನಕ್ಕೆ ಮಾಹಿತಿಯನ್ನು ನೀಡಲಾಗುವುದು.

**ಸಭಾಪತಿಯವರು:–** ಈಗ ಸಭೆಯನ್ನು ಮಧ್ಯಾಹ್ನ 3 ಗಂಟೆ 15 ನಿಮಿಷಗಳವರೆಗೆ ಮುಂದೂಡಲಾಗಿದೆ.

**ಭೋಜನ ವಿರಾಮಕ್ಕಾಗಿ**

**ಮಧ್ಯಾಹ್ನ 3 ಗಂಟೆ 15 ನಿಮಿಷಗಳವರೆಗೆ ಮುಂದೂಡಲ್ಪಟ್ಟ ಸದನವು ಪುನಃ 3 ಗಂಟೆ 38 ನಿಮಿಷಕ್ಕೆ ಸಮಾವೇಶಗೊಂಡಿತು.**

ಸಭಾಪತಿಯವರು ಸಭಾ ಪೀಠದಲ್ಲಿ ಉಪಸ್ಥಿತರಾದರು.

**ಡಾ|| ವಿ.ಎಸ್. ಆಚಾರ್ಯ (ಸಭಾನಾಯಕರು):** ಮಾನ್ಯ ಸಭಾಪತಿಯವರೇ ಎರಡು ವಿಧೇಯಕಗಳನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

## 4.ಶಾಸನ ರಚನೆ

## ವಿಧೇಯಕಗಳ ಮಂಡನೆ

### (ಅ) ಕರ್ನಾಟಕ ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾಧಾಯ ದತ್ತಿಗಳ (ತಿದ್ದುಪಡಿ) ವಿಧೇಯಕ, 2011ರ ಮಂಡನೆಗೆ ಅನುಮತಿ ಕೋರಿಕೆ

**ಡಾ॥ ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೆ, 2011ರ ಕರ್ನಾಟಕ ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ..

"2011ರ ಕರ್ನಾಟಕ ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು**

**ಡಾ: ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):–** ಮಾನ್ಯ ಸಭಾಪತಿಯವರೆ, 2011ರ ಕರ್ನಾಟಕ ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:–** ವಿಧೇಯಕವನ್ನು ಮಂಡಿಸಲಾಗಿದೆ.

**ಸಭಾಪತಿಯವರು:–** ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ

ಇದ್ದಂತಹ ಎಲ್ಲ ಗೌರವಾನ್ವಿತ ಸದಸ್ಯರು, 'ಸರ್ಕಾರ ವಿಧೇಯಕಗಳನ್ನು ಅಥವಾ ಮಸೂದೆಗಳನ್ನು ಮಂಡಿಸಿದ ಕೂಡಲೇ ಅದರ ಪ್ರತಿಗಳನ್ನು ಎಲ್ಲ ಸದಸ್ಯರಿಗೂ ನೀಡಿ ಕನಿಷ್ಠ ಎರಡು ದಿನಗಳ ನಂತರ ಅದು ಸದನದಲ್ಲಿ ಚರ್ಚೆಗೆ ಬರುವ ರೀತಿ ಆದರೆ, ನಾವುಗಳೆಲ್ಲ ಅದನ್ನು ಓದಿ ಬಂದು ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅನಿವಾರ್ಯವಿದ್ದಾಗ ಕನಿಷ್ಠ ಒಂದು ದಿನದ ಕಾಲಾವಕಾಶವನ್ನಾದರೂ ನೀಡಬೇಕು' ಎನ್ನುವಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಸರ್ಕಾರದವರು ಈ ವಿಚಾರವನ್ನು ಗಮನಿಸಬೇಕೆಂದು ಹೇಳುತ್ತಿದ್ದೇನೆ.

ಈಗ 2011ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ(ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ)(ವಿಶೇಷ ಉಪಬಂಧಗಳೂ) ವಿಧೇಯಕವನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರು ಸಭೆಯ ಮುಂದೆ ಮಂಡಿಸಬೇಕು.

## (ಆ) ಕರ್ನಾಟಕ ವೃತ್ತಿಶಿಕ್ಷಣ ಸಂಸ್ಥೆಗಳ(ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕ, 2011

### ಮಂಡನೆಗೆ ಅನುಮತಿ ಕೋರಿಕೆ

**ಡಾ: ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, 2011ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ)(ವಿಶೇಷ ಉಪಬಂಧಗಳೂ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"2011ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ)(ವಿಶೇಷ ಉಪಬಂಧಗಳೂ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು**

**ಡಾ: ವಿ.ಎಸ್.ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, 2011ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳೂ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು:–** ವಿಧೇಯಕವನ್ನು ಮಂಡಿಸಲಾಗಿದೆ.

**ಸಭಾಪತಿಯವರು:–** ಬೆಳಿಗ್ಗೆ ನಾಣಯ್ಯನವರು ಮತ್ತು ವಿರೋಧ ಪಕ್ಷದ ಎಲ್ಲ ಸದಸ್ಯರು ಸದನದ ಬಾವಿಯೊಳಗೆ ಧರಣಿ ಕುಳಿತು ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ನೀಡಬೇಕೆಂದು ಕೇಳಿದಂತಹ ಸಂದರ್ಭದಲ್ಲಿ ನಾನು ಪ್ರಶ್ನೋತ್ತರ ಅವಧಿ ಮುಗಿದ ನಂತರ ಅವಕಾಶವನ್ನು ನೀಡುತ್ತೇನೆಂದು ಹೇಳಿದಾಗ, ಧರಣಿಯಲ್ಲಿ ಪಾಲ್ಗೊಂಡಿದ್ದ ಎಲ್ಲ ಗೌರವಾನ್ವಿತ ವಿರೋಧ ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಮರಳಿ ಸದನವನ್ನು ನಡೆಸುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಬೆಳಿಗ್ಗೆ ಸಮಯ ಬಹಳಷ್ಟು ಆಗಿದ್ದ ಹಿನ್ನೆಲೆಯಲ್ಲಿ ಈಗ ಅವರು ಯಾವ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿದ್ದಾರೆ ಅದನ್ನು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಬೇಕೆಂದು ಮಾನ್ಯ ನಾಣಯ್ಯನವರಿಗೆ ತಿಳಿಸುತ್ತಿದ್ದೇನೆ.

**5. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಪ್ರಸ್ತಾವ.**

**ವಿಧಾನಸಭಾ ಸದಸ್ಯರು ಒಬ್ಬರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವುದರಿಂದ ಉದ್ಭವಿಸಿರುವ ವಿಚಾರದ ಕುರಿತು**

**ಶ್ರೀ ಯಂ.ಸಿ.ನಾಣಯ್ಯ(ವಿಧಾನಸಭಾ ಕ್ಷೇತ್ರ):** ಸನ್ಮಾನ್ಯ ಸಭಾಪತಿಯವರೇ, ನಾವು ನಿಯಮ 59 ರ ಅಡಿಯಲ್ಲಿ ಪ್ರಸ್ತಾಪ ಮಾಡುತ್ತಿರುವ ವಿಚಾರ, ಪ್ರಜಾತಂತ್ರ ವ್ಯವಸ್ಥೆಗೆ ಒಳಪಟ್ಟಿರುವಂತಹ ನಮ್ಮೆಲ್ಲರಿಗೂ ಈ ಸದನ ಮತ್ತು ಕೆಳಗಿನ ಸದನದಲ್ಲಿ ಇರುವಂತಹ ಎಲ್ಲ ಸದಸ್ಯರಿಗೂ ಹಾಗೂ ಈ ರಾಜ್ಯದ

ಎಲ್ಲ ಮತದಾರರಿಗೂ ಅನ್ವಯವಾಗುವಂತಹ ವಿಚಾರವಾಗಿದೆ. ಪ್ರಜಾತಂತ್ರ ವ್ಯವಸ್ಥೆಯನ್ನು ನಾವು ಒಪ್ಪಿಕೊಂಡಿದ್ದೇವೆ. ರಾಜ್ಯಾಂಗಬದ್ಧವಾಗಿ ನಾವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಡೆಸಬೇಕಾಗಿದೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದವರು ತಮ್ಮದೇ ಆದ ಧಾಟಿಯಲ್ಲಿ ಕೆಲಸ ಮಾಡಬೇಕೆನ್ನುವ ಚಿಂತನೆ ನಮ್ಮ ರಾಜ್ಯಾಂಗದಲ್ಲಿ ಇಲ್ಲ. ಪ್ರಜಾತಂತ್ರ ವ್ಯವಸ್ಥೆಗೆ ಅದು ಪರವಾಗಿಯೂ ಇಲ್ಲ ವಿರೋಧವಾಗಿಯೂ ಇಲ್ಲ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಜನರ ಬಗ್ಗೆ ಚಿಂತನೆ ಮಾಡಬೇಕೆನ್ನುವ ಹಿನ್ನೆಲೆಯಲ್ಲಿ ನಾವು ಈ ಸದನವನ್ನು ನಡೆಸುತ್ತಿದ್ದೇವೆ. ನಮ್ಮ ರಾಜ್ಯಾಂಗದಲ್ಲಿ ಎಲ್ಲಿಯೂ ರಾಜಕೀಯ ಪಕ್ಷಗಳ ಉಲ್ಲೇಖವೇ ಇಲ್ಲ. ರಾಜ್ಯಾಂಗದಲ್ಲಿ ನಮ್ಮ ರಾಷ್ಟ್ರಪತಿಗಳಿಗೂ ಮತ್ತು ರಾಜ್ಯಪಾಲರಿಗೂ ಇರುವಂತಹ ಅಧಿಕಾರ, ಸರ್ಕಾರವನ್ನು ರಚನೆ ಮಾಡುವಂತಹ ಸಂದರ್ಭದಲ್ಲಿ ಹೆಚ್ಚು ಬಹುಮತವಿರುವಂತಹ ಗುಂಪು (ಪಕ್ಷದ ಆಧಾರದ ಮೇಲೆ ಅಲ್ಲ) ಒಟ್ಟಾಗಿ ಸೇರಿ, 'ನಾವು ಸರ್ಕಾರವನ್ನು ರಚನೆ ಮಾಡುತ್ತೇವೆ' ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾದಾಗ, ಮಾನ್ಯ ರಾಜ್ಯಪಾಲರು ಅವರನ್ನು ಕರೆಯುತ್ತಾರೆ, ಅವರು ಪ್ರಮಾಣ ವಚನವನ್ನು ಸ್ವೀಕಾರ ಮಾಡುತ್ತಾರೆ. ಪ್ರಮಾಣ ವಚನವನ್ನು ಸ್ವೀಕಾರ ಮಾಡುವಂತಹ ಸಂದರ್ಭದಲ್ಲಿ, ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ನಾನು ಭಾರತೀಯ ಜನತಾ ಪಕ್ಷದ ಅಥವಾ ಜನತಾ ದಳದ ಅಥವಾ ಕಾಂಗ್ರೆಸ್‌ನ ಮುಖ್ಯಮಂತ್ರಿ ಅಥವಾ ಮಂತ್ರಿ ಎಂದು ಎಲ್ಲಿಯೂ ಹೇಳುವುದಿಲ್ಲ. ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯಾಂಗ ವ್ಯವಸ್ಥೆ ಇದೆ. ನಾವು ನಮ್ಮದೇ ಆಗಿರುವಂತಹ ವಿಧೇಯಕವನ್ನು ರಚನೆ ಮಾಡಿಕೊಡಿದ್ದೇವೆ. ಪಕ್ಷಾಂತರ ಎನ್ನುವುದು ಇವತ್ತು ನಿನ್ನೆಯಿಂದ ನಡೆದು ಬಂದಿರುವುದಿಲ್ಲ. ರಾಮನ ಕಾಲದಿಂದಲೂ ಪಕ್ಷಾಂತರ ಎನ್ನುವುದು ನಡೆಯುತ್ತಾ ಬಂದಿದೆ ಎನ್ನುವ ವಿಚಾರವನ್ನು ನಾನು ಉಲ್ಲೇಖ ಮಾಡಿದ್ದೆ. ರಾಮ–ರಾವಣರ ಮಧ್ಯದಲ್ಲಿ ಧರ್ಮ ಮತ್ತು ಅಧರ್ಮದ ವಿಚಾರ ಬಂದಾಗ, ರಾಮ ಪಕ್ಷಾಂತರವನ್ನು ಮಾಡಿಸಿದ್ದ.

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ರಾಮಾಯಣದಲ್ಲಿ ಯುದ್ಧ ಘೋಷಣೆ ಆದ ಮೇಲೆ ಪಕ್ಷಾಂತರವಾಯಿತು. ಚುಣಾವಣೆ ಸಂದರ್ಭದಲ್ಲಿ ಪಕ್ಷಾಂತರವಾದರೆ, ಅದು ಸರಿ ಹೋಗುತ್ತದೆ.

**ಶ್ರೀ ಯಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್‌ರವರು ವಾಖ್ಯಾನ ಮಾಡುವುದು ಬೇಡ. ನಾನು ಪಕ್ಷಾಂತರ ಪರ ಅಥವಾ ವಿರೋಧ ಎನ್ನುವಂತಹ ವಾಖ್ಯಾನವನ್ನು ಮಾಡುವುದಕ್ಕೆ ಹೋಗುವುದಿಲ್ಲ. ಪಕ್ಷಾಂತರ ಎನ್ನುವುದು ಒಂದು ಅನಿಷ್ಟ ಪದ್ಧತಿಯಾಗಿದೆ. ನಮ್ಮ ರಾಜ್ಯಾಂಗದಲ್ಲಿ ಇಲ್ಲದೆ ಇರುವಂತಹ ವಿಚಾರವನ್ನು ಮಾಡುತ್ತಿರುವುದು ಒಂದು ಅನಿಷ್ಟ ಪದ್ಧತಿಯಾಗಿದೆ. ಅದರಿಂದ ಪ್ರಜಾಪ್ರಭುತ್ವ ವ್ಯವಸ್ಥೆ ನಾಶವಾಗಿ, ನಮ್ಮ ಪ್ರಜಾಸತ್ತೆಗೆ ಬೆಲೆ ಇಲ್ಲದಂತಾಗಿರುವ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ನಮ್ಮ ರಾಷ್ಟ್ರ ಯಾವ ದಿಕ್ಕಿಗೆ ಸಾಗುತ್ತಿದೆ ಎನ್ನುವುದಕ್ಕೆ ರಾಷ್ಟ್ರದ ಉದ್ದಗಲಕ್ಕೂ ನಡೆಯುತ್ತರುವಂತಹ ಭ್ರಷ್ಟಾಚಾರವೊಂದೇ ಜೀವಂತ ಸಾಕ್ಷಿಯಾಗಿದೆ. ಪ್ರಪಂಚದ ಪ್ರಜಾತಂತ್ರ ರಾಷ್ಟ್ರಗಳ ಮಧ್ಯದಲ್ಲಿ ಅಭಿವೃದ್ಧಿಯಲ್ಲಿ ಎತ್ತರಕ್ಕೆ ಹೋಗಿರುವುದು ನಿಜ. ಆದರೆ, ಭ್ರಷ್ಟಾಚಾರದಲ್ಲಿ ಯಾವ ಸ್ಥಾನವನ್ನು ನಮ್ಮ ದೇಶ ಹೊಂದಿದೆ ಎನ್ನುವುದನ್ನು ಅವಲೋಕನ ಮಾಡಿದರೆ, Transparency Internatoinal ಎನ್ನುವಂತಹ ಸರ್ಕಾರೇತರ ಸಂಸ್ಥೆಯೊಂದು ಭ್ರಷ್ಟಾಚಾರದ ಬಗ್ಗೆ ನಡೆಸಿದಂತಹ ಸಮೀಕ್ಷೆಯ ವರದಿಯಲ್ಲಿ ಅತೀ ಕಡಿಮೆ ಭ್ರಷ್ಟಾಚಾರವನ್ನು ನಡೆಸುವಂತಹ ದೇಶಗಳ ಪಟ್ಟಿಯಲ್ಲಿ ನಮ್ಮ ದೇಶ 87ನೇ ಸ್ಥಾನವನ್ನು ಗಳಿಸಿಕೊಂಡಿದೆ. ಫಿನ್‌ಲ್ಯಾಂಡ್ ಅತ್ಯಂತ ಚಿಕ್ಕ ರಾಷ್ಟ್ರವಾಗಿದೆ. ಆ ರಾಷ್ಟ್ರದಲ್ಲಿ ಸುಮಾರು 55 ಸಾವಿರ ಕೆರೆಗಳಿವೆ. ಆ ದೇಶವನ್ನು ಕೆರೆಗಳ ನಾಡು ಎಂದು ಕರೆಯುತ್ತಾರೆ. ಈ ರಾಷ್ಟ್ರ ಅತ್ಯಂತ ಕಡಿಮೆ ಭ್ರಷ್ಟಾಚಾರದ ದೇಶಗಳ ಪಟ್ಟಿಯಲ್ಲಿ ಮೊದಲನೇ ಸ್ಥಾನವನ್ನು ಹೊಂದಿದೆ. ಪ್ರಪಂಚದಲ್ಲಿ ಬಳಕೆಯಾಗುತ್ತಿರುವಂತಹ ನೋಕಿಯಾ ಮೊಬೈಲ್ ಹ್ಯಾಂಡ್ ಸೆಟ್‌ಗಳು ಫಿನ್‌ಲ್ಯಾಂಡ್‌ನಲ್ಲಿಯೇ ತಯಾರಾಗುತ್ತಿವೆ.

**ಸಭಾಪತಿಯವರು:–** ಮಾನ್ಯ ನಾಣಯ್ಯನವರೇ ಒಂದು ನಿಮಿಷ, ತಾವು ಮೊಬೈಲ್ ಎಂದ ಕೂಡಲೇ ನನಗೆ ಒಂದು ವಿಚಾರ ನೆನಪಾಯಿತು. ನಮ್ಮ

ಸದನದೊಳಗೆ ಮೊಬೈಲ್ ಬಳಕೆಯನ್ನು ನಿಷೇಧಿಸಿದ್ದೇವೆ. ಅದಕ್ಕಾಗಿ ಜಾಮರ್ ಹಾಕಿದ್ದೇವೆ. ಆದರೆ ಇವತ್ತು ಹೊಸ ತಂತ್ರಜ್ಞಾನ ಬಂದು ನಾವು ಹಾಕಿರುವಂತಹ ಜಾಮರ್ ಕೆಲವು ಮೊಬೈಲ್‌ಗಳನ್ನು ವರ್ಕ್ ಮಾಡುವುದಕ್ಕೆ ಬಿಡುವುದಿಲ್ಲ, ಕೆಲವೊಂದು ಮೊಬೈಲ್‌ಗಳು ಅದನ್ನು ಓವರ್ ಟೇಕ್ ಮಾಡುತ್ತಿವೆ. ಹಾಗಾಗಿ ಒಂದು ವಿಚಾರವನ್ನು ನಾನು ಇಲ್ಲಿ ಬಹಳ ಗಂಭೀರವಾಗಿ ಪ್ರಸ್ತಾಪ ಮಾಡುತ್ತಿದ್ದೇನೆ. ಗೌರವಾನ್ವಿತ ಸದಸ್ಯರು, ಅಧಿಕಾರಿಗಳ ಗ್ಯಾಲರಿಗೆ ಬರುವಂತಹ ಅಧಿಕಾರಿಗಳು ಮತ್ತು ಮಾಧ್ಯಮದ ಮಿತ್ರರು ಸದನದ ಒಳಗೆ ಬರುವಾಗ ತಮ್ಮ ತಮ್ಮ ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಿಯೇ ಬರಬೇಕು ಅಥವಾ ಹೊರಗಡೆ ಯಾರಿದ್ದಾರೆ ಅವರ ಕೈಗೆ ಕೊಟ್ಟು ಬರಬೇಕು. ಇನ್ನೊಮ್ಮೆ ಸದನದ ಒಳಗೆ ಮೊಬೈಲ್ ಸದ್ದನ್ನು ಕೇಳಿದರೆ, ನಾನು ಆ ಮೊಬೈಲ್‌ನ್ನು confiscate ಮಾಡಿಕೊಳ್ಳುತ್ತೇನೆ.

**ಶ್ರೀ ಯಂ.ಸಿ. ನಾಣಯ್ಯ:-** ಸನ್ಮಾನ್ಯ ಸಭಾಪತಿ ಯವರೇ, ಇದೊಂದು ಒಳ್ಳೆಯ ನಿರ್ಣಯವಾಗಿದೆ. ಮೊದಲನೆಯ ಬಾರಿಗೆ ತಾವು ಆ ಮೊಬೈಲ್‌ನ್ನು ಮುಟ್ಟುಗೋಲು ಹಾಕಿಕೊಳ್ಳಿ, ಎರಡನೆಯ ಬಾರಿಗೆ ಆ ಸದಸ್ಯರು ಬಂದರೆ ಅವರನ್ನು ಸದನದಿಂದ ಹೊರಗೆ ಹಾಕಿ. ಸ್ವಯಂ ಘೋಷಿತವಾಗಿರುವಂತಹ ಶಿಸ್ತನ್ನು ನಾವು ಕಾಪಾಡಿಕೊಳ್ಳಬೇಕಾಗುತ್ತದೆ. ಆ ಕೆಲಸವನ್ನು ತಾವು ಮಾಡಿದ್ದೀರಿ. ಅದಕ್ಕಾಗಿ ತಮಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಸಂಸತ್ತಿನಲ್ಲಿ ಎಲ್ಲ ಪಕ್ಷದವರು ಒಟ್ಟಾಗಿ ಸೇರಿ ಪಕ್ಷಾಂತರ ನಿಷೇಧ ಕಾಯ್ದೆ ಷೆಡ್ಯೂಲ್ 10 ಕ್ಕೆ ತಿದ್ದುಪಡಿಯನ್ನು ತರಲಾಯಿತು. ಆಗ ಯಾರೂ ಕೂಡ ಅದಕ್ಕೆ ವಿರೋಧವನ್ನು ವ್ಯಕ್ತಪಡಿಸಲಿಲ್ಲ. ರಾಜ್ಯಾಂಗವನ್ನು ರಚನೆ ಮಾಡಿ ಜನವರಿ 26, 1950 ರಲ್ಲಿ ನಮ್ಮ ರಾಷ್ಟ್ರ ಗಣತಂತ್ರ ರಾಷ್ಟ್ರವಾಯಿತು. ಈ ಸಂದರ್ಭದಲ್ಲಿ ರಾಜ್ಯಾಂಗವನ್ನು ರಾಷ್ಟ್ರಕ್ಕೆ ಸಮರ್ಪಣೆ ಮಾಡಿದಂತಹ ಸಂದರ್ಭದಲ್ಲಿ,

*“We the people of India solemnly resolved to constitute India into a severing democratic republic and give this constitution and to ourselves”*

ಎಂದು ಹೇಳಲಾಗಿತ್ತು. ನಮ್ಮ ರಾಜ್ಯಾಂಗ ನಮಗಾಗಿ ನಾವೇ ರಚನೆ ಮಾಡಿಕೊಂಡಿರುವಂತಹ ರಾಜ್ಯಾಂಗವಾಗಿದೆ. ರಾಜ್ಯಾಂಗವನ್ನು ರಚನೆ ಮಾಡುವಂತಹ ಸಂದರ್ಭದಲ್ಲಿ ಮುಂದಿನ 25–30 ವರ್ಷಗಳಲ್ಲಿ ಈ ರಾಷ್ಟ್ರದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತದೆ, ಶಾಸಕರನ್ನು ಮತ್ತು ಎಂ.ಪಿ. ಗಳನ್ನು ಖರೀದಿ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ, ಪಾರ್ಲಿಮೆಂಟಿನಲ್ಲಿ ಅಥವಾ ನಮ್ಮ ವಿಧಾನಮಂಡಲಗಳಲ್ಲಿ ಪ್ರಶ್ನೆಗಳನ್ನು ಕೇಳುವುದಕ್ಕೆ ನೋಟೀಸ್‌ಗಳನ್ನು ಕೊಡುವುದಕ್ಕೆ query for cash ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಯಾರಿಗೂ ಗೊತ್ತಿರಲಿಲ್ಲ. ಈ ಯೋಚನೆ ಅಂದು ಅವರಿಗೆ ಬಂದಿದ್ದರೆ ಅದಕ್ಕೆ ಸರಿಯಾದಂತಹ ನಿಯಮಾವಳಿಗಳನ್ನು ಬಹುಶಃ ರಾಜ್ಯಾಂಗದಲ್ಲಿ ಅಳವಡಿಸುತ್ತಿದ್ದರೋ ಏನೋ. ಆದರೂ ಕೂಡ ನಮ್ಮ ದೇಶದಲ್ಲಿ ಪ್ರಥಮ ಬಾರಿಗೆ ಪಕ್ಷಾಂತರ ನಿಷೇಧ ಕಾಯಿದೆಯನ್ನು ತರುವುದಕ್ಕೆ ಮೊದಲು ಈ ಚಿಂತನೆ ಬಹಳ ಚಿಕ್ಕ ರಾಜ್ಯದಿಂದ ಪ್ರಾರಂಭವಾಯಿತು. ಆ ರಾಜ್ಯ ಯಾವುದೆಂದು ಮಾನ್ಯ ಮಧುಸೂದನ್‌ರವರಿಗೆ ತಿಳಿದಿರಬಹುದು.

**ಶ್ರೀ ಸಿ.ಎಂ. ಉದಾಸಿ:–** ಸನ್ಮಾನ್ಯ ಸಭಾಪತಿಯವರೇ, ಅದು ಕುರುಕ್ಷೇತ್ರ ಇರಬಹುದು.

**ಶ್ರೀ ಯಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ಕುರುಕ್ಷೇತ್ರ ಅಲ್ಲ. ರಾಮಾಯಣದಲ್ಲಿ ವಿಭೀಷಣನನ್ನು, ‘ನೀನು ಧರ್ಮದ ಪರ ಇರು ಅಧರ್ಮದ ಪರ ಇರಬೇಡ’ ಎಂದು ಕರೆದಾಗ ರಾವಣನ ತಮ್ಮನಾದ ವಿಭೀಷಣ ಅಣ್ಣನನ್ನು ತೊರೆದು ರಾಮನ ಜೊತೆಗೆ ಹೋಗಿಯೇ ಬಿಡುತ್ತಾನೆ. ಪಕ್ಷಾಂತರ ನಿಷೇಧ ಕಾಯಿದೆ ತರುವಂತಹ ಚಿಂತನೆ ಬಹಳ ಚಿಕ್ಕ

ರಾಜ್ಯವಾಗಿರುವಂತಹ ಹರಿಯಾಣದಲ್ಲಿ ಪ್ರಾರಂಭವಾಯಿತು. ಆನಂತರ ಎಲ್ಲ ರಾಜ್ಯಗಳಿಗೂ ಅದರ ಪರಿಣಾಮ ಹರಡಲು ಪ್ರಾರಂಭವಾಯಿತು.

ಸನ್ಮಾನ್ಯ ಸಭಾಪತಿಯವರೇ, ಪ್ರಜಾತಂತ್ರ ವ್ಯವಸ್ಥೆ ನಾಶವಾಗುವಂತಹ ಪರಿಸ್ಥಿತಿ ನಿರ್ಮಾಣವಾದಾಗ, ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದವರು ಒಟ್ಟಿಗೆ ಕುಳಿತು ಕೆಲಸ ಮಾಡುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿಯಲ್ಲಿ ರಾಜಕೀಯ ಎನ್ನುವುದು ವೈಷಮ್ಯ ಮತ್ತು ಸಂಘರ್ಷದ ಪರಿಸ್ಥಿತಿ ನಿರ್ಮಾಣ ವಾಯಿತು. ಕಡೆಗೂ ಇದಕ್ಕೆ ಕಡಿವಾಣ ಹಾಕಬೇಕೆಂದು ಹೇಳಿದಾಗ ನಮ್ಮ ಶಾಸಕರುಗಳನ್ನು, ಸಂಸತ್ ಸದಸ್ಯರನ್ನು ಮಾರಾಟದ ವಸ್ತುಗಳಾಗಬೇಡಿ ಎಂದು ಹೇಳಿ, ನೀವು ನಿಮ್ಮ ಸ್ಥಳದಲ್ಲಿಯೇ ಇರಿ, ನೀವು ಖರೀದಿ ಮಾಡತಕ್ಕಂಥ, ಬಿಕರಿ ಮಾಡತಕ್ಕಂಥ ವಸ್ತುಗಳಾಗಬೇಡಿ ಎಂದು ಸಂಸತ್ತಿನಲ್ಲಿಯೇ ನಾವು ನಮಗೆ ಬೇಕಾಗಿರತಕ್ಕಂಥ ತಿದ್ದುಪಡಿಯನ್ನು ತಂದು ನಮ್ಮನ್ನು ಸಂಸತ್ತಿನಲ್ಲಿ ಪಕ್ಷಾಂತರ ನಿಷೇಧ ಕಾಯ್ದೆಯನ್ನು ಜಾರಿಗೆ ತಂದ ದಿವಸವೇ ನಮ್ಮ ಮರ್ಯಾದೆಯನ್ನು ಆ ಒಂದು ತಿದ್ದುಪಡಿಯನ್ನು ತರುವುದರ ಮೂಲಕ ಸ್ವಲ್ಪಮಟ್ಟಿಗೆ ಅವತ್ತೆ ನಾವು ಕಡಿಮೆ ಮಾಡಿಕೊಂಡೆವು. ಆ ಸಂದರ್ಭದಲ್ಲಿ ಈ ತಿದ್ದುಪಡಿ ಬೇಕಾಗಿಲ್ಲ. ಆ ಪಕ್ಷದಲ್ಲಿರತಕ್ಕಂಥ ಎಲ್ಲರೂ ಒಟ್ಟಿಗೆ ಸೇರಿ ಪಕ್ಷದಲ್ಲಿ ಉಳಿದುಕೊಳ್ಳುತ್ತೇವೆ. ನಮ್ಮನ್ನು ಖರೀದಿ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಒಟ್ಟಾರೆ ಒಂದೇ ಮನಸ್ಸಿನಲ್ಲಿ ಸಂಸತ್ತಿನಲ್ಲಿ ಹೇಳುವುದಕ್ಕೆ ಶಕ್ತಿಯೂ ಬರಲಿಲ್ಲ, ಆ ತರಹದ ರಾಜಕೀಯ ಧೈರ್ಯವೂ ಬರಲಿಲ್ಲ. ಕಡೆಗೆ 10ನೇ ಶೆಡ್ಯೂಲ್‌ಗೆ ತಿದ್ದುಪಡಿಯನ್ನು ತಂದು ಆಯಿತು. ಆಗ ಅಲ್ಲಿ ಏನಾಯಿತು ಎಂದರೆ ಹೋಲ್‌ಸೇಲ್ ಖರೀದಿ ಮಾಡಿದರೆ ಅವಕಾಶ, ರಿಟೇಲ್ ಆಗಿ ಮಾಡಿದರೆ ಅವಕಾಶವಿಲ್ಲವೆಂದು ಮಾಡಿದರು. ಇದು ಯಾವ ದುರಂತ? ಹೋಲ್‌ಸೇಲ್ ಅಂದರೆ ಮೂರನೆ ಒಂದು ಭಾಗ you can do that ಒಬ್ಬ ಸದಸ್ಯರು ಪಕ್ಷಾಂತರ ಹೊಂದಿದರೆ ನೀವು ಹೋಗಬಾರದು ಎಂದು ಮಾಡಿ ಆಚೆಕಡೆ ನುಗ್ಗಿದರು, ಈಚೆಕಡೆ ನುಗ್ಗಿದರು. ಕಡೆಗೆ ಅದರ ಬಾಯಿಗೆ ಮಣ್ಣಾಯಿತು. ಕಡೆಗೆ ಪುನಃ ಇದಕ್ಕೆ ತಿದ್ದುಪಡಿಯನ್ನು ತಂದರು. ಈಗ ನಮ್ಮ ಸಂಸತ್ತಿನಲ್ಲಿ ತಂದಿರುವ ತಿದ್ದುಪಡಿ ಏನೆಂದರೆ, ಯಾವುದಾದರೂ ಒಂದು

ರಾಜಕೀಯ ಪಕ್ಷಕ್ಕೆ ಸೇರಿರತಕ್ಕಂಥ ಶಾಸಕರುಗಳು ಬಹುಶಃ ಅವರಿಗೆ ಆ ಪಕ್ಷದಲ್ಲಿರತಕ್ಕಂಥ ಚಿಂತನೆ, ಅವರ ಪ್ರಣಾಳಿಕೆ, ಐಡಿಯಾಲಜಿ ಹಿಡಿಸದೇ ಹೋದರೆ ಆ ಪಕ್ಷದಲ್ಲಿರತಕ್ಕಂಥ ಶಾಸಕರುಗಳು ಶಾಸಕಾಂಗ ಪಕ್ಷದ ಮೂರನೆ ಎರಡು ಭಾಗದಷ್ಟು ಸದಸ್ಯರು ಆ ಪಕ್ಷ ಬೇಡವೆಂದರೆ, ಆ ಪಕ್ಷವನ್ನು ತ್ಯಜಿಸಿ ಇನ್ನೊಂದು ಪಕ್ಷಕ್ಕೆ ಸಂಯೋಜನೆ ಮಾಡುವುದಕ್ಕೆ ಮಾತ್ರ ಅವಕಾಶ ಹೊರತು ಇನ್ಯಾವುದಕ್ಕೂ ಇವತ್ತಿನ ದಿವಸ ಕಾನೂನಿನಲ್ಲಿ ಅವಕಾಶವಿಲ್ಲ. ಇಲ್ಲಿ ಹೋಲ್‌ಸೇಲ್ ಆಗಿಯೂ ಹೋಗುವ ಹಾಗಿಲ್ಲ, ರೀಟೇಲ್ ಆಗಿಯೂ ಹೋಗುವ ಹಾಗಿಲ್ಲ. ಬೇಕಾದರೆ ಮೂರನೆ ಎರಡರಷ್ಟು ಜನ ಇನ್ನೊಂದು ಪಕ್ಷಕ್ಕೆ ಸೇರ್ಪಡೆ ಆಗಬಹುದು ಎನ್ನುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದರೆ ಅದು ನಮಗೆಲ್ಲರಿಗೂ ನಾಚಿಕೆಗೇಡಿನ ವಿಷಯ. ಆದರೆ ನಾವೆಲ್ಲರೂ ಬಹಳ ಹೆಮ್ಮೆಯಿಂದ ಮೂರನೆ ಎರಡರಷ್ಟು ಜನ ಹೋಗಿದ್ದೇವೆ ಎಂದು ಹೇಳುತ್ತೇವೆ. ಮೂರನೆಯ ಎರಡರಷ್ಟು ಜನ ಎಂದರೆ ಹೇಗೆ? ಒಂದು ಪಕ್ಷದಲ್ಲಿ ಮೂರು ಜನರು ಮಾತ್ರ ಇದ್ದರೆ ಇಬ್ಬರು ಪಕ್ಷಾಂತರ ಮಾಡಿದರೆ ಮುಗಿಯಿತು. ಆ ಒಬ್ಬರೇ ಸದಸ್ಯರು ಉಳಿಯುತ್ತಾರೆ. ಅದೇ ರೀತಿ ಯಾವುದೋ ಒಂದು ಪಕ್ಷವನ್ನು ಕಟ್ಟಿಕೊಂಡಿರುತ್ತಾರೆ. It is a non-political party neither registered under the State nor registered under the Centre. It is treated as an independent. ಆದರೆ ಸ್ವತಂತ್ರ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಏನು ಮಾಡಿದರು? ಬಹುಶಃ ಯಾವುದೇ ವಿಷಯವನ್ನು ವ್ಯಾಖ್ಯಾನ ಮಾಡದೇ ಹೋದರೂ ಕೂಡ, ಏಕೆಂದರೆ ಅವರು ಒಂದು ರಾಜಕೀಯ ಪಕ್ಷದ ಸದಸ್ಯರಲ್ಲ. ಅವರು ವ್ಯಾಖ್ಯಾನ ಮಾಡಿರತಕ್ಕಂಥಾದ್ದು ಯಾವುದೆಂದರೆ, If he voluntarily gives up the membership of his party. ಈ ರೀತಿ ವ್ಯಾಖ್ಯಾನವನ್ನು ಮಾಡಿದರು. ಅದು ನಮ್ಮ ಒಂದು ಕಾನೂನು. ಆ ಕಾನೂನಿಗೆ ಅನುಗುಣವಾಗಿ ನಾವೇ ವಿಧಾನ ಮಂಡಲದಲ್ಲಿ ವಿಧಾನ ಸಭೆಗೆ ಮತ್ತು ವಿಧಾನ ಪರಿಷತ್ತಿಗೆ ಸಂಬಂಧಪಟ್ಟ ಹಾಗೆ ನಮ್ಮದೇ ಆಗಿರತಕ್ಕಂಥ ನಿಯಮಾವಳಿಗಳನ್ನು ನಾವೇ ರೂಪಿಸಿಕೊಂಡೆವು. ನಮ್ಮ ಬಳಿ ಆ ನಿಯಮಗಳಿವೆ. ಆ ನಿಯಮಗಳ ಪ್ರಕಾರ ಹೋಗುವುದಕ್ಕೆ ಬರುವುದಿಲ್ಲ.

ಈಗ ಬಿ.ಜೆ.ಪಿ. ಪಕ್ಷದಲ್ಲಿ 110 ಜನ ಸದಸ್ಯರಿದ್ದರೆ ಅವರು ಇನ್ನೊಂದು ಪಕ್ಷಕ್ಕೆ ಸೇರ್ಪಡೆಯಾಗಬೇಕೆಂದರೆ ಸುಮಾರು 75ರಷ್ಟು ಜನ ಹೋಗಬೇಕು. ಈ ರೀತಿ ಹೋಗುವುದಕ್ಕೆ ಸಾಧ್ಯವಿಲ್ಲ. ಅದೇ ರೀತಿ ನಮ್ಮಲ್ಲಿ 28 ಜನ ಸದಸ್ಯರಿದ್ದಾರೆ, ನಾವುಗಳು 10 ಜನರು ಒಟ್ಟಿಗೆ ಹೋಗಬೇಕು. ಆದರೆ ಒಟ್ಟಿಗೆ ಹೋಗುವುದಕ್ಕೆ ಬರುವುದಿಲ್ಲ. ಅದೇ ರೀತಿ ಕಾಂಗ್ರೆಸ್ ಪಕ್ಷದಲ್ಲಿ 80 ಜನರಿದ್ದಾರೆ. ಅವರಲ್ಲಿ ಮೂರನೆ ಎರಡರಷ್ಟು ಜನ ಎಂದರೆ 57 ಜನ ಸದಸ್ಯರು ಹೋಗಲಿಕ್ಕೆ ಆಗುವುದಿಲ್ಲ. ಇನ್ನೇನು ಮಾಡಬೇಕು? ಇದನ್ನು ತಪ್ಪಿಸಬೇಕಲ್ಲ, ಇದನ್ನು ತಪ್ಪಿಸುವುದು ಹೇಗೆ? ಇಲ್ಲಿ ನಾನು ಆಡಳಿತ ಪಕ್ಷವನ್ನು, ಮಾನ್ಯ ಮುಖ್ಯ ಮಂತ್ರಿಗಳನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಬಹುಶಃ ನಮ್ಮ ಕರ್ನಾಟಕ ರಾಜ್ಯ ಭಾರತದ ಇತರ ರಾಜ್ಯಗಳಿಗೆ ಈ ವಿಚಾರದಲ್ಲಿ ಮಾದರಿ ಆಗಬೇಕಾಗಿಲ್ಲ. ಈ ರೀತಿ ನಾವು ಇತರ ರಾಜ್ಯಗಳಿಗೆ ಮಾದರಿ ಆಗಬಾರದು ಕೂಡಾ. ನಮಗೆ ನಮ್ಮದೇ ಆಗಿರತಕ್ಕಂಥ ಆಡಳಿತದ ಪರಂಪರೆ ಇದೆ. ನಮ್ಮದೇ ಆಗಿರಕ್ಕಂಥ ಇತಿಹಾಸವಿದೆ. ನಾನು ಇವತ್ತೂ ಹೇಳುತ್ತೇನೆ ಕರ್ನಾಟಕ ರಾಜ್ಯ ಎಷ್ಟೇ ಭ್ರಷ್ಟಾಚಾರದಲ್ಲಿ ತೊಡಗಿದ್ದರೂ, ನಮ್ಮ ಅಧಿಕಾರಿಗಳು ಎಷ್ಟೇ ಭ್ರಷ್ಟರಾಗಿದ್ದರೂ ಕೂಡ ಇವತ್ತು ಕೂಡ ಕರ್ನಾಟಕ ರಾಜ್ಯ ಆಡಳಿತದ ವ್ಯವಸ್ಥೆಯನ್ನು ಗಣನೆಗೆ ತೆಗೆದುಕೊಂಡಾಗ ನಮ್ಮದು ಖಂಡಿತವಾಗಿ ಮೇಲಿನ ಹಂತದಲ್ಲಿರುವ ಒಂದು ರಾಜ್ಯ. ನಮ್ಮ ಹಣಕಾಸಿನ ವ್ಯವಸ್ಥೆಗೆ, ಆಡಳಿತ, ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟ ಹಾಗೆ ಆಗಲಿ, ಎಷ್ಟೇ ಆಗಿದ್ದರೂ ಕೂಡ ಇತರೆ ರಾಜ್ಯಗಳಿಗೆ ಹೋಲಿಸಿದಾಗ ನಾವು ಒಂದು ಹೆಜ್ಜೆ ಮುಂದೆ ಇದ್ದೇವೆ. ಇವತ್ತು ನಮ್ಮ ರಾಜ್ಯ ಎಲ್ಲಿಗೆ ತಲುಪಿದೆ ಎಂದರೆ ಕರ್ನಾಟಕ ರಾಜ್ಯ ಭ್ರಷ್ಟಾಚಾರದಲ್ಲಿ ಮೊದಲನೆಯ ಸ್ಥಾನದಲ್ಲಿದೆ ಎಂದು ವ್ಯಾಖ್ಯಾನ ಮಾಡುವುದಕ್ಕೆ ಹೊರಟಿದ್ದಾರಲ್ಲಾ. ಈ ಪರಿಸ್ಥಿತಿ ನಮ್ಮ ಚುನಾವಣಾ ವ್ಯವಸ್ಥೆಯಿಂದ ಆಯಿತು. ಸರ್ಕಾರವನ್ನು ರಚನೆ ಮಾಡತಕ್ಕಂಥ ಸಂದರ್ಭದಲ್ಲಿ ಬಂದಿರತಕ್ಕಂಥ ಈ ಅಲ್ಪ ಮತ....

**ಶ್ರೀ ಗೋ.ಮಧುಸೂಧನ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೇವಲ ಚುನಾವಣಾ ವ್ಯವಸ್ಥೆಯಿಂದ ಆಯಿತು ಎಂದು ಹೇಳಿ ಚುನಾವಣಾ

ವ್ಯವಸ್ಥೆಯಲ್ಲಿ ಯಾರಿಗೆ ಎಷ್ಟು ಸೀಟು ಬಂತು, ಅಷ್ಟಕ್ಕೆ ಆಯಿತು ಎಂದೆಲ್ಲಾ. ಎಲ್ಲೋ ಒಂದು ಕಡೆ ದ್ವೇಷದ ರಾಜಕಾರಣ, ಆಕ್ರೋಶದ ರಾಜಕಾರಣ, ಹೊಟ್ಟೆ ಉರಿ ರಾಜಕಾರಣ ಇದರಿಂದ ಪ್ರಾರಂಭವಾಯಿತು. ಇವತ್ತು ರಾಜ್ಯದ ಉಚ್ಛ ನ್ಯಾಯಾಲಯ ಏನು ತೀರ್ಮಾನ ಕೊಟ್ಟಿದೆ ಎಂದು ನೋಡಿದ್ದೀರಿ. ಅದೇ ರೀತಿ ಸರ್ವೋಚ್ಛ ನ್ಯಾಯಾಲಯ ತೀರ್ಪು ಕೊಡುವುದರ ಕಥೆ ಏನಾಯಿತು ಎಂದು ನೋಡಿದ್ದೀರಿ. ಅದರ ಹಿಂದೆ ಯಾರಿದ್ದಾರೆ ಎಂದು ನೋಡಿದ್ದೀರಿ. ಮತ್ತು ಇವತ್ತು ಬೆಳಿಗ್ಗೆಯೂ ಸಹ ಒಂದು ಹೇಳಿಕೆ ಬಂದಿದೆ. ಉತ್ತರ ಕರ್ನಾಟಕದ ಯಾವುದೋ ಒಂದು ವರ್ಗಕ್ಕೆ ಸೇರಿತಕ್ಕಂಥ ಜನರನ್ನು ನಾವು ಆಕರ್ಷಣೆ ಮಾಡಿ we will do it again ಎಂದು ಹೇಳಿ ಇದೆ. ಈ ಒಂದು ಸವಾಲಾಗಿ ತೆಗೆದು ಕೊಳ್ಳುವಂಥಾದ್ದು....

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಾನು ಈ ಸದನದಲ್ಲಿ ಮಾತನಾಡುವಾಗ ದಯವಿಟ್ಟು ಒಂದು ಅಂಶವನ್ನು ಗಮನಿಸಿ. ಮಾನ್ಯ ಮಧುಸೂಧನ್‌ರವರು ಒಂದು ನಿಮಿಷ ಕುಳಿತುಕೊಂಡು ನನ್ನ ಮಾತುಗಳನ್ನು ಕೇಳಲಿ. ವಾದ-ವಿವಾದಕ್ಕೆ ಇಳಿಯಲು ನಾನು ತಯಾರಿಲ್ಲ. ಇದು ವಾದ-ವಿವಾದವಲ್ಲ. ನನ್ನ ಚಿಂತನೆ ಯಾವುದರ ಮಟ್ಟಿಗೆ ಇದೆ ಎಂದು ತಿಳಿದುಕೊಳ್ಳಿ. ನಾನು ವಾದ ಮಾಡಬಹುದು, ಅವರು ವಾದ ಮಾಡಬಹುದು. ಆದರೆ ಅಂತಿಮವಾಗಿ ನಾವು ಎಲ್ಲಿಗೆ ತಲುಪುತ್ತೇವೆ ಎಂದು ಹೇಳಿ. ನಿಜ, ರಾಜಕಾರಣದಲ್ಲಿ ಜಿದ್ದು, ದ್ವೇಷ ಎನ್ನತಕ್ಕಂಥಾದ್ದನ್ನು ನಾವು ಸದನದ ಹೊರಗಡೆ ಮಾತ್ರ ಏಕೆ ಸದನದ ಒಳಗಡೆ ನೋಡುತ್ತಿದ್ದೇವೆ. ಸದನದ ಒಳಗಡೆ ಈ ರೀತಿಯ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ ನಂತರ, ಸದನದ ಒಳಗಡೆಯೂ ಕೂಡ ತೋಳು ಮಡಿಚತಕ್ಕಂಥ ಪರಿಸ್ಥಿತಿಯನ್ನು ನಾವು ನೀವು ನೋಡಿದ್ದೇವೆಯೋ ಇಲ್ಲವೋ ಹೇಳಿ. ಈ ರೀತಿಯಾದ ಮೇಲೆ ಅವರು ಅದನ್ನು ಹೇಳುವುದು ಬೇಡ. ಸಂಘರ್ಷದ ಹಾದಿಯನ್ನು ಹುಡುಕಲಿಕ್ಕೆ ನಾನು ತಯಾರಿಲ್ಲ. ನಾವು ಒಟ್ಟಾರೆ ಸೇರಿ ಈ ವ್ಯವಸ್ಥೆಯನ್ನು ಏನು ಮಾಡೋಣವೆಂದು ಕೇಳೋಣ. ನಾವು ಮತ್ತು ನೀವು ಸದನದ ಸದಸ್ಯರಾಗಿರತಕ್ಕಂಥವರು ಏನು ಮಾಡಬೇಕು? ಈ ಮುಖ್ಯಮಂತ್ರಿಗಳು,

ವಿರೋಧ ಪಕ್ಷದ ನಾಯಕರು ಒಟ್ಟಾರೆ ಸೇರಿ ಏನು ಮಾಡಬೇಕೆಂಬುದನ್ನು ಹೇಳಿ. ಇದೇ ತರಹದ ಒಂದು ಸಂಘರ್ಷ, ಇದೇ ತರಹದ ಒಂದು ವೈಮನಸ್ಸು, ಇದೇ ತರಹದ ರಾಜಕಾರಣವೆಂದು ಅದನ್ನು ಬಿಟ್ಟುಬಿಟ್ಟರೆ ನಮ್ಮನ್ನು ಶಾಸಕರು ಎಂದು ಕರೆಯಲಿಕ್ಕೆ ಹೊರಗಡೆ ಜನ ನಮ್ಮ ಬಗ್ಗೆ ಏನೆಂದು ಹೇಳುತ್ತಾರೆ ಎಂದು ದಯವಿಟ್ಟು ಎಲ್ಲರೂ ಹೋದ ಕಡೆ ಕೇಳಿ. ಸಾಮಾನ್ಯವಾಗಿ ಚರ್ಚೆ ನಡೆಯಬೇಕಾದರೆ ನೀವು ಶಾಸಕರು ಎಂದು ಹೇಳಿಕೊಳ್ಳದೆ ಬಸ್ಸಿನಲ್ಲಿ ಅಥವಾ ಆಟೋ ರಿಕ್ಷಾದವನು ರಾಜಕಾರಣದ ಬಗ್ಗೆ ಅಥವಾ ನಮ್ಮ ಬಗ್ಗೆ ಏನನ್ನು ಹೇಳುತ್ತಾರೆಂದು ಕೇಳಿ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಈ ವ್ಯವಸ್ಥೆಗೆ ಏನು ಮಾಡಬೇಕು? ಆದುರಿಂದ ಮಾನ್ಯ ಯಡಿಯೂರಪ್ಪನವರು ಮಾಡಿದರು, ಇದಕ್ಕೆ ಪರಿಹಾರವೇನು. ಅದರಿಂದ ನಾವು ಇನ್ನೊಂದನ್ನು ಮಾಡಿದೆವು, ಅದಕ್ಕೆ ಪರಿಹಾರವನ್ನು ಹೇಳಿ ಎಂದು ಹೇಳುವುದಕ್ಕಿಂತ ಈ ವ್ಯವಸ್ಥೆಗೆ ಸಂಬಂಧಪಟ್ಟ ಹಾಗೆ, ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ನಾವು, ನೀವು ಇದನ್ನೇ ಮುಂದುವರೆಸಿಕೊಂಡು ಹೋಗಬೇಕೆನ್ನುವುದು ನಮ್ಮ ನಿಮ್ಮ ಚಿಂತನೆಯಾಗಿಯೇ ಎಂಬುದನ್ನು ದಯಮಾಡಿ ಹೇಳಿ. ನಾನು ಇಷ್ಟನ್ನು ಮಾತ್ರ ಹೇಳುತ್ತೇನೆ ಇದಾದ ಮೇಲೆ ನಾನು ಬಜೆಟ್ ಮೇಲೆ ಮಾತನಾಡುತ್ತೇನೆ.

**ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಇಂಟರ್‌ನೆಟ್‌ನಲ್ಲಿ ನೋಡಿದೆ. Anti Defection Bill ಬಗ್ಗೆ ದೇಶಾದ್ಯಂತ ಯಾವ ರೀತಿಯ ಘಟನೆಗಳು ನಡೆಯುತ್ತಿವೆ ಎಂಬುದನ್ನು ನೋಡಿದಾಗ ಪಾರ್ಲಿಮೆಂಟ್ ಕಮಿಟಿಯವರು Anti Defection ಕಾಯಿದೆಗೆ ತಿದ್ದುಪಡಿಯನ್ನು ಮಾಡಬೇಕು ಎನ್ನುವ ಸಲುವಾಗಿ ಮೂರು ಸಾಲುಗಳ ಒಂದು ವಾಕ್ಯವನ್ನು ಬರೆದಿದ್ದಾರೆ. ಅದರಲ್ಲಿ ಏನು ಬರೆದಿದ್ದಾರೆಂದರೆ, "ಯಾವುದೇ ಒಂದು ಪಕ್ಷದಿಂದ ಆಯ್ಕೆಯಾಗಿರುವ ಸದಸ್ಯರು ಸದನದಲ್ಲಿ ಮತ ಚಲಾವಣೆ ಮಾಡಬೇಕಾದಾಗ ಆ ಪಕ್ಷದ ಆದೇಶದ ವಿರುದ್ಧ ಚಲಾವಣೆ ಮಾಡಿದರೆ ಆ ಮತಗಳನ್ನು ಗಣನೆಗೆ ತೆಗೆದುಕೊಳ್ಳದೇ ಇರುವ ಹಾಗೆ ಕಾನೂನಿನಲ್ಲಿ ತಿದ್ದುಪಡಿಯನ್ನು

ತರಬೇಕೆನ್ನುವ" ಒಂದು ಸಲಹೆ ಇದೆ. ಇಂತಹ ಸಲಹೆಗಳನ್ನು ಅವರು ಒಪ್ಪುತ್ತಾರೆಯೇ, ಇದರ ಬಗ್ಗೆ ಬೆಳಕು ಚೆಲ್ಲುತ್ತಾರೆಯೇ ಎಂದು ನಾನು ಇಷ್ಟನ್ನು ಮಾತ್ರ ಕೇಳುತ್ತೇನೆ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಇಂಟರ್‌ನೆಟ್‌ನಲ್ಲಿ ಮಾಡುತ್ತಿರತಕ್ಕಂಥಾದ್ದು... ಕಾಂಗ್ರೆಸ್ ಪಕ್ಷದಲ್ಲಿರುವ ನನ್ನ ಸ್ನೇಹಿತರು ದಯವಿಟ್ಟು ಅಪಾರ್ಥ ಮಾಡಿಕೊಳ್ಳಬೇಡಿ. ಕೇಂದ್ರದ ಕಾನೂನು ಸಚಿವರು ಪಕ್ಷಾಂತರ ನಿಷೇಧ ಕಾಯ್ದೆಗೆ ಸಂಬಂಧಪಟ್ಟ ಹಾಗೆ ಬಹಳಷ್ಟು ಹೇಳಿಕೆಗಳನ್ನು ಕಳೆದ ಆರು ತಿಂಗಳುಗಳಿಂದ ಕೊಡುತ್ತಾ ಬಂದಿದ್ದಾರೆ. ನಿನ್ನೇಯ ದಿವಸ ಒಂದು ಹೇಳಿಕೆಯನ್ನು ಕೊಟ್ಟರು. We will certainly bring steps to put an end to poaching. Poaching ಎಂದರೆ ಏನು? ಆದ್ದರಿಂದ ನಾನು ಅದಕ್ಕೆ ಹೆಚ್ಚಿನ ಬೆಲೆಯನ್ನು ಕೊಡುವುದಿಲ್ಲ. ಕಾರಣವೆಂದರೆ, ನಾನು ಅದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಿಲ್ಲ. ಸುಮ್ಮನೆ ಬಾಯಿ ಚಪಲವನ್ನು ತೀರಿಸಿಕೊಳ್ಳುವುದಕ್ಕೋಸ್ಕರ ಹತ್ತಾರು ಹೇಳಿಕೆಗಳನ್ನು ಕೊಟ್ಟುಕೊಂಡು ಬಂದರೂ ಕೂಡ ಅಂತಿಮವಾಗಿ ಅದಕ್ಕೆ ಮಾಡಬೇಕಾಗಿರುವುದು ಏನು?

**ಶ್ರೀ ವಿ.ಆರ್. ಸುದರ್ಶನ್(ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಳೆದ ತಿಂಗಳು ಜೆ.ಆರ್.ಡಿ.ಟಾಟಾ ಇನ್ಸ್ಟಿಟ್ಯೂಟ್ ಸಂಸ್ಥೆಯಲ್ಲಿ ಕೇಂದ್ರ ಸರ್ಕಾರದ ಕಾನೂನು ಇಲಾಖೆ ಮತ್ತು ಕೇಂದ್ರ ಚುನಾವಣಾ ಆಯೋಗ ಬಹಳ ಒಳ್ಳೆಯ ಒಂದು session/interactionನ್ನು ಏರ್ಪಡಿಸಿದ್ದರು. ಅದರಲ್ಲಿ ಸಾಮಾನ್ಯವಾದ ಮತದಾರರು ಸಹ ಭಾಗವಹಿಸಿದ್ದರು. ಬೇರೆ ಬೇರೆ ರಾಜಕೀಯ ಪಕ್ಷದ ಪ್ರತಿನಿಧಿಗಳು ಸಹ ಆ ಸೆಶನ್‌ನಲ್ಲಿ ಭಾಗವಹಿಸಿದ್ದರು. ಇಡೀ ದೇಶದಲ್ಲಿಯೇ ಈ ರೀತಿಯಾಗಿರತಕ್ಕಂಥ ಒಂದು 6ನೇ ಸೆಶನ್‌ನ್ನು ದಕ್ಷಿಣ ರಾಜ್ಯಗಳಲ್ಲಿಯೂ ಮಾಡಿದ್ದಾರೆ. ಅಂತಿಮವಾಗಿ electoral reformsನ್ನು ಈ ದೇಶದಲ್ಲಿ ತರಬೇಕೆನ್ನುವ ಸದುದ್ದೇಶಕ್ಕಾಗಿ ಆ ಪ್ರಯತ್ನವನ್ನು ಶ್ರೀ ವೀರಪ್ಪ ಮೊಯ್ಲಿಯವರು ನಡೆಸಿರತಕ್ಕಂಥಾದ್ದು ತಮ್ಮ ಗಮನಕ್ಕೂ ಸಹ ಬಂದಿದೆ ಎಂದು ನಾನು ಭಾವಿಸುತ್ತೇನೆ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಆ ವಿಚಾರ ನಮ್ಮ ಗಮನಕ್ಕೂ ಬಂದಿದೆ. ಬಹಳಷ್ಟು ವಿಚಾರಗಳನ್ನು, ಸಲಹೆಗಳನ್ನು ಬಹಳಷ್ಟು ಜನ ಅಲ್ಲಿ ಇಲ್ಲಿ ಕೊಡುತ್ತಿದ್ದಾರೆ. ಕಡೆಗೆ ವ್ಯವಸ್ಥೆ ಮುಂದುವರೆಯುತ್ತಾ ಹೋಗುತ್ತಿದೆ. ಅದಕ್ಕೆ ಕಡಿವಾಣ ಹಾಕಲಿಕ್ಕೆ ಇವತ್ತು ಕೂಡ ನಾನು ಹೇಳುತ್ತೇನೆ ಈ ವ್ಯವಸ್ಥೆ ಕೆಟ್ಟು ಹೋಗಿ ಸುಮಾರು ವರ್ಷಗಳಾಯಿತು. ಇನ್ನು ಅದು ಕೆಡುತ್ತಾ ಹೋಗುತ್ತಿರುತ್ತದೆ. ಇನ್ನು ಮುಂದುವರೆದು ಹೇಳಬೇಕೆಂದರೆ, ನಮ್ಮ ನಾಯಕರಾದ ಶ್ರೀಮಾನ್ ಜೆ.ಹೆಚ್. ಪಟೇಲರ ಮಾತುಗಳನ್ನು ನಾನು ಹೇಳಬೇಕಾಗುತ್ತದೆ. 50 ಮತ್ತು 60 ದಶಕದಲ್ಲಿ ವ್ಯವಸ್ಥೆ ಸ್ವಲ್ಪ ಚೆನ್ನಾಗಿ ನಡೆಯುತ್ತಿತ್ತು. ಆ ವ್ಯವಸ್ಥೆ 1980, 1990 ಮತ್ತು 2000 ರ ದಶಕದಲ್ಲಿ ಸ್ವಲ್ಪಮಟ್ಟಿಗೆ ಅವ್ಯವಸ್ಥೆಯ ಹಾದಿಯನ್ನು ಹಿಡಿಯಲಿಕ್ಕೆ ಹೋಯಿತು.

**(4.00 ಗಂಟೆ)**

ಅದು 1980–1990–2000 ನೇ ಇಸವಿಯ ಅಷ್ಟೊತ್ತಿಗೆ ಸ್ವಲ್ಪ ಅವ್ಯವಸ್ಥೆಗೆ ಬಂತು. ಈ 2010ರಲ್ಲಿ ಕುವ್ಯವಸ್ಥೆಯ ಹಾದಿಯನ್ನು ಹಿಡಿಯುತ್ತಿದೆ. ವ್ಯವಸ್ಥೆಯಿಂದ ಅವ್ಯವಸ್ಥೆ, ಅವ್ಯವಸ್ಥೆಯಿಂದ ಕುವ್ಯವಸ್ಥೆಯಾಗಿ ಕೊನೆಗೆ ಒಂದು ವಿಪ್ಲವ ಆಗಿ, ಧೂಳು, ಕಚಡಗಳೆಲ್ಲ ಒಂದು ಕಡೆ ಸೆಟ್ಲ್ ಆಗಿ ಆಗ ಹೊಸ ವ್ಯವಸ್ಥೆ ಬರಲೂಬಹುದು. ಅದನ್ನು ನೋಡುವುದಕ್ಕೆ ನಾವು–ನೀವು ಯಾರೂ ಇರುವುದಿಲ್ಲ. ಆದರೆ ನಮಗೆ ಅದು ಉತ್ತರವಲ್ಲ. ಇಂತಹ ಸಂದರ್ಭ ಬಂದಾಗ ನಾವು ಒಟ್ಟಾಗಿ ಸೇರಿ ರಾಜ್ಯಾಂಗಕ್ಕೆ ತಿದ್ದುಪಡಿ ತರಬೇಕಾಗಿತ್ತು. ಕೇವಲ ಎರಡು–ಮೂರು ತಿದ್ದುಪಡಿಗಳನ್ನು ತಂದರೆ ಸಾಕು. ಆದರೆ ಇದಕ್ಕೆ ರಾಜಕೀಯ ಇಚ್ಚಾಶಕ್ತಿ ಬೇಕು. ಒಂದು ರಾಜಕೀಯ ಪಕ್ಷದಿಂದ ನಿಂತು, ಆ ರಾಜಕೀಯ ಪಕ್ಷದಿಂದ ಗೆದ್ದಿರುವಂತಹ ಸದಸ್ಯ ಅವಧಿ ತೀರುವವರೆಗೆ ಪಕ್ಷಾಂತರ ಮಾಡುವುದಾಗಲಿ, ರಾಜೀನಾಮೆ ಕೊಟ್ಟು ಬೇರೆ ಪಕ್ಷಕ್ಕೆ ಹೋಗುವುದಾಗಲಿ ಮಾಡಬಾರದು. ಹಾಗೆ ಮಾಡಿದರೆ ಅವನ ಆ ಅವಧಿ ಮತ್ತು ಮುಂದಿನ ಟರ್ಮ್ ಏನಿದೆ ಆ ಅವಧಿಯಲ್ಲೂ ಚುನಾವಣೆಗೆ ನಿಲ್ಲುವ ಹಾಗಿಲ್ಲ. ಎಂಬ ನಿಯಮ ಮಾಡಬೇಕು. ಯಾವುದೇ ಒಬ್ಬ ವ್ಯಕ್ತಿ ಈ ರೀತಿ

ರಾಜೀನಾಮೆ ಕೊಟ್ಟರೆ ಅಥವಾ ಪಕ್ಷಾಂತರ ಮಾಡಿದರೆ ಆತನಿಗೆ ಯಾವುದೇ ಹುದ್ದೆ ಅಲಂಕರಿಸಲು ಅವಕಾಶ ಕೊಡಬಾರದು. ಹೀಗೆ ಮಾಡಿದರೆ ಮಾತ್ರ ಇಂತಹ ವ್ಯವಸ್ಥೆಯನ್ನು ತಡೆಗಟ್ಟಬಹುದು. ಮಾನ್ಯ ಸಭಾಪತಿಗಳೆ, ಮೊನ್ನೆ ರಾಜ್ಯ ಉಚ್ಚನ್ಯಾಯಾಲಯ 5 ಜನ ಪಕ್ಷೇತರ ಶಾಸಕರಿಗೆ ಸಂಬಂಧಿಸಿದಂತೆ ಒಂದು ತೀರ್ಪನ್ನು ನೀಡಿತು. ಆ ತೀರ್ಪನ್ನು ಎಲ್ಲರೂ ಸ್ವಾಗತ ಮಾಡಿದರು. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಸ್ವಾಗತ ಮಾಡಿದರು. ಆಡಳಿತ ಪಕ್ಷದಲ್ಲಿ ಇರುವ ಕೆಲವರು, ರಾಜ್ಯ ಉಚ್ಚನ್ಯಾಯಾಲಯವು ಪಕ್ಷಾಂತರ ಮಾಡಿದ್ದಂಥ ಅವರಿಗೆ ಸರಿಯಾಗಿ ಕಪಾಳಮೋಕ್ಷ ಮಾಡಿತು, ಇನ್ನು ಮುಂದೆ ಈ ವ್ಯವಸ್ಥೆ ಸರಿಹೋಗುತ್ತದೆ ಎನ್ನುವ ಭಾವನೆ ವ್ಯಕ್ತಪಡಿಸಿದರು. ಬಹಳಷ್ಟು ಜನ ಇದರ ಬಗ್ಗೆ ವ್ಯಾಖ್ಯಾನ ಮಾಡಿದರು. ಆ ತೀರ್ಪನ್ನು ಎಷ್ಟು ಜನ ಪೂರ್ತಿಯಾಗಿ ಓದಿದ್ದೀರಿ ಎನ್ನುವುದು ನನಗೆ ಗೊತ್ತಿಲ್ಲ. ಸುಮಾರು 140–150 ಪುಟದ ಆ ತೀರ್ಪಿನಲ್ಲಿ ಸುಮಾರು 70 ಪುಟಗಳಷ್ಟು, ಸರ್ವೋಚ್ಚ ನ್ಯಾಯಾಲಯಕ್ಕೆ ಸಂಬಂಧಪಟ್ಟಿರತಕ್ಕ ತೀರ್ಪುಗಳನ್ನು ಉಲ್ಲೇಖ ಮಾಡಲಾಗಿದೆ. ನಮ್ಮ ವಕೀಲರು ಪರ–ವಿರೋಧ ವಾದ ಮಾಡುವಂತಹ ಸಂದರ್ಭದಲ್ಲಿ ಉದಾಹರಿಸುವಂತಹ ತೀರ್ಪುಗಳನ್ನು ಉಲ್ಲೇಖ ಮಾಡಲಾಗಿದೆ. ಅದರಲ್ಲಿ ಒಂದನ್ನು ಬಹಳ ಸಿಗ್ನಿಫಿಕೆಂಟ್ ಆಗಿ ಹೇಳಿದ್ದಾರೆ. ಪಕ್ಷೇತರರು ಯಾರಿದ್ದಾರೋ ಅವರು ಒಬ್ಬ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡುವಾಗ ಎಲ್ಲಾ ರಾಜಕೀಯ ಪಕ್ಷಗಳ ವಿರುದ್ಧ ಸ್ಪರ್ಧೆ ಮಾಡುತ್ತಾರೆ. ಇಂಥವರು ಗೆದ್ದು ಬರುವುದರ ಅರ್ಥ ಎಂದರೆ, ಆ ಕ್ಷೇತ್ರದ ಮತದಾರರು ಎಲ್ಲಾ ರಾಜಕೀಯ ಪಕ್ಷಗಳ ವಿರುದ್ಧವಾಗಿ ಆತನಿಗೆ ಮತ ಕೊಟ್ಟಿರುತ್ತಾರೆ. ಆದ್ದರಿಂದ ರಾಜಕೀಯ ಪಕ್ಷಗಳ ಜೊತೆಯಲ್ಲಿ ಯಾವುದೇ ಸಂದರ್ಭದಲ್ಲಿ ಕೈಜೋಡಿಸಬಾರದು, ಅವರ ಜೊತೆ ಹೋಗಲೇ ಕೂಡದು ಎಂಬ ಆದೇಶವನ್ನು ಅಲ್ಲಿನ ಮತದಾರರು ಕೊಟ್ಟಿರುತ್ತಾರೆ. ಆ ಆದೇಶವನ್ನು ಸಂಪೂರ್ಣವಾಗಿ ನಿರಾಕರಿಸಿ, ಅದನ್ನು ಧಿಕ್ಕರಿಸಿ, ರಾಜ್ಯ ಸರ್ಕಾರದ ಜೊತೆ ಸೇರಿದ್ದಾರೆ, ಆಡಳಿತದಲ್ಲಿ ಮಂತ್ರಿಗಳಾಗಿ ಭಾಗವಹಿಸಿದ್ದಾರೆ, ಅಂದರೆ ರಾಜಕೀಯ ಲಾಭದ ಉದ್ದೇಶದಿಂದ ಯಾವಾಗ ಸರ್ಕಾರದ ಜೊತೆ

ಕೈಜೋಡಿಸಿ ಮಂತ್ರಿಯಾದರೋ ಆ ಘಳಿಗೆಯಿಂದ ಪಕ್ಷೇತರರು ಅನರ್ಹರಾಗುತ್ತಾರೆ.

**ಸಭಾಪತಿಯವರು:–** ಮಾನ್ಯ ನಾಣಯ್ಯನವರೇ ಈಗ ತಾವು ಹೇಳಿದ್ದು ಜಡ್ಜ್‌ಗಳ ಅಭಿಪ್ರಾಯ ಎಂದು ನಾನು ಭಾವಿಸುತ್ತೇನೆ. ಅಂದರೆ, ಸ್ವತಂತ್ರವಾಗಿ ನಿಂತು ಗೆದ್ದವರು ಯಾವುದೇ ಸರ್ಕಾರದಲ್ಲಿ ಪಾಲ್ಗೊಳ್ಳುವ ಹಾಗಿಲ್ಲ ಎಂದಾಯಿತು. ಶ್ರೀ ಮಧುಕೋಡರವರು ಜಾರ್ಖಂಡ್‌ನ ಮುಖ್ಯಮಂತ್ರಿಯೇ ಆಗಿಬಿಟ್ಟರು. ಆದೂ ತಪ್ಪಾಗುತ್ತದೆ. . .

**ಶ್ರೀ ವಿ.ಆರ್. ಸುದರ್ಶನ್:–** ಇದೇ ಆಧಾರವಾಗಿ ಇಟ್ಟುಕೊಂಡುಬಿಟ್ಟರೆ ರಾಷ್ಟ್ರದಲ್ಲಿ ಎಲ್ಲೂ ಕೂಡ ಸಮ್ಮಿಶ್ರ ಸರ್ಕಾರಗಳು ಬರುವುದಕ್ಕೆ ಸಾಧ್ಯ ಇರುವುದಿಲ್ಲ. ಅದಕ್ಕೋಸ್ಕರವೇ ಈ ಕುರಿತು ಪುನರ್ ವಿಮರ್ಶೆ ಮಾಡಬೇಕು ಎನ್ನುವುದು ನಮ್ಮ ಅಭಿಪ್ರಾಯವಾಗಿದೆ . . .

**ಸಭಾಪತಿಯವರು:–** ಮಾನ್ಯ ನಾಣಯ್ಯನವರು ಇಂಗ್ಲಿಷ್‌ನಲ್ಲಿರುವ ಜಡ್ಜ್‌ಮೆಂಟ್ ಓದಿ ಅದನ್ನು ಕನ್ನಡದಲ್ಲಿ ಹೇಳುತ್ತಿದ್ದಾರೆ. . .

**ಶ್ರೀ ಯಂ.ಸಿ. ನಾಣಯ್ಯ:–** ನಮ್ಮ ರಾಷ್ಟ್ರದ ರಾಜಕೀಯ ಪರಿಸ್ಥಿತಿಯ ಹಿನ್ನಲೆಯಲ್ಲಿ ಯಾವುದೇ ಒಂದು ಪಕ್ಷಕ್ಕೆ ತನ್ನದೇ ಆಗಿರತಕ್ಕ ಬಹುಮತ ಸಿಗದೇ ಇರುವ ಕಾಲದಲ್ಲಿ ಇಂತಹ ತೀರ್ಪನ್ನು ಎಲ್ಲಾದರೂ ಸರ್ವೋಚ್ಚ ನ್ಯಾಯಾಲಯ ಒಪ್ಪಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾದರೆ, ಕೆಲವು ಸಂದರ್ಭಗಳಲ್ಲಿ ಪಕ್ಷೇತರರಾಗಿ ನಿಂತುಕೊಳ್ಳುವ ಸದಸ್ಯರು ಅಥವಾ ಸಂಸದ್ ಸದಸ್ಯರನ್ನು ಸೇರಿಸಿಕೊಂಡು ಆಡಳಿತವನ್ನು ಮಾಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಗದೇ ಹೋದರೆ ಅಂತಹ ಅತಂತ್ರ ಸ್ಥಿತಿಯಲ್ಲಿ ಏನು ಮಾಡಬೇಕು ಎಂದು ಸರ್ವೋಚ್ಚ ನ್ಯಾಯಾಲಯ ಚಿಂತನೆ ಮಾಡಬೇಕು. ಮಾನ್ಯ ಸಭಾಪತಿಗಳೆ, ಇಲ್ಲಿ ಬಂದಿರುವ ತೀರ್ಪನ್ನು ಮಾನ್ಯ ಮುಖ್ಯ ಮಂತ್ರಿಗಳು ಸ್ವಾಗತ ಮಾಡಿದರು, ಬಹಳ ಜೋರಾಗಿ ಸ್ವಾಗತ ಮಾಡಿದರು, ನಾನೂ ಕೂಡ ಅಭಿನಂದಿಸಿದೆ. ಆದರೆ, ಪಕ್ಷೇತರ ಶಾಸಕರು ಇವರು ಜೊತೆ ಸೇರಿ ಮಂತ್ರಿ ಆಗುವುದಕ್ಕೆ ಕಾರಣಕರ್ತರಾದವರು ಯಾರು? ಹೇಗಾಯಿತು?

ಇದೆಲ್ಲ ಇತಿಹಾಸ, ನಾನು ಈ ಕುರಿತು ಪೂರ್ತಿಯಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು 30ನೇ ತಾರೀಖಿನಂದು ಪ್ರಮಾಣ ವಚನ ಸ್ವೀಕಾರ ಮಾಡಿದರು. ಆಗ 5 ಜನ ಪಕ್ಷೇತರ ಶಾಸಕರೂ ಕೂಡ ಪ್ರಮಾಣ ವಚನ ಸ್ವೀಕರಿಸಿ ಸಂಪುಟ ದರ್ಜೆಯ ಸಚಿವರಾದರು. ಉಚ್ಚನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ, ಈ ಪಕ್ಷೇತರ ಶಾಸಕರು ಯಾವ ತಾರೀಖಿನಿಂದ ಮಂತ್ರಿಗಳಾದರೋ ಆಗಿನಿಂದಲೇ ತಮ್ಮ ಪಕ್ಷೇತರರಾಗಿ ಗೆದ್ದು ಬಂದಂಥ ಅರ್ಹತೆಯನ್ನು ಕಳೆದುಕೊಳ್ಳುತ್ತಾರೆ. ಆ ದಿವಸದಿಂದ ಅವರು ಅನರ್ಹ ರಾಗುತ್ತಾರೆ. ಇದು ಕಾನೂನಿನ ವ್ಯಾಖ್ಯಾನ. ಈ ಪಕ್ಷೇತರ ಶಾಸಕರು ಮಂತ್ರಿಗಳಾಗಿರುವುದು ಅನರ್ಹರಾದರೆಂದರೆ ಮಾನ್ಯ ಯಡಿಯೂರಪ್ಪನವರೂ ಕೂಡ ಮುಖ್ಯಮಂತ್ರಿಗಳಾಗಿ ಅಂದೇ ಅನರ್ಹರಾಗುತ್ತಾರೆ, ಅಂದೇ ಅವರು ಅಲ್ಪಸಂಖ್ಯಾತ ಮುಖ್ಯಮಂತ್ರಿಗಳಾಗುತ್ತಾರೆ, ಅವರು ಇಲ್ಲಿಯವರೆಗೆ ತಗೆದುಕೊಂಡಿರುವ ಎಲ್ಲಾ ತೀರ್ಮಾನಗಳು ಕಾನೂನು ಬದ್ಧವಾಗಿ, ರಾಜ್ಯಾಂಗಬದ್ಧವಾಗಿ ಅಸಿಂಧು ಆಗಲೇಬೇಕಾಗುತ್ತದೆ. . .

**ಶ್ರೀ ಗೋ. ಮಧುಸೂದನ್:–** ಮಾನ್ಯ ನಾಣಯ್ಯನವರ ವಾದ ಸರಿಯಿಲ್ಲ . . .

(ಗೊಂದಲ)

**ಶ್ರೀ ಎಸ್.ಎ. ರಾಮದಾಸ್:–** ಈ ವಿಷಯವನ್ನು ಈ ಸಭೆಯಲ್ಲಿ ಚರ್ಚೆಯ ವಸ್ತುವಾಗಿ ಇಡುವುದಾದರೆ ನಾವೂ ಕೂಡ ಕೆಲವು ವಿಚಾರಗಳನ್ನು ಮಂಡಿಸಬೇಕಾಗುತ್ತದೆ. ಏಕಮುಖವಾಗಿ ಎಲ್ಲವೂ ದಾಖಲೆಗೆ ಹೋಗುವುದ ರಿಂದ ಎಲ್ಲರೂ ತಮ್ಮ ಅಭಿಪ್ರಾಯಗಳನ್ನು ಕೊಡಬೇಕಾಗುತ್ತದೆ. ಆ ಜಡ್ಜ್‌ಮೆಂಟ್‌ನಲ್ಲಿ ಮಾನ್ಯ ನಾಣಯ್ಯನವರು ಹೇಳುತ್ತಿರುವಂಥ ಅಂಶಗಳು ಮಾತ್ರವಲ್ಲ, ಅದು ಬಿಟ್ಟು ಇನ್ನೂ ಬೇರೆ ಯಾವ ಉಲ್ಲೇಖಗಳಿವೆ ಎಂಬುದನ್ನೆಲ್ಲ ನಾವೂ ಹೇಳಬೇಕಾಗುತ್ತದೆ. ಯಾವ ನಿಯಮದ ಅಡಿ ಈ ವಿಷಯದ ಬಗ್ಗೆ ಚರ್ಚೆ ಆಗುತ್ತಿದೆ ಎನ್ನುವುದನ್ನು ಮಾನ್ಯ ಸಭಾಪತಿಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಇಂಥದ್ದೇ ನಿಯಯದ ಅಡಿ

ಚರ್ಚೆಯಾಗುತ್ತಿದೆ ಎಂದು ಗೊತ್ತಾದರೆ ನಾವೂ ಕೂಡ ಚರ್ಚೆಯಲ್ಲಿ ಭಾಗವಹಿಸಿ ಉತ್ತರ ಕೊಡಬಹುದಾಗಿರುತ್ತದೆ. ಏಕಮುಖವಾಗಿ ಇದು ದಾಖಲೆಗೆ ಹೋಗುವುದು ಬೇಡ. . .

(ಗೊಂದಲ)

**ಸಭಾಪತಿಯವರು:–** ಮಾನ್ಯ ನಾಣಯ್ಯನವರು ತಮ್ಮ ಅಭಿಪ್ರಾಯ ಗಳನ್ನು ಹೇಳುತ್ತಿದ್ದಾರೆ, ವ್ಯಾಖ್ಯಾನ ಮಾಡುತ್ತಿದ್ದಾರೆ. ಆ ಅಭಿಪ್ರಾಯವನ್ನು ಒಪ್ಪುವುದು, ಬಿಡುವುದು ಅಥವಾ ವ್ಯಾಖ್ಯಾನ ಸರಿಯಲ್ಲ ಎಂದು ಹೇಳುವ ಅಧಿಕಾರ ಈ ಸದನದಲ್ಲಿರುವ ಎಲ್ಲಾ ಸದಸ್ಯರಿಗೋ ಇದೆ. ಇನ್ನು ಐದಾರು ನಿಮಿಷದಲ್ಲಿ ಅವರು ತಮ್ಮ ಭಾಷಣವನ್ನು ಮುಗಿಸುತ್ತಾರೆ. ನಂತರ ಸರ್ಕಾರ ಮಾತನಾಡಬಹುದು.

**ಶ್ರೀ ಎಸ್.ಎ. ರಾಮದಾಸ್:–** ಮಾನ್ಯ ಸಭಾಪತಿಗಳೆ, ಐದು ನಿಮಿಷಗಳಾದ ಮೇಲೆ ಅವರು ತಮ್ಮ ಭಾಷಣವನ್ನು ಮುಗಿಸುತ್ತಾರೆ, ಆಮೇಲೆ ಏನು?

**ಸಭಾಪತಿಯವರು:–** ಆಮೇಲೆ ತಾವು ಮಾತನಾಡಬಹುದು. ಅವರು ಹೇಳಿದ್ದು ಸರಿಯಿಲ್ಲ ಎಂದು ಹೇಳುವ ಅಧಿಕಾರ ತಮಗಿದೆ. . .

(ಗೊಂದಲ)

**ಶ್ರೀ ಯಂ.ಸಿ. ನಾಣಯ್ಯ:–** ಇದರ ಬಗ್ಗೆ ಚರ್ಚೆಯನ್ನೇ ಮಾಡಬೇಕೆಂದರೆ ದೀರ್ಘವಾಗಿ ಚರ್ಚೆ ಮಾಡಬಹುದು. . .

**ಸಭಾಪತಿಯವರು:–** ಇಲ್ಲಿ ಎರಡು ವಿಷಯಗಳಿವೆ. ಈ ವಿಚಾರವನ್ನು ನಿಯಮ 59ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ಕೊಡಿ, ಪೂರ್ವಭಾವಿ ಪ್ರಸ್ತಾವನೆ ಮಾಡುತ್ತೇವೆ ಎಂದು ಹೇಳಿದರು. ಪೂರ್ವಭಾವಿ ಪ್ರಸ್ತಾವನೆಯಲ್ಲಿ ಅವರು ಕೆಲವು ವಿಷಯಗಳನ್ನು ಮಂಡಿಸಿದ್ದಾರೆ. ಅದನ್ನು ಒಪ್ಪುವುದು ಅಥವಾ ಬಿಡುವುದು ಸರ್ಕಾರಕ್ಕೆ ಸೇರಿದ್ದು, ಅಲ್ಲದೆ ಎಲ್ಲಾ ಸದಸ್ಯರೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವ ಅಧಿಕಾರ

ಇರುತ್ತದೆ. ಮಾನ್ಯ ನಾಣಯ್ಯನವರು ಜಡ್ಜ್‌ಮೆಂಟ್‌ನಲ್ಲಿರುವ ಅಂಶಗಳನ್ನೇನು ಹೇಳಿದರೋ ಅದನ್ನು ಚೇಂಜ್ ಮಾಡುವುದಕ್ಕೆ ಬರುವುದಿಲ್ಲ. ಆದರೆ ಅವರು ವ್ಯಾಖ್ಯಾನ ಮಾಡುತ್ತಿದ್ದಾರೆ. . .

(ಗೊಂದಲ)

**ಶ್ರೀ ಗೋ ಮಧುಸೂಧನ್:–** ಮಾನ್ಯ ನಾಣಯ್ಯನವರು ಮಂಡಿಸುತ್ತಿರುವ ವಾದವನ್ನು ಮುಂದುವರೆಸಿಕೊಂಡು ಹೋದರೆ, at the same moment ಅವರು ಅನರ್ಹರಾದ ತಕ್ಷಣ the effective strength of the house comes down. We still had the majority.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಗಳೆ, ನೋಟಿಸ್‌ಗೆ ನಾವೂ ಸಹಿ ಹಾಕಿದ್ದೇವೆ. ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. . .

**ಸಭಾಪತಿಯವರು:–** ಸಹಿ ಹಾಕಿರುವವರೆಲ್ಲರಿಗೂ ಮಾತನಾಡಲು ಅವಕಾಶ ಕೊಡುವುದಕ್ಕಾಗುವುದಲ್ಲ. 20–30 ಜನ ಸಹಿ ಹಾಕಿದ್ದಾರೆ. ಅವರೆಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ. ಯಾರಾದರೂ ಒಬ್ಬರು ಮಾತನಾಡಬಹುದು.

**ಶ್ರೀ ವಿ.ಆರ್. ಸುದರ್ಶನ್:–** ಎರಡು–ಮೂರು ಜನರಿಗಾದರೂ ಅವಕಾಶ ಕೊಡಬೇಕಾಗುತ್ತದೆ. ಮಾನ್ಯ ಸಭಾಪತಿಗಳೆ, ಇಂತಹ ವಿಷಯಗಳಿಗೆ ಸಂಬಂಧಪಟ್ಟಂತೆ ಚರ್ಚೆ ನಡೆಯುತ್ತಿರುವಾಗ ಸದನದಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇರಬೇಕಾಗುತ್ತದೆ.

**ಸಭಾಪತಿಯವರು:** ಅವರ ಅವಶ್ಯಕತೆ ಏನೂ ಇಲ್ಲ. ಸಭಾನಾಯಕರು ಸದನದಲ್ಲಿದ್ದಾರೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಬೇಕು.

**ಸಭಾಪತಿಯವರು:–** ಅವರಲ್ಲ, ನಾನು ಮಾತನಾಡುತ್ತೇನೆ ಎಂದು ನೀವು ಮೊದಲೆ ಹೇಳಬೇಕಾಗಿತ್ತು. ನಾನು ನಿಮಗೆ ಅವಕಾಶ ಕೊಡುತ್ತಿದ್ದೆ.

**ಶ್ರೀಮತಿ ಮೋಟಮ್ಮ:–** ನಾನು ಸ್ವಲ್ಪ ತಡವಾಗಿ ಬಂದೆ ಇಲ್ಲದಿದ್ದರೆ ನಾನೇ ಮೊದಲು ಮಾತನಾಡುತ್ತಿದ್ದೆ.

**ಸಭಾಪತಿಯವರು:** ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದು ಒಬ್ಬರು.

**ಶ್ರೀಮತಿ ಮೋಟಮ್ಮ:–** ನಿಮ್ಮ ಅನುಮತಿಯನ್ನು ಪಡೆದುಕೊಂಡು ನಾನು ಮದುವೆಗೆ ಹೋಗಿದ್ದೆ.

**ಸಭಾಪತಿಯವರು:–** ಚರ್ಚೆ ಏನಾದರೂ accept ಆದರೆ ಎಲ್ಲರಿಗೂ ಅವಕಾಶ ಕೊಡುತ್ತೇನೆ. ತಮ್ಮ ಅಭಿಪ್ರಾಯ ಹೇಳುವುದಕ್ಕೆ ಎಲ್ಲರಿಗೂ ಸ್ವಾತಂತ್ರ್ಯ ಇದೆ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಆ ಒಂದು ತೀರ್ಪು ಎಲ್ಲಿಗೆ ತಲುಪುತ್ತದೆ ಎನ್ನುವಂತಹ ವಿಚಾರಕ್ಕೆ ನನ್ನ ಅಭಿಪ್ರಾಯವನ್ನು ಹೇಳಿದೆ. ಅಭಿಪ್ರಾಯದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಈಗಲೇ ರಾಜೀನಾಮೆ ಕೊಡಬೇಕು ಎಂದು ನಾನು ಕೇಳುವುದಿಲ್ಲ. I don’t ask.

(ಗೊಂದಲ)

**ಶ್ರೀ ಯಂ.ಸಿ. ನಾಣಯ್ಯ:–** ರಾಜೀನಾಮೆ ಕೊಡಿ ಎಂದು ನಾನು ಕೇಳುವುದಿಲ್ಲ. ನನಗೆ ಕಾನೂನಿನ ಅರಿವಿದೆ.

**ಶ್ರೀಮತಿ ಭಾರತಿಶೆಟ್ಟಿ:–** ಮಾನ್ಯ ಸಭಾಪತಿಯವರೆ, ಅವರು ತಮ್ಮ ಅಭಿಪ್ರಾಯ ಹೇಳುವುದರಲ್ಲಿ ತಪ್ಪಿಲ್ಲ. ನಮ್ಮ ಅಭಿಪ್ರಾಯ ಹೇಳುವುದಕ್ಕೂ ತಾವು ಅವಕಾಶ ಕೊಡಬೇಕು.

**ಸಭಾಪತಿಯವರು:–** ಅವಕಾಶ ಕೊಡುತ್ತೇನೆ.

**ಡಾ: ದೊಡ್ಡರಂಗೇಗೌಡ:–** ಮಾನ್ಯ ಸಭಾಪತಿಯವರೇ, ಚರ್ಚೆಗೆ ಎರಡು ಮುಖ ಇದೆ. ಎರಡು ಮುಖ ತಾವು ಆಲಿಸಬೇಕು.

**ಸಭಾಪತಿಯವರು:–** ಈಗ ಒಂದು ಮುಖವನ್ನು ಅವರು ಹೇಳುತ್ತಿದ್ದಾರೆ. ಎರಡನೇ ಮುಖವನ್ನು ಹೇಳುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದರೂ ನೀವು ಕೇಳುವುದಕ್ಕೆ ತಯಾರಿಲ್ಲವಲ್ಲಾ? ಈಗ ಅವರು ಏನು ಹೇಳುತ್ತಿದ್ದಾರೆಂದರೆ, ಚರ್ಚೆ ಪ್ರಾರಂಭವಾಗಲಿಲ್ಲ, ಇಷ್ಟು ಗಂಭೀರವಾದ ವಿಷಯವಿದೆ, ಇದರ ಬಗ್ಗೆ ಚರ್ಚೆ ಮಾಡೋಣ, ಬೇರೆ ಏನು ಬೇಡ, ಇದರ ಬಗ್ಗೆಯೇ ಚರ್ಚೆ ಮಾಡೋಣ ಎಂದು ಹೇಳುತ್ತಿದ್ದಾರೆ. ಇದನ್ನು ಸರ್ಕಾರ ಒಪ್ಪಿಬಿಡುವುದಾದರೆ ಅದರ ಬಗ್ಗೆಯೇ ಚರ್ಚೆ ಮಾಡೋಣ. ನನಗೆ ಬಿಟ್ಟರೆ ನಾನು ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದೆ. 10–15 ನಿಮಿಷ ಅವರು ಮಾತನಾಡಲಿ ಆಮೇಲೆ ಏನು ತೀರ್ಮಾನ ಮಾಡಬೇಕು ಎಂಬುದನ್ನು ನೋಡೋಣ.

**ಪ್ರೊ. ಪಿ.ವಿ. ಕೃಷ್ಣಭಟ್ಟ:–** ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಹಿರಿಯ ಸದಸ್ಯರು ಹಾಗೂ ವಕೀಲರಾಗಿದ್ದಾರೆ. ಈ ವಿಷಯ ದವರೆಗೆ ಚರ್ಚೆಗೆ ತೆಗೆದುಕೊಳ್ಳಬೇಕೆನ್ನುವಂತಹ ಪ್ರಿಲಿಮಿನರಿ ಸಬ್‌ಮಿಷನ್ ಅನ್ನು ಎಷ್ಟು ಸಮಯದವರೆಗೆ ಮಾಡಬೇಕು ಎನ್ನುವುದರ ಬಗ್ಗೆ ಸಮಯವನ್ನು ತೀರ್ಮಾನ ಮಾಡಿ.

**ಸಭಾಪತಿಯವರು:–** 20 ನಿಮಿಷ ಅವಕಾಶ ಕೊಡುತ್ತೇನೆ.

**ಪ್ರೊ. ಪಿ.ವಿ. ಕೃಷ್ಣಭಟ್ಟ:–** ಮಾನ್ಯ ಸಭಾಪತಿಯವರೇ, ಸಮಯವನ್ನು ನಿಗದಿ ಮಾಡದಿದ್ದರೆ ಬಹಳ ಅಮೂಲ್ಯವಾದಂತಹ ಸಮಯವನ್ನು ವ್ಯರ್ಥ ಮಾಡಿದಂತಾಗುತ್ತದೆ. ಆ ರೀತಿ ಆಗುವುದಕ್ಕೆ ತಾವು ಆವಕಾಶ ಕೊಡಬಾರದು. ಸಬ್‌ಮಿಷನ್ ಮುಗಿದ ಮೇಲೆ ಚರ್ಚೆಗೆ ಎಷ್ಟು ಸಮಯ ಎಂದು ತಾವು ನಿಗದಿಪಡಿಸಿ.

**ಸಭಾಪತಿಯವರು:–** ಅವರು ಇನ್ನು ಐದು ನಿಮಿಷದಲ್ಲಿ ಮುಗಿ ಸುತ್ತೇನೆಂದು ಹೇಳಿದ್ದಾರೆ. ತಾವು ಹೇಳಿರುವುದನ್ನು ಗೌರವಿಸೋಣ.

**ಪ್ರೊ. ಪಿ.ವಿ. ಕೃಷ್ಣಭಟ್ಟ:–** ಈಗಾಗಲೇ 20 ನಿಮಿಷವಾಗಿದೆ.

**ಶ್ರೀ ಯಂ. ಸಿ ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಾನು ಈ ಹಿಂದೆ ಮಾತನಾಡುವ ಸಂದರ್ಭದಲ್ಲಿ ಮಾನ್ಯ ಕೃಷ್ಣಭಟ್ಟರವರು ಇದೇ ರೀತಿಯ ಆಕ್ಷೇಪವನ್ನು ಪ್ರಸ್ತಾಪ ಮಾಡಿದರು. ಆ ಸಂದರ್ಭದಲ್ಲಿ ನಾನು ಅವರ ಆಕ್ಷೇಪಣೆಗೆ ಅವರು ನನ್ನ ಸಮಕಾಲೀನರು, ಚಿಂತಕರು, ಅವರಿಗೆ ತಲೆಬಾಗಿ ನಾನು ಮಾತನಾಡುವುದನ್ನು ನಿಲ್ಲಿಸಿಬಿಡುತ್ತೇನೆ, ನನ್ನ ಎಲ್ಲಾ ಸಮಯವನ್ನು ಅವರಿಗೆ ಕೊಡಿ ಎಂದು ಹೇಳಿದೆ. ಇವತ್ತು ಪುನಃ ಅದೇ ವಿಚಾರವನ್ನು ಪ್ರಸ್ತಾಪ ಮಾಡಿ, ಪ್ರಿಲಿಮಿನರಿ ಸಬ್‌ಮಿಷನ್ ಎಂದು ನೀವು ಮಾತಾನಾಡಿಕೊಂಡು ಹೋಗಿ ನಮ್ಮ ಈ ಸದನದ ಅಮೂಲ್ಯವಾಗಿರುತಕ್ಕಂಥ ಸಮಯವನ್ನು ಕಳೆಯುವುದು ಬೇಡ ಎನ್ನುವಂತಹ ಮಾತನ್ನು ಹೇಳಿದರು. ಮಾನ್ಯ ಕೃಷ್ಣಭಟ್‌ರವರಿಗೆ ನನ್ನ ಅನುಭವದ ಆಧಾರದ ಮೇಲೆ ಹೇಳುತ್ತೇನೆ, ನನಗಿಂತ ಹೆಚ್ಚಿನ ಅನುಭವ ಅವರಿಗಿದೆ, ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಸದನಕ್ಕೆ ಸಂಬಂಧ ಪಟ್ಟ ಹಾಗೆ, ಕೆಳಗಿನ ಮನೆಗೆ ಸಂಬಂಧಪಟ್ಟ ಹಾಗೆ ನನ್ನ ಚಿಂತನೆಯಲ್ಲಿ ಇದಕ್ಕಿಂತ ಪ್ರಾಮುಖ್ಯವಾಗಿರತಕ್ಕಂಥ ಇದಕ್ಕಿಂತ ಅಮೂಲ್ಯವಾಗಿರತಕ್ಕಂಥ ಮತ್ತೊಂದು ವಿಚಾರ ಇಲ್ಲ. ನಮ್ಮ ಪ್ರಜಾತಂತ್ರ ವ್ಯವಸ್ಥೆ ಉಳಿದರೆ ಮಾತ್ರ. ನಮ್ಮ ಪ್ರಶ್ನೋತ್ತರ ವೇಳೆ, ನಿಯಮ 330, ಗಮನ ಸೆಳೆಯುವ ಸೂಚನೆ, ಬಜೆಟ್ ಇವೆಲ್ಲವೂ ಕೂಡ ಇರುತ್ತದೆ. ಪ್ರಜಾತಂತ್ರ ವ್ಯವಸ್ಥೆ ನಾಶವಾದರೆ, ನಾವು ನೀವೆಲ್ಲರೂ ಕೂಡ ಮಾರಾಟದ ವಸ್ತುಗಳಾದರೆ, ನಾವು ಇವತ್ತು ಜನರ ಮಧ್ಯದಲ್ಲಿ ಬಿಕರಿ ವಸ್ತುಗಳಾಗಿ ಜನ ಸಾಮಾನ್ಯರ ಮಧ್ಯದಲ್ಲಿ ಇವರು ಹೇಸಿಗೆಗೆಟ್ಟ ರಾಜಕಾರಣಿಗಳು ಎಂದು ಹೇಳತಕ್ಕಂಥ ಪರಿಸ್ಥಿತಿ ನಿರ್ಮಾಣವಾದರೆ, ಈ ಸದನದಲ್ಲಿ ಸದಸ್ಯನಾಗಿ ಉಳಿಯುವುದಕ್ಕೆ ನಾನು ಅರ್ಹತೆಯನ್ನು ಪಡೆಯುವುದಿಲ್ಲ. ಅದನ್ನು ಅವರೂ ಕೂಡ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಇದಕ್ಕಿಂತ ಅಮೂಲ್ಯವಾದ ವಿಚಾರ ಬೇರೊಂದಿಲ್ಲ. ಅವರ ಬಜೆಟ್ ಕೂಡ ಅಮೂಲ್ಯವಾದಂತಹ ವಿಚಾರವಾಗುವುದಿಲ್ಲ. ನಮ್ಮ ಪ್ರಜಾತಂತ್ರ ವ್ಯವಸ್ಥೆ ಉಳಿದರೆ ನಮ್ಮ ಬಜೆಟ್ ಉಳಿದುಕೊಳ್ಳುತ್ತದೆ. ನಮ್ಮ ಪ್ರಜಾತಂತ್ರ ವ್ಯವಸ್ಥೆ ಉಳಿಯದಿದ್ದರೆ, ಇವತ್ತು Gaddafi ಗೆ ಏನಾಯಿತು, ಈಜಿಪ್ಟ್‌ನಲ್ಲಿ ಏನಾಯಿತು ಎಂಬುದನ್ನು

ನೋಡಿದ್ದೀರಿ. ಅಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲೂ ನಿರ್ಮಾಣವಾಗಬೇಕೆ? ಆದ್ದರಿಂದ ಹಿರಿಯರಾದ ಕೃಷ್ಣಭಟ್‌ರವರು ಚಿಂತಕರು, ವಿದ್ಯಾರ್ಥಿಗಳು ಮುಂದೆ ಯಾವ ರೀತಿ ಬೆಳೆಯಬೇಕು ಎಂಬುದನ್ನು ನೂರಾರು ಮಕ್ಕಳಿಗೆ ವಿದ್ಯೆಯನ್ನು ಕಲಿಸಿರತಕ್ಕಂಥವರು. ನಾನು ಕೃಷ್ಣಭಟ್‌ರವರ ಹತ್ತಿರ ವಿದ್ಯಾರ್ಥಿಯಾಗಿ ಪಾಠ ಕಲಿಯುವಂಥದ್ದು ಬೇಕಾದಷ್ಟು ಇದೆ. ಕಲಿಸಿಕೊಳ್ಳುವ ಅವಕಾಶವನ್ನು ಕೊಡಿ ಎಂದು ಮಾತ್ರ ನಾನು ಕೇಳುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ಏಕೆ ಈ ಮಾತನ್ನು ಹೇಳಿದೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು ಇದನ್ನು ಸ್ವಾಗತ ಮಾಡುವುದರಿಂದ ಹೇಳುತ್ತಿದ್ದೇನೆ. ಸ್ವಾಗತ ಮಾಡಿದ ಮೇಲೆ ನಾನು ಹೇಳುತ್ತೇನೆ, fallout of that ಏನಾಗುತ್ತದೆ ಎಂದರೆ, ಮುಖ್ಯಮಂತ್ರಿಗಳ ನೇರವಾದ ಅಧಿಕಾರಕ್ಕೆ ಅದು ಬಂದು ತಲುಪುತ್ತದೆ. ಆದ್ದರಿಂದ ನಾನು ಏನು ಹೇಳಿದೆ, ಇಂತಹ ವಿಚಾರ ಬಂದರೆ ರಾಷ್ಟ್ರ ಮಟ್ಟದಲ್ಲಿ ಈ ರೀತಿಯ ಸಮ್ಮಿಶ್ರ ಸರ್ಕಾರಗಳು ರಚನೆ ಮಾಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಗದಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾದೀತು ಎನ್ನುವ ಹಿನ್ನಲೆಯಲ್ಲಿ ಅವರನ್ನು ಅನರ್ಹರನ್ನಾಗಿ ಮಾಡಿದರೆ, ಅದರ ಲಾಭವನ್ನು ಪಡೆದುಕೊಂಡ ಮೇಲೆ ಲಾಭವನ್ನು ಪಡೆದುಕೊಂಡವರು ಅಧಿಕಾರದಲ್ಲಿ ಮುಂದುವರೆಯುತ್ತಾರೆ. ಇದು ನಮ್ಮ ವ್ಯವಸ್ಥೆ. ಲಾಭವನ್ನು ಪಡೆದಾಯಿತು. ಆ ಲಾಭದ ಮುಖಾಂತರ ಮುಖ್ಯಮಂತ್ರಿಗಳು ಮುಖ್ಯಮಂತ್ರಿಗಳಾಗಿಯೇ ಮುಂದುವರೆಯುತ್ತಾರೆ. ನೀವು ಕೂಡ ಸಚಿವ ಸಂಪುಟದ ಸದಸ್ಯರಾಗಿದ್ದರೆ ನೀವು ಮುಖ್ಯಮಂತ್ರಿಗಳಾಗಿರುತ್ತಿದ್ದಿರಿ. ಮಾನ್ಯ ರಾಮದಾಸ್ ಅವರು ಕೂಡ ಹೊಸದಾಗಿ ಸೇರ್ಪಡೆಯಾದರು. ಅಂದು ಅದು ಆಗದೇ ಹೋಗದಿದ್ದರೆ ಪರಿಸ್ಥಿತಿ ಬೇರೆ ರೀತಿಯಾಗಿರುತ್ತಿದ್ದರೆ ನಿಮಗೆ ಅವಕಾಶವೇ ಸಿಗುತ್ತಿರಲಿಲ್ಲ. ಆದ್ದರಿಂದ ಇದರ ಬಗ್ಗೆ ನಾವು ಚಿಂತನೆ ಮಾಡುವಂತಹ ಸಂದರ್ಭದಲ್ಲಿ, ನಾವು ಏನು ಯೋಚನೆ ಮಾಡುತ್ತೇವೆಂದರೆ, ನಾವು ನಮ್ಮ ಅಧಿಕಾರವನ್ನು, ನಮ್ಮ ಸ್ಥಾನವನ್ನು ಭದ್ರ ಮಾಡಿಕೊಳ್ಳಬೇಕೆನ್ನುವ ಸಂದರ್ಭ ಬಂದಾಗ, ಅವರು ಒಂದು ಕಡೆ ಪಕ್ಷೇತರರಾದರೆ, ನಾವು ರಾಜಕೀಯ ಪಕ್ಷಗಳಿಗೆ ಸೇರಿರತಕ್ಕಂಥ

ಸದಸ್ಯರೂ ಕೂಡ ಇವತ್ತು ರಾಜೀನಾಮೆ ಕೊಡುವಂಥದ್ದು. ಇವತ್ತು ರಾಜೀನಾಮೆ ಏಕೆ ಸ್ವಾಮಿ ಕೊಡುತ್ತಾರೆ? ನಾವು ಈ ಚುನಾವಣೆಯನ್ನು ಗೆದ್ದು ಬರುತ್ತೇವೆ, ರಾಜೀನಾಮೆಯನ್ನು ಕೊಡತಕ್ಕಂಥದ್ದು ನನ್ನ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಆಗುವುದಿಲ್ಲ. ಆದ್ದರಿಂದ ನನ್ನ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳಾಗಬೇಕಾದರೆ ನಾನು ಆಡಳಿತ ಪಕ್ಷದ ಜೊತೆ ಕೈಜೋಡಿಸಬೇಕೆನ್ನುವ ಪರಿಸ್ಥಿತಿ ನಿರ್ಮಾಣವಾದರೆ ಈ ರಾಷ್ಟ್ರದಲ್ಲಿ ಪ್ರಜಾತಂತ್ರ ವ್ಯವಸ್ಥೆ ಅವಶ್ಯಕತೆ ಇಲ್ಲ ಎಂದು ನಾನು ಹೇಳುತ್ತೇನೆ. ಏಕೆಂದರೆ, ಒಂದೇ ಪಕ್ಷ ಇರಬೇಕಾಗುತ್ತದೆ. ಆ ಪಕ್ಷ ಇರಬೇಕಾದರೆ ಅದು ಒಂದು Gaddafi ಯಾಗಬೇಕಾಗುತ್ತದೆ, ಇಲ್ಲವೆಂದರೆ Mubarak ರೀತಿ ಆಗಬೇಕಾಗುತ್ತದೆ, ಅಥವಾ Tunisia ಅಥವಾ Middle East ನಲ್ಲಿರುವ ಒಂದು ರಾಷ್ಟ್ರವಾಗುತ್ತದೆಯೇ ಹೊರತು ಪ್ರಜಾತಂತ್ರ ವ್ಯವಸ್ಥೆಯಾಗಿ ಆಡಳಿತ ಪಕ್ಷ, ವಿರೋಧ ಪಕ್ಷ ಎಂಬುದೇ ಇರುವುದಿಲ್ಲ. ಆ ಪರಿಸ್ಥಿತಿ ನಮಗೂ ನಿಮಗೂ ಬೇಕು ಎಂದರೆ ಇವತ್ತೇ ಹೇಳಿ ಬಿಡಿ. ಅದೇ ಶ್ರೀಮಾನ್ ಯಡಿಯೂರಪ್ಪನವರ ಚಿಂತನೆಯಾದರೆ, ಆಡಳಿತ ಪಕ್ಷದಲ್ಲಿರತಕ್ಕಂಥ ನಿಮ್ಮೆಲ್ಲರ ಚಿಂತನೆಯಾದರೆ, ಹೌದು ಆಡಳಿತ ಪಕ್ಷದಲ್ಲಿದ್ದರೆ ಅಭಿವೃದ್ಧಿ ಅಸಾಧ್ಯ, ವಿರೋಧ ಪಕ್ಷದಲ್ಲಿದ್ದರೆ ಅಭಿವೃದ್ಧಿ ಅಸಾಧ್ಯವಾಗುವುದಿಲ್ಲ, ಆದ್ದರಿಂದ ನನ್ನ ಕ್ಷೇತ್ರದಲ್ಲಿ ಅಭಿವೃದ್ಧಿಯಾಗ ಬೇಕಾದರೆ ನಾನು ರಾಜೀನಾಮೆ ಕೊಡುತ್ತೇನೆ, ನಾನು ಅಭಿವೃದ್ಧಿಗೋಸ್ಕರ ನಿಮ್ಮ ಜೊತೆಯಲ್ಲಿ ಬರುತ್ತೇನೆಂದರೆ, ಯಾವ ಅಭಿವೃದ್ಧಿ? ಅಭಿವೃದ್ಧಿ ಯಾವುದು ಎಂಬುದನ್ನು ನಾವು ಚಿಂತನೆ ಮಾಡೋಣ. ಆದ್ದರಿಂದ ಈ ವಿಚಾರ ಅತ್ಯಂತ ಗಂಭೀರವಾಗಿರತಕ್ಕಂಥ ವಿಚಾರ. ನಾವು ನೀವು ಇದನ್ನು ಲಘುವಾಗಿ ತೆಗೆದುಕೊಳ್ಳುವುದು ಬೇಡ.

**ಶ್ರೀ ಗೋ. ಮಧುಸೂಧನ್:–** ಮಾನ್ಯ ನಾಣಯ್ಯನವರೇ, ಸ್ವಲ್ಪ yield ಆಗಿ.

**ಶ್ರೀ ಯಂ.ಸಿ. ನಾಣಯ್ಯ:–** ನಾನು ಇನ್ನು ಐದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಮಾನ್ಯ ಸಭಾಪತಿಯವರು ಹೇಳಿದರು ನಾನು yield ಆಗುತ್ತೇನೆ. ಮಾನ್ಯ ಸಭಾಪತಿಯವರೇ, ನಾನು ತಮ್ಮ ಅನುಮತಿಯನ್ನು ಕೇಳುತ್ತೇನೆ. ನಾನು yield ಆಗಬೇಕೆಂದು ಅವರು ಕೇಳುತ್ತಿದ್ದಾರೆ. ಬೇಡ,

ವೈಚಾರಿಕವಾಗಿರತಕ್ಕಂಥ ಚಿಂತನೆಯನ್ನು ನಾವು ನೀವು ಒಟ್ಟಾರೆ ಹಂಚಿಕೊಂಡು ಮಾಡೋಣವೆಂದು ನಾನು ಹೇಳುತ್ತೇನೆ.

**ಶ್ರೀ ಗೋ. ಮಧುಸೂಧನ್:–** ಗುರುಗಳೇ, ಒಂದು ನಿಮಿಷ yield ಆಗಿ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಅವರು ನನ್ನನ್ನು ಗುರುಗಳೇ ಎಂದು ಕರೆದುಬಿಟ್ಟರು. ಆದ್ದರಿಂದ ನಾನು ಕುಳಿತು ಕೊಂಡು ಬಿಡುತ್ತೇನೆ.

**ಶ್ರೀ ಗೋ.ಮಧುಸೂಧನ್:–** ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಬಹಳ ಒಳ್ಳೆಯ ವಿಚಾರವನ್ನು ನಮ್ಮ ಮುಂದೆ ಇಟ್ಟಿದ್ದಾರೆ.

**ಸಭಾಪತಿಯವರು:–** ಅವರು ಇಟ್ಟಿರತಕ್ಕಂಥ ವಿಚಾರ ಬಹಳ ದೊಡ್ಡದು. ಆದರೆ, ಸದನದ ಬೇರೆ ಎಲ್ಲಾ ವಿಷಯಗಳನ್ನು ಬದಿಗೊತ್ತಿ ಈ ವಿಷಯ ಚರ್ಚೆ ಮಾಡಬೇಕೇ ಬೇಡವೇ ಎಂಬುದಷ್ಟೆ ನನ್ನ ಮುಂದೆ ಇರುವಂಥ ಪ್ರಶ್ನೆ. ಹಾಗಾಗಿ ಸಭಾನಾಯಕರು ಸರ್ಕಾರದ ಪರವಾಗಿ ಏನು ಹೇಳುತ್ತಾರೆ ಎಂಬುದನ್ನು ಕೇಳೋಣ. ಅವರು ಹೌದು, ನಾಣಯ್ಯನವರು ಹೇಳುವ ವಿಚಾರವನ್ನೇ ಚರ್ಚೆ ಮಾಡೋಣವೆಂದರೆ ನನ್ನದೇನೂ ಅಭ್ಯಂತರವಿಲ್ಲ. ಆದರೆ, ಇಂತಹ ಕಾರಣಕ್ಕೆ ಆಗುವುದಿಲ್ಲವೆಂದರೆ ಬಿಟ್ಟುಬಿಡಬೇಕಾಗುತ್ತದೆ. ನಾನು ಇಲ್ಲಿ ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ಕುಳಿತಿಲ್ಲ. ಸಭೆ ನಡೆಸುವುದಕ್ಕೆ ಕುಳಿತಿದ್ದೇನೆ. ಸಭೆ ಹೇಗೆ ನಡೆಸಬೇಕು ಎನ್ನುವುದರ ಬಗ್ಗೆ ಚರ್ಚೆಯಾಗುತ್ತಿದೆ. ಅದಕ್ಕೆ ಸಭಾನಾಯಕರು ಏನು ಹೇಳುತ್ತಾರೆ ಎಂಬುದನ್ನು ಕೇಳೋಣ.

**ಶ್ರೀ ಯಂ .ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ನಾನು ಮುಗಿಸಿಬಿಡುತ್ತೇನೆ.

**ಶ್ರೀ ಗೋ. ಮಧುಸೂಧನ್:–** ಮಾನ್ಯ ಸಭಾಪತಿಯವರೇ, ನಾಣಯ್ಯನವರು yield ಆಗಿದ್ದರು.

**ಸಭಾಪತಿಯವರು:–** ನಾಣಯ್ಯನವರು yield ಆಗಿಬಿಟ್ಟರೆ ಅರ್ಧ ಗಂಟೆ ಮುಂದಕ್ಕೆ ಹೋಗಿಬಿಡುತ್ತದೆ. ನಾನು ಅವರಿಗೆ ಇನ್ನು ಎರಡು ನಿಮಿಷದಲ್ಲಿ ಮುಗಿಸುವುದಕ್ಕೆ ಹೇಳಿದ್ದೇನೆ.

**ಶ್ರೀ ಗೋ. ಮಧುಸೂಧನ್:–** ಚಿಂತನೆಯ ಇನ್ನೊಂದು ಮುಖವನ್ನು ಹೇಳಬೇಕಾಗಿತ್ತು.

**ಸಭಾಪತಿಯವರು:–** ಆ ಚಿಂತನೆಯನ್ನು ಮಾಡಬೇಕೋ ಬೇಡವೋ ಎಂಬುದು ಈಗ ಪ್ರಶ್ನೆ ಇರುವಂಥದ್ದು.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಈಗ ತಾವು ನಮ್ಮೆಲ್ಲರಿಗೂ ಗುರುಗಳು. ನೀವು ಹೇಳುವುದನ್ನು ಅವರು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಈಗ ಶಿಷ್ಯ ಕುಳಿತುಕೊಳ್ಳಬೇಕು.

ಮಾನ್ಯ ಸಭಾಪತಿಯವರೇ, ದಯವಿಟ್ಟು ಯಾರೂ ಅನ್ಯಥಾ ಭಾವಿಸಬೇಡಿ. ಮುಖ್ಯಮಂತ್ರಿಯಾದಿಯಾಗಿ ಎಲ್ಲರನ್ನು ನಾನು ಕೇಳಿಕೊಳ್ಳುತ್ತಿದ್ದೇನೆ. ಅಧಿಕಾರ ಎನ್ನುವುದು ಬರುತ್ತದೆ, ಹೋಗುತ್ತದೆ ಕಡೆಗೆ ಅಂತ್ಯವಾಗಿ ಉಳಿಯತಕ್ಕಂಥದ್ದು ನಮಗೂ ನಿಮಗೂ ಏನು? ಎಷ್ಟು ವರ್ಷ ನೀವು ಅಧಿಕಾರದಲ್ಲಿದ್ದಿರಿ ಎಂದು ಹೇಳುವುದು ಮುಖ್ಯವಲ್ಲ. ಇದಕ್ಕೆ ಒಬ್ಬ ಹಳೆಯ ಕವಿ ಹೇಳುತ್ತಾರೆ: "How long you have remained in power is not that important." What you have done during your time either as Chief Minister or as a Prime Minister, what footsteps you have left behind on the sands of time –ಅದೊಂದೆ ಮುಖ್ಯ. "On the sands of time what you have left behind"- ಇದು ಒಂದೇ ಮುಖ್ಯ. ಆದರೆ, ಇವತ್ತು ಮಾಡತಕ್ಕಂಥದ್ದು ಯಾವುದೂ ಕೂಡ ಹೆಜ್ಜೆ ಗುರುತುಗಳಲ್ಲ.

**ಶ್ರೀ ಗೋ. ಮಧುಸೂಧನ್:–** ಇದನ್ನು ದೇವೇಗೌಡರಿಗೋ, ಕುಮಾರಸ್ವಾಮಿಗೂ ಯಾವತ್ತಾದರೂ ಹೇಳಿದ್ದೀರಾ?

**ಶ್ರೀ ಎಂ.ಸಿ. ನಾಣಯ್ಯ:-** ಯಡಿಯೂರಪ್ಪನವರಿಗೆ, ಮಧು ಸೂದನ್‌ರವರಿಗೆ ಮತ್ತು ಯಾರೆಲ್ಲರಿಗೆ ಹಣ ಕೊಟ್ಟು ಖರೀದಿ ಮಾಡಿದರು ಎಂದು ಅವರ ಹೆಸರು ಹೇಳಬೇಕೆ? ನಿಮಗೆ ಹೆಸರು ಬೇಕೆ? ನೀವು ಹೇಳತಕ್ಕಂಥ ಹೆಸರುಗಳನ್ನು ನಾನು ಕೂಡ ಅದನ್ನೇ ಒಪ್ಪಿಕೊಂಡು ಯಾರೆಲ್ಲಾ ಅವರನ್ನು ಖರೀದಿ ಮಾಡಿದರು, ಯಾರಿಗೆ ಎಷ್ಟು ಹಣವನ್ನು ಕೊಟ್ಟರು ಎಂಬುದು ನನ್ನ ಹತ್ತಿರ ಮಾಹಿತಿ ಇದೆ. ಅದನ್ನು ನಾನು ಹೇಳಲೆ? ಬೇಡ.

(ಗೊಂದಲ)

**ಶ್ರೀ ಗೋ. ಮಧುಸೂಧನ್:-** ನೀವೇನು ಮಾಡಿದ್ದೀರ ಎಂಬುದನ್ನು ನಾವು ಹೇಳುತ್ತೇವೆ. ನೀವು ಹೇಳಿ. ಜನಕ್ಕೆ ಗೊತ್ತಿದೆ ಹೇಳಿ.

**ಶ್ರೀ ಯಂ.ಸಿ. ನಾಣಯ್ಯ:-**ಮಾನ್ಯ ಸಭಾಪತಿಯವರೇ, ನನಗೆ ನೋವು ಏತಕ್ಕೆಂದರೆ ನಾನು ಕೂಡ ಒಂದು ಸಂದರ್ಭದಲ್ಲಿ, ಇಂತಹ ಒಂದು ಪರಿಸ್ಥಿತಿಯಲ್ಲಿ ಅಧಿಕಾರದಿಂದ ವಂಚಿತನಾದವನು. ನಾಳೆ-ನಾಡಿದ್ದು, ನಾನು ವಿರೋಧ ಪಕ್ಷದ ನಾಯಕನಾಗಬೇಕು, ಎರಡೇ ದಿವಸಗಳಲ್ಲಿ ನಮ್ಮಲ್ಲಿ ಇರುವಂತಹ ಇಬ್ಬರು ಸದಸ್ಯರನ್ನು ಕಿತ್ತುಕೊಂಡು ಹೋಗಿಯೇ ಬಿಟ್ಟರು. ಆ ಸಮಯದಲ್ಲಿ ನನ್ನ ಸಹೋದರಿಯವರು ವಿರೋಧ ಪಕ್ಷದ ನಾಯಕರಾದರು. ನನಗೆ ಸಂತೋಷ. ಅದರೆ, ನನಗೆ ವಿರೋಧ ಪಕ್ಷದ ನಾಯಕನಾಗುವ ಒಂದು ಅವಕಾಶವಿತ್ತು. ಏತಕ್ಕೆ ಆಯಿತು ಎಂದರೆ, ಅವತ್ತಿನ ಪರಿಸ್ಥಿತಿ ಆ ರೀತಿ ಇತ್ತು. ಇವತ್ತು ಯಾವ ಪರಿಸ್ಥಿತಿ ನಡೆಯಿತು, ಅದೇ ಪರಿಸ್ಥಿತಿಯ ಹಿನ್ನಲೆಯಲ್ಲಿ ಅದೇ ಪರಿಸ್ಥಿತಿ ಮುಂದುವರಿಯುವುದು ತಪ್ಪು. ನನಗೆ ಅಧಿಕಾರ ಹೋದರು ಚಿಂತೆಯಿಲ್ಲ. ನನ್ನ ಜೊತೆಯಲ್ಲಿ ಇದ್ದಂತಹ ಅತ್ಯಂತ ಹಿರಿಯರಾದಂತಹ ಶ್ರೀಯುತ ತಿಪ್ಪಣ್ಣನವರ ಅವರಿಗೇನಾದರೂ ಅಧಿಕಾರ ಸಿಕ್ಕಿತೇ? ಕೊನೆಗೆ ಅವರು ಎಲ್ಲವನ್ನೂ ಕಳೆದುಕೊಂಡರು. ನಾನು ಸಹ ಅಧಿಕಾರವನ್ನು ಕಳೆದುಕೊಂಡೆ. ಲಾಭ ಮಾತ್ರ ನಿಮಗೆ ಸಿಕ್ಕಿತು. ಈ ರಾಜಕೀಯ ವ್ಯವಸ್ಥೆಯಲ್ಲಿ ಇಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದರೆ ಹೇಗೆ? ಮಾನ್ಯ ಸದಸ್ಯರಾದ ಶ್ರೀಯುತ ಸಿದ್ದರಾಜುರವರು ನನ್ನ ಎದುರುಗಡೆ ಕುಳಿತಿದ್ದಾರೆ. ಒಂದು

ವಿಚಾರವಾಗಿ ನಡೆದಂತಹ ಘಟನೆಯ ಬಗ್ಗೆ ನಾನು ಮರೆತಿಲ್ಲ. ಬಹುಶಃ ನಾನು ಈ ಒಂದು ಸದನ ಬಿಟ್ಟಾದಮೇಲೆ ಕೆಲವು ಚಿಂತನೆಗಳನ್ನು ನನ್ನ ಬರವಣಿಗೆಯ ಮೂಲಕ ಹೇಳುವಂತಹ ವಿಚಾರವಾಗಿ ನಾನು ಅದನ್ನು ಮುಂದುವರಿಸುತ್ತೇನೆ. ತಾವು ಸಹ ಆ ದಿವಸ ಈ ಸದನದಲ್ಲಿ ಇದ್ದೀರಿ. ಕೇವಲ 7 ಜನ ಸದಸ್ಯರು ಈ ಮನೆಯಿಂದ ನಿವೃತ್ತರಾದವರು. ಆ ಸ್ಥಾನಗಳನ್ನು ತುಂಬುವ ಸಲುವಾಗಿ ನಾವು ಕೇವಲ 7 ಜನ ಮಾತ್ರ ನಾಮಪತ್ರವನ್ನು ಸಲ್ಲಿಸಿದ್ದೆವು. ಬೇರೆ ಯಾರು ನಾಮಪತ್ರವನ್ನು ಹಾಕಲಿಕ್ಕೆ ಇರಲಿಲ್ಲ. ಶ್ರೀಯುತ ಸಿದ್ದರಾಜು ನನ್ನ ಇತರ ಮಿತ್ರರು ಇದ್ದರು. Returning Officer ಆದಂತಹ ವಿಧಾನ ಪರಿಷತ್ ಕಾರ್ಯದರ್ಶಿ ಶ್ರೀಯುತ ವಿ. ಶ್ರೀಶ್ ಅವರನ್ನು ಕೇಳಿದಾಗ 7 ಜನ ಮಾತ್ರ ನಾಮಪತ್ರವನ್ನು ಸಲ್ಲಿಸಿದ್ದಾರೆಂದು ಹೇಳಿದರು. 7 ಸ್ಥಾನಗಳು ಖಾಲಿಯಿರುವುದು ಎಂದು ಹೇಳಿದಾಗ ಅದರ ಪ್ರಕ್ರಿಯೆಯನ್ನು ಮುಂದುವರಿಸಿ ಎಂದು ಹೇಳಿ, ಎಲ್ಲರೂ ಪರಸ್ಪರ ಕೈಗಳನ್ನು ಕುಲುಕುತ್ತಿರುವಾಗ ನನ್ನ ವಿಚಾರವಾಗಿ ಕಡೆಗೆ ಗ್ರಹಚಾರ ಬಂತು. ಆ ಸಮಯದಲ್ಲಿ 8–10 ಜನ ಎಲ್ಲಿಂದ ಬಂದರೋ ಗೊತ್ತಿಲ್ಲ, ನನ್ನ ನಾಮಪತ್ರ ತಿರಸ್ಕಾರವಾಗಲೇಬೇಕೆಂದರು. 7 ಜನರೇ ನಾಮಪತ್ರವನ್ನು ಸಲ್ಲಿಸಿದ್ದು, ನನ್ನ ನಾಮಪತ್ರವನ್ನು ಏತಕ್ಕೆ ತಿರಸ್ಕಾರ ಮಾಡಿ ಎಂದು ಹೇಳುತ್ತೀರಾ ಎಂದು ಅಲ್ಲಿ ಇದ್ದಂತಹ Advocate ರವರನ್ನು ಕೇಳಿದೆ. ಆಗ ಅವರು ಆಗುವುದಿಲ್ಲವೆಂದರು. ನಾನು ಏತಕ್ಕೆ ಎಂದು ಕೇಳುತ್ತಾ, ನಾನು ಬರುವುದು ನಿಮಗೆ ಇಷ್ಟವಿಲ್ಲವೆಂದರೆ, ಇಷ್ಟವಿಲ್ಲವೆಂದು ಹೇಳಿಬಿಡಿ. ಎಲ್ಲಾದರೂ ಒಂದು ಕಡೆ ನೋಡೋಣ. ನಿಮಗೆ ನಾನು ಬೇಡವೆಂದು ಇದ್ದರೆ ನಾನು ಈ ಸದನಕ್ಕೆ ಏತಕ್ಕೆ ಬರಲಿ ಎಂದೆ. ಕಡೆಗೆ ಆ ವಿಚಾರವಾಗಿ ಸುಮಾರು ಎರಡೂವರೆ ಗಂಟೆ argument ಆಯಿತು. ಆ ಸಂದರ್ಭದಲ್ಲಿ ಆಲೋಚನೆ ಮಾಡಿದೆ. ನಾವು ಎಲ್ಲಿಗೆ ತಲುಪುತ್ತಿದ್ದೇವೆ, ಏಕೆಂದರೆ ನಾನು ತಾತ್ವಿಕವಾದ ಹಿನ್ನಲೆಯಲ್ಲಿ ತೆಗೆದುಕೊಂಡು ಈ ವಿಚಾರವಾಗಿ ಹೇಳುತ್ತಿದ್ದೇನೆ. ಯಾವ ಒಂದು ಭಾವನೆಯೂ ಇಲ್ಲ. ನಾಣಯ್ಯನವರು ಈ ಸದನಕ್ಕೆ ಬರುವಂತಹದ್ದು ನನ್ನ ಮಿತ್ರರಾದಂತಹವರಿಗೆ, ಅದು ಭಾರತೀಯ ಜನತಾ ಪಾರ್ಟಿಯ ಸ್ನೇಹಿತರಾಗಲಿ, ಅಥವಾ R.S.S. ನ

ಕೇಲವು 3–4 ಜನರಿಗೆ ಇಷ್ಟವಿಲ್ಲವಾದ್ದ ರಿಂದ ಅಲ್ಲಿಗೆ ಆ ಸಂದರ್ಭದಲ್ಲಿ ಬಂದಿದ್ದರು. ಅವರು ನನಗೆ ಬಹಳ ದೊಡ್ಡ ಸ್ನೇಹಿತರು. ಏತಕ್ಕೆ ನೀವುಗಳೆಲ್ಲಾ ಇಲ್ಲಿಗೆ ಬಂದಿರಿ ಎಂದು ನಾನವರಿಗೆ ಕೇಳಿದೆ. ಆಗ ಅವರು ಇಲ್ಲ ಸರ್, ಈ ರೀತಿ ಪರಿಸ್ಥಿತಿ ನಿರ್ಮಾಣವಾಯಿತು ಎಂದು ಹೇಳಿ, ತಪ್ಪೇನೂ ಇಲ್ಲ, ಆಯಿತು ಎಂದು ಹೇಳುತ್ತಾ, ವೈಯಕ್ತಿಕವಾಗಿ ನಿಮ್ಮಲ್ಲಿ ಬೇರೆ ಏನೂ ಇಲ್ಲ ಎಂದು ಹೇಳಿ ಹೋದಾಗ ನನ್ನ ಮನಸ್ಸಿಗೆ ಅಂದು ಆದಂತಹ ನೋವಿನ ಬಗ್ಗೆ ನಾನು ಹೇಳುತ್ತೇನೆ. If my entry into this house is not acceptable to others, do you feel that I am fit to be here in this House? ಇವತ್ತು ನಾನು ಹೇಳುತ್ತೇನೆ. ಈ ಸದನದಲ್ಲಿರುವಂತಹ ಅತ್ಯಂತ ಗೌರವಾನ್ವಿತ ಸದಸ್ಯರು 'you are unfit' ಎನ್ನುವಂತಹ ಮಾತನ್ನು ಹೇಳಿದರೆ ನಾನು ಈ ಸದನದಲ್ಲಿ ಉಳಿಯಲಿಕ್ಕೆ ಅನರ್ಹ. ಇಂತಹ ಒಂದು ಪರಿಸ್ಥಿತಿ ಯನ್ನು ನಾನು ಅನುಭವಿಸಿದ್ದೇನೆ. ಆ ಒಂದು ಅನುಭವದ ಆಧಾರದ ಮೇಲೆ ನಾನು ಹೇಳುವುದೇನೆಂದರೆ ಇಂತಹ ವ್ಯವಸ್ಥೆ ನಮ್ಮ ಸಾರ್ವಜನಿಕ ಜೀವನದಲ್ಲಿ, ಪ್ರಜಾತಂತ್ರ ಒಂದು ವ್ಯವಸ್ಥೆಯಲ್ಲಿ ಸರಿಯಾದ ಕ್ರಮವೇ ಎಂದು ಕೇಳಲಿಕ್ಕೆ ಬಯಸುತ್ತೇನೆ. ಆದ್ದರಿಂದ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ನಿಮ್ಮಲ್ಲಿ ಪಕ್ಷವನ್ನು ಕಟ್ಟಿರುವಂತಹವರು, ಅದನ್ನು ಬೆಳೆಸಿರುವಂತಹವರು, ಅದಕ್ಕೆ ಬೆವರು ಕೊಟ್ಟಂತಹವರು, ತ್ಯಾಗ ಮಾಡಿರು ವಂತಹವರು ಒಂದು ಭಾಗ, ಯಾವುದನ್ನೊ ತ್ಯಾಗ ಮಾಡದೇ ಕಡೆಗೆ 'Member of the Ruling Party' (M.R.P) ಎಂದು ಹೇಳಿ ಪ್ರತಿದಿವಸ ಸಮಯ ಸಿಕ್ಕಿದಾಗ ಅಧಿಕಾರಕ್ಕೋಸ್ಕರ ಹೋರಾಟಕ್ಕೆ ಹೋಗುವಂತಹವರು ಇನ್ನೊಂದು ಭಾಗ. ಅದು M.R.P., ಶ್ರೀಯುತ ಸಿ.ಎಂ. ಉದಾಸಿಯವರು ನಮ್ಮ ಜೊತೆಯಲ್ಲಿ ಇದ್ದಂತಹವರು.

**ಸಭಾಪತಿಯವರು:–** ಇಲ್ಲಿ ಹೆಸರನ್ನು ಹೇಳಬೇಡಿ.

**ಶ್ರೀ ಎಂ.ಸಿ. ನಾಣಯ್ಯ:–** ನಾನು ಅವರನ್ನು ಎದುರುಗಡೆ ಕಂಡಿದ್ದರಿಂದ ಹೇಳದೆ.

**ಶ್ರೀಮತಿ ಭಾರತಿ ಶೆಟ್ಟಿ:–** ಕೇವಲ ನಮ್ಮ ಪಕ್ಷದಲ್ಲಿ ಮಾತ್ರ ಈ ರೀತಿ ಆಗುವುದಿಲ್ಲ. ಎಲ್ಲಾ ಪಕ್ಷಗಳಲ್ಲಿಯೂ ಆಗುತ್ತದೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ನಾನು ಹೇಳುವುದನ್ನು ಗಮನಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಈ ವಿಚಾರವನ್ನು ವಿನಯಪೂರ್ವಕವಾಗಿ ಹೇಳುತ್ತಿದ್ದೇನೆ. ಪ್ರಜಾತಂತ್ರ ವ್ಯವಸ್ಥೆ ಉಳಿದರೆ ನಾವು ಮತ್ತು ನೀವುಗಳೆಲ್ಲಾ ಒಟ್ಟಾರೆ ಇರುತ್ತೇವೆ. ಪ್ರಜಾತಂತ್ರ ವ್ಯವಸ್ಥೆ ನಾಶವಾದರೆ ಅಧಿಕಾರ ಬಿಟ್ಟು ಹೋದ ಮಾರನೆ ದಿವಸ ಎಷ್ಟು ಜನ ನಮ್ಮನ್ನು ಗೌರವಿಸುವವರು ಇರುತ್ತಾರೆನ್ನುವುದು ಮುಖ್ಯ. ಅಧಿಕಾರ ಇದ್ದಂತಹ ಸಂದರ್ಭದಲ್ಲಿ ಎಲ್ಲರೂ ಇರುತ್ತಾರೆ. ಅಧಿಕಾರ ಬಿಟ್ಟ ಮಾರನೇ ದಿವಸ ಯಾರು ಸುಳಿಯುವುದಿಲ್ಲ. ಒಬ್ಬ ಪೊಲೀಸ್ ಅಧಿಕಾರಿ ಜೊತೆಯಲ್ಲಿ ಒಂದು ನಾಯಿ ಇರುತ್ತದೆ. ಪೊಲೀಸ್ ಅಧಿಕಾರಿಯ ಜೊತೆಯಲ್ಲಿದ್ದ ನಾಯಿ ಸತ್ತು ಹೋದಾಗ ಕಡೆಗೆ ಆ ಊರಿನ ಜನರು ಮತ್ತು ಆ ಪೊಲೀಸ್ ಅಧಿಕಾರಿ ಸೇರಿಕೊಂಡು, ಮೆರವಣಿಗೆಯ ಮೂಲಕ ಅದರ ಶವ–ಸಂಸ್ಕಾರ ಮಾಡಿದರು. ಆದರೆ, ಆ ಪೊಲೀಸ್ ಅಧಿಕಾರಿ ಯಾವುದೋ ಒಂದು ಸಂದರ್ಭದಲ್ಲಿ ಹೃದಯಾಘಾತವಾಗಿ ಸತ್ತು ಹೋದ. ಅವನ ಶವ–ಸಂಸ್ಕಾರಕ್ಕೆ ಒಬ್ಬನೂ ಸಹ ಹೋಗಲಿಲ್ಲ. ಅವನು ಅಧಿಕಾರದಲ್ಲಿದ್ದು, ನಾಯಿ ಸತ್ತಾಗ ಅದರ ಜೊತೆಯಲ್ಲಿ ಎಲ್ಲರೂ ಹೋಗ ಬೇಕಾಯಿತು. ಆದರೆ, ಅವನು ಸತ್ತಾಗ ನಾಯಿಗೆ ಕೊಟ್ಟಂತಹ ಗೌರವವನ್ನು ಅವನಿಗೆ ಕೊಡಲಿಲ್ಲ. ಈ ರೀತಿಯ ವ್ಯವಸ್ಥೆ ಆಗಬಾರದು ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಈ ಹಿನ್ನೆಲೆಯಲ್ಲಿ ನಾನು ಮಾನ್ಯ ಸಭಾನಾಯಕ ರಲ್ಲಿ ಕೇಳುವುದೇನೆಂದರೆ ಈ ವಿಚಾರವಾಗಿ ಬಹಳಷ್ಟು ಚರ್ಚೆ ಮಾಡಿದ್ದೇವೆ. ನಮ್ಮಲ್ಲಿ ಈ ವಿಚಾರವಾಗಿ ಒಮ್ಮತದ ತೀರ್ಮಾನಕ್ಕೆ ಬರಬೇಕು. ಪಕ್ಷಾಂತರ ನಿಷೇಧ ಕಾಯಿದೆಗೆ ತಿದ್ದುಪಡಿಯನ್ನು ತರುವುದಕ್ಕೆ ನಾವೇ ಈ ಸದನದಲ್ಲಿ ಚಿಕ್ಕದಾದ ಒಂದು ವಿಧೇಯಕವನ್ನು ರಚನೆ ಮಾಡಬೇಕು. ಇಡಿ ರಾಷ್ಟ್ರದ ಉದ್ದಗಲಕ್ಕೂ ಪಕ್ಷಾಂತರ ನಿಷೇಧವನ್ನು ಮಾಡಿ ಪ್ರಜಾತಂತ್ರ ವ್ಯವಸ್ಥೆಯನ್ನುಳಿಸಬೇಕಾಗಿದೆ. ನಮ್ಮ ಶಾಸಕರುಗಳನ್ನು ಹಂದಿ–ಕುರಿ, ಕೋಳಿಗಳಾಗಿ ಮಾರಾಟ

ಮಾಡುವಂತಹ ವಸ್ತುಗಳನ್ನಾಗಿ ಮಾಡುವುದು ನಿಲ್ಲಬೇಕು. ನಮ್ಮ ಮತ್ತು ನಿಮ್ಮನ್ನು ಗೌರವಿಸುವವರು ಯಾರು? ನಾಣಯ್ಯ, ದೊಡ್ಡೇಗೌಡರು, ಕೃಷ್ಣಭಟ್ ಈ ರೀತಿ 10 ಜನರೆಲ್ಲಾ ಸ್ಪರ್ಧಿಸಲಿಕ್ಕೆ ಹೋದಾಗ, ನಾವೆಲ್ಲಾ ಶಾಸಕರೇ. ಓಹೋ ನೀವು ಶಾಸಕರೇ? ಓಹೋ ನೀವೆಲ್ಲಾ ಶಾಸಕರುಗಳು ಎಂದು ಹೇಳುವಂತಹದ್ದನ್ನು ನಾವು ಕೂಡ ಕೇಳುವಂತಹ ಪರಿಸ್ಥಿತಿ ನಿರ್ಮಾಣವಾಗಿ ಬಿಟ್ಟರೆ ಹೇಗೆ? ಆದ್ದರಿಂದ, ಈ ವಿಚಾರವಾಗಿ ನಾವು ಚರ್ಚೆ ಮಾಡಲೇಬೇಕು. ನಾವು ಎಲ್ಲದರ ಬಗ್ಗೆಯೂ ನಾವು ಚರ್ಚೆ ಮಾಡಬೇಕಾದರೆ ಪ್ರಜಾತಂತ್ರ ವ್ಯವಸ್ಥೆ, ಈ ಸದನ, ಈ ಸದನದ ಗೌರವ, ಇದರ ಪಾವಿತ್ರತೆಯನ್ನುಳಿಸಿಕೊಂಡರೆ ಮಾತ್ರ ಇದು ಚರ್ಚೆಯಾಗುತ್ತದೆ. ಅದು ಇಲ್ಲದೇ ಹೋದರೆ ಚರ್ಚೆ ಏತಕ್ಕೆ ಬೇಕೆನ್ನುವುದನ್ನು ಮಾನ್ಯ ಸಭಾಪತಿಯವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಬಜೆಟ್ ಮಂಡಿಸಿದ್ದಾರೆ, ಅದರ ಬಗ್ಗೆ ಚರ್ಚೆಯಾಯಿತು, vote-on-account ಆಯಿತು, ಅನಿರ್ಧಿಷ್ಠ ಕಾಲದವರಿಗೆ ಮುಂದೂಡಲಾಯಿತು ಎಂದು ಹೇಳಿ ಮುಗಿಸುತ್ತಾರೆ. ಇದು ನಮಗೆ ಬೇಕೇ? ನಮ್ಮನ್ನು, ನಿಮ್ಮನ್ನು ಆ ಕಡೆ, ಈ ಕಡೆ ಮಾಡಿ, ನಮ್ಮನ್ನು ಖರೀದಿ ವಸ್ತುಗಳನ್ನಾಗಿ ಮಾಡಿ, 5 ಕೋಟಿ, 10 ಕೋಟಿ, 20 ಕೋಟಿ ರೂಪಾಯಿಗಳು ಎಂದು ಹೇಳುತ್ತಿದ್ದರೆ ನಮ್ಮ ಬೆಲೆ ಈಗ ಎಷ್ಟು? ಆದ್ದರಿಂದ, ಚರ್ಚೆ ಮಾಡಲಿಕ್ಕೆ ಇದಕ್ಕಿಂತ ಉತ್ತಮವಾಗಿರುವಂತಹ ಯಾವುದೇ ಒಂದು ವಿಷಯವಿಲ್ಲವೆಂದು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಸಭಾಪತಿಯವರೇ, ಅವರ ಮುಖವನ್ನು ನೋಡಿದೆ, ಅವರ ಮನಸ್ಸಿನಲ್ಲಿರುವ ನೋವನ್ನು ನೋಡಿದೆ. ಅವರು ನನ್ನ ವಿಚಾರವನ್ನು ಹೇಳುವುದಿಲ್ಲವೆಂದು ಹೇಳಿದರು. ಅವರ ವಿಚಾರವನ್ನು ಕೇಳಬೇಕೆಂದು, ಅವರು ಆಸ್ಥಾನದಿಂದ ಹೊರಗಡೆ ಹೋದಮೇಲೆ ನಾನು ಆ ವಿಚಾರವನ್ನು ಕೇಳಿದರೆ ಪೂರ್ತಿಯಾಗಿ ನಾಣಯ್ಯ ನೀವು ಹೇಳುವಂತಹ ವಿಚಾರವನ್ನು ನಾನು ಸಹ ಸ್ವೀಕಾರ ಮಾಡುತೇನೆ ಎಂದು ಹೇಳುವಂತಹದ್ದಾಗುತ್ತದೆ. ಸಭಾನಾಯಕರು ಬೇಡವೆಂದು ಹೇಳಲಿಕ್ಕೆ ಸಾದ್ಯವಿದೆಯೇ? ಅವರು ಬೇಡವೆಂದು ಹೇಳಲಿಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ, ಈ ಚಿಂತನೆಗೆ ಒಳಪಡುವ ನಾವು ನೀವೆಲ್ಲರೂ ಇರುತ್ತೀರಿ ಎಂದು

ಭಾವಿಸುತ್ತೇನೆ. ಒಟ್ಟಾರೆ ಸೇರಿ ಇದಕ್ಕೊಂದು ಪರಿಹಾರ ವನ್ನು ಹುಡುಕದೇ ಹೋದರೆ ನಮ್ಮ ಗೋರಿಯನ್ನು, ನಮ್ಮ ಪ್ರಜಾತಂತ್ರ ವ್ಯವಸ್ಥೆಯನ್ನು ನಾವೇ ನಾಶ ಮಾಡಿಕೋಳ್ಳುತ್ತೇವೆ. ನಾನು ಹೇಳಲಿಕ್ಕೆ ಬಯಸುವುದೇನೆಂದರೆ ಹಸಿದವರ ಹೊಟ್ಟೆ ಈ ರಾಷ್ಟ್ರದಲ್ಲಿ ದಿವಸದಿಂದ ದಿವಸಕ್ಕೆ ಹೆಚ್ಚುತ್ತಾ ಹೋಗುವಂತಹ ಸಂದರ್ಭದಲ್ಲಿ ಒಂದು ಕಾಲದಲ್ಲಿ ಬಹಳ ದೊಡ್ಡದಾದ ಕ್ರಾಂತಿಯನ್ನು ಬೇರೆ ರಾಷ್ಟ್ರದಲ್ಲಿ ಕಾಣುತ್ತಿರುವಂತೆ ನಮ್ಮ ದೇಶದಲ್ಲಿ ಕಾಣುವಂತಹ ಕಾಲ ದೂರವಿಲ್ಲ. ಈ ವಿಚಾರವಾಗಿ ಚರ್ಚೆಗೆ ಎತ್ತಿಕೊಳ್ಳೋಣ. ದಯವಿಟ್ಟು ಇದಕ್ಕೆ ಅವಕಾಶವನ್ನು ಕೊಡಿ.

(ಗೊಂದಲ)

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿ ಯವರೇ, ನನಗೂ ರೈಟ್ಸ್ ಇದೆ. ನಾನು ಸಹ ಇದಕ್ಕೆ ಸಹಿ ಹಾಕಿದ್ದೇನೆ. ನಾನು ವಿನಾಕಾರಣ ಮದ್ಯೆ ಪ್ರವೇಶ ಮಾಡಿ ಸಮಯವನ್ನು ಹಾಳು ಮಾಡುವಂತಹ ಕೆಲಸವನ್ನು ಮಾಡುತ್ತಿಲ್ಲ.

**ಸಭಾಪತಿಯವರು:** ರೈಟ್ಸ್ ಎಲ್ಲರಿಗೂ ಇದೆ. ವಿರೋಧ ಪಕ್ಷದ ನಾಯಕರು ಮದ್ಯಾಹ್ನ ಸದನಕ್ಕೆ ತಡವಾಗಿ ಬಂದರೆ ನಾನು ಏನು ಮಾಡಲಿ?

**ಶ್ರೀಮತಿ ಮೋಟಮ್ಮ:** ಸದನಕ್ಕೆ ನಾನು ಸ್ವಲ್ಪ ತಡವಾಗಿ ಬಂದರೆ ನನಗೆ ಹಕ್ಕು ಮೊಟುಕು ಮಾಡುವುದಾದರೆ ಹೇಗೆ?

**ಸಭಾಪತಿಯವರು:** ನಾನು ನಿಮ್ಮ ಹಕ್ಕನ್ನು ಮೊಟಕು ಮಾಡುತ್ತಿಲ್ಲ.

**ಶ್ರೀಮತಿ ಮೋಟಮ್ಮ:** ನಾನು ಗಂಟೆ ಗಟ್ಟಲೆ ಸಮಯವನ್ನು ತೆಗೆದುಕೊಳ್ಳುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:** ನಮ್ಮ ಪಕ್ಷಕೆ ಪ್ರಾತಿನಿಧ್ಯವೇ ಇಲ್ಲ. ನಮ್ಮ ಪಕ್ಷದ ವತಿಯಿಂದ ಮಾತನಾಡಲಿಲ್ಲವೆಂದರೆ ಹೇಗೆ?

**ಸಭಾಪತಿಯವರು:** ಸದನಕ್ಕೆ ಮಾನ್ಯ ಸದಸ್ಯರು ಬರುವುದು ತಡವಾಯಿತು ಎಂದು ಹೇಳಿದ್ದೇನೆ ಹೊರತು ಅವರಿಗೆ ಪ್ರಾತಿನಿಧ್ಯವಿಲ್ಲವೆಂದು ಹೇಳಲಿಲ್ಲ.

**ಶ್ರೀಮತಿ ಮೋಟಮ್ಮ:** ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೇ 5 ನಿಮಿಷಗಳಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ.

**ಡಾ|| ಎ.ಹೆಚ್. ಶಿವಯೋಗಿ ಸ್ವಾಮಿ:** ಮಾನ್ಯ ಸಭಾಪತಿಯವರೇ, ಪ್ರಿಲಿಮನರಿ ಸಬ್‌ಮಿಷನ್ ಮಾಡುವುದಕ್ಕೆ ಅರ್ಧ ಗಂಟೆ ಅವಕಾಶವಿದ್ದು, ಅರ್ಧ ಗಂಟೆ ಮುಗಿದು ಹೋಗಿದೆ.

(ಗೊಂದಲ)

**ಶ್ರೀ ಎಂ.ಸಿ. ನಾಣಯ್ಯ:** ಮಾನ್ಯ ಸಭಾಪತಿಯವರೇ, ಅವರ ಸ್ಥಾನವನ್ನು ನಾನು ಅತಿಕ್ರಮಣ ಮಾಡಲಿಲ್ಲ.

**ಸಭಾಪತಿಯವರು:** ಇದರಲ್ಲಿ ನಿಮ್ಮದೇನೂ ತಪ್ಪಿಲ್ಲ. ಇಲ್ಲಿ ನಡೆದಿರುವುದನ್ನು ಗಮನಿಸಬೇಕು. ನಾನು ನಿಷ್ಪಕ್ಷಪಾತವಾಗಿದ್ದೇನೆ. ವಿರೋಧ ಪಕ್ಷದ ನಾಯಕರಿಗೇ ನಾನು ಅವಕಾಶವನ್ನು ಕೊಡಬೇಕಾಗಿತ್ತು. ಅವರು ಆ ಸಮಯದಲ್ಲಿ ಬಂದಿರಲಿಲ್ಲ. ಸಹಿ ಹಾಕಿದವರ ಪೈಕಿ ಇನ್ನೊಂದು ಪಕ್ಷದ ನಾಯಕರು ಈ ಸಭೆಯಲ್ಲಿ ಹಾಜರಿದ್ದರು. ಅವರಿಗೆ ನಾನು ಅವಕಾಶವನ್ನು ಕೊಟ್ಟೆನು. ಹಾಗಾಗಿ, ಶ್ರೀಯುತ ನಾಣಯ್ಯನವರಿಗೆ ಅವಕಾಶವನ್ನು ಕೊಟ್ಟೆನೇ ಹೊರತು, ಅವರಿಗೆ ಆದ್ಯತೆಯನ್ನು ಕೊಟ್ಟಿದ್ದೇನೆ ಎನ್ನುವುದು ಖಂಡಿತ ಅಲ್ಲ. ವಿರೋಧ ಪಕ್ಷದ ನಾಯಕರಿಗೆ ನಾನು ಆದ್ಯತೆಯನ್ನು ಕೊಡುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ:** ಮಾನ್ಯ ಸಭಾಪತಿಯವರೇ, ನಾನು ಮಾತನಾಡಲಿಕ್ಕೆ ತಮ್ಮನ್ನು ಖಂಡಿತವಾಗಿಯೂ ಕೇಳುತ್ತೇನೆ. ತಾವು ನನಗೆ ಅವಕಾಶವನ್ನು ಕೊಡುತ್ತೀರಿ ಎಂದು ನನಗೆ ಭರವಸೆ ಇತ್ತು. ನನಗೆ ಅವಕಾಶವನ್ನು ಕೊಟ್ಟಿದ್ದೀರಿ. ದಯವಿಟ್ಟು ಅವರಿಗೂ ಸಹ ಅವಕಾಶವನ್ನು ಕೊಡಿ.

**ಶ್ರೀಮತಿ ಮೋಟಮ್ಮ:** ಮಾನ್ಯ ಸಭಾಪತಿಯವರೇ, ತಾವು ಬಹಳ ದೀರ್ಘ ಕಾಲದಿಂದ ಈ ರಾಜಕೀಯದಲ್ಲಿದ್ದು, ರಾಜಕೀಯ ವ್ಯವಸ್ಥೆಯನ್ನು ನೋಡಿಕೊಂಡು ಬಂದಿದ್ದೀರಿ. ಇವತ್ತು ಇಂತಹ ಒಂದು ಸನ್ನಿವೇಶ ಏತಕ್ಕೆ ನಿರ್ಮಾಣವಾಯಿತು, ನಾವು ಈ ಅಪರೇಷನ್ ಕಮಲದ ವಿಚಾರವಾಗಿ ಚರ್ಚೆಗೆ ಎತ್ತಿಕೊಳ್ಳಬೇಕು, ಅದರ ಬಗ್ಗೆ ಚರ್ಚೆಯಾಗಬೇಕು, ಎನ್ನುವ ವಿಚಾರವಾಗಿ ನೋಟಿಸ್ ಅನ್ನು ಕೊಟ್ಟಿದ್ದೇವೆ.

(ಗೊಂದಲ)

**ಶ್ರೀಮತಿ ಭಾರತಿ ಶೆಟ್ಟಿ:** 40–45 ವರ್ಷಗಳಿಂದ ನಾವು ಸಹ ನೋಡಿಕೊಂಡು ಬಂದಿದ್ದೇವೆ.

**ಶ್ರೀಮತಿ ಮೋಟಮ್ಮ:** ಶ್ರೀಮತಿ ಭಾರತಿ ಶೆಟ್ಟಿಯವರು ನನಗಿಂತ ಬಹಳ ಸಿನಿಯರ್ ಇದ್ದಾರೆ. 40–45 ವರ್ಷಗಳಾಗಿವೆ. ಹೀಗಾಗಿ ಅವರು ಎಲ್ಲದಕ್ಕೂ ಮೂಗನ್ನು ತೂರಿಸುತ್ತಾರೆ.

**ಸಭಾಪತಿಯವರು:** ಇಬ್ಬರು ಮಾತನಾಡಿದರೆ ನಾನು ಏನು ಮಾಡಬೇಕು ಹೇಳಿ. ಯಾರಾದರೂ ಒಬ್ಬರು ಮಾತನಾಡಿ.

**ಶ್ರೀಮತಿ ಭಾರತಿ ಶೆಟ್ಟಿ:** ಅಪರೇಷನ್ ಕೈ ಬಗ್ಗೆ ಚರ್ಚೆಯಾಗಲಿ.

**ಶ್ರೀಮತಿ ಮೋಟಮ್ಮ:** ಹೌದು, ನೀವು ಕಮಲವೂ ಕೈಯನ್ನು ನೋಡಿಕೊಂಡಿರುವುದು. ಮತ್ತೇನು ನೋಡಿಕೊಂಡಿದ್ದೀರಿ? ಕೈ ಬೇಕೇ ಬೇಕು. ಕೈಯಿಲ್ಲದೇ ಏನೂ ಮಾಡುವುದಕ್ಕಾಗುವುದಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:** ಕೇವಲ ಕಮಲದ ಬಗ್ಗೆ ಮಾತನಾಡುವುದಲ್ಲ. ಎಲ್ಲದರ ಬಗ್ಗೆ ಮಾತನಾಡಬೇಕು.

**ಸಭಾಪತಿಯವರು:** ಅಲ್ಲಿ ಕುಳಿತು ಮಾತನಾಡುತ್ತಿದ್ದ ಒಬ್ಬರನ್ನು ಈಗ ಇಲ್ಲಿ ಕುಳ್ಳಿರಿಸಿದ್ದೇನೆ. ನೀವು ಅವರನ್ನೂ ಬಿಡುವುದಿಲ್ಲವೆಂದರೆ ನಾನು ಅವರನ್ನು ಎಲ್ಲಿ ಕುಳ್ಳಿರಿಸಲಿ?

**(4–30 ಗಂಟೆ)**

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಈ ಬಗ್ಗೆ ಇಲ್ಲಿ ಚರ್ಚೆ ಆಗುವುದು ಅಗತ್ಯ ಇದೆಯೇ ಇಲ್ಲವೇ ಎಂಬುದರ ಬಗ್ಗೆ ಇಲ್ಲಿ ವಿಷಯವನ್ನು ಮಂಡನೆ ಮಾಡುತ್ತಿದ್ದೇವೆ. ಇದು ಬಹಳ ಅಗತ್ಯವದೆ. ಇಂದು ನಮ್ಮ ರಾಜ್ಯದಲ್ಲಿ ಶಾಸಕರ ವ್ಯಾಪಾರೀಕರಣ ಏನು ನಡೆಯುತ್ತಿದೆ ಈ ವ್ಯಾಪಾರೀಕರಣ ಸರಿಯೇ? ಒಂದು ವೇಳೆ ಈ ಶಾಸಕರ ವ್ಯಾಪಾರೀಕರಣ ಸರಿ ಎಂದು ಆಗುವುದಾದರೆ ಕರ್ನಾಟಕ ರಾಜ್ಯದಲ್ಲಿ ಶಾಸಕರು ವ್ಯಾಪಾರಕ್ಕೆ ಇದ್ದಾರೆ ಎಂದು ಬೋರ್ಡನ್ನು ಹಾಕಿ ಬಿಡುವಾ? ಅದು ಸರಿ ಎಂದು ಅನ್ನಿಸಿಕೋಳ್ಳುವುದಾದರೆ ಅನ್ನಿಸಕೊಳ್ಳಲಿ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲುಮಾಡಿದ ಹಾಗಾಗುತ್ತಿದೆ ಎನ್ನುವ ರೀತಿ ಅನ್ನಿಸಿಕೊಳ್ಳುತ್ತಿದೆ. ಇದುಸಂಪೂರ್ಣವಗಿ ನಿಲ್ಲಬೇಕಾಗುತ್ತದೆ. ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ನಾವು ಏಕೆ ಹೋಗುತ್ತಿದ್ದೇವೆ ಎಂದರೆ ಅದಕ್ಕೆ ಅವರು ನೀಡುವ ಕಾರಣ ಏನೇಂದರೆ ನಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿಯ ಸಲುವಾಗಿ ಹೋಗುತ್ತಿದ್ದೇವೆ ಎಂದು ಹೇಳುತ್ತಾರೆ. ನಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ ನಮ್ಮ ಕ್ಷೇತ್ರದ ಅಭಿವೃದ್ಧಿಯನ್ನು ಮಾಡಿಕೊಳ್ಳುವುದಕ್ಕೊಸ್ಕರವಾಗಿ ಹೋಗುತ್ತಿದ್ದೇವೆ ಎಂದು ಹೇಳುತ್ತಾರೆ. ನಮ್ಮ ಹಳ್ಳಿಯ ಕಡೆಯಲ್ಲಿ ಹೇಳುವಂತೆ ಕೆಲವು ತುಡುಕು ದನಗಳು ಇರುತ್ತವೆ. ತುಡುಕು ಎಂದರೆ ತಮಗೆ ಗೊತ್ತಾಗುತ್ತದಲ್ಲವೇ?

**ಸಭಾಪತಿಯವರು:** ಗೊತ್ತಾಗುತ್ತದೆ. ನಾನೂ ಕೂಡ ಮಲೆನಾಡಿನವನೇ.

**ಶ್ರೀಮತಿ ಮೋಟಮ್ಮ:–** ನಿಜವಾಗಲೂ ದನವನ್ನು ಸಾಕಿರುವವರು neat ಆಗಿ ಹೊತ್ತಿಗೆ ಸರಿಯಾಗಿ ಮೇವನ್ನು ಅವುಗಳಿಗೆ ಹಾಕುತ್ತಾ ಚೆನ್ನಾಗಿ ಸಾಕುತ್ತಿರುತ್ತಾರೆ. ಆದರೂ ಕೂಡ ಅವುಗಳು ಎಲ್ಲೆಲ್ಲಿ ಅವುಗಳಿಗೆ ಹುಲುಸು ಕಾಣುತ್ತದೆ ಅಲ್ಲಲ್ಲಿ ಅವುಗಳು ಮೇಯುವುದಕ್ಕೆ ಶುರು ಮಾಡುತ್ತವೆ. ದನಗಳನ್ನು ಸಾಕಿದವರು ಒಂದೆರಡು ದಿನಗಳ ಕಾಲ ನೋಡುತ್ತಾರೆ ಅದನ್ನು ಸಹಿಸಿಕೊಳ್ಳುತ್ತಾರೆ. ಕೊನೆಗೆ ಅದು ನಮ್ಮದೇ ದನ ಎಂದು ಅವನ್ನು ಕಟ್ಟಿ

ಹಾಕಿಕೊಳ್ಳುತ್ತೇವೆ. ಎನ್ನುವ ಪರಿಸ್ಥಿತಿ ಬರುತ್ತದೆ. ಅದೇ ರೀತಿ ತುಡುಗು ಶಾಸಕರು ಪಕ್ಷದಿಂದ ಪಕ್ಷಕ್ಕೆ ಹಾರಾಟ ಮಾಡುವುದು ಅಷ್ಟೇ ಅಲ್ಲ, ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಿದ್ದಾರೆ. ಈ ರೀತಿ ಅವರು ರಾಜೀನಾಮೆ ಕೊಡುವುದರಿಂದ ಎಂತಹ ಅನಾಹುತವಾಗುತ್ತಿದೆ ಎಂದರೆ ಅವರು ರಾಜೀನಾಮೆ ಕೊಡುವ ಕ್ಷೇತ್ರದಲ್ಲಿ ಚುನಾವಣೆ ಆಗಬೇಕಾಗುತ್ತದೆ. ಇದು ಯಾರ ಹಣ? ಈ ಚುನಾವಣೆಗೆ ಖರ್ಚು ಮಾಡುವ ಹಣ ಈ ರಾಜ್ಯದ ಹಣ. ನಮ್ಮ ನಿಮ್ಮೆಲ್ಲರ ಹಣವೇ ಆಗಿದೆ. ಈ ರೀತಿ ಪ್ರತಿಯೊಂದು ಸಲ ಉಪ ಚುನಾವಣೆ ಆಗಬೇಕೆಂದು ಹೇಳುತ್ತಾ ಹೋದರೆ ಹೇಗೆ ಆಗುತ್ತದೆ. ಈ ಹಣ ಕೇವಲ ಸರ್ಕಾರದ್ದು ಮಾತ್ರ ಅಲ್ಲ. ಹಣವನ್ನು ಪಕ್ಷದವರು ಮತ್ತು ಅಭ್ಯರ್ಥಿ ಖರ್ಚು ಮಾಡುತ್ತಾರೆ. ಮತ್ತು ನಮ್ಮ ಅಧಿಕಾರಿಗಳ ಸಮಯ ಕೂಡ ಹಾಳಾಗುತ್ತದೆ. ಅಧಿಕಾರಿಗಳ ಖರ್ಚಿನ ಹೊಣೆ ಕೂಡ ಸರ್ಕಾರದ ಮೇಲೆ ಬೀಳುತ್ತದೆ. ಮತ್ತು ಅಧಿಕಾರಿಗಳನ್ನು ನೀವು ಅಲ್ಲಿಗೆ ಪೋಸ್ಟಿಂಗ್ ಮಾಡ ಬೇಕಾಗುತ್ತದೆ. ಅವರು ಈ ಚುನಾವಣಾ ವ್ಯವಸ್ಥೆಯನ್ನು ಮಾಡ ಬೇಕಾಗುತ್ತದೆ. ಇಂತಹ ಪರಿಸ್ಥಿತಿ, ಇಂತಹ ಅನಾಹುತ ಮತ್ತು ಅಗತ್ಯವೇ? ನಮಗೆ ಬೇಕಾ? ಏತಕ್ಕಾಗಿ ಈ ಶಾಸಕರ ವ್ಯಾಪಾರೀಕರಣಕ್ಕೆ ಇಲ್ಲಿ ಹೆಚ್ಚು ಒತ್ತು ಆಗುತ್ತಿದೆ, ಈ ವ್ಯಾಪಾರೀಕರಣವನ್ನು ನಿಲ್ಲಸಬೇಕಾಗಿದೆ. ಮತ್ತು ಈ ವ್ಯಾಪಾರೀಕರಣವನ್ನು ನಿಲ್ಲಿಸುವುದಕ್ಕೆ ಯಾವುದಾದರೂ ಕಾಯಿದೆಯನ್ನು ತರಲೇಬೇಕಾಗುತ್ತದೆ. ಅಲ್ಲಿ amendment ಮಾಡುವುದು ಬೇರೆ.ಇಂಥಹವರಿಗೆ ಶಿಕ್ಷೆ ಆಗಲೇಬೇಕಾಗುತ್ತದೆ. ಈ ಶಾಸಕರಿಗೆ ಯಾರು vote ಅನ್ನು ಕೊಡುತ್ತಾರೆ ಆ ಕ್ಷೇತ್ರದ ಜನರು ಇಂತಹ ಶಾಸಕರನ್ನು ಅಟ್ಟಾಡಿಸಿಕೊಂಡು ಹೊಡೆಯ ಬೇಕಾಗುತ್ತದೆ. ಆದರೆ ನಮ್ಮ ಜನಗಳು ಅಮಾಯಕರು, ಮುಗ್ಧರು. ದಡ್ಡರು, ನೀನು ಎಲ್ಲಿಯಾದರೂ ಮೇಯ್ದು ಬಾರಪ್ಪ ನೀನು ಸುಖವಾಗಿ ಇರು ಚೆನ್ನಾಗಿ ಇರು ಎಂದು ಹೇಳುತ್ತಾರೆ. ನಾವು ಒಪ್ಪಿಕೊಳ್ಳುತ್ತೇವೆ ಎಂದು ಹೇಳುವ ಜನರು ಇದ್ದಾರಲ್ಲ ಇವೆಲ್ಲದರಿಂದಾಗಿ ಈ ರೀತಿ ಆಗುತ್ತಿದೆ. ಎಷ್ಟು ಉಪ ಚುನಾವಣೆ ಆಯಿತು ಎಂಬುದನ್ನು ವಿಚಾರ ಮಾಡಬೇಕಾಗಿದೆ. ಈಗ ಮತ್ತೆ ಮೂರು ಉಪ ಚುನಾವಣೆ ಆಗಬೇಕಾಗಿದೆ. ಇದು ಸಾಲದು ಎಂದು ಮತ್ತೆ (ಮಾನ್ಯ

ಸಭಾಪತಿಯವರ ಆದೇಶಾನುಸಾರ ಈ ಪದಗಳನ್ನು ಕಡತದಿಂದ ತೆಗೆಯಲಾಗಿರುತ್ತದೆ.) ಅವರ...............

**ಸಭಾಪತಿಯವರು:–** ದಯವಿಟ್ಟು ಅವರ ಇಲ್ಲಿ ಹೆಸರನ್ನು ತರಬೇಡಿ.

**ಶ್ರೀಮತಿ ಮೋಟಮ್ಮ:–** ಆಯಿತು. ಮತ್ತೊಬ್ಬ ಶಾಸಕರ ರಾಜೀನಾಮೆಯಿಂದಾಗಿ ಮತ್ತೊಂದು ಸಲ ಚುನಾವಣೆ ಆಗುವ ಸಂದರ್ಭ ಬರುತ್ತಿದೆ.

**ಶ್ರೀ ಎ. ರಾಮದಾಸ್:–** ಮಾನ್ಯ ನಾಣಯ್ಯನವರು ಈ ವಿಚಾರವನ್ನು ಮೊನ್ನೆ ಪ್ರಸ್ತಾಪ ಮಾಡಿದಾಗ, ಅದರಲ್ಲಿ ಇರುವಂತಹ ಯಾವ ಸೆಕ್ಷನ್‌ನಲ್ಲಿ...

**ಸಭಾಪತಿಯವರು:–** ಕಡತದಲ್ಲಿ ಸೇರಿರುವ ಆ ಹೆಸರನ್ನು (ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಪದಗಳನ್ನು ಕಡತ ದಿಂದ ತೆಗೆಯ ಲಾಗಿರುತ್ತದೆ.) ತೆಗೆದುಬಿಡಿ.

**ಶ್ರೀ ಎ. ರಾಮದಾಸ್:–** ಗಂಭೀರವಾದ ಒಂದು ವಿಚಾರವನ್ನು ಮಾನ್ಯ ನಾಣಯ್ಯನವರು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಇದು ಹಿರಿಯರ ಸದನ, ಈ ವಿಚಾರ ಇನ್ನೂ ಕೂಡ ಇಲ್ಲಿ ಚರ್ಚೆಯಾಗಿಲ್ಲ. ಈ ವಿಚಾರ ಚರ್ಚೆಯಾಗಲಿ, ಚಿಂತೆ ಇಲ್ಲ ಎಂಬ ಒಂದು ದೃಷ್ಟಿಯಿಂದ ನಾವು ಇಲ್ಲಿ ಕುಳಿತುಕೊಂಡೆವು. ಇದು ಬಹಳ ಪ್ರಮುಖವಾದ ವಿಚಾರವಾಗಿದೆ. ನಾಳೆ ಬೆಳಿಗ್ಗೆ ಮಾನ್ಯ ನಾಣಯ್ಯನವರು ಏನು ಹೇಳಿದರು ಇಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರು ಎಂಬ ವಿಚಾರ ಪತ್ರಿಕೆಯಲ್ಲಿ ಬರುತ್ತದೆ. ಆ ಪತ್ರಿಕೆಯನ್ನು ನಾವೆಲ್ಲರೂ ಓದುತ್ತೇವೆ. ನಾಡಿದ್ದರಿಂದ ಮತ್ತೆ ಅದೇ ರೀತಿ ಇರುತ್ತದೆ. ಕರ್ನಾಟಕ ರಾಜ್ಯ ಈ ವಿಚಾರದಲ್ಲಿ ಸರಿಯಾದ ಮಾರ್ಗದಲ್ಲಿ ಹೋಗಬೇಕೆನ್ನುವುದಾದರೆ ಅವರು ಈ ದಿಸೆಯಲ್ಲಿ ಸರಿಯಾದ ಸಲಹೆಯನ್ನು ಕೊಡಲಿ. ಎಲ್ಲಾ ಪಕ್ಷದ ಅಧ್ಯಕ್ಷರುಗಳನ್ನೂ ಕೂಡ ಸಭೆಗೆ ಕರೆದು ಕರ್ನಾಟಕ ರಾಜ್ಯ ಇನ್ನು ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯ ಇನ್ನು ಮುಂದೆ ಈ ರೀತಿ ನಡೆದುಕೊಂಡು ಹೋಗಲಿ ಎನ್ನುವಂತಹ ಸರಿಯಾದ ವ್ಯವಸ್ಥೆಗಳನ್ನು ಇಟ್ಟುಕೊಳ್ಳುವುದು ಒಳ್ಳೆಯದು. ಇಲ್ಲಿ ಇನ್ನು ಯಾರೋ (ಮಾನ್ಯ ಸಭಾಪತಿ

ಯವರ ಆದೇಶಾನುಸಾರ ಈ ಪದಗಳನ್ನು ಕಡತದಿಂದ ತೆಗೆಯಲಾಗಿರುತ್ತದೆ.) ಎಂದು ಹೇಳುವುದು ನಾವು ಇಲ್ಲಿ ಎದ್ದು ನಿಂತು ಮತ್ತೊಬ್ಬರ ಹೆಸರನ್ನು ಹೇಳುತ್ತೇವೆ. 16 ಜನ ಶಾಸಕರನ್ನು ನೀವು ಕರೆದುಕೊಂಡು ಹೋಗಿದ್ದರಲ್ಲ ಎಂದು ನಾವು ಹೇಳುತ್ತೇವೆ. ಈ ರೀತಿಯ ಜಗಳ ಇಷ್ಟೇ ಆಗುವುದು ಇಲ್ಲಿ. ಆದುದರಿಂದ ಆ ಪ್ರಸಂಗಗಳು ಬೇಡ. ನಮಗೂ ಕೂಡ ಹೇಳುವುದಕ್ಕೆ ಬಹಳ ವಿಚಾರಗಳು ಇವೆ. ಅಂತಿಮವಾಗಿ logical end ಗೆ ತೆಗೆದುಕೊಂಡು ಹೋಗುವ ಸಲುವಾಗಿ ಯಾವ ರೀತಿಯಲ್ಲಿ ಒಂದು ಚಿಂತನೆಯನ್ನು ಮಾಡಬೇಕು ಎನ್ನುವುದರ ಬಗ್ಗೆ ವಿಚಾರ ಮಾಡುವುದು ಅಗತ್ಯವಿದೆ.

**ಸಭಾಪತಿಯವರು:–** ನಮ್ಮ ಸಮಯ ಓಡಿ ಹೋಗುತ್ತಿದೆ.

**ಶ್ರೀಮತಿ ಮೋಟಮ್ಮ:–** ಆಳುವ ಪಕ್ಷದವರಲ್ಲಿ ಇಷ್ಟೇ ವಿಚಾರವನ್ನು ಮನವಿಮಾಡಿಕೊಳ್ಳುತ್ತೇನೆ. ಇಲ್ಲಿ ಎಷ್ಟು ಜನ ತುಡುಗು ಶಾಸಕರಿದ್ದಾರೆ ಎನ್ನುವುದನ್ನು ಸರ್ವೆ ಮಾಡಿ ಅವರನ್ನೆಲ್ಲಾ ಒಂದೇ ಸಲಕ್ಕೆ ಆ ಕಡೆಗೆ ಎಳೆದುಕೊಂಡು ಒಟ್ಟಿಗೆ ಸಾಮಾನ್ಯ ಚುನಾವಣೆಯನ್ನೇ ಮಾಡಿ ಬಿಡಿ. ಒಬ್ಬೊಬ್ಬ ಶಾಸಕರನ್ನೇ ಕರೆಯುವುದು ಅವರು ಹುಲುಸಾಗಿದೆ ಎಂದು ತಿನ್ನುವುದಕ್ಕೆ ಹೋಗುವುದು ಆ ಕ್ಷೇತ್ರದ ಜನರಿಗೆ ಮತವನ್ನು ಕೊಟ್ಟ ಮತದಾರರಿಗೆ ಅವಮಾನಮಾಡುವುದು ಇದು ಸರಿಯಲ್ಲ. ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತದೆ. ಆ ರೀತಿ ಮಾಡುವುದು ಬೇಡ. ಒಟ್ಟಿಗೆ ಸಾಮಾನ್ಯ ಚುನಾವಣೆಗೆ ಹೋಗೋಣ.

**ಶ್ರೀಮತಿ ಭಾರತಿಶೆಟ್ಟಿ:–**ಅವರು ಕಾಲು ಹಾಕುವುದನ್ನು ನಿಲ್ಲಿಸಿದರೆ, , ,

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ ಅವರು ನಾನು ಮಾತನಾಡುತ್ತಿದ್ದಾಗ ಮಧ್ಯೆ ಬಾಯಿ ಹಾಕುವುದನ್ನು ದಯವಿಟ್ಟು ನಿಲ್ಲಿಸಬೇಕು.

**ಸಭಾಪತಿಯವರು:–** ಇಬ್ಬರು ಹೆಂಗಸರ ಮಧ್ಯೆ ನಾನು ಮಧ್ಯ ಪ್ರದೇಶ ಮಾಡುವುದಿಲ್ಲ.

(ಗೊಂದಲ)

**ಶ್ರೀಮತಿ ಮೋಟಮ್ಮ:–** ಅವರು ಈ ರೀತಿ ಮಧ್ಯೆ ಪ್ರದೇಶಿಸಿ ಬಾಯಿ ಹಾಕುವುದನ್ನು ನಿಲ್ಲಿಸಬೇಕು. I don't tolerate. Here afterwards I don't tolerate. Why you are getting up for everything? No, it is not your right. ನೀವು ಮಾತನಾಡುವುದಿದ್ದರೆ ಪ್ರತ್ಯೇಕವಾಗಿ ಸಮಯವನ್ನು ತೆಗೆದುಕೊಂಡು ಮಾತನಾಡಿ. ನಾನು ಮಾತನಾಡುತ್ತಿರುವಾಗ ಮಧ್ಯೆ ಬಾಯಿ ಹಾಕಬೇಡಿ. ನೀವು ಮಹಾನ್ ಬುದ್ದಿವಂತರೇನಲ್ಲ ದಯವಿಟ್ಟು ಕುಳಿತುಕೊಳ್ಳಿ. ನಿಮ್ಮ ಬುಧ್ಧಿವಂತಿಕೆ ಏನು ಎಂದು ನಮಗೆ ಗೊತ್ತಿದೆ. No, I don't tolerate this. ಈ ರೀತಿ ಮಾತನಾಡಬೇಡಿ. ಈ ರೀತಿ ನಾನು ಮಾತನಾಡುವ ಸಮಯದಲ್ಲಿ ಶ್ರೀಮತಿ ಭಾರತಿ ಶೆಟ್ಟಿಯವರು ಪದೇ ಪದೇ ಎದ್ದು ನಿಂತು Interfere ಆದರೆ, I don't tolerate. ಮಾತನಾಡುವುದಕ್ಕೆ ನನಗೆ ಅವರಿಗಿಂತ ಹೆಚ್ಚು ಅಧಿಕಾರ ಮತ್ತು ಜವಾಬ್ದಾರಿ ಇದೆ. ಪ್ರತಿಯೊಂದಕ್ಕೂ ಈ ರೀತಿ ಮಾತನಾಡುತ್ತಾ ಹೋದರೆ ನಾನು ಅದನ್ನು ಒಪ್ಪುವುದಿಲ್ಲ. ತಾವು ಅದನ್ನು ತಡೆಗಟ್ಟಬೇಕು. ನಾನು ಕಳೆದ 30 ವರ್ಷಗಳಿಂದ ರಾಜಕಾರಣದಲ್ಲಿ ಇದ್ದೇನೆ. ಇವರು ಮೊನ್ನೆ ಬಂದಿದ್ದಾರೆ. ಎಷ್ಟು ಮಾತನಾಡುವುದು. ಅದಕ್ಕೂ ಒಂದು ಮಿತಿ ಬೇಕು.

(ಗೊಂದಲ)

**ಸಭಾಪತಿಯವರು:–** ಆ ವಿಷಯ ಬೇಡ ತಮ್ಮ ವಿಚಾರ ಮಾತನಾಡುವುದನ್ನು ಮುಗಿಸಿ. ವೈಯಕ್ತಿಕ ವಿಷಯಗಳು ಇಲ್ಲಿ ಬೇಡ.

**ಶ್ರೀಮತಿ ಮೋಟಮ್ಮ:–** ಈ ಶಾಸಕರ ಖರೀದಿ ವ್ಯಾಪಾರವನ್ನು ನಿಲ್ಲಿಸಬೇಕು. ಒಂದು ವೇಳೆ ಎಲ್ಲಾ ಶಾಸಕರೂ ನಮ್ಮ ಪಕ್ಷಕ್ಕೆ ಬರುತ್ತಾರೆ ಎಂದು ಹೇಳುವುದಾದರೆ, ನೀವು ಸಾಮಾನ್ಯ ಚುನಾವಣೆಯನ್ನು ಘೋಷಣೆ ಮಾಡಿ ಎಷ್ಟು ಜನ ನಿಮ್ಮ ಕಡೆಯಿಂದ ಹುಲುಸಾಗಿದೆ ಎಂದು ಗೆದ್ದು ಬರುತ್ತಾರೆ ನೋಡೋಣ. ಈ ಚುನಾವಣೆಯನ್ನು Face ಮಾಡೋಣ. ಎಷ್ಟು ಜನ ಹುಲುಸಾಗಿದೆ ಎಂದು ಶಾಸಕರು ಸೇರುತ್ತಾರೋ ನೋಡೋಣ. ಇದೇನು 3–6 ತಿಂಗಳಿಗೆ ಒಂದು ಉಪ ಚುನಾವಣೆ ನಡೆಯುತ್ತಿದೆ. ಈಗ ಮತ್ತೊಂದು ಚುನಾವಣೆ ಆಗುತ್ತದೆ. ಇದಕ್ಕೆನು ಮಾನ ಮರ್ಯಾದೆ ಇಲ್ಲವೇ? ನಮ್ಮ ರಾಜ್ಯಕ್ಕೆ ತನ್ನದೇ ಆದ ಗೌರವ ನೀತಿ ನಿಯಮ ಇದೆ. ಅದನ್ನು ಕುಲಗೆಡಿಸುವ ಹದಕ್ಕೆ

ಹೋಗಬಾರದು. ನಿಜವಾಗಿ ನಮ್ಮ ರಾಜ್ಯದಲ್ಲಿ ಪ್ರಜಾಪ್ರಭುತ್ವದ ಕೊಲೆಯಾಗುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯೇ ಬುಡಮೇಲು ಆಗುತ್ತಿದೆ. ಇದಕ್ಕೆ ಅವಕಾಶ ಕೊಡಬೇಡಿ ಇದಕ್ಕೆ ಒಂದು ಕಡಿವಾಣ ಹಾಕಬೇಕೆಂದು ನಮ್ಮ prayer. ಇದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಲಿ.

**ಶ್ರೀ ಅಬ್ದುಲ್ ಅಜೀಂ:–** ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಬೇಕು.

**ಸಭಾಪತಿಯವರು:–** ಚರ್ಚೆ ಬೇಡ ಮಾನ್ಯ ಸಭಾ ನಾಯಕರು ಏನು ಹೇಳುತ್ತಾರೆ ಕೇಳೋಣ. ದಯವಿಟ್ಟು ಬೇಡ ಕುಳಿತುಕೊಳ್ಳಿ. ನಿಮಗೆ ಕೊಟ್ಟರೆ ಇವರಿಗೆ ಅವಕಾಶ ಕೊಡಬೇಕಾಗುತ್ತದೆ.

**ಡಾ: ವಿ.ಎಸ್. ಆಚಾರ್ಯ:–** ಮಾನ್ಯ ಸಭಾಪತಿಯವರೆ, ಮೊನ್ನೆ ಇದೇ ವಿಷಯವಾಗಿ ನಿಯಮಾವಳಿ 59ರ ಅಡಿಯಲ್ಲಿ ಪ್ರಸ್ತಾಪ ಮಾಡಿದಾಗ ಆ ದಿವಸ ಕೂಡ ಯಾವ ಈ ವಿಷಯದ ಬಗ್ಗೆ ಚರ್ಚೆ ಆಗಬೇಕೆಂದು ಹೇಳುತ್ತಿದ್ದಾರೆ ಆ ವಿಷಯ ನೇರವಾಗಿ ನಮ್ಮ ಸದನಕ್ಕೆ ಸಂಬಂಧವಿಲ್ಲ. ಕೆಳಮನೆಯ ಶಾಸಕರು ರಾಜೀನಾಮೆ ಕೊಟ್ಟಿದ್ದಾರೆ. ಅದರ ಅರ್ಥ ಸರಕಾರಕ್ಕೆ ನೇರವಾಗಿ ಸಂಬಂಧ ಇರುವಂಥಾದ್ದು ಮತ್ತು ಈ ಸದನಕ್ಕೆ ನೇರವಾಗಿ ಸಂಬಂಧ ಇರುವಂಥಾ ವಿಷಯವೇನೂ ಅಲ್ಲ. ಆದರೆ ಪ್ರಜಾಪ್ರಭುತ್ವ ಒಳ್ಳೆಯ ಆರೋಗ್ಯವಂತವಾಗಿ ಬೆಳೆಯಬೇಕು ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳು ಸುರಕ್ಷಿತವಾಗಿ, ಗಟ್ಟಿಯಾಗಿ ಇರಬೇಕೆಂದು ಮಾನ್ಯ ನಾಣಯ್ಯನವರು ಮತ್ತು ಪ್ರತಿಪಕ್ಷದವರು ಎಲ್ಲರೂ ಅಪೇಕ್ಷೆ ಪಡುತ್ತೇವೆ. ಇದರ ಬಗ್ಗೆ ನಮ್ಮದು ಭಿನ್ನಾಭಿಪ್ರಾಯ ಇಲ್ಲ. ಆದರೆ ಒಂದು ಮಾತನ್ನು ಅಲ್ಲಿ ಇದ್ದವರು ಮತ್ತು ಇಲ್ಲಿ ಇದ್ದವರು ಎಲ್ಲರೂ ತಿಳಿದುಕೊಳ್ಳಬೇಕು. ಒಂದು yard ಅಥವಾ ಒಂದು ಗಜ ಎಂದು ಏನು ಹೇಳುತ್ತೇವೆ ಅದನ್ನು ಕೊಡುವಾಗಲೂ ಮತ್ತು ತೆಗೆದುಕೊಳ್ಳುವಾಗಲೂ 36 ಇಂಚೇ ಇರಬೇಕು. ಆಗ ಸರಿಯಾಗುತ್ತದೆ. ಲಾಭ ಆಗುವುದಿದ್ದರೆ ನನಗೆ ಅದು 40 ಇಂಚು ಬರಬೇಕು ಇನ್ನೊಬ್ಬರಿಗೆ ಕೊಡುವುದಿದ್ದರೆ 30 ಇಂಚಿಗೆ ಅದನ್ನು ಇಳಿಸಬೇಕು ಎಂದು ಹೇಳುವುದು

ಸರಿಯಲ್ಲ. ಮೊನ್ನೆ ಇದೆಲ್ಲಾ ಆಗುವಾಗ ಕೇಂದ್ರ ಸಚಿವರೊಬ್ಬರು ತಮ್ಮ comment ಅನ್ನು ಕೊಟ್ಟರು. ಆಗ ನನಗೆ ಒಂದು ವಿಚಾರ ನೆನಪಾಯಿತು. 1983 ರಲ್ಲಿ ನಾನು ಶಾಸಕಾಂಗದ ಪಕ್ಷದ ನಾಯಕನಾಗಿದ್ದೆ. ನಾವು ನೋಡುತ್ತಾ ನೋಡುತ್ತಾ ಇದ್ದಹಾಗೆ ನಮ್ಮ 18 ಜನ ಶಾಸಕರ ಪೈಕಿ ಒಬ್ಬ ಶಾಸಕರನ್ನು ಎತ್ತಿಕೊಂಡು ಹೋದರು. "ಟೇಪು ಪ್ರಕರಣ" ತಮಗೆ ಗೊತ್ತಿರಬೇಕು. ಮಾನ್ಯ ಭೈರೇಗೌಡ ಅವರು ಅದರಲ್ಲಿ ಸಿಲುಕಿ ಬಹಳ ಒದ್ದಾಡಿದರು. ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಈಗ ಸಂಬಂಧ ಇಲ್ಲ. ಇದೆಲ್ಲಾ ಆಗಿ ಬಹಳ ವರ್ಷ ಆಯಿತು. ಗಂಗಾ ನದಿಯಲ್ಲಿ ಮತ್ತು ಕಾವೇರಿ ನದಿಯಲ್ಲಿ ಈಗ ನೀರು ತುಂಬಿ ಹೋಗಿದೆ. ನಮ್ಮ ಬಗ್ಗೆ ಪಕ್ಷಾಂತರದ ಬಗ್ಗೆ ಯಾರೂ ನಮ್ಮನ್ನು ನೋಡಿಕೊಂಡು ಮಾತನಾಡುವ ಪ್ರಶ್ನೆ ಇಲ್ಲಿ ಇಲ್ಲ. ಆವತ್ತಿನಿಂದ ಇವತ್ತಿನವರೆಗೂ ತನ್ನದೇ ನೀತಿ ತತ್ವ ಮತ್ತು ಸಿದ್ಧಾಂತದ ಮೇಲೆ ನಾವು ಇದ್ದೇವೆ ಎಂದು ಹೇಳುವವರು. ಅದೇ ರೀತಿ ಎಲ್ಲರೂ ಇದ್ದರೆ ಒಳ್ಳೆಯದು. ಅದೇ ರೀತಿ ಕಾಲ ಕಾಲಕ್ಕೆ ಪರಿಸ್ಥಿತಿಗಳು ಬೇರೆ ಬೇರೆ ನಮೂನೆ ಆಗುತ್ತವೆ. ನ್ಯಾಯಾಂಗ ತೀರ್ಮಾನದ ಬಗ್ಗೆ ಮಾನ್ಯ ನಾಣಯ್ಯನವರು ಹೇಳಿದರು. ಮಾನ್ಯ ನಾಣಯ್ಯನವರು ತಿಳಿದುಕೊಳ್ಳಬೇಕು. 2008 ರಲ್ಲಿ 5-6 ಜನ ಪಕ್ಷೇತರರಾಗಿ ಬಂದವರನ್ನು ಆಚೆ ಇಟ್ಟರು. ಉಳಿದಂತಹ ಸದಸ್ಯರಲ್ಲಿ ಜನಾದೇಶ ನಿಚ್ಚಳವಾಗಿ ಇತ್ತು. ಜನಾದೇಶ ನಿಚ್ಚಳವಾಗಿದ್ದು, ಎಷ್ಟೋ ವರ್ಷದ ನಂತರ ಒಂದು ಪಕ್ಷ ಅಧಿಕಾರಕ್ಕೆ ಬಂದರೆ ಅದು ಅಧಿಕಾರಕ್ಕೆ ಬಂದ ದಿವಸದಿಂದಲೇ ಈ ಸರ್ಕಾರ ಇವತ್ತು ಹೋಗುತ್ತದೆ, ನಾಳೆ ಹೋಗುತ್ತದೆ ಎಂದು ಕಣಿ ಹೇಳುತ್ತಾ ಕೂತರೆ ಸರಿಯಾಗುವುದಿಲ್ಲ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೆ, dissident activities ಏಕೆ start ಆಯಿತು? Dissident activities ನ್ನು ನಾವು ಮಾಡಲಿಲ್ಲ. ಅವರೇ ಮಾಡಿದ್ದು.

**ಡಾ: ವಿ.ಎಸ್. ಆಚಾರ್ಯ:-** ಮಾನ್ಯ ಸಭಾಪತಿಯವರೆ, ನಾನು ಹೇಳುವಂಥದ್ದೆನೆಂದರೆ, ಪಕ್ಷೇತರರ ಐದು ಜನರ ಬೇರೆ ಲೆಕ್ಕ ಎಂದು ತಿಳಿದುಕೊಂಡರೂ, ನಮ್ಮ 11 ಜನ ಶಾಸಕರನ್ನು ಇಲ್ಲಿಯೂ ಅಲ್ಲಿಯೂ

ಕರೆದುಕೊಂಡು ಹೋಗಿ, ನಮ್ಮ ಒಂದು ಶಕ್ತಿ ಕೇಂದ್ರ ಇದೆಯಲ್ಲ ಅಲ್ಲಿ ನೀವು ಸರ್ಕಾರಕ್ಕೆ ಬೆಂಬಲ ವಾಪಸ್ ಬರೆದುಕೊಡಿ 8 ದಿವಸಗಳೊಳಗೆ ಸರ್ಕಾರವನ್ನು dismiss ಮಾಡುತ್ತೇವೆಂದು ಹೇಳುವಂಥ ಮಾತು ಗೃಹ ಸಚಿವನಾಗಿರುವ ಸಂದರ್ಭದಲ್ಲಿ ಯಾರು ಆ ಮಾತು ಹೇಳಿದ್ದಾರೆಂದು ಕೂಡ ನನ್ನ ಕಿವಿಗೆ ಬಂದಿದೆ. ನೀವು ಬೆಂಬಲ ವಾಪಸ್ ಪಡೆದಿರುವ ಪತ್ರ ಕೊಡಿ ಮುಂದಿನದು ನನಗೆ ಬಿಡಿ ಎನ್ನುವಂಥ ಮಾತು ಕೆಲವು ನಾಯಕರು ಹೇಳಿ ಮಾಡಿದರೆ, ಚುನಾಯಿತವಾದಂಥ ಸರ್ಕಾರ ಐದು ವರ್ಷ ಚೆನ್ನಾಗಿರುವ ಆಡಳಿತ ಕೊಡಬೇಕೆಂದು ಇದ್ದರೂ ಕೂಡ ಪದೇ ಪದೇ 2009ರ ಲೋಕಸಭಾ ಚುನಾವಣೆ, ಆಮೇಲೆ ನಡೆದಂಥ ಐದಾರು ಚುನಾವಣೆಗಳು, ಮೊನ್ನೆ ನಡೆದಂಥ ಚುನಾವಣೆ ಎಲ್ಲದರಲ್ಲಿಯೂ ಜನ ಬೆಂಬಲ ನಮಗೆ ಬರುತ್ತಿದ್ದರೂ, ಇದನ್ನು ನೋಡತ್ತಿದ್ದರೂ ಅದಕ್ಕೇನಾದರೊಂದು ಐಬು ಕಟ್ಟುವುದು, ಬಿ.ಜೆ.ಪಿ.ಯವರು ಚುನಾವಣೆಯಲ್ಲಿ ಗೆದ್ದಕೂಡಲೇ ಅದಕ್ಕೊಂದು ಏನಾದರೂ ಹೇಳುವುದು ಇದು ಕೂಡ ಪ್ರಜಾಪ್ರಭುತ್ವದ ಒಳ್ಳೆಯ ಲಕ್ಷಣ ಅಲ್ಲ. ಆದ್ದರಿಂದ ಇದರ ಬಗ್ಗೆ ಚರ್ಚೆಯಾಗಲೇಬೇಕು. ಅದರಿಂದ ಏನೂ ತೊಂದರೆ ಇಲ್ಲ. ಮತ್ತು ನಾವು ಅವರು ಏನಾದರು ರಾಜ್ಯದ ಮಟ್ಟದಲ್ಲಿ ಪಕ್ಷಾಂತರ ನಿಷೇಧಕ್ಕೆ ಬಿಗಿಯಾದಂಥ ಕಾನೂನು ತರುವುದು, ಪ್ರಜಾಪ್ರಭುತ್ವ ಒಳ್ಳೆಯ ರೀತಿ ನಡೆಯಬೇಕಾದರೆ image correction will have to be made. ನಾನು ಒಪ್ಪುತ್ತೇನೆ. ಮಾನ್ಯ ನಾಣಯ್ಯನವರು ಹೇಳಿರುವಂಥದ್ದನ್ನು ನಾನು ಒಪ್ಪುತ್ತೇನೆ. ಆದರೆ image correction ಮಾಡುವುದು ಹೇಗೆ? It is by our sheer conduct. ಬೇರೆ ಮೂರನೆಯವರು ಬಂದು ಏನೂ ಮಾಡಲಿಕ್ಕಿಲ್ಲ. ನಮ್ಮ ವರ್ತನೆಯಿಂದ, ನಮ್ಮ performance ನಿಂದ ನಮಗೆ ಒಳ್ಳೆಯದಾಗಬೇಕು ವಿನಃ ಮತ್ತೊಂದರಿಂದಲ್ಲ. A conscious effort from every one of us will have to be made. ಅದು ಆದಾಗ ಮಾತ್ರ ಸರಿಯಾಗುತ್ತದೆ. ನಮ್ಮ ಹಾಗೂ ಕೆಳಮನೆಯ ವಿವೇಕ ಒಟ್ಟು ಒಂದಾಗಿ ಕೆಲವು ಮೌಲ್ಯಗಳನ್ನು ರಾಜ್ಯ ಸರ್ಕಾರದೊಂದಿಗೆ ಸೇರಿ ರಚಿಸಬೇಕೆಂದಾದರೆ ನಾವು ಸರ್ಕಾರದ ಕಡೆಯಿಂದ ಅದಕ್ಕೆ ಸಿದ್ಧರಿದ್ದೇವೆ. ಮತ್ತು ಅವರು ಹೇಳಿರುವ ತಾತ್ವಿಕ

ವಿಷಯಗಳೇನಿವೆ ಅದಕ್ಕೆ ನಮ್ಮದೇನೂ ಭಿನ್ನಾಭಿಪ್ರಾಯವಿಲ್ಲ. ಆಡಳಿತ ಸುಧಾರಣೆಯಾಗಬೇಕು. ಪ್ರಜಾಪ್ರಭುತ್ವ ಗಟ್ಟಿಯಾಗಬೇಕು, ಭ್ರಷ್ಟಾಚಾರ ರಹಿತವಾದಂಥ ಸಮಾಜ, ಸರ್ಕಾರ ನಿರ್ಮಾಣವಾಗಬೇಕೆನ್ನುವಂಥದ್ದರಲ್ಲಿ ನಮ್ಮಲ್ಲಿ ಚೂರು ಭಿನ್ನಾಭಿಪ್ರಾಯವಿಲ್ಲ. ನಾವು ನಮ್ಮ ಮಟ್ಟವನ್ನು ಇನ್ನು ಒಳ್ಳೆಯದು ಮಾಡಬೇಕು. ನಾನು ನಿನ್ನೆ ಒಂದು ಪತ್ರಿಕೆಯಲ್ಲಿ ನೋಡಿದ್ದೇನೆ. ಜಗತ್ತಿನಲ್ಲಿ ಅತ್ಯುತ್ತಮವಾಗಿ ಆಡಳಿತ ಕೊಟ್ಟಂಥ ರಾಜ್ಯ ಎಂದು ನನಗೆ ಒಂದು ಎಸ್.ಎಂ.ಎಸ್. ಬಂದಿದೆ. ಅದು ಎಷ್ಟು ಜನರಿಗೆ ಬಂದಿದೆಯೋ ನನಗೆ ಗೊತ್ತಿಲ್ಲ.

**ಶ್ರೀಮತಿ ಮೊಟ್ಟಮ್ಮ:–** ಗುಜರಾತ್‌ನ ವಿಚಾರ ಬಿಡಿ.

**ಡಾ: ವಿ.ಎಸ್. ಆಚಾರ್ಯ:–** ಮಾನ್ಯ ಸಭಾಪತಿಯವರೆ, ಅದಕ್ಕೆ ಅವರು ಆಧಾರ ಸಹಿತ ಕೊಟ್ಟಿದ್ದಾರೆ. ನೀವು ಅಷ್ಟೊಂದು ಸುಲಭವಾಗಿ ಬಿಡಿ ಎಂದು ಹೇಳುವ ವಿಚಾರ ಇದಲ್ಲ. ಅಷ್ಟೊಂದು ತಾತ್ಸಾರದಿಂದ ಬಿಡಿ ಎಂದು ಹೇಳಬೇಡಿ. Just because ಅದು ಗುಜರಾತ್, ನಮ್ಮ ಬಿ.ಜೆ.ಪಿ.ಯ ನೇತೃತ್ವದ ರಾಜ್ಯ ಎಂದು ಹೇಳಿ ನೀವು ಬಿಡಲಿಕ್ಕೆ ಬರುವುದಿಲ್ಲ. ಇಂತಿಂಥ ಕಾರಣದಿಂದ ಎಂದು ವಿಶ್ವಬ್ಯಾಂಕ್‌ನವರು ಪ್ಯಾರಾಮಿಟರ್ಸ್‌ಗಳನ್ನು ಎತ್ತಿಹಿಡಿದು ಅತ್ಯುತ್ತಮ ಆಡಳಿತ ಕೊಟ್ಟಂಥ ರಾಜ್ಯ ಎಂದು ಹೇಳಿದ್ದಾರೆ. ಇನ್ನು 10–15 ವರ್ಷದಲ್ಲಿ ಜಗತ್ತಿನಲ್ಲಿ ಒಂದನೇ ಸ್ಥಾನಕ್ಕೆ ಬಂದು ಭಾರತದ ಅತೀ ಉತ್ತಮವಾದಂಥ ರಾಜ್ಯ ಎಂದು ಬರುತ್ತದೆ. ಒಳ್ಳೆಯ ವಿಷಯಗಳನ್ನು ನಾವು ಮೆಚ್ಚುವಂಥದ್ದನ್ನು, appreciate ಮಾಡುವಂಥದ್ದನ್ನು ನಾವು ಕಲಿಯಬೇಕು. ಮಾನ್ಯ ಸಭಾಪತಿಯವರೆ ತಾವು ಹೇಳಿದ ಹಾಗೆ ಹೆಚ್ಚಿಗೆ ಹೊತ್ತು ನಾನು.. ಏಕಾಯಿತು ಅಂದರೆ by their sheer conduct…

**Sri M.C. NANAIAH:** By his conduct. He is a man of honesty, a man of integrity. ಅದನ್ನು ಫಾಲೋ ಮಾಡಿ.

**ಡಾ: ವಿ.ಎಸ್. ಆಚಾರ್ಯ:–** ಹೌದು ಅದನ್ನು ಫಾಲೋ ಮಾಡುತ್ತೇವೆ. ನಾನು ಅದಕ್ಕಾಗಿಯೇ ಇಲ್ಲಿ ಉಲ್ಲೇಖ ಮಾಡುತ್ತಿದ್ದೇನೆ. ನಮಗೆ ಒಂದು role

model ಬೇಕಾಗುತ್ತದೆ. ಆದ್ದರಿಂದ ನಾನು ಹೇಳುವದೇನೆಂದರೆ ಯಾವುದೇ ಭಿನ್ನಾಭಿಪ್ರಾಯ ಮಾನ್ಯ ನಾಣಯ್ಯನವರು, ಮಾನ್ಯ ಮೋಟಮ್ಮನವರು ಹೇಳಿದ್ದಕ್ಕೆ ಇಲ್ಲ. ಅವರ ಅಭಿಪ್ರಾಯಕ್ಕೆ ನಮ್ಮ ಸಮ್ಮತಿಯೇ ಇದೆ. ಆದರೆ ನನ್ನ ವಿಷಯ ಏನೆಂದರೆ ನಾವೆಲ್ಲರೂ ಒಟ್ಟಾಗಿ ಇದನ್ನು ಸುಧಾರಿಸಬೇಕೆಂದು ಹೋದರೆ ಆಗುತ್ತದೆ. ಒಬ್ಬರು ಮೇಲೆ ಹೋಗುವಾಗ ಬಂದು ಕಾಲು ಎಳೆದರೆ ಏನೂ ಮಾಡಲಿಕ್ಕಾಗುವುದಿಲ್ಲ. ಕಾಲು ಎಳೆದಾಗ ಇನ್ನೊಬ್ಬರ ಮೇಲೆ ಹತ್ತಲು ಪ್ರಯತ್ನ ಮಾಡಲೇಬೇಕಾಗುತ್ತದೆ. ಇವೊತ್ತು ಸರ್ಕಾರ 2 ವರ್ಷ 9–10 ತಿಂಗಳ ನಂತರವೂ ನಾವು ಗಟ್ಟಿಯಾಗಿ ನಿಮ್ಮೆದುರು ನಿಂತಿದ್ದರೆ ಆ ಐದು ಜನ ಹೋದರೂ ಅವರ ಮೆಂಬರ್‌ಷಿಪ್ ಹೋದರೂ ನಾವು ಗಟ್ಟಿಯಾಗಿ ನಿಂತಿದ್ದೇವೆ. ಮಾನ್ಯ ನಾಣಯ್ಯನವರು ಅವರ ಸದಸ್ಯತ್ವ ನಮ್ಮ ಜೊತೆಗೆ ಬಂದಿದ್ದರಿಂದ ಹೋಯಿತು ಎಂದು ವ್ಯಾಖ್ಯಾನ ಮಾಡಿದರು. ಅವರು ವ್ಯಾಖ್ಯಾನ ಮಾಡುವುದರಲ್ಲಿ ಬಹಳ ನಿಪುಣರು. ಅವರು ಬಂದಿದ್ದು ಅಸಿಂಧುವಾದರೆ, ನೀವು ಬಂದಿದ್ದು ಅಸಿಂಧು, ನೀವು ತೆಗೆದುಕೊಳ್ಳುವ ತೀರ್ಮಾನವೆಲ್ಲಾ ಅಸಿಂಧು, ನೀವು ಮಾಡಿದ ಕೆಲಸವಲ್ಲ ಅಸಿಂಧು, ಭಾಗ್ಯಲಕ್ಷ್ಮೀ ಅಸಿಂಧು, ಇನ್ನೊಂದು ಅಸಿಂಧು ಎಂದೆಲ್ಲಾ ಇನ್ನು ಸಮಯ ಕೊಟ್ಟರೆ ಹೇಳುತ್ತಿದ್ದರು. ಆದರೆ ಇವೊತ್ತು ಅದು ಯಾವುದೂ ಆಗಲಿಲ್ಲ. ಇವೊತ್ತು ನಮಗೆ ಮೆಜಾರಿಟಿ ಇದ್ದು ಪ್ರಜಾಪ್ರಭುತ್ವದ ರಿತ್ಯ ನಾವು ನಡೆದುಕೊಂಡು ಮುಂದೆ ಬಂದಿದ್ದೇವೆ. ಹಾಗಾಗಿ ನೀವು ನಮಗೆ ಆರ್ಶೀವಾದ ಮಾಡಬೇಕು. ನಮಗೆ ಉಳಿದಂಥ ಎರಡೂವರೆ ವರ್ಷ ಸಹಕಾರ ನೀಡಬೇಕು. ಆದ್ದರಿಂದ ನಿಯಮ 59 ಅಥವಾ ಇನ್ನಾವುದೇ ನಿಯಮವನ್ನು ಮುಂದುವರೆಸುವ ಅವಶ್ಯಕತೆ ಇಲ್ಲ. ಮಾನ್ಯ ನಾಣಯ್ಯನವರು ಆಯವ್ಯಯದ ಬಗ್ಗೆ ತಮ್ಮ ಮುಂದಿನ ಚರ್ಚೆಯನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ವಿರೋಧ ಪಕ್ಷದವರು ಏನು ನೋಟೀಸ್ ಅನ್ನು ನೀಡಿದ್ದರು ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ನಿಯಮ 59ರ ನೋಟೀಸ್ ಏನು ಇದೆ ಅದನ್ನು ತಿರಸ್ಕಾರ ಮಾಡಿದ್ದೇನೆ. ಈಗ ಆಯವ್ಯಯದ ಮೇಲೆ

ಚರ್ಚೆ. ಮಾನ್ಯ ವೀರಯ್ಯನವರು ಚರ್ಚೆಯನ್ನು ಪ್ರಾರಂಭ ಮಾಡುತ್ತಾರೆ. ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕಿಂತ ಮುಂಚೆ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ.

ನಾನು ಸಭಾಪತಿಯಾದ ದಿವಸದಿಂದ ಸದನದಲ್ಲಿ ಹಾಜರಿಯ ಬಗ್ಗೆ ಒತ್ತಾಯ ಮಾಡುತ್ತಿದ್ದೇನೆ. ನಮ್ಮ ಮುಖ್ಯ ಸಚೇತಕರುಗಳಿಗೆ ನಾನು ಆಗಾಗ್ಗೆ ಚೀಟಿ ಕಳುಹಿಸುತ್ತೇನೆ, ಮಾತನಾಡುತ್ತೇನೆ. ಈಗಲೂ ಕೂಡ ಒಂದು ಗಂಭೀರವಾದಂಥ ಒಂದು ಸಂದೇಶವನ್ನು ನಾನು ಅವರಿಗೆ ಕೊಟ್ಟಿದೇನೆ. ಸದನಕ್ಕೆ ಒಂದು ಮಾಹಿತಿ ಕೊಡವುದಕ್ಕೆ ನಾನು ಇಷ್ಟಪಡುತ್ತೇನೆ. ಸದನದ ಹಾಜರಿ ತೆಗೆದುಕೊಳ್ಳುವುದಕ್ಕೆ ನಾನು ಇಲ್ಲಿ ಹೆಡ್ ಮಾಸ್ಟರ್ ಅಲ್ಲ. ಆದರೂ ಎಲ್ಲರೂ ಇರಬೇಕೆಂದು ನನ್ನ ಆಸೆ. ಆಗಾಗ್ಗೆ ಚರ್ಚೆಯಲ್ಲಿ ಅಧಿಕಾರಿಗಳು ಹಾಜರಾಗುವುದಿಲ್ಲ. ಎಂದು ಬಂದಿದೆ. ಯಾರು ಯಾರು ಅಧಿಕಾರಿಗಳು ಗೈರುಹಾಜರಿಯಾಗುತ್ತಾರೆ ಅವರಿಗೆ ನಾನು ಕಾರಣ ಕೇಳಿ ನೋಟೀಸ್‌ಗಳನ್ನು ಜಾರಿ ಮಾಡುತ್ತಿದ್ದೇನೆ. ಈಗಾಗಲೇ ಮೂರು ಜನ ಅಧಿಕಾರಿಗಳಿಂದ ನನಗೆ ಉತ್ತರ ಬಂದಿದೆ. ಅವರು ಕಾರಣಗಳನ್ನು ಕೊಟ್ಟಿದ್ದಾರೆ. ಅದನ್ನು ನಂತರ ನೋಡೋಣ. ಯಾರೋ ಭಾಷಣ ಮಾಡುತ್ತಾರೆಂದು ಹೇಳಿ ನಾವು ಇರುವುದಿಲ್ಲ. ಇಬ್ಬರು ಸಚಿವರು, ಮೂರು ಜನ ವಿರೋಧ ಪಕ್ಷದವರು ಇದ್ದರೆ ನಡೆಯುತ್ತದೆಂದು ತಿಳಿದುಕೊಂಡರೆ ಅದು ಸದನಕ್ಕೆ ಭೂಷಣ ಬರುವುದಿಲ್ಲ. ದಯಮಾಡಿ ಬೆಳಿಗ್ಗೆ ಬಂದು ಹಾಜರಿ ಹಾಕಿ ಹಾಗೆಯೇ ಹೋಗುವುದು ಸರಿಯಲ್ಲ. ಏನಾದರೂ ತುರ್ತು ಕೆಲಸ ಇದ್ದರೆ ಬೇರೆ. ಹಾಜರಿ ಹಾಕಿದ ಮೇಲೆ ತುರ್ತು ಕಾರ್ಯಕ್ರಮವಿದ್ದರೂ ಕೂಡ ಅವರು ಆ ವಿಚಾರವನ್ನು ನನ್ನ ಗಮನಕ್ಕೆ ತಂದು ಸದನದಿಂದ ದೂರ ಹೋಗಬೇಕಾಗುತ್ತದೆ. ಈ ಪರಿಪಾಠವನ್ನು ನಾವು ಪಾಲಿಸಬೇಕು. ಅದನ್ನು ಆಡಳಿತ ಪಕ್ಷದವರಿಗೂ ನಾನು ಕೇಳಿಕೊಳ್ಳುತ್ತೇನೆ. ವಿರೋಧ ಪಕ್ಷದವರಿಗೂ ಕೇಳಿಕೊಳ್ಳುತ್ತೇನೆ. ಗೌರವಾನ್ವಿತ ಸಚಿವರಿಗಂತು ನಾನು ಕೇಳಿಕೊಳ್ಳುವುದೇನೆಂದರೆ ಯಾರು ಯಾರು ಸದನದಲ್ಲಿರಬೇಕೆಂದು ನನ್ನ ಹತ್ತಿರ ಪಟ್ಟಿ ಇರುತ್ತದೆ. ಆ ಪಟ್ಟಿ ನನ್ನ ಎದುರಿಗೆ ಇರುತ್ತದೆ. ಆದರೆ ಸಚಿವರುಗಳು ಇರುವುದಿಲ್ಲ. ಇದೆಲ್ಲಾ ಒಳ್ಳೆಯದಲ್ಲ. ಸದನ

ಪ್ರಾರಂಭವಾದಾಗಿನಿಂದ ಸದನ ಮುಗಿಯುವವರೆಗೆ ನಾವೆಲ್ಲರೂ ಇರೋಣ. ಒಂದು ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಜೀವನದಲ್ಲಿ ಈ ಸದನದ ಸದಸ್ಯರಾಗಬೇಕೆಂದು ಹೋರಾಟ ಮಾಡಿ ಈ ಸದನದ ಸದಸ್ಯರಾಗುತ್ತೇವೆ. ಒಮ್ಮೆ ಸದನದ ಸದಸ್ಯರಾದ ಮೇಲೆ ಸದನದಲ್ಲಿ ಒಳಗೆ ಕೂಡಬೇಕೆಂದು ನಮಗೆ ಅನ್ನಿಸುವುದಿಲ್ಲವೇ? ಈ ಪದ್ಧತಿ ಸರಿಯಲ್ಲ. ಇಲ್ಲಿ ಚರ್ಚೆಯಾಗುತ್ತದೆ. ಇಲ್ಲಿ ವ್ಯಂಗ್ಯ ಇರುತ್ತದೆ. ಹಾಸ್ಯ ಇರುತ್ತದೆ, ಟೀಕೆ ಇರುತ್ತದೆ, ಕೋಪ ಇರುತ್ತದೆ, ಬೇರೆ ಎಲ್ಲಾ ರೀತಿಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಭಾಗವಹಿಸೋಣ. ಮತ್ತು ಚರ್ಚೆಯಲ್ಲಿ ಭಾಗವಹಿಸೋಣ. ಚರ್ಚೆಯಲ್ಲಿ ಬೇರೆಯವರು ಮಾತನಾಡುವಾಗ ನಾನು ಇರುವುದಿಲ್ಲ, ಅವರ ಮಾತು ಕೇಳುವುದಿಲ್ಲ ಎನ್ನುವುದಾದರೆ ಬಹಳ ಕಷ್ಟ ಆಗುತ್ತದೆ. ಇದು ಸರಿಯಲ್ಲ. ಅದು ಬಜೆಟ್ ಚರ್ಚೆ ಇರಬಹುದು, ಬೇರೆ ಯಾವುದೇ ವಿಷಯದ ಚರ್ಚೆ ಇರಬಹುದು ಸದನದಲ್ಲಿ ಕಡ್ಡಾಯವಾಗಿರುವುದನ್ನು ನಾವು ಅಭ್ಯಾಸ ಮಾಡೋಣ. ನಾನು ಇದನ್ನು ಬಹಳ ಮನನೊಂದು ಹೇಳುತ್ತಿದ್ದೇನೆ. ನಾನು ಅಲ್ಲಿ ಕೂಡುತ್ತಿದ್ದಾಗ ಮಾನ್ಯ ನಾಣಯ್ಯನವರು ಒಂದು ಉಲ್ಲೇಖ ಮಾಡಿ ಹೇಳಿದ್ದೇನೆಂದರೆ ಈ ಮನುಷ್ಯ ಹತ್ತು ಗಂಟೆಗೆ ಬಂದರೆ ಸಾಯಂಕಾಲ ಹೋಗು ಎಂದು ಹೇಳುವವರೆಗೆ ಹೋಗುವುದಿಲ್ಲ. ಹಾಗೆಯೇ ನಾನು ನನ್ನ ವಿಧಾನ ಪರಿಷತ್ತಿನ ಸದಸ್ಯನ ಜೀವನವನ್ನು ನಾನು ಪ್ರಾರಂಭ ಮಾಡಿದ್ದೇನೆ. ದಯಮಾಡಿ ಎಲ್ಲರೂ ಅದನ್ನು ಗಮನಿಸ ಬೇಕೆಂದು ನನಗನಿಸುತ್ತದೆ. ಮತ್ತೊಮ್ಮೆ ತಮ್ಮೆಲ್ಲರನ್ನು ಮನವಿ ಮಾಡಿಕೊಳ್ಳುತ್ತ ಈಗ ಬಜೆಟ್ ಮೇಲಿನ ಚರ್ಚೆಯ ಮುಂಚೆ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮನಸ್ಸಿಗೆ ಆಗಿರುವ ನೋವಿನ ಬಗ್ಗೆ ಏನೋ ಹೇಳಬೇಕೆಂದು ಇದ್ದಾರೆ ಅವರು ಮಾತನಾಡಲಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ತಾವು ಈ ಪ್ರಜಾತಂತ್ರ ಉಳಿಸುವಂಥ ಒಂದು ದೊಡ್ಡ ಕೆಲಸ ಮಾಡಬೇಕಾಗುತ್ತದೆ. ಅದಕ್ಕಾಗಿ ನಾವು ತಂದಿರುವ ಚರ್ಚೆಯ ವಿಷಯ ಚರ್ಚೆ ಮಾಡಲು ಅವಕಾಶ ಕೊಡಿ ಎಂದು ತಮ್ಮ ಮುಂದೆ ನಾನು ಮತ್ತು ಮಾನ್ಯ ನಾಣಯ್ಯನವರು

ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಆದರೆ ತಾವು ಅದನ್ನು ಬೇರೆ ಬೇರೆ ರೀತಿಯಲ್ಲಿ ವಿಚಾರ ಮಾಡಿ, ವ್ಯಾಖ್ಯಾನ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡುವುದಿಲ್ಲ ಎನ್ನುವಂಥ ಮಾತನ್ನು ಹೇಳಿದ್ದೀರಿ. ನಾವು ಕೂಡ ನಿಮ್ಮ ಈ ಒಂದು ತೀರ್ಪನ್ನು ನಿಮ್ಮ ಮನಸ್ಸನ್ನು ನೋಯಿಸಬೇಕೆಂದು ಅಲ್ಲ. ಆದರೆ ಇದೊಂದು ಮಹತ್ತರವಾದ ವಿಷಯವಾದರೂ ಕೂಡ ನಮಗೆ ಚರ್ಚೆಗೆ ಅವಕಾಶ ಸಿಗಲಿಲ್ಲವೆಂದು ಹೇಳಿ ಒಂದು ರೀತಿಯಾಗಿ ನೊಂದುಕೊಂಡು ನಾವು ನಿಮ್ಮ ಮಾತಿಗೆ ನಯವಾಗಿ ವಿರೋಧ ಮಾಡಿ ಸಭಾತ್ಯಾಗ ಮಾಡುತ್ತಿದ್ದೇವೆ.

**(ಈ ಸಂದರ್ಭದಲ್ಲಿ ಕಾಂಗ್ರೇಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)**

**ಶ್ರೀ ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ತೀರ್ಪಿನ ವಿರುದ್ಧ ಸಭಾತ್ಯಾಗವನ್ನು ಮಾಡಿದ್ದು ನೋಡಿ ನನಗೆ ಆಶ್ಚರ್ಯವಾಯಿತು.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ, ಬಹುಶಃ ಇದೊಂದು ಬಹಳ ಪ್ರಮುಖವಾದಂಥ ವಿಚಾರ ತಾವು ಚರ್ಚೆಗೆ ಅವಕಾಶ ಕೊಡಬಹುದು, ನಾವು ನಾಳೆಯೋ ನಾಡಿದ್ದೋ ಇದರ ಬಗ್ಗೆ ಚರ್ಚೆ ಮಾಡಬೇಕೆಂದು ನನ್ನ ಮನಸ್ಸಿನ ಒಂದು ಇಚ್ಚೆ. ಆದರೆ ನಾನು ಈಗ ಪ್ರಸ್ತಾಪ ಮಾಡುತ್ತಿರುವಂಥ ವಿಚಾರವಾಗಿ ಹೇಳುವುದಾದರೆ, ಈ ರಾಷ್ಟ್ರದಲ್ಲಿ ಗೌರವಿಸುತ್ತಿರುವಂತಹ ಕೆಲವೇ ಕೆಲವು ನಾಯಕರುಗಳಲ್ಲಿ ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿಯವರು ಅತ್ಯಂತ ಶ್ರೇಷ್ಠ ವ್ಯಕ್ತಿ. ಅವರು ಒಂದೇ ಒಂದು ಮತದಲ್ಲಿ ಅಧಿಕಾರಿವನ್ನು ಕಳೆದುಕೊಳ್ಳುತ್ತಿರುವಂತಹ ಸಂದರ್ಭದಲ್ಲಿ ಅವರು ರಾಜೀನಾಮೆಯನ್ನು ಕೊಡುವುದಕ್ಕೆ ಹೋದಂತಹ ಸಂದರ್ಭದಲ್ಲಿ ಸಂಸತ್ತಿನಲ್ಲಿ ಆಡಿರತಕ್ಕಂತ ಒಂದು ಮಾತು ನಮಗೂ ನಿಮಗೂ ಎಲ್ಲರಿಗೂ ಮಾರ್ಗ ದರ್ಶನವಾಗಲೇ ಬೇಕು. ಯಂ.ಸಿ. ನಾಣಯ್ಯನವರು ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ಮಾತುಗಳನ್ನು ಆಡಿದರು ಎಂದಲ್ಲ. ಬಹುಶಃ ಅವರು ಆ ಮಾತನ್ನು ಹೇಳುವಾಗ He is a National leader. ಅವರು ಯಾವುದೇ

ಪಕ್ಷವಿರಲಿ, He is a National leader for all of us. ಅವರು ಸಂಸತ್ತಿನಲ್ಲಿ ಹೇಳಿರತಕ್ಕಂತಹ ಮಾತು. ಅದನ್ನು ಅವರು ಹಿಂದಿಯಲ್ಲಿ ಹೇಳುತ್ತಾರೆ. "ಬಜಾರ್ ಮೇ ಬಿಕನೆಕೆ ಲಿಯೇ ಬಹುತ್ ಸಾರೇ ಹೈ. ಬಜಾರ್ ಮೇ ದಳ್ಳಾಳಿ ಬಹುತ್ ಹೈ, ಬಿಕನೆಕೆ ಲಿಯೇ ಮಾಲ್ ಬೀ ಬಹುತ್ ತಾ, ಮೇಗೆ ಖರೀದಿ ಕೆ ಲಿಯೇ, ಖರೀದಾ ನಯಿತಾ" ಬಜಾರ್‌ನಲ್ಲಿ ಮಾರಾಟಕ್ಕೆ ಹಲವಾರು ವಸ್ತುಗಳಿತ್ತು. ಬಜಾರ್‌ನಲ್ಲಿ ದಳ್ಳಾಳಿಗಳು ಬಹಳ ಇದ್ದರು. ಮಾರಿಕೊಳ್ಳಲು ಮಾಲುಗಳು ಬಹಳ ಇತ್ತು. ಆದರೆ ಅದನೆಲ್ಲಾ ಖರೀದಿಸಲು ಖರೀದಿದಾರನೇ ಇರಲಿಲ್ಲ. ಹಾಗಾಗಿ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಖರೀದಿದಾರನಾಗಲಿಲ್ಲ. ರಾಜೀನಾಮೆಯನ್ನು ಕೊಟ್ಟು ಹೊರಗೆ ಬಂದು ಬಿಟ್ಟರು. ಬಹುಶಃ ಅಂತಹ ಪರಿಸ್ಥಿತಿ ಎಲ್ಲರಿಗೂ ಬರಲಿ ಎನ್ನುವಂಥದ್ದು ನನ್ನ ಚಿಂತನೆ. ಆ ಹಿನ್ನೆಲೆಯಲ್ಲಿ ಶ್ರೀ ವಾಜಪೇಯಿಯವರು ರಾಜೀನಾಮೆಯನ್ನು ಕೊಟ್ಟು ಹೊರಗಡೆ ಹೋದರಲ್ಲಾ, ಇಂತಹ ಪರಿಸ್ಥಿತಿ ನನಗೂ ಕೂಡ ಬಂದಿರುವುದ ರಿಂದ ನಾನು ಹೊರಗಡೆ ಹೋಗುತ್ತಿದ್ದೇನೆ.

**(ಈ ಹಂತದಲ್ಲಿ ಜನತಾ ದಳದ ಎಲ್ಲಾ ಸದಸ್ಯರುಗಳು ಸಭಾತ್ಯಾಗ ಮಾಡಿದರು)**

**ಶ್ರೀ ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಶ್ರೀ ಎಂ.ಸಿ. ನಾಣಯ್ಯನವರು ವಿರೋಧ ಪಕ್ಷದಲ್ಲಿದ್ದಾಗ ಇದನ್ನು ಮಾಡುತ್ತಿದ್ದಾರೆ. ಬಹುಶಃ ಆಡಳಿತ ಪಕ್ಷದಲ್ಲಿದ್ದಾಗ ಏನಾದರು ಮಾಡಿದ್ದಿದ್ದರೆ ಅದೊಂದು ಆದರ್ಶವಾಗುತ್ತಿತ್ತು. ವಿರೋಧ ಪಕ್ಷದಲ್ಲಿದ್ದಾಗ ಇದನ್ನು ಮಾಡಿದರೆ ಇದನ್ನು ಆದರ್ಶವೆಂದುಕೊಳ್ಳುವುದಿಲ್ಲ.

**ಸಭಾಪತಿಯವರು:–** ಈಗ ವಿತ್ತೀಯ ಕಾರ್ಯಕಲಾಪ. ಶ್ರೀ ವೀರಯ್ಯನವರೆ, ಮುಖ್ಯ ಸಚೇತಕರು ನಿಮಗೆ ನಿಗದಿ ಮಾಡಿರುವ ಸಮಯ ನಿಮಗೆ ಗೊತ್ತಿದೆ ಎಂದು ಕೊಂಡಿದ್ದೇನೆ. ದಯವಿಟ್ಟು ಅಷ್ಟರೊಳಗೆ ನಿಮ್ಮ ಚರ್ಚೆಯನ್ನು ಮುಗಿಸಬೇಕು.

## 6. ವಿತ್ತೀಯ ಕಾರ್ಯಕಲಾಪ

## 2011–12ನೇ ಸಾಲಿನ ಆಯವ್ಯಯದ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ.

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 2011–12ನೇ ಸಾಲಿನ ಅಯವ್ಯಯದ ಮೇಲೆ ನನಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ಮೊದಲು ತಮ್ಮನ್ನು ಅಭಿನಂದಿಸುತ್ತೇನೆ. ಚರ್ಚೆ ಆರಂಭ ಮಾಡುವುದಕ್ಕೆ ಮೊದಲೇ ದಿನಾಂಕ 26ನೇ ಜನವರಿ 1950ರಂದು ನಮ್ಮ ಸಂವಿಧಾನ ಶಿಲ್ಪಿ ಡಾ: ಬಿ.ಆರ್. ಅಂಬೇಡ್ಕರ್‌ರವರು ರಾಜ್ಯಾಂಗದ ಬಗ್ಗೆ ಮಾತನಾಡಿದ್ದ ಎರಡು ವ್ಯಾಕ್ಯಗಳನ್ನು ಮಾತನಾಡಿ ನಾನು ಚರ್ಚೆಯನ್ನು ಪ್ರಾರಂಭ ಮಾಡುತ್ತೇನೆ. ಅವರು 26ನೇ ಜನವರಿ 1950ರಂದು ಪರಸ್ಪರ ವಿರುದ್ಧ ಸನ್ನಿವೇಶವಿರುವ ಲೋಕಕ್ಕೆ ನಾವು ಕಾಲಿಡುತ್ತಿದ್ದೇವೆ. ರಾಜಕೀಯ ರಂಗದಲ್ಲಿ ನಮಗೆ ಸಮಾನತೆ ಇರುತ್ತದೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ರಂಗದಲ್ಲಿ ಅಸಮಾನತೆ ತುಂಬಿರುತ್ತದೆ. ರಾಜಕಾರಣದಲ್ಲಿ ಒಬ್ಬ ವ್ಯಕ್ತಿಗೆ ಒಂದು ಓಟು, ಒಂದು ಮೌಲ್ಯ ಎನ್ನುವುದನ್ನು ನಾವು ಗುರುತಿಸಿದ್ದೇವೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ರಂಗದಲ್ಲಿ ಒಬ್ಬ ವ್ಯಕ್ತಿ ಒಂದು ಮೌಲ್ಯ ಎನ್ನುವುದನ್ನು ಉದ್ದೇಶ ಪೂರ್ವಕವಾಗಿ ನಾವು ನಿರಾಕರಿಸಿದ್ದೇವೆ. ಇದು ಅವರು ಹೇಳಿರತಕ್ಕಂತಹ ಮಾತು. ಎಷ್ಟು ಕಾಲದವರೆಗೆ ನಾವು ವೈವಿಧ್ಯಮಯ ಬದುಕನ್ನು ನಡೆಸುವುದು? ಎಲ್ಲಿಯವರೆಗೆ ಸಾಮಾಜಿಕ ಆರ್ಥಿಕ ಜೀವನದಲ್ಲಿ ಸಮಾನತೆಯನ್ನು ನಿರಾಕರಿಸಲು ಸಾಧ್ಯ? ಬಹಳ ಕಾಲದವರೆಗೆ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಇದ್ದರೆ, ಅದು ರಾಜಕೀಯ ಅಸಮಾನತೆಗೆ ಗಂಡಾಂತರವನ್ನು ತರುತ್ತದೆ ಎನ್ನುವಂತಹ ಮಾತನ್ನು ಅವರು ಹೇಳಿದ್ದಾರೆ. ನಾನು ಏಕೆ ಈ ಮಾತನ್ನು ಹೇಳಿದೆ ಎಂದರೆ, ಸಾಮಾಜಿಕ ಮತ್ತು ಆರ್ಥಿಕವಾಗಿ ಇವತ್ತು ಸಮಾನತೆಯನ್ನು ನಾವು ಕಾಣಬೇಕಾಗಿದೆ. ಆರ್ಥಿಕವಾಗಿ ನಾವು ಸಮಾನತೆಯನ್ನು ಕಾಣಬೇಕೆಂದರೆ, ಸಮಾಜದ ಎಲ್ಲಾ ವರ್ಗಗಳಿಗೂ ಕೂಡ, ನಮ್ಮ ಆರ್ಥಿಕ ಸಮಾನತೆಯ ಪಾಲುದಕ್ಕಬೇಕಾಗಿದೆ. ಸಾಮಾಜಿಕವಾಗಿ

ಅವರಿಗೆ ನ್ಯಾಯ ದೊರಕುವಂತಹ ಕೆಲಸವನ್ನು ಈ ರಾಜ್ಯಾಂಗ ಮಾಡಬೇಕಾಗಿದೆ. ರಾಜ್ಯಾಂಗವನ್ನು ಆಡಳಿತದ ಮೂಲಕ ಜಾರಿಗೆ ತರುವಂತಹ ಎಲ್ಲಾ ಸರ್ಕಾರಗಳು ಕೂಡ ಮಾಡಬೇಕಾಗುತ್ತದೆ. ಬಹುಶಃ ಸಾಮಾಜಿಕ ಸಮಾನತೆಯನ್ನು ಕೊಡುವಂತಹ ಕೆಲಸವನ್ನು ಮತ್ತು ಆರ್ಥಿಕ ಸಮಾನತೆಯನ್ನು ಕಾಣುವಂತಹ ಕೆಲಸವನ್ನು ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು 2011–12ರ ಬಜೆಟ್ ಮುಖಾಂತರ ಆರಂಭ ಮಾಡುವುದಕ್ಕೆ ಹೆಜ್ಜೆ ಹಾಕಿದ್ದಾರೆಂದು ನಾನು ಅಂದುಕೊಳ್ಳುತ್ತೇನೆ. ಬಹುಶ: ಇದು ವಸ್ತುಸ್ಥಿತಿಗೆ ಬಹಳ ಹತ್ತಿರವಾಗಿರತಕ್ಕಂಥದ್ದು ಅಗಿರುವುದರಿಂದ ಸಮಾಜದವರೆಲ್ಲರೂ ಒಪ್ಪುತ್ತಾರೆ. ಅವರು ಎರಡು ರೀತಿಯ ಬಜೆಟ್ ಅನ್ನು ಮಂಡಿಸಿದ್ದಾರೆ. ನಾನು ಕೇಳಿದ್ದೆ ಮತ್ತು ಓದಿದ್ದೇನೆ. ಪ್ರಪಂಚದಲ್ಲಿ ಮೊಟ್ಟ ಮೊದಲ ರಾಷ್ಟ್ರ ಜಪಾನ್‌ರವರು ಕೃಷಿಗೆ ಬಡ್ಡಿ ರಹಿತ ಸಾಲವನ್ನು ಕೊಡುತ್ತಿದ್ದಾರೆಂದು ನಾನು ಓದಿದ್ದೇನೆ. ಆದರೆ ನಮ್ಮ ರಾಷ್ಟ್ರ ಕೃಷಿ ಪ್ರದಾನವಾದಂತಹ ರಾಷ್ಟ್ರ, ಶೇಕಡ 70 ಭಾಗ ಕೃಷಿಯನ್ನೇ ಅವಲಂಬಿಸಿರುವಂಥದ್ದು. ಹೀಗಿದ್ದರೂ ಕೂಡ 60 ವರ್ಷಗಳ ನಂತರವೂ ಕೂಡ ಬಡ್ಡಿಯ ಭಾರದಿಂದ ಆ ಕೃಷಿಕನನ್ನು ಇಳಿಸುವಂತಹ ಕೆಲಸವನ್ನು ಮಾಡಿರಲಿಲ್ಲ. ಅದನ್ನು ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮೊಟ್ಟ ಮೊದಲ ಬಾರಿಗೆ ಮಾಡಿದ್ದಾರೆಂದು ನಾನು ಅಂದುಕೊಳ್ಳುತ್ತೇನೆ. ಅವರು ಮಂಡಿಸಿರತಕ್ಕಂತಹ ಎಲ್ಲಾ ಬಜೆಟ್‌ಗಳಲ್ಲಿಯೂ ಕೂಡ ರೈತರ ಬಗ್ಗೆ ಅಪಾರವಾದಂತಹ ರಿಯಾಯಿತಿಗಳನ್ನು, ಬೆಂಬಲ ಬೆಲೆಯನ್ನು, ಸಾಲ ಮನ್ನಾ ಮಾಡುವಂತಹ, 3% ನಲ್ಲಿ ಬಡ್ಡಿ ಮೇಲೆ ಸಾಲ ಸಿಗುವಂತಹ ಅವಕಾಶ, ಇವತ್ತು ಅದನ್ನು 1% ಕ್ಕೆ ಇಳಿಸಿ, ಮತ್ತಷ್ಟು ರೈತರ ಭಾರವನ್ನು ತಗ್ಗಿಸುವಂತಹ ಕೆಲಸವನ್ನು ಈ ರಾಜ್ಯದಲ್ಲಿ ಇವತ್ತು ಯಾರದರು ಮಾಡಿದ್ದರೆ, ಅದು ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಎಂದು ನಾನು ಬಹಳ ಹೆಮ್ಮೆಯಿಂದ, ಸಂತೋಷದಿಂದ ಹಂಚಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಬೇರೆಯವರು ಬಹಳಷ್ಟು ಮಾತನಾಡಿದರು, ಕೃಷಿಕರು ಅನ್ನದಾತರು, ಅವರು ನಮ್ಮ ದೇಶದ ಬೆನ್ನೆಲೆಬು. ವಿರೋಧ ಪಕ್ಷದವರು ಬಹಳ ಗದ್ದಲವನ್ನು

ಎಬ್ಬಿಸಿದರು. ಶ್ರೀ ಬಿ.ಎಸ್. ಯಡಿಯೂರಪ್ಪನವರು ಹಸಿರು ಟವಲ್ ಹಾಕಿಕೊಂಡು ಪ್ರಮಾಣ ವಚನವನ್ನು ಸ್ವೀಕರಿಸಿದರು. ಕೃಷಿಕರಿಗೆ ಅವರು ಏನು ಮಾಡಬಹುದೆಂದು ಚಿಂತನೆಯಾಗಿತ್ತು. ಒಂದು ರೀತಿಯ ಅನುಮಾನ ಕೂಡ ಅವರನ್ನು ಕಾಡುತ್ತಿತ್ತು. ಬಹುಶ: ರೈತನ ಹೆಸರಿನಲ್ಲಿ ಪ್ರಮಾಣ ವಚನವನ್ನು ತೆಗೆದುಕೊಂಡಂತಹ ಮೊಟ್ಟಮೊದಲ ಮುಖ್ಯಮಂತ್ರಿ, ಈ ರಾಷ್ಟ್ರದಲ್ಲಿ ಮೊಟ್ಟಮೊದಲ ಬಾರಿಗೆ ಕೃಷಿಗಾಗಿ ಒಂದು ಬಜೆಟ್ ಮಂಡನೆ ಮಾಡುವಂತಹ ಕೆಲಸವನ್ನು ಮಾಡಿ, ಅವರು ಹಸಿರು ಟವಲ್ ಹಾಕಿಕೊಂಡು ರೈತರ ಹೆಸರಿನಲ್ಲಿ ಪ್ರಮಾಣ ವಚನವನ್ನು ತೆಗೆದುಕೊಂಡಿದ್ದಕ್ಕೆ ಸಾರ್ಥಕಗೊಳಿಸಿದ್ದಾರೆಂದು ಹೇಳಿರುತ್ತೇನೆ. ಇದು ಹೊಗಳಿಕೆಯ ಮಾತಲ್ಲ, ಇದೊಂದು ದಾಖಲೆ. ಇವತ್ತು ಈ ದೇಶದ ಎಲ್ಲಾ ರಾಜ್ಯಗಳು ಒಪ್ಪಿರತಕ್ಕಂಥದ್ದು. ಕೃಷಿ ಬಜೆಟನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆಂದು ಕರ್ನಾಟಕದವರು ನಾವು ಹೆಮ್ಮೆಯಿಂದ ಹೇಳಿಕೊಳ್ಳಬೇಕು. ಅವರು ಯಾವುದೇ ಪಕ್ಷದಲ್ಲಿರಲಿ. ಒಬ್ಬ ಮುಖ್ಯಮಂತ್ರಿ ಇಡೀ ದೇಶದಲ್ಲಿ ಕೃಷಿ ಬಜೆಟ್‌ನ್ನು ಕೊಟ್ಟು ಒಂದು ದಾಖಲೆ ನಿರ್ಮಾಣ ಮಾಡಿದ್ದಾರೆಂದರೆ, ಅದರ ಬಗ್ಗೆ ಅಪಸ್ವರವಾಗಲಿ, ವಿರೋಧವಾಗಲಿ ವ್ಯಕ್ತಪಡಿಸುವ ಬದಲು ಅದನ್ನು ಸ್ವಾಗತಿಸಿ ಅದು ಅನುಷ್ಠಾನಕ್ಕೆ ಬಂದು ಆ ಕೃಷಿಕ ಎದ್ದು ನಿಂತು ತಲೆ ಎತ್ತಿ ಸಮಾಜದಲ್ಲಿ ಸ್ವಾಭಿಮಾನದ ಬದುಕನ್ನು ನಡೆಸುವಂತಹ ಕೆಲಸಕ್ಕೆ ನಾವೆಲ್ಲರೂ ಕೂಡ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎರಡು ಕೂಡ ಸಜ್ಜಾಗಬೇಕಾಗಿದೆ, ಪಾಲ್ಗೊಳ್ಳಬೇಕಾಗಿದೆ. ಅದರ ಫಲಿತಾಂಶವನ್ನು ಕಾಣಬೇಕಾಗಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ರಾಷ್ಟ್ರದಲ್ಲಿ ಪಂಚವಾರ್ಷಿಕ ಯೋಜನೆ ಜಾರಿಗೆ ಬಂತು. ಅವತ್ತಿನ ರಾಜ್ಯಾಂಗದ ಚಿತ್ರಗಳು, ಅವತ್ತಿನ ದಿವಸ ಅಂದುಕೊಂಡರು ಈ ರಾಷ್ಟ್ರಕ್ಕೆ ಪಂಚವಾರ್ಷಿಕ ಯೋಜನೆಯ ಮೊದಲ ಅದ್ಯತೆ ಕೃಷಿಗೆ ಇರಬೇಕೆಂದು. ಮೊಟ್ಟಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಗೆ ಪ್ರಾತಿನಿಧ್ಯತೆಯನ್ನು ಕೊಟ್ಟರು. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಗೆ ಒತ್ತು ಕೊಟ್ಟರು. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ mixed economy. Private

and public sectors, socialist patron of society. ಸೊಶಿಯಲಿಸಂ ಅನ್ನು ಸಾಮಾಜಿಕ ನ್ಯಾಯಕ್ಕೆ ಒತ್ತು ಕೊಡುವಂತಹ ಕೆಲಸವನ್ನು ಮೂರು ಮತ್ತು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಜಾರಿಗೆ ಬಂತು. ಅಂದರೆ ಆರಂಭದಲ್ಲಿ ಒಂದು ಆದ್ಯತೆ ಇತ್ತು. ಯಾವ ಉದ್ದಿಮೆಯನ್ನು ನಾವು ಅಭಿವೃದ್ಧಿ ಪಡಿಸಿದರೆ, ಯಾವ ವರ್ಗವನ್ನು ನಾವು ಆರ್ಥಿಕವಾಗಿ ಮೇಲಕ್ಕೆ ಎತ್ತಿದರೆ ಈ ಸಮಾಜ ಆರ್ಥಿಕ ಸಮಾನತೆಯನ್ನು ಕಾಪಾಡಿಕೊಳ್ಳಬಹುದು ಎನ್ನುವುದಕ್ಕೆ ಆರಂಭದಲ್ಲಿ ಎಲ್ಲಾ ಸರ್ಕಾರಗಳು ಒತ್ತನ್ನು ಕೊಟ್ಟರು.

(5–00 ಗಂಟೆ)

ಆದರೆ ಬರಬರುತ್ತಾ ಆ ರೀತಿ ಆದ್ಯತೆಗಳು ಕಡಿಮೆಯಾದುದರ ಪರಿಣಾಮವಾಗಿ ಈಗ ಕೃಷಿ ಉದ್ದಿಮೆಗಳು ಬಹಳ ಸಂಕಷ್ಟದ ಪರಿಸ್ಥಿತಿಯನ್ನೆದುರಿಸಿದ್ದನ್ನು ನಾವು ಕಂಡಿದ್ದೇವೆ. ಮೊಟ್ಟ ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಭಾಕ್ರಾನಂಗಲ್, ದಾಮೋದರ ಕಣಿವೆ ಮುಂತಾದ ಸುಮಾರು ಐದಾರು ಬೃಹತ್ ಅಣೆಕಟ್ಟುಗಳು ನಿರ್ಮಾಣವಾದ ಪರಿಣಾಮವಾಗಿ ಈ ರಾಷ್ಟ್ರದಲ್ಲಿ ಕನಿಷ್ಟ ಪಕ್ಷ 40 ಭಾಗಕ್ಕೆ ನೀರಾವರಿಯನ್ನು ಒದಗಿಸುವಂತಹ ಕೆಲಸವನ್ನು ಅವೊತ್ತಿನ ಸರ್ಕಾರಗಳು ಜಾರಿಗೆ ತಂದವು. ಏಕೆಂದರೆ ಕೃಷಿ ಇಲ್ಲದೆ ಜೀವನ ಇಲ್ಲ, ಬಹುಶ: ಕೃಷಿಕರು ಶ್ರಮವಹಿಸಿ ಬೆಳೆಗಳನ್ನು ಬೇಳೆಯ ದಿದ್ದರೆ ಆಹಾರಧ್ಯಾನಗಳ ಕೊರತೆಯಾಗುತ್ತದೆ. ಸಮಾಜದಲ್ಲಿ ಹಾಹಾಕಾರ ಹೆಚ್ಚುತ್ತದೆ. ಪ್ರತಿನಿತ್ಯದ ಆಹಾರ ಪದಾರ್ಥಗಳನ್ನು ಸಹ ಹೊರದೇಶಗಳಿಂದ ನಾವು ಆಮದು ಮಾಡಿಕೊಂಡು ಉಪಯೋಗಿಸುತ್ತೇವೆ ಎನ್ನುವಂಥದ್ದು ಅಸಾಧ್ಯದ ಮಾತು. ಕೃಷಿಯಲ್ಲಿ ನಾವು ಸ್ವಾವಲಂಬನೆಯನ್ನು ಸಾಧಿಸದಿದ್ದರೆ ರಾಷ್ಟ್ರ ಖಂಡಿತವಾಗಿಯೂ ಸಂಕಷ್ಟಕ್ಕೆ ಗುರಿಯಾಗುತ್ತದೆ ಎನ್ನುವಂತಹ ಮಾತನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮಳೆ ಆಧಾರಿತ ಕೃಷಿಗೆ ಇವೊತ್ತು ಒಂದು ಪರಿಹಾರ ಕಂಡುಕೊಳ್ಳುವಂತಹ ಕೆಲಸವನ್ನು ಮೊದಲ ಎರಡು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಮಾಡಲಾಯಿತು. ಸಾಲದ ಹೊರೆ ರೈತರನ್ನು ಕಾಡುತ್ತಿದೆ. ಪ್ರತಿ ವರ್ಷ ಕೂಡ ಅನೇಕ ಕಡೆಗಳಲ್ಲಿ ರೈತರ ಆತ್ಮಹತ್ಯೆ

ಪ್ರಕರಣಗಳು ವರದಿಯಾಗುತ್ತಿವೆ. ಸಾಲ ತೀರಿಸಲಾಗದೆ ರೈತರು ಇದ್ದಂತಹ ಜಮೀನನ್ನು ಕಳೆದುಕೊಂಡು ಬೀದಿಪಾಲಾಗುತ್ತಿರುವುದನ್ನು ನೋಡುತ್ತಿದ್ದೇವೆ.

**(ಈ ಹಂತದಲ್ಲಿ ಉಪ ಸಭಾಪತಿಯವರಾದ ಶ್ರೀಮತಿ ವಿಮಲಾಗೌಡ ಅವರು ಪೀಠವನ್ನಲಂಕರಿಸಿದರು)**

ನಮ್ಮ ದೇಶದಲ್ಲಿ ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನದ ಅಳವಡಿಕೆ ಇನ್ನೂ ಸಮರ್ಪಕವಾಗಿ ಆಗಿರುವುದಿಲ್ಲ. ಇವೊತ್ತು ಜಪಾನನ ಒಬ್ಬ ರೈತ ಕರವಸ್ತ್ರದ ವಿಸ್ತೀರ್ಣದಷ್ಟು ಜಾಗದಲ್ಲಿ ಎರಡು ಹೊತ್ತಿಗಾಗುವಷ್ಟು ಆಹಾರವನ್ನು ಬೆಳೆದುಕೊಳ್ಳುತ್ತಾನೆ, ಆದರೆ ನಮ್ಮ ಎರಡು ಎಕರೆ ಜಮೀನನ್ನು ಹೊಂದಿರು ವಂತಹ ರೈತ ಕೂಡ ತನ್ನ ಕುಟುಂಬಕ್ಕೆ ಬೇಕಾಗುವಷ್ಟು ಆಹಾರ ಪದಾರ್ಥಗಳನ್ನು ಬೆಳೆದುಕೊಳ್ಳುವುದಕ್ಕಾಗುತ್ತಿಲ್ಲ. ಅಂದರೆ ಅಲ್ಲಿನ ತಂತ್ರಜ್ಞಾನ ಎಷ್ಟು ಮುಂದುವರೆದಿದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಅಂತಹ ಒಂದು ತಂತ್ರಜ್ಞಾನ ನಮ್ಮ ದೇಶ ಮತ್ತು ನಮ್ಮ ರಾಜ್ಯದಲ್ಲಿ ಈಗ ಆಮೆ ವೇಗದಲ್ಲಿ ಪ್ರಗತಿಯಾಗುತ್ತಿರುವಂತಹ ಸಂದರ್ಭದಲ್ಲಿ ಈ ಕೃಷಿ ಆಯವ್ಯಯ ಒಂದು ಬೆನ್ನೆಲುಬು ಎಂದು ನಾನು ಭಾವಿಸಿದ್ದೇನೆ. ನಮ್ಮಲ್ಲಿ multiple crop system ಇಲ್ಲ ಆದರೆ ಬೇರೆ ದೇಶಗಳಲ್ಲಿ ಮೂರು ತಿಂಗಳ ಅವಧಿಯಲ್ಲಿ ಇಂತಹ ಬೆಳೆಗಳನ್ನು ಬೆಳೆಯಬೇಕು, ನಂತರ ಜೋಳ, ರಾಗಿ ಮತ್ತು ತರಕಾರಿ ಬೆಳೆಗಳನ್ನು ಬೆಳೆಯಬೇಕು ಎನ್ನುವಂತಹ multiple crop system ನಲ್ಲಿ ವ್ಯವಸಾಯವನ್ನು ಮಾಡಲಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಕಬ್ಬು ಬೆಳೆಗಾರರು ಕಬ್ಬನ್ನು ಮಾತ್ರ ಬೆಳೆಯುತ್ತಾರೆ, ಬತ್ತ ಬೆಳೆಯುವವರು ಭತ್ತವನ್ನು ಮಾತ್ರ ಬೆಳೆಯುತ್ತಾರೆ. ನಮ್ಮ ತುಮಕೂರು ಜಿಲ್ಲೆಯಲ್ಲಿ ಒಬ್ಬ ರೈತ ಟೊಮೆಟೊ ಬೆಳೆದರೆ ಎಲ್ಲರೂ ಅದನ್ನೆ ಬೆಳೆಯುತ್ತಾರೆ. ಕೋಲಾರ ಜಿಲ್ಲೆಯಲ್ಲಿ ಆಲೂಗಡ್ಡೆ ಮತ್ತು ಟೊಮೊಟೊ ಬೆಳೆಗಳನ್ನು ಕಷ್ಟಪಟ್ಟು ಬೆಳೆದು ಅದಕ್ಕೆ ಸೂಕ್ತ ಬೆಲೆ ಸಿಗದಿದ್ದಾಗ ರೈತರು ನೊಂದು ಬೆಳೆದಂತಹ ಬೆಳೆಯನ್ನು ರಸ್ತೆಗೆ ಚೆಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ವ್ಯವಸಾಯಕ್ಕೆ ಉಪಯೋಗಿಸಿದಂತಹ ಗೊಬ್ಬರದ ಬೆಲೆ ಕೂಡ ಆ ರೈತರಿಗೆ ಸಿಗದಂತಹ ಸಂದರ್ಭ ಇರುತ್ತದೆ. ಅದರಲ್ಲಿಯೂ ನೀರಾವರಿ ಅನುಕೂಲತೆ ಇಲ್ಲದಂತಹ

ಪ್ರದೇಶಗಳಲ್ಲಿ ಸುಮಾರು ಒಂದು ಸಾವಿರ ಅಡಿ ಆಳದಿಂದ ನೀರನ್ನು ಮೇಲೆತ್ತಿ ಬೆಳೆದಂತಹ ಬೆಳೆಗೆ ಬೆಲೆ ಸಿಗದಿದ್ದಾಗ ಆ ರೈತರ ಪರಿಸ್ಥಿತಿ ಏನಾಗಬಹುದು? ಅಂತಹ ಸಂರ್ಭಗಳಲ್ಲಿ ಸರ್ಕಾರ ಇದ್ದೂ ಪ್ರಯೋಜನವೇನು ಎನ್ನುವಂತಹ ಪರಿಸ್ಥಿತಿ ಇದ್ದಂತಹ ಸಮಯದಲ್ಲಿ ಬಹುಶ: ಈ ಕೃಷಿ ಬಜೆಟ್ ಸ್ವಾಗತಾರ್ಹವೆನಿಸುತ್ತದೆ. ಕಟ್ಟಕಡೆಯದಾಗಿ ತರಕಾರಿ ಬೆಳೆಯುವಂತಹವನ ಬಗ್ಗೆ ಕೂಡ ಯೋಚನೆ ಮಾಡುವಂತಹ ಕೆಲಸ ಈ ಕೃಷಿ ಬಜೆಟ್ ಮುಖಾಂತರ ಆಗಿದೆ ಎನ್ನುವಂತಹ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ರೈತರಿಗೆ ಗುಣಮಟ್ಟದ ಬೀಜವನ್ನು ಸರಬರಾಜು ಮಾಡುವಂತಹ ಕೆಲಸ ಇವೊತ್ತಿನವರೆಗೂ ಆಗಿಲ್ಲ. ಯಾರೊ ಒಂದು ಬ್ರಾಂಡ್ ಹೆಸರನ್ನಿಟ್ಟುಕೊಳ್ಳುತ್ತಾರೆ, ಕೋಲಾರದಲ್ಲಿ ನಡೆದಂತಹ ಸಂಗತಿ ತಮಗೂ ಗೊತ್ತಿದೆ. ಕೋಲಾರದಲ್ಲಿ ಯಾವುದೋ ಬ್ರಾಂಡ್ ಹೆಸರಿನಲ್ಲಿ ಆಲೂಗಡ್ಡೆ ಬೀಜವನ್ನು ಸರಬರಾಜು ಮಾಡಿದರು. ಆದರೆ ಆ ಬೀಜವನ್ನು ಬಿತ್ತನೆ ಮಾಡಿ ಬೆಳೆದಂತಹ ಆಲೂಗಡ್ಡೆಗಳಿಗೆ ಅಂಗಮಾರಿ ರೋಗ ಹರಡಿತು. ಆಲೂಗಡ್ಡೆ ಬೆಳೆಯಲಿಲ್ಲ, ಆದರೆ ರೋಗ ಬೆಳೆಯಿತು, ಅಂದರೆ ರೈತರಿಗೇನೂ ಲಾಭ ಸಿಗದೆ ಅವರು ಕೂಡ ರೋಗಗ್ರಸ್ಥರಾಗಿ ಬಿಟ್ಟರು. ಈ ರೀತಿಯಾಗಿ ಸ್ವಾತಂತ್ರ್ಯ ಬಂದು ಸುಮಾರು ಅರವತ್ತು ವರ್ಷಗಳು ಕಳೆದರೂ ನಮ್ಮ ದೇಶದಲ್ಲಿ ಕೃಷಿಕರಿಗೆ ಉತ್ತಮ ಗುಣಮಟ್ಟದ ಬೀಜವನ್ನು ಸರಬರಾಜು ಮಾಡುವುದಕ್ಕಾಗದಿರುವಂತಹ ಪರಿಸ್ಥಿತಿಯಲ್ಲಿದ್ದೇವೆ. ಜೊತೆಗೆ ರೈತರಿಗೆ ಬೇಸಾಯದ ಚಟುವಟಿಕೆಗಳಿಗೆ ಬೇಕಾದ ಬಂಡವಾಳದ ಕೊರತೆ ಕೂಡ ಇದೆ. ಇವೊತ್ತಿಗೂ ಸಹ ಆ ರೈತರು ವ್ಯವಸಾಯ ಮಾಡಲು ಡಿ.ಸಿ.ಸಿ. ಬ್ಯಾಂಕಗಳಿಂದ ಸಾಲ ತರಬೇಕು, ಈ ವರ್ಷ ಕೈಗೊಂಡ ಬೇಸಾಯದಿಂದ ಬಂದಂತಹ ಹಣದಲ್ಲಿ ಉಳಿತಾಯ ಮಾಡಿ ಅದನ್ನು ಮುಂದಿನ ವರ್ಷದ ಬೇಸಾಯಕ್ಕೆ ಬಂಡವಾಳವಾಗಿಟ್ಟು ಕೊಳ್ಳುವಂತಹ ಆರ್ಥಿಕ ಸ್ಥಿತಿಯಲ್ಲಿ ಯಾವ ರೈತರೂ ಇಲ್ಲ. ಹಾಗಾಗಿ ಪ್ರತಿ ಸಲವೊ ಅವನು ಏನಾದರೂ ಬೆಳೆಯನ್ನು ಬೆಳೆಯಬೇಕಾದರೆ ಬೀಜ ಖರಿದಿಸುವುದರಿಂದ ಹಿಡಿದು ಇನ್ನಿತರ ಎಲ್ಲ ಚಟುವಟಿಕೆಗಳಿಗೂ ಆತ ಸಾಲವನ್ನೇ ತರಬೇಕಾದಂತಹ ಸ್ಥಿತಿ ಇರುವಂತಹ

ಸಮಯದಲ್ಲಿ ಕೃಷಿಕರ ಬಗ್ಗೆ ಚಿಂತನೆ ಮಾಡಿರತಕ್ಕಂಥದ್ದು ಬಹಳ ಸ್ವಾಗತಾರ್ಹವಾದ ವಿಷಯವೆಂದು ನಾನು ಹೇಳಬಯಸುತ್ತಿದ್ದೇನೆ.

ಸಂಸ್ಕರಣೆಯ ವಿಚಾರಕ್ಕೆ ಬಂದರೆ ಪ್ರತಿ ಮನೆಯಲ್ಲಿ ಸಂಸ್ಕರಣೆಯ ವ್ಯವಸ್ಥೆ ಇರುವಂತಹ ದೇಶಗಳಿವೆ. ಆದರೆ ನಮ್ಮ ದೇಶದಲ್ಲಿ ಊರಿನವರೆಲ್ಲಾ ಬೆಳೆದಂತಹ ಬೆಳೆಯನ್ನು ಒಂದೆಡೆ ಸಂಸ್ಕರಿಸಿಡೋಣವೆಂದರೂ ಅದಕ್ಕೆ ಬೇಕಾದಂತಹ ವ್ಯವಸ್ಥೆ ಇಲ್ಲ. ಬಹುಶ: ನಾವಿಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಹೆಸರನ್ನು ಉಲ್ಲೇಖಿಸಬೇಕಾಗುತ್ತದೆ. ಮೊಟ್ಟಮೊದಲ ಬಾರಿಗೆ ಎನ್.ಡಿ.ಎ. ಸರ್ಕಾರ ರಚನೆಯಾದಾಗ ಈ ಸಂಸ್ಕರಣೆಯ ವ್ಯವಸ್ಥೆಗಾಗಿಯೇ ನೂರಾರು, ಸಾವಿರಾರು ಕೋಟಿ ರೂಪಾಯಿಗಳಷ್ಟು ಹಣವನ್ನಿಟ್ಟು, ಶೇಕಡ 75ರಷ್ಟು ಸಬ್ಸಿಡಿ ಕೊಟ್ಟು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದಕ್ಕೆ ದಾರಿ ತೋರಿಸಿದಂತಹ ಮೊಟ್ಟ ಮೊದಲ ಪ್ರಧಾನ ಮಂತ್ರಿಗಳೆಂದು ಈ ಸಂದರ್ಭದಲ್ಲಿ ಅವರನ್ನು ಸ್ಮರಿಸುತ್ತೇನೆ. ಯಾವುದೇ ಬೆಳೆ ತೆಗೆದುಕೊಂಡರೂ ಅವುಗಳ ಬೆಲೆಗಳು ಸ್ಥಿರವಾಗಿಲ್ಲ, ಇವೊತ್ತು ಹತ್ತು ರೂಪಾಯಿ ಇರುವಂಥದ್ದು ನಾಳೆ ಕೇವಲ ಎರಡು ರೂಪಾಯಿಗೆ ಇಳಿಯುತ್ತದೆ. ಆ ನಿಟ್ಟಿನಲ್ಲಿ ಒಂದು ಆವರ್ತ ನಿಧಿಯನ್ನಿಟ್ಟು ರೈತರಿಗೆ ಬೆಂಬಲವನ್ನು ಕೊಡುವಂತಹ, ಒಂದು ಪ್ರೋತ್ಸಾಹಯುತವಾದ ಬೆಲೆಯನ್ನು ಕೊಡುವಂತಹ ಕೆಲಸ ಈ ಕೃಷಿ ಬಜೆಟ್‌ನಿಂದ ಆಗಿದೆ ಎಂದು ನಾನು ಭಾವಿಸಿದ್ದೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಸಾರಿಗೆ ವ್ಯವಸ್ಥೆ ಕೂಡ ಸಮರ್ಪಕವಾಗಿಲ್ಲ. ಒಂದೇ ದಿವಸದಲ್ಲಿ ಟೊಮೊಟೊವನ್ನು ನೂರಾರು, ಸಾವಿರಾರು ಮೈಲಿಗಳಿಗೆ ತಲುಪಿಸುವುದಕ್ಕಾಗುವುದಿಲ್ಲ. ಬಹಳ ಬೇಗನೆ ಹಾಳಾಗುವಂತಹ ತರಕಾರಿ ಬೆಳೆಗಳಿರುತ್ತವೆ, ಅವುಗಳನ್ನು ಅತಿ ಶೀಘ್ರವಾಗಿ ಬೇರೆ ಕಡೆಗೆ ಸಾಗಿಸುವಂತಹ ಸಾರಿಗೆ ವ್ಯವಸ್ಥೆ ನಮ್ಮಲ್ಲಿಲ್ಲ. ರಸ್ತೆ ಸಾರಿಗೆ ಆ ವ್ಯವಸ್ಥೆ ಕೂಡ ರೈತರ ಪಾಲಿಗೆ ಹಿನ್ನಡೆಯನ್ನು ಉಂಟುಮಾಡುತ್ತಿದೆ. ನಾವು ಸಣ್ಣ ರೈತರು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ವ್ಯವಸಾಯಕ್ಕೆ ಬೇಕಾದಂತಹ ಮೂಲಭೂತ ಸೌಲಭ್ಯಗಳಾಂತಹ ರಸ್ತೆ ವ್ಯವಸ್ಥೆ, ಶೈತ್ಯಾಗಾರಗಳ ವ್ಯವಸ್ಥೆ ಬಗ್ಗೆ ಮಾನ್ಯ ಡಿ.ಎಸ್. ವೀರಯ್ಯನವರು ಮಾತನಾಡುತ್ತಿದ್ದಾರೆ. ಇಸ್ರೇಲ್ ದೇಶದಲ್ಲಿ ಬೆಳಿಗ್ಗೆ harvesting ಪ್ರಾರಂಭವಾದರೆ ಅದು ಸಂಜೆ 4.00 ಗಂಟೆಗೆ ಅತ್ಯುತ್ತಮ ರಸ್ತೆಯ ಮುಖಾಂತರ ಶೈತ್ಯಾಗಾರ ವ್ಯವಸ್ಥೆಯುಳ್ಳ ವ್ಯಾನ್‌ನಲ್ಲಿ ಬಂದಂತಂಹ ಪ್ಯಾಕಿಂಗ್ ಮೆಟಿರಿಯಲ್ ಏರ್‌ಪೋರ್ಟ್‌ಗೆ ತಲುಪಿದ ನಂತರ ಬೆಳಿಗ್ಗೆ 7.00 ಗಂಟೆಗೆ ಲಂಡನ್ ಸೂಪರ್ ಮಾರ್ಕೆಟ್‌ನಲ್ಲಿ ಕಾಯಿಪಲ್ಲೆ ಹಾಗೂ ಹಣ್ಣುಹಂಪಲುಗಳು ಮಾರಾಟವಾಗುತ್ತವೆ. ಅಂದರೆ ಅಲ್ಲಿ ಮೂಲಭೂತ ಸೌಲಭ್ಯಗಳು ಸಾಕಷ್ಟಿವೆ. ಈ ದೇಶದಲ್ಲಿ ಮೂಲಭೂತ ಸೌಲಭ್ಯಗಳಿಲ್ಲದ ಕಾರಣದಿಂದಾಗಿ ಪ್ರತಿ ವರ್ಷ ಸುಮಾರು ನಾಲ್ಕು ಸಾವಿರದಿಂದ ಐದು ಸಾವಿರ ಕೋಟಿ ರೂಪಾಯಿಗಳಷ್ಟು ಮೌಲ್ಯದ ತೋಟಗಾರಿಕೆ ಉತ್ಪನ್ನಗಳು ನಾಶವಾಗುತ್ತವೆ. ಸಮರ್ಪಕವಾದ ಸಾರಿಗೆ ವ್ಯವಸ್ಥೆ ಇಲ್ಲದ ಕಾರಣದಿಂದ ನಮ್ಮ ದೇಶದಲ್ಲಿ ಇಷ್ಟು ಹಾನಿಯಾಗುವುದಲ್ಲದೆ ಜಾಗತಿಕ ಮಾರುಕಟ್ಟೆಯಲ್ಲಿ ಇಡೀ ಪ್ರಪಂಚದಲ್ಲಿಯೇ ತೋಟಗಾರಿಕೆ ಬೆಳೆಗಳ ಉತ್ಪಾದನೆಯಲ್ಲಿ ಎರಡನೆಯ ದೊಡ್ಡ ದೇಶ ನಮ್ಮದು. ಆದರೆ ಜಾಗತಿಕ ಮಾರುಕಟ್ಟೆಯಲ್ಲಿ ನಮ್ಮ ಕೊಡುಗೆ ಕೇವಲ ಶೇಕಡ 1ಕ್ಕಿಂತ ಕಡಿಮೆ. ಪ್ರತ್ಯೇಕ ಕೃಷಿ ಬಜೆಟ್ ಎಂದು ಹೇಳಿಕೊಳ್ಳುವಂತಹ ಈ ಬಜೆಟ್‌ನಲ್ಲಿ ರಸ್ತೆ, cold chain technologies; Refrigerated Van, Airport ಇಂತಹ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಅದರ ಬಗ್ಗೆ ಈ ಕೃಷಿ ಬಜೆಟ್‌ನಲ್ಲಿ ಏನಾದರೂ ಮಾಡಿದ್ದರೆ ಅದರ ಬಗ್ಗೆ ಮಾನ್ಯ ಸದಸ್ಯರು ಬೆಳಕನ್ನು ಚೆಲ್ಲಿದರೆ ಬಹಳ ಅನುಕೂಲವಾಗುತ್ತದೆ. ಇದು ಕೃಷಿಕರ ಪರವಾದಂತಹ ಬಜೆಟ್ ಎಂದು ನಾವು ಸಹ ಹೇಳಿಕೊಳ್ಳುತ್ತೇವೆ.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೇ, 'ಹಳೆಯ ಮದ್ಯ, ಹೊಸ ಬಾಟಲ್' ಎನ್ನುವಂತಹ ವ್ಯಾಖ್ಯಾನವನ್ನು ಈಗಾಗಲೇ ಪತ್ರಿಕೆಯಲ್ಲಿ ಮಾಡಿದ್ದು, ಅದನ್ನು ನಾನು ಸಹ ಓದಿದ್ದೇನೆ. ಆದರೆ ಕೃಷಿಗಾಗಿ ಒಟ್ಟು 17,857 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಇದೇ ಮೊಟ್ಟಮೊದಲ ಬಾರಿಗೆ

ಈ ರಾಜ್ಯದ ಕೃಷಿ ವಲಯಕ್ಕೆ ಇಷ್ಟು ದೊಡ್ಡ ಮೊತ್ತದ ಹಣವನ್ನು ಆಯವ್ಯಯದಲ್ಲಿ ನೀಡಿರತಕ್ಕಂಥದ್ದು ಒಂದು ದಾಖಲೆ ಎಂದು ನಾನಾದರೂ ಭಾವಿಸಿದ್ದೇನೆ. ತಾವು ಕೂಡ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಒಂದೇ ಬಜೆಟ್ ಇದ್ದರೂ ಕೂಡ ಇಷ್ಟು ದೊಡ್ಡ ಮೊತ್ತದ ಹಣವನ್ನು ಯಾರೂ ನೋಡುವುದಕ್ಕಾಗುತ್ತಿರಲಿಲ್ಲ.

**ಶ್ರೀ ಡಿ.ಎಸ್. ವೀರಯ್ಯ (ಮುಂದು):–**ಕೃಷಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಈ ವರ್ಷ 17,857 ಕೋಟಿ ಹಣವನ್ನು ನಿಗದಿ ಮಾಡಿರುವಂಥದ್ದು ಈ ರಾಜ್ಯದ ಬಜೆಟ್ ಇತಿಹಾಸದಲ್ಲಿ ಒಂದು ದಾಖಲೆಯಾಗಿದೆ. ಆದುದರಿಂದ ಈ ಕೃಷಿ ಬಜೆಟ್ ಅನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಈ ಬಜೆಟ್‌ನಲ್ಲಿ ನೀರಾವರಿ, ಕೃಷಿ, ಮತ್ತು ತೋಟಗಾರಿಕೆ ಬರುತ್ತದೆ, Sericulture ಬರುತ್ತದೆ, Animal Husbandry ಬರುತ್ತದೆ ಈ ಎಲ್ಲಾ ಇಲಾಖೆಗಳು ಒಟ್ಟುಗೂಡಿ 17,857 ಕೋಟಿ ಹಣ ಇಟ್ಟಿದ್ದಾರೆ. ಇದು ಕೇವಲ ಕೃಷಿಗೆ ಮಾತ್ರ ಇಟ್ಟಿಲ್ಲ.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೇ, ಕಳೆದ ಸಲ ಕೃಷಿಗಾಗಿ ಬಜೆಟ್‌ನಲ್ಲಿ 11.000 ಕೋಟಿ ರೂ ಇಟ್ಟಿದ್ದರು, ಈ ಸಲ ಒಂದು ವರ್ಷಕ್ಕೆ 5 ರಿಂದ 6 ಸಾವಿರ ಕೋಟಿ ರೂಪಾಯಿಗಳಷ್ಟು ಹೆಚ್ಚಿಗೆ ಬಜೆಟ್‌ನಲ್ಲಿ ಅನ್ನು ಈ ಸರ್ಕಾರ ಕೊಟ್ಟಿದ್ದೆ. ಇನ್ನು ಸಾವಯದ ಕೃಷಿಯ ಬಗ್ಗೆ ಹೇಳಬೇಕೆಂದರೆ, ಇವತ್ತು ನಾವೇನು ಆಹಾರ ಧಾನ್ಯವನ್ನು ತಿನ್ನುತ್ತಿದ್ದೇವೆ. ಅದು ಕೆಮಿಕಲ್ಸ್‌ನಿಂದ ಬೆಳೆದಿರುವಂಥದ್ದು. ಅದು ಈಗಾಗಲೇ ಹೊಸ ಹೊಸ ರೋಗಗಳನ್ನು ಉತ್ಪತ್ತಿ ಮಾಡಿದೆ. ಹೊಸ ಹೊಸ ರೋಗಗಳು ಬರುತ್ತಿರುವು ದನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ, ನಮ್ಮ ರೈತರು ಮಾತ್ರ ಅಲ್ಲ, ಅದಕ್ಕೆ ನಾವು ಸಹ ತುತ್ತಾಗುವಂತಹ ಪರಿಸ್ಥಿತಿಯನ್ನು ಕಾಣುವಂತಹ ಸಂದರ್ಭದಲ್ಲಿ ಸಾವಯವ ಕೃಷಿಗೆ ಒತ್ತು ಕೊಡುವ ಸಲುವಾಗಿಯೇ ಈ ಬಜೆಟ್‌ನಲ್ಲಿ 200 ಕೋಟಿ ರೂಪಾಯಿಗಳನ್ನು ಮೀಸಲಿಡುವ ಮುಖಾಂತರ ಒಂದು

ಉತ್ತಮವಾದಂತಹ ಕೆಲಸವನ್ನು ಅರ್ಥ ಸಚಿವರೂ ಆದಂತಹ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆಂದು ತಿಳಿಸಲಿಚ್ಚಿಸುತ್ತೇನೆ. ಇನ್ನು ಜೈವಿಕ ಇಂಧನ ಪ್ರೋತ್ಸಾಹಕ್ಕೆ 125 ಕೋಟಿ ರೂ. ಕೊಟ್ಟಿದೆ. ನಾನು ಈಗಾಗಲೇ ಹೇಳಿದಂತೆ ನಮ್ಮಲ್ಲಿ ಇನ್ನು ಅಷ್ಟು ತಾಂತ್ರಿಕತೆ ಮುಂದುವರೆದಿಲ್ಲ, primitive methods ಅನ್ನೇ ನಾವು ಅನುಸರಿಸುತ್ತಿದ್ದೇವೆ. ಆ ನಿಟ್ಟಿನಲ್ಲಿ ಇದನ್ನು improve ಮಾಡಬೇಕೆಂದು ಅಲ್ಲಿ ಯಂತ್ರವನ್ನು ಬಳಸುವಂತಹ ಮುಖಾಂತರ ಹೆಚ್ಚು ಬೆಳೆಯನ್ನು ತೆಗೆಯುವಂತಹ ಕೆಲಸ ಆಗಬೇಕೆಂದು ಕೃಷಿ ಯಂತ್ರೋಪಕರಣಗಳಿಗೆ ಹೆಚ್ಚಿನ ಸಹಾಯಧನಕ್ಕೆ 100 ಕೋಟಿ ರೂ. ಕೊಟ್ಟಿದೆ. ಮತ್ತೊಂದು ಶ್ಲಾಘನೀಯ ಸಂಗತಿ ಎಂದರೆ ಕೃಷಿ ಆವರ್ತ ನಿಧಿಯನ್ನು 2005–06ನೇ ಸಾಲಿನಲ್ಲಿ ಕೇವಲ 200 ಕೋಟಿ ರೂ ಮಾತ್ರ ಇಟ್ಟಿದ್ದರು. ಆದರೆ ಈಗ ಅಂದರೆ 2011–12ನೇ ಸಾಲಿನಲ್ಲಿ ಅದು 1000 ಕೋಟಿ ರೂ.ಗಳಿಗೆ ಹೆಚ್ಚಳ ಮಾಡಿದ್ದಾರೆ. ಆದಕಾರಣ ಇದೊಂದು ಶ್ಲಾಘನೀಯ ಸಂಗತಿ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಕೆರೆಗಳ ಬಗ್ಗೆ ಹೇಳಬೇಕೆಂದರೆ, ನಮ್ಮ ಸರ್.ಎಂ. ವಿಶ್ವೇಶ್ವರಯ್ಯ ಅವರು ಕೋಲಾರ ಜಿಲ್ಲೆ ಒಂದರಲ್ಲಿಯೇ ಅವರು 4,000 ಕೆರೆಗಳನ್ನು ಸ್ಥಾಪನೆ ಮಾಡಿದರು. ಏಕೆಂದರೆ, ಒಂದಲ್ಲಾ ಒಂದು ದಿವಸ ಕೋಲಾರ ಜಿಲ್ಲೆ ಬರಡು ಭೂಮಿಯಾಗುತ್ತದೆ, ಇದು ಮರಳುಗಾಡು ಆಗುತ್ತದೆ, ಕೆರೆ ಇದ್ದರೆ ಮಾತ್ರ ರೈತ ಅಲ್ಲಿ ಬದುಕಬಲ್ಲ ಎಂದು ಕೆರೆಗಳ ಅಭಿವೃದ್ದಿಗೆ ಒತ್ತು ಕೊಟ್ಟರು. ಆದರೆ ಅನೇಕ ವರ್ಷಗಳಿಂದ ಕೆರೆಗಳ ಹೂಳು ಎತ್ತುವಂತಹ ಕೆಲಸ ಕೂಡ ಆಗಿಲ್ಲ. ಈಗ ಆ ಕೆರೆಗಳೆಲ್ಲಾ ಮುಚ್ಚಿ ಹೋಗಿವೆ. ಈಗ ಕೇವಲ ಒಂದು ಅಡಿ ಮಾತ್ರ ಇದೆ. ಮಳೆ ಬಂದಾಗ ನೀರು ಒಂದು ಅಡಿ ನಿಂತಿರುತ್ತದೆ, ಆ ಒಂದು ನೀರೇಗೆ ರೈತರು ಕೆರೆ ತುಂಬಿ ಹೋಗಿದೆ ಎಂದು ಅದಕ್ಕೆ ಬಗಣಿ ಪೂಜೆ ಮಾಡಿ ಬಿಡುತ್ತಾರೆ. ಅದಾದ ನಂತರ ಒಂದು ತಿಂಗಳು ಬಿಟ್ಟು ಹೋಗಿ ನೋಡಿದರೆ ಕೆರೆ ಒಣಗಿ ಹೋಗಿರುತ್ತದೆ. ಏಕೆಂದರೆ ಅಲ್ಲಿ ಕೇವಲ ಒಂದು ಅಡಿ ನೀರು ಮಾತ್ರ ನಿಂತಿರುತ್ತದೆ, ಉಳಿದಿದ್ದು ಎಲ್ಲವೂ ಮಣ್ಣೇ. ಅಂದರೆ ಹೂಳು ಎತ್ತುವಂತಹ ಕೆಲಸ ಕೂಡ ಆಗಿರಲಿಲ್ಲ. ಆ ಕೆರೆಗಳ

ಪುನರುಜ್ಜೀವನಕ್ಕೋಸ್ಕರ ಮತ್ತು ಬತ್ತಿ ಹೋದ ಕೆರೆಗಳಿಗೆ ನೀರು ತುಂಬಿಸಲು 1000 ಕೋಟಿ ರೂಗಳನ್ನು ನಿಗದಿ ಪಡಿಸುವ ಮುಖಾಂತರ ಆ ಕೆರೆಗಳ ಹೂಳೆತ್ತುವ ಕೆಲಸ ಮತ್ತೆ ಪ್ರಾರಂಭ ಮಾಡಿದ್ದಾರೆ. ಮಹಾರಾಜರ ಕಾಲದಲ್ಲಿ ಆದಂತಹ ಕೆರೆಗಳ ಅಭಿವೃದ್ದಿಗೆ ಮೊಟ್ಟಮೊದಲ ಬಾರಿಗೆ 1000 ಕೋಟಿ ರೂಗಳನ್ನು ಮೀಸಲು ಇಡುವ ಮುಖಾಂತರ ಆಗಬೇಕು ಎನ್ನುವಂತಹ ಕನಸನ್ನು ಈ ಬಜೆಟ್ ಹೊತ್ತಿದೆ. ನಿಜವಾಗಿ ಕೆರೆಗಳ ಅಭಿವೃದ್ದಿ ಆಗದೆ ಇದ್ದರೆ ಅಂತರ್ಜಲ ಕುಸಿಯುತ್ತದೆ, ಕೊಳವೆ ಬಾವಿಗಳಲ್ಲಿ ನೀರು ಬರುವುದಿಲ್ಲ, ಹಾಗೂ ತೆರೆದ ಬಾವಿಗಳೆಲ್ಲವೂ ಕೂಡ ಒಣಗಿ ಹೋಗುವಂತಹ ಪರಿಸ್ಥಿತಿ ಬರುತ್ತದೆ ಆದುದರಿಂದ ಮಳೆ ಆಧಾರಿತ ಕೃಷಿ ಏನಿದೆ ಅದು ಕೆರೆಗಳ ನೀರನ್ನು ಆಧರಿಸುವಂತಹ ನಮ್ಮ ಜಮೀನುಗಳಿಗೆ ನೀರಿನ ಅಗತ್ಯವಿದೆ. ಆದುದರಿಂದ ಕೆರೆಗಳ ಅಭಿವೃದ್ದಿ ಆಗಬೇಕೆಂದು 1000 ಕೋಟಿ ರೂಗಳನ್ನು ಇಟ್ಟಿರುವಂಥದ್ದು ಬಹಳ ಸ್ವಾಗತಾರ್ಹ ವಿಷಯವಾಗಿದೆ. ಕೆಲವು ವರ್ಷಗಳಿಂದ ಕೆರೆಗಳ ಅಭಿವೃದ್ದಿಗೋಸ್ಕರ ಕೇವಲ 441 ಕೋಟಿ ರೂಗಳನ್ನು ಮಾತ್ರ ಇಟ್ಟಿದ್ದರು. ಆದರೆ ಮೂರು ವರ್ಷದಿಂದೀಚೆಗೆ ಅದನ್ನು 1000 ಕೋಟಿ ರೂಗಳಿಗೆ ನಿಗದಿ ಪಡಿಸುವ ಮುಖಾಂತರ ಆ ಕೆರೆಗಳ ಹೂಳೆತ್ತುವ ಕೆಲಸವನ್ನು ಮತ್ತೆ ಪ್ರಾರಂಭ ಮಾಡಿದ್ದಾರೆ. ಕೆರೆಗಳ ಅಭಿವೃದ್ಧಿ ಮಾಡುವಂತಹ ನಿಟ್ಟಿನಲ್ಲಿ ಒಂದು ಉತ್ತಮ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನೀರಾವರಿ ವಲಯಕ್ಕೆ ಸಂಬಂಧಪಟ್ಟಂತೆ ಈ ಮೊದಲು 3,942 ಕೋಟಿ ರೂ. ಇತ್ತು. ಆದರೆ ಇವತ್ತು 7,800 ಕೋಟಿ ರೂಗಳನ್ನು ಇಡಲಾಗಿದೆ. ಕೇವಲ ನಾಲ್ಕೈದು ವರ್ಷದಲ್ಲಿ ಇಷ್ಟು ಪ್ರಮಾಣದಲ್ಲಿ ಕೃಷಿಗೆ ಆಯವ್ಯಯದಲ್ಲಿ ಕೊಡುವುದಾದರೆ ನಿಜವಾಗಿಯೂ ಸಹ ಈ ನಿಟ್ಟಿನಲ್ಲಿಯೂ ಸಹ ಇದು ಒಳ್ಳೆಯ ಆರಂಭದ ಹೆಜ್ಜೆ. ನೀರಾವರಿ ಅಭಿವೃದ್ದಿ ಆಗದೆ ಇದ್ದರೆ, ಕಟ್ಟಿದಂತಹ ಅಣೆಕಟ್ಟುಗಳು ಪೂರ್ತಿ ಆಗದೆ ಇದ್ದರೆ, ಆ ನೀರಾವರಿ ವ್ಯವಸ್ಥೆ ಕಟ್ಟಕಡೆಯ border areas ವರೆವಿಗೂ ಹೋಗದೆ ಇದ್ದರೆ, ಬಹುಶಃ ನಾವು ಕೃಷಿಯಲ್ಲಿ ಮುಂದಿದ್ದೇವೆ, ನಮ್ಮ ರೈತ ನಮ್ಮ ದೇಶದ ಬೆನ್ನೆಲುಬು, ಅವನು

ಬೆಳೆಯುತ್ತಿರಬೇಕು, ನಾವು ತಿನ್ನುತ್ತಿರಬೇಕು, ಅವನು ಮಾತ್ರ ನೆಲದಲ್ಲಿಯೇ ಬಿದ್ದಿರಬೇಕು ಎಂಬುದಿತ್ತು. ಆದರೆ ಈ ಒಂದು vision ಏನಿದೆ, ನಿಜವಾಗಿಯೂ ದೂರದೃಷ್ಟಿ ಇರುವಂತಹ ಒಂದು vision. ಆವತ್ತಿನ ದಿವಸ ರಾಜ್ಯಾಂಗವನ್ನು ಈ ದೇಶಕ್ಕೆ ಅರ್ಪಣೆ ಮಾಡುವಂತಹ ಸಮಯದಲ್ಲಿ ನಾಯಕರ ಕನಸು ಸಹ ಇದೇ ಆಗಿತ್ತು. ಈ ಸಂದರ್ಭದಲ್ಲಿ ದಿವಂಗತ ಜವಹರ್‌ಲಾಲ್ ನೆಹರು ಅವರ ಹೆಸರನ್ನು ಉಲ್ಲೇಖಿಸುವುದಕ್ಕೆ ಇಷ್ಟಪಡುತ್ತೇನೆ. ಅವರಿಗೆ ಒಂದು vision ಇತ್ತು. ಏನೆಂದರೆ, ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಕೇವಲ ವ್ಯವಸಾಯಕ್ಕೆ ಮಾತ್ರ ಆದ್ಯತೆ, ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಗಳಿಗೆ ಆದ್ಯತೆ, ಮೂರನೇ ಪಂಚ ವಾರ್ಷಿಕ ಯೋಜನೆಯಲ್ಲಿ Socialist Pattern of Society ಪ್ರಾರಂಭ ಮಾಡಬೇಕು ಎಂಬ ಒಂದು vision ಇತ್ತು. ಹಾಗೂ ಸಾಮಾಜಿಕ ನ್ಯಾಯ ಎಲ್ಲರಿಗೂ ಹಂಚಿಕೆ ಆಗಬೇಕು ಎನ್ನುವಂತಹ ಚಿಂತನೆಯೂ ಸಹ ಅವರಿಗಿತ್ತು. ಆದರೆ ಅದಾದ ನಂತರ ಮುವತ್ತರಿಂದ ನವವತ್ತು ವರ್ಷಗಳು ಆದ್ಯತೆಯ ಮೇಲೆ ಬರದೆ ಇದ್ದ ಪರಿಣಾಮ ಇವತ್ತು ಎಲ್ಲಾ ರಂಗದಲ್ಲಿಯೂ ದುಸ್ತಿತಿಯನ್ನು ಎದುರಿಸುವಂತಹ ಒಂದು ವ್ಯವಸ್ಥೆಗೆ ಕಾರಣವಾಗಿದೆಯೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಗ್ರಾಮೀಣ ರಸ್ತೆಗಳನ್ನು ತಾವೆಲ್ಲರೂ ನೋಡಿದ್ದೀರಿ. ನನಗೆ ಇದರ ಬಗ್ಗೆ ಹೆಮ್ಮೆ ಎನಿಸುತ್ತದೆ. 300 ಕೋಟಿ ರೂಪಾಯಿಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕಾಲೋನಿಯ ರಸ್ತೆಗಳ ಅಭಿವೃದ್ದಿಗೆ ಮೀಸಲಿಟ್ಟಿದ್ದಾರೆ. ಇವತ್ತು ಯಾವುದೇ ಒಂದು ಊರಿಗೆ ಹೋದರು ಅಲ್ಲಿ ನೀವು ಸಿಮೆಂಟ್ ರಸ್ತೆಗಳನ್ನು ನೋಡಬಹುದು. ಎರಡೂ ಕಡೆ box drain ಇದೆ. ತಾವು ನೋಡಿರಬಹುದು.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, 300 ಕೋಟಿ ರೂಪಾಯಿಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕಾಲೋನಿಯ ರಸ್ತೆಗಳ ಅಭಿವೃದ್ದಿಗೆ ಮೀಸಲಿಟ್ಟಿದ್ದಾರೆ. ಈ ರಾಜ್ಯದಲ್ಲಿ ಒಂದೊಂದು ಜಿಲ್ಲೆಗಳಲ್ಲಿ ಎಷ್ಟು ಕೇರಿಗಳಿದೆ, ಎಷ್ಟು

ಕಾಲೋನಿಗಳಿವೆ ಎಂಬುದನ್ನು ನೀವೆ ಹೇಳಿ. 27 ಜಿಲ್ಲೆಗಳಲ್ಲಿ ಒಂದೊಂದು ಜಿಲ್ಲೆಯಲ್ಲಿ ಎಷ್ಟು ಕಾಲೋನಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ನೀವೆ ಹೇಳಿ. ಇದು ಒಂದು ರೀತಿಯಲ್ಲಿ "ಆನೆ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ" ಎನ್ನುವ ರೀತಿಯಲ್ಲಿ ಆಗಿದೆ. ಕೊನೆ ಪಕ್ಷ ಒಂದು ಜಿಲ್ಲೆಯಲ್ಲಿ ಒಂದು ತಾಲ್ಲೂಕಿನಲ್ಲಿ ಐದು ಕಾಲೋನಿಗಳು ಅಭಿವೃದ್ಧಿಯಾದರೆ ಅದಕ್ಕೆ ಒಂದು ಅರ್ಥವಿರುತ್ತದೆ. ಆದರೆ ನೀವು ಒಂದು ತಾಲ್ಲೂಕಿನಲ್ಲಿ ಒಂದು ಕಾಲೋನಿಯಲ್ಲಿ ಸಹ ಅಭಿವೃದ್ಧಿ ಮಾಡುವುದಕ್ಕೆ ಆಗುವುದಿಲ್ಲ. ಮೂರು ಕೋಟಿ ರೂಪಾಯಿಯಲ್ಲಿ 300 ಕಾಲೋನಿ ಎಂದು ಹೇಳಿದರೆ ಏನೇನು ಮಾಡುವುದಕ್ಕೂ ಆಗುವುದಿಲ್ಲ. ಮಾನ್ಯ ವೀರಯ್ಯನವರೆ ನೀವೆ ಯೋಚನೆ ಮಾಡಿ, ನೀವು ಸಹ ಅದೇ ವರ್ಗದಿಂದ ಬಂದಂಥವರು. ಇದು ಯಾವ ಮೂಲೆಗೆ ಸಾಕಾಗುತ್ತದೆ ಎಂಬುದನ್ನು ವಿಚಾರ ಮಾಡಿ.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೇ, ಕೆಲಸ ಈಗ ತಾನೇ ಆರಂಭವಾಗಿದೆ. ಕಣ್ಣಿಗೆ ಕಾಣಿಸುತ್ತಿದೆ.

**ಶ್ರೀ ಅಶ್ವತ್‌ನಾರಾಯಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಎಸ್.ಸಿ.ಪಿ. ಯೋಜನೆಯಲ್ಲಿ ಹರಿಜನ ಕಾಲೋನಿಯ ಉದ್ಧಾರಕ್ಕೆ ಹಣ ಮೀಸಲಿಟ್ಟಿದ್ದಾರೆ, ನಾನೇ ಸಾಕಷ್ಟು ಸಲ ಜಿಲ್ಲಾಧಿಕಾರಿಗಳಿಗೆ ದೂರನ್ನು ಕೊಟ್ಟಿದ್ದೇನೆ. ಕೇವಲ ಮೂಗಿಗೆ ತುಪ್ಪ ಸವರುವುದಷ್ಟೇ ಅವರ ಕೆಲಸ. ಒಂದು ಹತ್ತು ಮೀಟರ್ ಅಲ್ಲಿ ಹಾಕುತ್ತಾರೆ, ಮತ್ತೆ ಇನ್ನೆಲ್ಲೋ ತೆಗೆದುಕೊಂಡು ಹೋಗಿ ಅಂದರೆ ಊರಿನ ಹೆದ್ದಾರಿಯಲ್ಲಾಗಲಿ ಅಥವಾ ಊರಿನ ಮುಖ್ಯ ರಸ್ತೆಯಲ್ಲಿ ಹಾಕಿರುವಂಥದ್ದರ ಬಗ್ಗೆ ನಾವು ಬರವಣಿಗೆಯಲ್ಲಿ ದೂರನ್ನು ಕೊಟ್ಟಿದ್ದೇವೆ. ಆದರೆ ಇದುವರೆವಿಗೂ ಅದರ ಮೇಲೆ ಯಾವುದೇ ರೀತಿಯಾದಂತಹ ಕ್ರಮಗಳನ್ನು ಕೈಗೊಂಡಿಲ್ಲ. ಆದುದರಿಂದ ಎಸ್.ಸಿ.ಪಿ ಯೋಜನೆ ಅಡಿಯಲ್ಲಿ ಹರಿಜನ ಹಾಗೂ ಗಿರಿಜನರ ಉದ್ಧಾರಕ್ಕಾಗಿ ಏನು ಹಣವನ್ನು ಮೀಸಲು ಇಟ್ಟಿದ್ದಾರೆ, ಅದರಲ್ಲಿ ಯಾವುದೇ ಅಧಿಕಾರಿಗಳು ತಪ್ಪನ್ನು ಮಾಡಿ ಆ ಹಣವನ್ನು ಬೇರೆ ಕಡೆಗೆ ವಿನಿಯೋಗ ಮಾಡಿರುವಂತಹ ಎಲ್ಲಾ ಅಧಿಕಾರಿ ಗಳನ್ನು ಅಮಾನತು ಮಾಡುವಂತಹ ಕೆಲಸವನ್ನು ಈ ಸರ್ಕಾರ ಮಾಡಿದರೆ

ಎಸ್.ಸಿ.ಪಿ ಸ್ಕೀಂಗೆ ಒಂದು ಗೌರವ ಬರುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೇ, ಈ ರೀತಿಯ ಕಾಂಕ್ರೀಟ್ ರಸ್ತೆಯ ವ್ಯವಸ್ಥೆ ಕಳೆದ ಮೂರು ವರ್ಷದಿಂದ ಜಾರಿಗೆ ಬಂದಿದೆ. ಈ ಹಿಂದೆ ಈ ರೀತಿಯಾದಂತಹ ವ್ಯವಸ್ಥೆ ಇರಲಿಲ್ಲ. ಈ ವರ್ಷ 300 ಕೋಟಿ ರೂ. ಗಳನ್ನು ಕೊಟ್ಟಿದೆ. 300 ಗ್ರಾಮಗಳೇ ಉದ್ಧಾರವಾಗಲಿ. ಈ ವರ್ಷ 300 ಗ್ರಾಮಗಳಿಗೆ ಕಾಂಕ್ರೀಟ್ ರಸ್ತೆ ಮಾಡುವುದಕ್ಕೆ ಒಂದು ಗ್ರಾಮಕ್ಕೆ ಒಂದು ಕೋಟಿ ರೂಪಾಯಿಯಂತೆ 300 ಕೋಟಿ ರೂ. ಕೊಟ್ಟರೆ, ಇನ್ನು ಐದು ವರ್ಷದಲ್ಲಿ ಇಡೀ ರಾಜ್ಯದ ಎಲ್ಲಾ ಕಾಲೋನಿಗಳು ಸಿಮೆಂಟ್ ರಸ್ತೆ ಆಗುತ್ತವೆ. ಅದನ್ನು ಕಾದು ನೋಡಬೇಕಾಗುತ್ತದೆ. ಗಿಡ ಹಾಕಿದ ಕೂಡಲೆ ಹಣ್ಣು ಬಿಡುವುದಿಲ್ಲ. ಅದೇ ರೀತಿ ಈ ವರ್ಷ ಸ್ವಲ್ಪ ಗ್ರಾಮಗಳಾಗುತ್ತವೆ, ಮುಂದಿನ ವರ್ಷ ಮತ್ತಷ್ಟು ಗ್ರಾಮಗಳಾಗುತ್ತವೆ.ಇನ್ನು ಐದಾರು ವರ್ಷದಲ್ಲಿ ಸಂಪೂರ್ಣವಾಗಿ ಎಲ್ಲಾ ಕಾಲೋನಿಗಳು ಸಿಮೆಂಟ್ ರಸ್ತೆಗಳಾಗುತ್ತವೆ. ಮಾನ್ಯ ಸದಸ್ಯರು ಲೋಕೋಪಯೋಗಿ ಇಲಾಖೆಯಿಂದ ಎಸ್.ಸಿ.ಪಿ. ಸ್ಕೀಂಗೆ ಹಣ ಹೋಗುತ್ತದೆ ಎಂದು ಹೇಳಿದರು. ಆಂದರೆ ಆ ಪಕ್ಷದ ಶಾಸಕರು, ಈ ಪಕ್ಷದ ಶಾಸಕರು ಎಂದೇನು ಇಲ್ಲ, ಎಲ್ಲಾ ಎಂ, ಎಲ್. ಎ. ಗಳಿಗೂ ಆ ಹಣ ಹೋಗುತ್ತದೆ. ಆ ಹಣವನ್ನು ಪರಿಶಿಷ್ಟ ಜಾತಿ ಕಾಲೋನಿಗಳ ಅಭಿವೃದ್ಧಿಗೆ ಉಪಯೋಗ ಮಾಡುವಂತಹ ಹೊಣೆಗಾರಿಗೆ ಎಂ.ಎಲ್.ಎ ಗಳಿಗೂ ಸಹ ಇರುತ್ತದೆ. ಆದರೆ ಎಲ್ಲೋ ಒಂದು ಕಡೆ ಇದು ಜಾರಿ ಆಗಲಿಲ್ಲ. ನಾವು ಬೇರೆಯವರ ಮೇಲೆ ಆ ಜವಾಬ್ದಾರಿಯನ್ನು ಹೊರಿಸುವುದಲ್ಲ. ಲೋಕೋಪಯೋಗಿ ಇಲಾಖೆಯಿಂದ ಯಾವ ಶಾಸಕರಿಗೆ ಪರಿಶಿಷ್ಟ ಜಾತಿಯ ಕಾಲೋನಿಗಳ ಅಭಿವೃದ್ಧಿಗೆ ಒಂದಷ್ಟು ಹಣ ಹೋಗುತ್ತದೋ ಆ ಹಣವನ್ನು ಅದೇ ಕೆಲಸಕ್ಕೆ ಉಪಯೋಗಿಸಿ ಆ ಗ್ರಾಮಗಳ ಕಾಲೋನಿಗಳ ಅಭಿವೃದ್ಧಿ ಮಾಡಿಸುವಂಥದ್ದು ಆ ಕ್ಷೇತ್ರದ ಶಾಸಕರುಗಳ ಕರ್ತವ್ಯ ಸಹ ಆಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಬೇರೆ ಯಾರೋ ನಾನು ಮಾಡಿಸುತ್ತೇನೆ ಕೊಡಿ ಎಂದು ಹೇಳಿ ಹೋಗುವಂತಹ ಕೆಲಸವಲ್ಲ. ಇದು ಇಲಾಖೆಯ ಮತ್ತು

ಶಾಸಕರ ಮುಖಾಂತರ ಆಗತಕ್ಕ ಅಭಿವೃದ್ಧಿ ಕೆಲಸಗಳು. ಶಾಸಕರು ಈ ಯೋಜನೆಯನ್ನು ಸದುಪಯೋಗ ಮಾಡಿಸಿಕೊಂಡು ಕೆಲಸವನ್ನು ಮಾಡಬೇಕೆಂದು ನಾನು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಗ್ರಾಮಗಳಿಗೆ ಸೂಕ್ತ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಬೇಕು. ಏಕೆಂದರೆ ಗ್ರಾಮಗಳ ಅಭಿವೃದ್ಧಿ ಯಾಗದಿದ್ದರೆ ನಗರಗಳ ಅಭಿವೃದ್ಧಿಯಾಗುವುದಿಲ್ಲ. ನಗರಗಳ ಅಭಿವೃದ್ಧಿ ಆಗದೇ ನಮ್ಮ ರಾಜ್ಯದ ಅಭಿವೃದ್ಧಿ ಆಗುವುದಿಲ್ಲ. ಏಕೆಂದರೆ ನಮ್ಮ ರಾಜ್ಯದ ತಳಹದಿಯೇ ಗ್ರಾಮ, ಗ್ರಾಮೀಣಾ ವ್ಯವಸ್ಥೆಯಲ್ಲಿಯೇ ನಾವಿದ್ದೇವೆ. ಹಾಗಾಗಿ ನಮ್ಮ ಸರ್ಕಾರ ಗ್ರಾಮಗಳ ಅಭಿವೃದ್ಧಿಗಾಗಿ 400 ಕೋಟಿ ರೂಪಾಯಿಗಳನ್ನು ಮೀಸಲಿಡುವ ಮೂಲಕ ಬಹಳ ಉತ್ತಮ ಕೆಲಸವನ್ನು ಮಾಡಿದೆ. ಇದರಲ್ಲೂ ಸಹ ಈ ಕೆಲಸ ಕಾರ್ಯಗತಗೊಳಿಸುವ ಜವಾಬ್ದಾರಿ ಜನಪ್ರತಿನಿಧಿಗಳಾದ ನಮ್ಮ ಮೇಲಿದೆ ಎಂದುಕೊಂಡು ಅವುಗಳ ಅನುಷ್ಠಾನಗೊಳಿಸಲು ಮುಂದಾಗಬೇಕು. ನಾನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಆಯೋಗದ ವರದಿಯನ್ನು ಓದಿದೆನು. ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಗಳಿಗೆ ಕಳೆದ 40–50 ವರ್ಷಗಳಿಂದ ಖರ್ಚು ಮಾಡಿರುವ ಹಣವನ್ನು ಆ ವರ್ಗದ ಜನಸಂಖ್ಯೆಯಿಂದ ಭಾಗಿಸಿದಲ್ಲಿ ಒಬ್ಬೊಬ್ಬರಿಗೆ 2.75 ಲಕ್ಷ ರೂಪಾಯಿಗಳಂತೆ ಹಣ ಖರ್ಚು ಮಾಡಲಾಗಿದೆ. ಅಂದರೆ ಒಂದು ಕುಟುಂಬಕ್ಕೆ 25 ಲಕ್ಷ ಸೇರಬೇಕಾಗುತ್ತದೆ. ಏಕೆಂದರೆ ಮೊದಲಿಗೆ ಒಂದು ಕುಟುಂಬದಲ್ಲಿ ಹತ್ತು ಜನರಿಗಿಂತ ಕಡಿಮೆ ಜನರು ಇರುವುದಿಲ್ಲ. ಈಗ ವಿಭಕ್ತ ಕುಟುಂಬಗಳಾಗಿವೆ. ಆದರೆ ಈ ಹಣ ಆ ವರ್ಗಕ್ಕೆ ಖರ್ಚಾಗಿಲ್ಲ. ಎಲ್ಲವೂ ಮಧ್ಯವರ್ತಿಗಳ ಪಾಲಾಗಿವೆ. ಈ ಹಣದಲ್ಲಿ ವೇತನ ಮತ್ತಿತ್ತರ ಬಾಬುಗಳಿಗೆ ಖರ್ಚು ಮಾಡಿರುವ ಹಿನ್ನಲೆಯಿಂದ ಈ ಯೋಜನೆಯ ಮೂಲ ಉದ್ದೇಶ ಸಫಲವಾಗಿಲ್ಲ. ಹಾಗಾಗಿ ಈ ಯೋಜನೆಗಳನ್ನು ವಿಂಗಡಿಸಿ ಕಾಲೋನಿ ಡೆವಲಪ್‌ಮೆಂಟ್, ವಿದ್ಯುಚ್ಛಕ್ತಿಗೆ, ಕುಟೀರ ಜ್ಯೋತಿಗೆ, ಗಂಗಾಕಲ್ಯಾಣಕ್ಕೆ ಹಣ ನೀಡುವ ಮೂಲಕ ಈ ಜನಾಂಗಕ್ಕೆ ನಿರ್ದಿಷ್ಟವಾಗಿ ಹಣವನ್ನು ಈ ಆಯವ್ಯಯದಲ್ಲಿ ಒದಗಿಸಲಾಗಿದೆ.

**ಗೋ. ಮಧುಸೂದನ್:–** ಮಾನ್ಯ ಸಭಾಪತಿಗಳೇ, ಇಲ್ಲಿಯವರೆಗೆ ಆ ಜನಾಂಗಕ್ಕೆ ಖರ್ಚು ಮಾಡಿರುವ ಹಣವನ್ನು ಆ ಕುಟುಂಬಗಳಿಗೆ ಸರಾಸರಿ ಲೆಕ್ಕ ಹಾಕಿದಲ್ಲಿ ಎಷ್ಟು ಹಣ ಬರುತ್ತದೆ ಎನ್ನುವುದನ್ನು ಪರಿಶೀಲಿಸಿದಾಗ ಈ ಹಣ ಬಹಳ ವರ್ಷಗಳಿಂದ ದುರುಪಯೋಗ ಆಗಿರುವುದು ನಮಗೆ ಕಂಡು ಬರುತ್ತಿದೆ. ಇದರ ಬಗ್ಗೆ ನಾವು ದೊಡ್ಡ ಜಾಗೃತಿಯನ್ನು ನಿರ್ಮಾಣ ಮಾಡಬೇಕಾಗಿದೆ. ಹೀಗೆ ಜಾಗೃತಿಯನ್ನು ನಿರ್ಮಾಣ ಮಾಡದಿದ್ದಲ್ಲಿ ಈ ಸವಲತ್ತುಗಳನ್ನು ಆ ವರ್ಗದ ಕೆಲವೇ ಕುಟುಂಬಗಳು ಮಾತ್ರ ಉಪಯೋಗ ಮಾಡಿಕೊಳ್ಳುತ್ತಿವೆ. ಅದರ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸಬೇಕಾಗುತ್ತದೆ.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಗಳೇ, ನಮ್ಮ ಸರ್ಕಾರ ಕುಡಿಯುವ ನೀರಿಗಾಗಿ 1250 ಕೋಟಿ ರೂಪಾಯಿಗಳನ್ನು ಮೀಸಲಿಡುವ ಮೂಲಕ ಈ ಆಯವ್ಯಯದಲ್ಲಿ ಕುಡಿಯುವ ನೀರಿಗೆ ಹೆಚ್ಚು ಒತ್ತನ್ನು ನೀಡಲಾಗಿದೆ. ನಮ್ಮ ಕೋಲಾರ, ಶಿಡ್ಲಘಟ್ಟ ಮತ್ತು ಚಿಕ್ಕಬಳ್ಳಾಪುರ ಭಾಗದಲ್ಲಿನ ನೀರನ್ನು ಕುಡಿದರೆ ಅದು ಫ್ಲೋರೈಡ್‌ನಿಂದ ತುಂಬಿರುತ್ತದೆ. ಆ ನೀರನ್ನು ಕುಡಿಯುವವರು ಕುಬ್ಜರಾಗುತ್ತಾರೆ. ಆರು ಅಡಿ ಇರತಕ್ಕ ಮನುಷ್ಯರು ಮೂರು ಅಡಿ ಆಗುತ್ತಾರೆ. ಮಕ್ಕಳು ಹೆಳವರಾಗಿ ಕೈಕಾಲು ಹೇಗೇಗೋ ಬೆಳವಣಿಗೆಯಾಗುತ್ತವೆ. ಇದ್ದನ್ನೆಲ್ಲ ದೃಷ್ಟಿಯಲ್ಲಿಟ್ಟುಕೊಂಡು ಪ್ರತಿಯೊಂದು ಗ್ರಾಮಕ್ಕೂ ಕುಡಿಯುವ ನೀರನ್ನು ಒದಗಿಸುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಯೋಜನೆಗಳನ್ನು ರೂಪಿಸಿದೆ.

**ಶ್ರೀಮತಿ ಮೋಟಮ್ಮ:–** ಸಿಎಜಿ ವರದಿಯ ಪ್ರಕಾರ 2009–10ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯವರು 48% ಪರಿಶಿಷ್ಟ ಜಾತಿ ಜನಾಂಗಕ್ಕೆ ಮತ್ತು 38% ಪರಿಶಿಷ್ಟ ಪಂಗಡಕ್ಕೆ ಹಣವನ್ನು ಖರ್ಚು ಮಾಡಿದ್ದಾರೆ. ಉಳಿದಿದ್ದನ್ನು ಏಕೆ ಮಾಡಿಲ್ಲವೆನ್ನುವುದನ್ನು ಸಹ ಹೇಳ ಬೇಕಾಗುತ್ತದೆ. ಈ ಹಣ ಖರ್ಚಾಗದೇ ಇರುವುದಕ್ಕೆ ಕಾರಣ ಏನು; ಇದು ಇಲಾಖೆಯ ನಿರ್ಲಕ್ಷ್ಯತನವೇ; ಅಥವಾ ಸರ್ಕಾರ ಈ ಬಗ್ಗೆ ಹೆಚ್ಚಿನ

ಆಸಕ್ತಿಯನ್ನು ತೋರಲಿಲ್ಲವೇ ಎನ್ನುವುದರ ಬಗ್ಗೆ ಕೂಡ ಮಾನ್ಯ ಸದಸ್ಯರು ಹೇಳಬೇಕಾಗುತ್ತದೆ.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಯವರೇ, ಇನ್ನು ನಾನು ನೇರವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಚಾರಕ್ಕೆ ಬರುತ್ತೇನೆ. ಏಕೆಂದರೆ ಬೇರೆ ಜನಾಂಗಗಳ ಬಗ್ಗೆ ಮತ್ತು ಬೇರೆ ವಿಚಾರಗಳ ಬಗ್ಗೆ ಅನೇಕ ಜನ ಸದಸ್ಯರು ಮಾತನಾಡಿದ್ದಾರೆ. ನಾನು ಒಬ್ಬ ದಲಿತ ಕುಟುಂಬಕ್ಕೆ ಸೇರಿದವನು ಮತ್ತು ಹೋರಾಟದಿಂದ ಬಂದಿರುವವನು ಎಂದು ಹೇಳಿಕೊಳ್ಳುವುದಕ್ಕೆ ನನಗೆ ಹೆಮ್ಮೆಯಾಗುತ್ತದೆ. ಈ ರೀತಿಯ ಸಮಸ್ಯೆಗಳ ಬಗ್ಗೆ ನಾನು ಸದನದ ಹೊರಗೆ ಸಾಕಷ್ಟು ಹೋರಾಟವನ್ನು ಮಾಡಿದ್ದೇನೆ. ಹಾಗಾಗಿ ನನಗೆ ಈ ಎಲ್ಲದರ ಬಗ್ಗೆ ಕೂಡ ಸಾಕಷ್ಟು ಅರಿವು ಇದೆ. 2004–05ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವರ್ಗಗಳಿಗಾಗಿ ಕೇವಲ 4% ಮಾತ್ರ ಆಯವ್ಯಯದಲ್ಲಿ ಮೀಸಲಿಡಲಾಗಿತ್ತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವರ್ಗಗಳಿಗೆ ನೀಡುವ ಬಜೆಟ್ ಆ ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿರಬೇಕೆಂದು ಕೇಂದ್ರ ಸರ್ಕಾರದ ಯೋಜನಾ ಆಯೋಗವು ಒಂದು ನಿರ್ದೇಶನವನ್ನು ನೀಡಿದೆ. ಅದಕ್ಕಾಗಿ ನಾನು ಕೇಂದ್ರದ ಯೋಜನಾ ಆಯೋಗವನ್ನು ಮೊದಲಿಗೆ ಅಭಿನಂದಿಸುತ್ತೇನೆ. ಇವತ್ತು 22.75% ಜನಸಂಖ್ಯೆ ಇದೆ. ಅದರಲ್ಲಿ 16.50 ಪರಿಶಿಷ್ಟ ವರ್ಗ ಮತ್ತು 6.25% ಪರಿಶಿಷ್ಟ ಪಂಗಡ ಒಟ್ಟು 22.75% ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ ನಮ್ಮಲ್ಲಿದೆ. ಇವತ್ತು ನಮ್ಮ ಆಯವ್ಯಯದಲ್ಲಿ 14% ರಷ್ಟು ಅನುದಾನವನ್ನು ಮೀಸಲಿಡಲಾಗಿದೆ ಎನ್ನುವ ವಿಚಾರವನ್ನು ಬಹಳ ಸಂತೋಷದಿಂದ ಹೇಳಬಯಸುತ್ತೇನೆ. ಇದನ್ನು ಯಾವ ದಾಖಲೆಯಲ್ಲಾದರೂ ತೆಗೆದು ನೋಡಬಹುದು.

**ಶ್ರೀಮತಿ ಮೋಟಮ್ಮ:–** ತಾವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟಿರುವ ಹಣದಲ್ಲಿ ಖರ್ಚಾಗಿರುವುದರ ಬಗ್ಗೆ ಕೂಡ ಹೇಳಬೇಕಾಗುತ್ತದೆ.

**ಶ್ರೀ ಡಿ.ಎಸ್. ವೀರಯ್ಯ:–** ಇನ್ನು ಎಸ್‌ಇಪಿ ಮತ್ತು ಟಿಎಸ್‌ಪಿ ಯೋಜನೆಗಳ ಬಗ್ಗೆ ಹೇಳಬಯಸುತ್ತೇನೆ. ಈ ಎರಡು ಯೋಜನೆಗಳು ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ರೂಪಿಸಲಾಗಿದೆ. ಈ ಯೋಜನೆಗಳಿಗೆ 2009–10ನೇ ಸಾಲಿನಲ್ಲಿ 4061 ಕೋಟಿ ರೂಪಾಯಿಗಳು ನಿಗದಿಯಾಗಿತ್ತು. ಈ ಸಾಲಿನಲ್ಲಿ ಎಸ್‌ಇಪಿ ಮತ್ತು ಟಿಎಸ್‌ಪಿ ಮತ್ತು ಸಮಾಜಕಲ್ಯಾಣ ನೀಡಿರುವ 3624 ಕೋಟಿ ರೂಪಾಯಿಗಳು ಸೇರಿದಂತೆ ಒಟ್ಟು 6500 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. 2010–11ನೇ ಸಾಲಿನಲ್ಲಿ ಮುಂದಿನ ಮಾರ್ಚವರೆಗೆ ಕಳೆದ ಸಾಲಿನಲ್ಲಿ ಮೀಸಲಿಟ್ಟ ಹಣದಲ್ಲಿ ಶೇಕಡ 75%ರಷ್ಟು ಬಿಡುಗಡೆಯಾಗಿದೆ. ಅದನ್ನು ಆರ್ಥಿಕ ಇಲಾಖೆಯ ಸಮಿತಿಯ ಪರಿಶೀಲನೆಯಲ್ಲಿದೆ. ನಾನು ಮತ್ತು ಮಾನ್ಯ ಸದಸ್ಯರಾದ ಚಿಕ್ಕಮಾಧುರವರು ಕೂಡ ಆ ಸಮಿತಿಯಲ್ಲಿದ್ದೇವೆ. ಇನ್ನು ಶೇಕಡ 25 ಭಾಗದಷ್ಟು ಹಣಕ್ಕೆ ತಾಂತ್ರಿಕ ತೊಂದರೆ ಇದ್ದು, ಅದಕ್ಕೆ ಒಂದು utilization certificate ನೀಡಬೇಕಾಗುತ್ತದೆ.

**ಶ್ರೀಮತಿ ಮೋಟಮ್ಮ:–** ಹಾಗಾದರೆ ಸಿಎಜಿ ಆಡಿಟ್ ವರದಿ ಸುಳ್ಳು ಎಂದು ನೀವು ಹೇಳುತ್ತೀರಾ?

**ಶ್ರೀ ಡಿ.ಎಸ್. ವೀರಯ್ಯ:–** ಇದು ನಮ್ಮ ರಾಜ್ಯದ ಆರ್ಥಿಕ ಇಲಾಖೆಯವರು ನೀಡಿರತಕ್ಕ ಮಾಹಿತಿ.

**ಉಪಸಭಾಪತಿಯವರು:–** ವಿರೋಧ ಪಕ್ಷದ ನಾಯಕರೆ, ವೀರಯ್ಯ ಅವರಿಗೆ ಅವರ ವಿಚಾರಗಳನ್ನು ಮಂಡಿಸಲು ಇಂತಿಷ್ಟು ಸಮಯವನ್ನು ನಿಗದಿ ಮಾಡಲಾಗಿದೆ. ಆ ಸಮಯದಲ್ಲಿಯೇ ಅವರು ತಮ್ಮ ವಿಚಾರಗಳನ್ನು ಹೇಳಬೇಕಾಗುತ್ತದೆ. ಸರ್ಕಾರ ಉತರ ಕೊಡತಕ್ಕ ಸಂದರ್ಭದಲ್ಲಿ ತಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ನೀಡುತ್ತದೆ. ಅವರಿಗೆ ಆಗಿನಿಂದಲೂ ತುಂಬಾ ಅಡಚಣೆ ಉಂಟಾಗುತ್ತಿದೆ. ಅವರಿಗೆ ಮಾತನಾಡಲು ಅವಕಾಶ ಕೊಡಿ.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಗಳೇ, ನಾನು ಹಾಗೂ ಶ್ರೀಮತಿ ಮೋಟಮ್ಮನವರು ಒಂದೇ ವರ್ಗದಿಂದ ಬಂದಿರುವವರು, ಸಾಕಷ್ಟು

ಹೋರಾಟವನ್ನು ಮಾಡಿದ್ದಾರೆ, ಸಾಕಷ್ಟು ಅನುಭವವನ್ನು ಹೊಂದಿರುವವರು. ನಾವಿಬ್ಬರೂ ಸಹ ಬಹಳಷ್ಟು ಹೋರಾಟ ಮನೋಭಾವನೆಯನ್ನು ಹೊಂದಿದ್ದೇವೆ. ಈ ವರ್ಗದ ಏಳಿಗೆಗೆ ಒತ್ತನ್ನು ನೀಡೋಣ. ಈ ವರ್ಗಕ್ಕಾಗಿ ಹಣ ಬಿಡುಗಡೆ ಆಗಿದಿದ್ದಲ್ಲಿ ಬಿಡುಗಡೆ ಮಾಡಿಸೋಣ, ಹಣ ಖರ್ಚಾಗದಿದ್ದಲ್ಲಿ ಅದನ್ನು ಬೇರೆ ಬಾಬ್ತಿಗೆ ಹೋಗದೇ ಇರುವ ಹಾಗೆ ಅದೇ ಉದ್ದೇಶಕ್ಕೆ ಖರ್ಚಾಗುವ ಹಾಗೆ ನೋಡಿಕೊಳ್ಳೋಣ, ಒಟ್ಟಾರೆ ಈ ವರ್ಗದ ಸಮಗ್ರ ಅಭಿವೃದ್ಧಿಗೋಸ್ಕರ ನಾವಿಬ್ಬರೂ ಸಹ ಹೋರಾಟವನ್ನು ಮಾಡೋಣ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, ಶತಮಾನ ಗಳಿಂದ ತುಳಿತಕ್ಕೆ ಒಳಗಾಗಿದ್ದು ಕೆಳಸ್ತರದಲ್ಲಿರುವ ಜನಾಂಗದ ಬಗ್ಗೆ ನಮಗೂ ಸಹ ಕಾಳಜಿಯಿದೆ. ಅವರಿಗಿಂತಲೂ ಹೆಚ್ಚು ಕಾಳಜಿ ನಮಗಿದೆ ನಿಮಗಿಬ್ಬರಿಗೆ ಕಾಳಜಿ ಎನ್ನುವ ತಪ್ಪು ಮೇಸೇಜ್ ಹೋಗಬಾರದು.

**ಶ್ರೀ ಡಿ.ಎಸ್. ವೀರಯ್ಯ:–** ಮಾನ್ಯ ಸಭಾಪತಿಗಳೇ, ನಮಗೆಲ್ಲರಿಗೂ ಸಹ ಆ ವರ್ಗಗಳ ಬಗ್ಗೆ ಕಾಳಜಿಯಿದೆ. ಅವರ ಉದ್ಧಾರಕ್ಕಾಗಿ ನಾವೆಲ್ಲರೂ ಒಟ್ಟಾಗಿ ಶ್ರಮಿಸೋಣ. ನಾನು ಒಂದು ಕುಟುಂಬಕ್ಕೆ 2.75 ಲಕ್ಷ ರೂಪಾಯಿಗಳು ಸೇರಬೇಕಾಗಿತ್ತು ಎನ್ನುವ ಒಂದು ಉದಾಹರಣೆಯನ್ನು ಆಗಲೇ ನೀಡಿದ್ದೆನು. ಹಾಗಾದರೆ ಆ ಹಣ ಏನಾಯಿತು. ಆ ವರ್ಗಕ್ಕೆ ಅಷ್ಟರಮಟ್ಟಿಗೆ ನಾವು ಸೌಲಭ್ಯಗಳನ್ನು ಒದಗಿಸಲಿಲ್ಲವೇ? ಅವರ ಅಭಿವೃದ್ದಿಯ ಬಗ್ಗೆ ಕಡೆಗಣಿಸಲಿಲ್ಲವೇ? ಅವರ ಅಭಿವೃದ್ಧಿ ಕುಂಠಿತವಾಗಲಿಲ್ಲವೇ? ಇದಕ್ಕೆ ನಾವೆಲ್ಲರೂ ಕೂಡ ಜವಾಬ್ದಾರರಾಗಿದ್ದೇವೆ. ಆದ್ದರಿಂದ ನಾವೆಲ್ಲರೂ ಒಟ್ಟಾಗಿ ಈ ವರ್ಗಗಳು ಅಭಿವೃದ್ಧಿಗೋಸ್ಕರ ಶ್ರಮಿಸಬೇಕಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಯನ್ನು ಆ ಜನಾಂಗದವರೆ ಮಾಡಬೇಕೆನ್ನುವುದು ಎಲ್ಲಿಯೂ ಇಲ್ಲ. ಈ ವರ್ಗಗಳ ಅಭಿವೃದ್ಧಿಗಾಗಿ ಬ್ರಾಹ್ಮಣರೂ ಕೂಡ ಶ್ರಮಿಸಿರುವುದನ್ನು ನಾವು ನೋಡಿದ್ದೇವೆ. ಮೇಲ್ವರ್ಗದ ಜನರು ಕೂಡ ಶ್ರಮಿಸಿರುವುದನ್ನು ನಾವು ನೋಡಿದ್ದೇವೆ. ಇವತ್ತು ಶ್ರೀರಾಂಪುರದಲ್ಲಿ ರಾಮಗೋಪಾಲ್ ಸ್ವಾಮಿ ಅಯ್ಯರ್ ಹಾಸ್ಟೆಲ್ ಇದೆ. ಇದು 1947ಕ್ಕಿಂತಲೂ ಹಿಂದಯೇ ಒಬ್ಬ ಅಯ್ಯರ್ ಸ್ಥಾಪಿಸಿದಂತಹ ಹಾಸ್ಟೆಲ್.

ಇದನ್ನು ಸಂಪೂರ್ಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿಯೇ ನಡೆಸಿಕೊಂಡು ಬಂದಂತಹ ಒಂದು ಹಾಸ್ಟೆಲ್. ಅವರ ಮಕ್ಕಳಿಗೆ ಇವತ್ತು ಒಂದು ಮನೆಯೂ ಸಹ ಇಲ್ಲ, ಅದು ಬೇರೆ ವಿಚಾರ. ಹೀಗೆಯೇ ಮೇಲ್ವರ್ಗದ ಜನರು ಕೂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಶ್ರಮಿಸಿದ್ದಾರೆ ಹಾಗೆಯೇ ಎಲ್ಲಾ ವರ್ಗಗಳಲ್ಲಿಯೂ ಸಹ ಬಡಜನರಿದ್ದಾರೆ. ಹಾಗಾಗಿ ಎಲ್ಲರೂ ಆ ವರ್ಗಗಳನ್ನು ಮೇಲೆತ್ತುವ ಕೆಲಸವನ್ನು ಮಾಡಬೇಕು. ಅದಕ್ಕಾಗಿಯೇ ಡಾ॥ ಅಂಬೇಡ್ಕರ್ ರವರು ರಾಜಕೀಯವಾಗಿ ನಮಗೆ ಸಮಾನತೆ ಸಿಕ್ಕಿದೆ, ಆರ್ಥಿಕ ಮತ್ತು ಸಮಾಜಿಕ ಸಮಾನತೆ ನಮಗೆ ಸಂವಿಧಾನದ ಮೂಲಕ ಸಿಗಲಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಆ ಸಂವಿಧಾನವನ್ನು ನಡೆಸಿಕೊಂಡು ಹೋಗುವವರು ಇದನ್ನೆಲ್ಲ ನೋಡಬೇಕಾಗುತ್ತದೆ. ನಾನು ಅದನ್ನು ಹೊತ್ತುಕೊಂಡು ಬಂದು ಕೊಡಲು ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ನಾವೆಲ್ಲರೂ ಕೂಡ ಅರ್ಥಮಾಡಿಕೊಳ್ಳಬೇಕಾಗುತ್ತದೆ.

**(5–30 ಗಂಟೆ)**

ಹಂತ–ಹಂತವಾಗಿ 2009–10ನೇ ಮತ್ತು 2010–11ನೇ ಸಾಲಿನಲ್ಲಿ 2000 ಕೋಟಿ ರೂ.ಗಳು ಈ ವರ್ಗದ ಅಭಿವೃದ್ಧಿಗೆ ಹೆಚ್ಚು ಮಾಡುತ್ತಾ ಬಂದಿರುವುದು ಒಂದು ಉಲ್ಲೇಖನೀಯ ವಿಷಯ ಎಂದು ನಾನು ಭಾವಿಸುತ್ತೇನೆ. ಎಸ್‌ಸಿ–ಎಸ್‌ಟಿ ಮಕ್ಕಳಿಗೆ ಮೆರಿಟ್ ಸ್ಕಾಲರ್‌ಶಿಫ್ ಎಂದು ಕೊಡುತ್ತಾರೆ. ನಾನು 75 ರೂ.ಗಳನ್ನು ತೆಗೆದುಕೊಂಡಿದ್ದೇನೆ. ಹೈಸ್ಕೂಲ್‌ನಲ್ಲಿ ಓದುವ ಮಕ್ಕಳು ಮೊದಲನೆಯ ದರ್ಜೆಯಲ್ಲಿ ಪಾಸಾದರೆ 75 ರೂ.ಗಳ ಮೆರಿಟ್ ಸ್ಕಾಲರ್‌ಶಿಫ್ ಕೊಡುತ್ತಿದರು ಇವತ್ತು ಮೊದಲನೆಯ ದರ್ಜೆಯಲ್ಲಿ ಪಾಸ ಮಾಡಿದರೆ ಮಿಡಲ್ ಸ್ಕೂಲ್‌ನಲ್ಲಿ 10,000 ರೂ.ಗಳನ್ನು ಮತ್ತು ಹೈಸ್ಕೂಲ್‌ನಲ್ಲಿ 15,000 ರೂ.ಗಳ ಸ್ಕಾಲರ್‌ಶಿಫ್ ಈಗ ಕೊಡುತ್ತಾರೆ. ನನ್ನ ಮಗ, ಮೊದಲ ದರ್ಜೆಯಲ್ಲಿ ಪಾಸ್ ಮಾಡಿದ್ದೇನೆ ಎಂದು ಹೇಳಿದಾಗ ನಾನು ತಂದೆಯಾಗಿ ನನ್ನ ಮಗನಿಗೆ 10,000 ರೂ, ಗಳನ್ನು ಕೊಡಲಿಲ್ಲ. ಆದರೆ ಸರ್ಕಾರ ಅಷ್ಟು ಹಣವನ್ನು ಇವತ್ತು ಕೊಡುತ್ತಿದೆ. 40ವರ್ಷಗಳಿಂದ

ಮೆರಿಟ್ ಸ್ಕಾಲರ್‌ಶಿಫ್ 75 ರೂ.ಗಳು ಇರುವುದನ್ನು ಈ ಬಜೆಟ್‌ನಲ್ಲಿ 250 ರೂ.ಗಳವರೆಗೆ ಹೆಚ್ಚಿಸಿದ್ದಾರೆ. ಹೈಸ್ಕೂಲ್‌ಗೆ 100 ಕೊಡುತ್ತಿರುವುದನ್ನು 500 ರೂ.ಗಳಿಗೆ ಹೆಚ್ಚಿಸಿದ್ದಾರೆ.

**ಶ್ರೀಮತಿ ಮೋಟಮ್ಮ ವಿರೋಧ ಪಕ್ಷದ ನಾಯಕರು:–** ಮಾನ್ಯ ಸಭಾಪತಿಗಳೆ, ಈಗಿನ ಪರಿಸ್ಥಿತಿಯಲ್ಲಿ 250 ರೂ.ಗಳಿಗೆ ಪುಸ್ತಕ ತೆಗೆದುಕೊಳ್ಳಲು ಆಗುವುದಿಲ್ಲ, ಬಟ್ಟೆ ತೆಗೆದುಕೊಳ್ಳಲು ಆಗುವುದಿಲ್ಲ. 75 ರೂ.ಗಳನ್ನು ಕೊಡುವ ಸಮಯದಲ್ಲಿ ಒಂದು ಮೀಟರ್ ಬಟ್ಟೆಗೆ 25 ರೂ.ಗಳ ಬೆಲೆ ಇತ್ತು ಆದರೆ ಈಗ 200 ರೂ.ಗೆ ಒಂದು ಮೀಟರ್ ಬಟ್ಟೆ ಬರುತ್ತದೆ. ಸರಿಯಾಗಿ ಒಂದು ಬಟ್ಟೆಯನ್ನು ತೆಗೆದುಕೊಳ್ಳಲು ಆಗುವುದಿಲ್ಲ.

**ಶ್ರೀ ಡಿ.ಸಿ. ವೀರಯ್ಯ:–** 2004–05ನೇ ಸಾಲಿನವರೆಗೆ 75 ರೂ.ಗಳ ಸ್ಕಾಲರ್‌ಶಿಫ್ ಇತ್ತು, ಬೆಲೆ ಹೆಚ್ಚು ಆಗಿರಲಿಲ್ಲವೇ? ಈಗ ಮಾತ್ರ ಬೆಲೆ ಜಾಸ್ತಿಯಾಗಿದೆಯೇ? 75 ರೂ.ಗಳಿಂದ ಒಂದು ಪೆನ್ ಕೂಡ ತೆಗೆದುಕೊಳ್ಳಲು ಆಗುವುದಿಲ್ಲ, ಸ್ವಲ್ಪ ಬಟ್ಟೆ–ಪುಸ್ತಕ ತೆಗೆದುಕೊಳ್ಳಲಿ ಎಂದು 250 ರೂ.ಗಳಿಗೆ ಹೆಚ್ಚಿಸಿದ್ದಾರೆ.

**ಶ್ರೀಮತಿ ಮೋಟಮ್ಮ:–** ಆಗಿನ ಕಾಲಕ್ಕೆ ಅದು ಸರಿ ಇತ್ತು. ನೀವು ಹಾಸ್ಟೇಲ್‌ನಲ್ಲಿ ಇದ್ದು ಓದುವಾಗ ಪರ್ ಹೆಡ್ 50 ರಿಂದ 100 ರೂ.ಗಳನ್ನು ಕೊಡುತ್ತಿದ್ದರು. ಈಗ ಅದು 750 ರೂ.ಗಳಾಗಿರಬಹುದು. ಅವತ್ತು ನೀವು ಹಾಸ್ಟೇಲ್‌ನಲ್ಲಿ ಊಟ ಮಾಡಿ ಓದಿ ಬಂದಿಲ್ಲವೇ? ಅವತ್ತಿನ ಹಣದ ಮೌಲ್ಯ ಹಾಗೆ ಇತ್ತು.

**ಶ್ರೀ ಡಿ.ಎಸ್. ವೀರಯ್ಯ:–** ಕಳೆದ ಮೂರು ವರ್ಷಗಳಲ್ಲಿ ಭೋಜನಾ ವೆಚ್ಚ 450 ರೂ.ಗಳಿರುವುದನ್ನು 650 ರೂ.ಗಳು ಮಾಡಿದ್ದಾರೆ. 550 ರೂ. ಗಳಿರುವುದು 750 ರೂ.ಗಳಷ್ಟು ಹೆಚ್ಚು ಮಾಡಿದ್ದಾರೆ. ಆದರೆ ಹಿಂದೆ ಏಕೆ ಮಾಡಲು ಆಗಲಿಲ್ಲ. ಅಷ್ಟು ವರ್ಷಗಳಿಂದ ತಟಸ್ಥವಾಗಿ ನಿಂತ ನೀರಾಗಿತ್ತು ಎಂದು ನಾನು ಹೇಳಬಯಸುತ್ತೇನೆ. 50 ವರ್ಷಗಳವರೆಗೆ ವಿದ್ಯಾರ್ಥಿವೇತನ 75 ರೂ.ಗಳಷ್ಟೆ ಇತ್ತು, ಈಗ ಹೆಚ್ಚು ಮಾಡಿದ್ದಾರೆ. ಅಂದರೆ ನಾನು

ಹೇಳುವುದು, ಹಂತ–ಹಂತವಾಗಿ ಈ ವರ್ಗದ ಅಭಿವೃದ್ಧಿಗೆ ಅನುದಾನವನ್ನು ಹೆಚ್ಚಿಸುತ್ತಲೇ ಬಂದಿದ್ದಾರೆ.

ಹಾಸ್ಟೆಲ್‌ಗಳು ಬಗ್ಗೆ ಇಲ್ಲಿ ಬಹಳ ಚರ್ಚೆಯಾಗಿದೆ. ಮಾನ್ಯ ನಾರಾಯಣಸ್ವಾಮಿಯವರು, ಹಾಸ್ಟಲ್‌ಗಳು ದನದ ಕೊಟ್ಟಿಗೆಗಳಾಗಿವೆ ಎಂದು ಹೇಳಿದರು. ಆದರೆ ಒಂದು ಸಾರಿ ನಾನು ಹೇಳಿದೆ ದನದ ಕೊಟ್ಟಿಗೆಗಳಲ್ಲ ಹಂದಿ ಗೂಡುಗಳಾಗಿವೆ ಎಂದು. ಒಂದು ರೂಂನಲ್ಲಿ ಹತ್ತು ಜನ ಮಕ್ಕಳು ಇರಬೇಕು. ಅವರು ಸ್ನಾನ ಮಾಡಿಕೊಳ್ಳಲು ಎರಡೇ ಬಾತ್‌ರೂಂಗಳು, ಮಕ್ಕಳಿಗೆ ಕಪ್‌ಬೋರ್ಡ್ ವ್ಯವಸ್ಥೆ ಇಲ್ಲ ಈ ಎಲ್ಲ ವಿಷಯಗಳ ಬಗ್ಗೆ ಮಾತನಾಡಿದ್ದೇವೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** 45 ಜನ ಮಕ್ಕಳು ಮೂರು ರೂಂನಲ್ಲಿದ್ದರು.

**ಶ್ರೀ ಡಿ.ಎಸ್. ವೀರಯ್ಯ:–** ಈ ರೀತಿ ಅವ್ಯವಸ್ಥೆ ಇತ್ತು. ಇದನ್ನು ಪರಿಗಣನೆಗೆ ತೆಗೆದುಕೊಂಡು ಸರ್ಕಾರ ಈ ಬಜೆಟ್ ನಲ್ಲಿ ಮೊದಲು ಈ ಜನಾಂಗಕ್ಕೆ ಒಳ್ಳೆಯ ಶಿಕ್ಷಣವನ್ನು ಕೊಡಬೇಕು ಎಂದು ವ್ಯವಸ್ಥೆ ಮಾಡಿಕೊಟ್ಟಿದಾರೆ. ರಾಮಕೃಷ್ಣ ಆಶ್ರಮದವರು ಬಹಳ ಚೆನ್ನಾಗಿ ಹಾಸ್ಟೆಲ್ ನಡೆಸುತ್ತಿದ್ದಾರೆ. ಅಲ್ಲಿ 25% ಪರಿಶಿಷ್ಟ ಜಾತಿ–ಪರಿಷಶಿಷ್ಟ ಪಂಗಡದವರಿಗೆ ಅವಕಾಶವನ್ನು ಕೊಡುತ್ತಿದ್ದಾರೆ. ಆ ಮಟ್ಟದಲ್ಲಿ ಹಾಸ್ಟೆಲ್‌ಗಳು ಜೀರ್ಣೋದ್ಧಾರವಾದರೆ ನಾನು ಮತ್ತು ಮಾನ್ಯ ಮೋಟಮ್ಮನವರು ಸಂತೋಷಪಡುತೇವೆ. ಏಕೆಂದರೆ, ನಮಗೆ ಇರುವ ಒಂದೇ ಒಂದು ಅಸ್ತ್ರ ಎಂದರೆ ಅದು ಶಿಕ್ಷಣ. ಶಿಕ್ಷಣದಿಂದ ಮಾತ್ರ ಮನುಷ್ಯನ ಜೀವನ ಮತ್ತು ಅಂತಸ್ತು ಬದಲಾವಣೆಯಾಗಬಹುದು ಎನ್ನುವುದರಲ್ಲಿ ನಂಬಿಕೆ ಇಟ್ಟವರು ನಾವು. ಆದ್ದರಿಂದ ಬೇರೆ ಎಲ್ಲಾ ಕಾರ್ಯಕ್ರಮಗಳನ್ನು ಕೊಡುವುದಕ್ಕಿಂತ ಸರ್ಕಾರ ಶಿಕ್ಷಣವನ್ನು ನಮಗೆ ಕೊಡಬೇಕು, ಇದರಿಂದ ಮನುಷ್ಯ ತಾನಾಗಿಯೇ ಮೇಲಕ್ಕೆ ಬರುತ್ತಾನೆ ಮತ್ತು ಸಮಾಜದಲ್ಲಿ ಸಮಾನತೆ ಬಗ್ಗೆ ಅವನು ಯೋಚನೆ ಮಾಡುತ್ತಾನೆ. ಶಿಕ್ಷಣದ ಗುಣಮಟ್ಟವನ್ನೆ ಕಡಿಮೆ ಮಾಡಿದರೆ ಅವನು ಮೇಲಕ್ಕೆ

ಬರಲು ಆಗುವುದಿಲ್ಲ. ಅವನ ಚಿಂತನೆ ಕೂಡ ಮೇಲ್ಮಟ್ಟದ್ದಾಗುವುದಿಲ್ಲ. ಈ ನಿಟ್ಟಿನಲ್ಲಿ ಮಾನ್ಯ ಯಡಿಯೂರಪ್ಪನವರು ಹಾಸ್ಟೆಲ್‌ಗಳ ಜೀರ್ಣೋದ್ಧಾರಕ್ಕೆ ಒತ್ತು ಕೊಟ್ಟಿದ್ದಾರೆ. ಬಾಡಿಗೆ ಕಟ್ಟಡದಲ್ಲಿರುವ ಹಾಸ್ಟಲ್‌ಗಳೆಲ್ಲವನ್ನು ಹೊಸ ಸ್ವಂತ ಕಟ್ಟಡಗಳಿಗೆ ವರ್ಗಾವಣೆ ಮಾಡಬೇಕು. ಹಾಸ್ಟೆಲ್‌ಗಳಿಗೆ ಜಾಗವನ್ನು ಕೊಡಿ ಎಂದು ಎಲ್ಲಾ ಜಿಲ್ಲೆಗಳವರೆಗೆ ಹೇಳಿದ್ದೇವೆ. ನೀವು ಸೈಟ್ ಕೊಡುವಾಗ ಒಂದು ಹಾಸ್ಟಲ್‌ಗೆ ನಿವೇಶನವನ್ನು ಮೀಸಲಿಡಿ ಎಂದು ನಾನೇ ಮೈಸೂರು ಮೂಡಾದವರೆಗೆ ಹೇಳಿದ್ದೇನೆ. ಮೂಡಾದವರು ಕಳೆದ ಒಂದು ವರ್ಷದಿಂದ ಕನಿಷ್ಠ 5 ಸೈಟ್‌ಗಳನ್ನು ಕೊಟ್ಟಿದ್ದಾರೆ. ಹೀಗೆ ಹೊಸ ಜಾಗವನ್ನು ನೋಡಿ ಒಳ್ಳೆಯ ಪರಿಸರವನ್ನು ನಿರ್ಮಾಣ ಮಾಡಬೇಕು. ಒಂದು ಕೊಠಡಿಯಲ್ಲಿ 20 ಜನ ಮಕ್ಕಳು ಸೇರಿಕೊಂಡರೆ ಅವರು ಓದುವುದು ಯಾವಾಗ? ಆ ನಿಟ್ಟಿನಲ್ಲಿ ಹೆಚ್ಚು ಗಮನ ಕೊಟ್ಟು ಅದಕ್ಕಾಗಿ ಒಂದು ಕ್ರೋಡೀಕೃತ ನಿಧಿ ಎಂದು ಸ್ಥಾಪನೆ ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಮೋಟಮ್ಮನವರ ಗಮನಕ್ಕೆ ತರಲು ಬಯಸುತ್ತೇನೆ. ಎಸ್‌ಸಿ-ಎಸ್‌ಟಿ ಹಾಸ್ಟೆಲ್‌ಗಳ ಉದ್ಧಾರಕ್ಕಾಗಿ, ಮತ್ತು ಕಾಲೋನಿಗಳನ್ನು ನಿರ್ಮಾಣ ಮಾಡಲು ಕೂಡಿಟ್ಟ ನಿಧಿ ಎಂದು ಇಟ್ಟಿದ್ದಾರೆ ಅದು 2005-06 ನೇ ಸಾಲಿನಲ್ಲಿ ಕೇವಲ 98 ಕೋಟಿ ರೂ.ಗಳಷ್ಟು ಇತ್ತು. ಇವತ್ತು ಆ ಮೊತ್ತ 1000 ಕೋಟಿ ರೂ.ಗಳಾಗಿದೆ. ಆ ಎಲ್ಲ ಹಣವು ಖರ್ಚಾಗಿದೆ. ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆಯವರು ಒಂದು ಸಭೆಯಲ್ಲಿ ಇದನ್ನು ಒಪ್ಪಿಕೊಂಡಿದ್ದಾರೆ. ಆಗ ಸಂಕಪ್ಪನವರು ನಮ್ಮ ಜೊತೆ ಇದ್ದರು ಈ ಕ್ರೋಢೀಕೃತ ನಿಧಿ ಸಂಪೂರ್ಣವಾಗಿ ಖರ್ಚಾಗಿರುವುದನ್ನು ನಾವು ಕಾಣುತ್ತೇವೆ. ಈ ರೀತಿ ಈ ವರ್ಗದ ಅಭಿವೃದ್ಧಿಗಾಗಿ ಸಾವಿರಾರು ಕೋಟಿ ರೂ.ಗಳನ್ನು ಕೊಡುವುದುರ ಮೂಲಕ, ಅಂಬೇಡ್ಕರರ್‌ವರ ಕನಸಾಗಿದ್ದ ಸಮಾಜಿಕ ಸಮಾನತೆ, ಆರ್ಥಿಕ ಸಮಾನತೆಯನ್ನು ತರುವಂತಹ ಕೆಲಸ ಈ ದಿನ ಆಗುತ್ತಿದೆ ಎನ್ನುವುದನ್ನು ಹೇಳಲು ನಾನು ಇಚ್ಚೆಪಡುತ್ತೇನೆ.

ನಮ್ಮಲ್ಲಿ ಅಲೆಮಾರಿ ಮತ್ತು ಅರೆಅಲೆಮಾರಿ ಜನ ಇದ್ದಾರೆ, ಕೋಲೆಬಸವ ಸಮಾಜದವರು ಇದ್ದಾರೆ, ಹಕ್ಕಿ-ಪಿಕ್ಕಿ ಸಮಾಜದವರು ಇದ್ದಾರೆ. ಇವರು ಕಡೆಗಣಿಸಿದಂತಹ ಸಮಾಜದವರಾಗಿದ್ದಾರೆ. ಇವರ ಬಸವನನ್ನು

ಮಾತ್ರ ದೊಡ್ಡವರ ಮನೆ ಗೃಹಪ್ರವೇಶಕ್ಕೆ ಒಳಗೆ ನುಗಿಸಿಕೊಳ್ಳುತ್ತಾರೆ. ಆದರೆ ಆ ಬಸವನ ಮಾಲೀಕನಿಗೆ ಮಾತ್ರ ಮನೆ ಇಲ್ಲ. ಒಂದು ಸ್ಲಂನಲ್ಲಿ ಕೋಲೆಬಸವ ಜನಾಂಗದವರ 500 ಮನೆಗಳು ಇವೆ. ಅವರ ಬಸವನನ್ನು ಹಿಡಿದುಕೊಂಡು ಬಂದು ಇನ್ನೊಬ್ಬರ ಮನೆ ಗೃಹಪ್ರವೇಶ ಮಾಡಿಸಲಾಗುತ್ತದೆ. ಆದರೆ ಅವರ ಮನೆಯನ್ನು ಪ್ರವೇಶ ಮಾಡಿಸಲು ಅವರಿಗೆ ಸ್ವಂತ ಮನೆ ಇಲ್ಲ. ಅವರಿಗೂ ಕೂಡ ಒಂದು ನೆಲೆ ಬೇಕು ಎಂದು ಮಾನ್ಯ ಯಡಿಯೂರಪ್ಪನವರು ಯೋಚನೆ ಮಾಡಿ ಮೊಟ್ಟ–ಮೊದಲಬಾರಿಗೆ ಅಲೆಮಾರಿ ಜನಾಂಗದವರ ಅಭಿವೃದ್ದಿಗೆ 5 ಕೋಟಿ ರೂ.ಗಳನ್ನು ಮೀಸಲಾಗಿ ಇಟ್ಟಿದ್ದಾರೆ ಇದು ಸ್ವಾಗತಾರ್ಹವಾದ ವಿಚಾರ. ಈ ರೀತಿ ಆಡು ಮೇಯದ ಸೊಪ್ಪು ಇಲ್ಲ ಎಂದು ಹೇಳುವ ಹಾಗೆ ಬಡವರಿಗಾಗಿ ಮಾನ್ಯ ಯಡಿಯೂರಪ್ಪನವರು ಯೋಚಿಸದೆ ಇರುವ, ಕೊಡದೆ ಇರುವಂತಹ ಕಾರ್ಯಕ್ರಮಗಳೆ ಇಲ್ಲ ಎಂದು ನಾನು ಸಂತೋಷದಿಂದ ಹೇಳಲು ಇಚ್ಚೆಪಡುತ್ತೇನೆ. ಕುಂಬಾರ ಇದು ಸಣ್ಣ ಸಮಾಜ, ಇದಕ್ಕಾಗಿ ಒಂದು ಕುಂಬ ನಿಗಮವನ್ನು ಸ್ಥಾಪನೆ ಮಾಡಿದ್ದಾರೆ. ಎಲ್ಲರ ಬಟ್ಟೆಯನ್ನು ಒಗೆದು ನಾವು ಸ್ವಚ್ಛವಾಗಿ ಕಾಣುವಂತೆ ಮಾಡುವ ಮಡಿವಾಳ ಸಮಾಜ, ಆದರೆ ಇವರನ್ನು ಕಡೆಗಣಿಸಲಾಗಿತ್ತು. ಈಗ ಅವರ ಅಭಿವೃದ್ಧಿಗೆ 5 ಕೋಟಿ ರೂ.ಗಳನ್ನು ಇಟ್ಟಿದಾರೆ. ಹೀಗೆ ಸಣ್ಣ–ಸಣ್ಣ ಸಮಾಜಗಳನ್ನು ಕೂಡ ಮೇಲೆ ಎತ್ತುವ, ಅವರ ಅಭಿವೃದ್ಧಿ ಮಾಡುವ ಕೆಲಸವನ್ನು ಮಾನ್ಯ ಯಡಿಯೂರಪ್ಪನವರು ಮಾಡಿದ್ದಾರೆ. ಹಾಗೆ ನೇಕಾರರನ್ನು ಅವರು ಕಡೆಗಣಿಸಿರುವುದಿಲ್ಲ. ಆಧುನಿಕ ನೇಕಾರ ಪದ್ಧತಿ ಬಂದ ಮೇಲೆ ನೇಕಾರ ಸಮಾಜದವರು ಕೆಳಗಡೆ ಹೋಗುತ್ತಿದ್ದಾರೆ. ಆ ಸಮಾಜದವರಿಗೆ ಕೂಡ ಬಜೆಟ್‌ನಲ್ಲಿ ನಿಗದಿತ ಹಣವನ್ನು ಕೊಡಬೇಕೆಂದು 27 ಕೋಟಿ ರೂ.ಗಳನ್ನು ಈ ವರ್ಗದ ಅಭಿವೃದ್ಧಿ ಮಾಡಲು ಮೀಸಲಿಟ್ಟಿದ್ದಾರೆ ಎಲ್ಲ ವರ್ಗದ ಜನರನ್ನು ಜೊತೆಗೆ ತೆಗೆದುಕೊಂಡು ಹೋಗಬೇಕು ಎಂದು ಇಷ್ಟೆಲ್ಲ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ. ತಳಮಟ್ಟದಲ್ಲಿರುವ ಮತ್ತು ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ಮುಖ್ಯವಾಹಿನಿಗೆ ಸೇರಬೇಕೆಂಬ ದೃಷ್ಟಿಕೋನದಿಂದ ಬೃಹತ್ ಬಜೆಟ್ ಕೊಟ್ಟಿದ್ದಾರೆ. ಮೂಲಭೂತ ಸೌಕರ್ಯ

ಗಳಿಗೆ ಹೆಚ್ಚು ಒತ್ತು ಕೊಡುವುದರ ಮುಖಾಂತರ ಈ ಬಜೆಟ್ ಬಹಳ ಸ್ವಾಗತಾರ್ಹವಾದುದು. ಇದರ ಮುಖಾಂತರ ಬಡವ ಮತ್ತು ಶ್ರೀಮಂತರ ಮಧ್ಯೆ ಇರುವ ಅಂತರವನ್ನು ಕಡಿಮೆ ಮಾಡಬೇಕಾಗುತ್ತದೆ. ಈ ಅಂತರದ ಕಾರಣದಿಂದ ನಕ್ಸಲ್ ಅಥವಾ ಇನ್ನೊಂದು ಚಳುವಳಿ ಬೆಳೆಯುತ್ತಿದೆ ಎಂದರೆ ತಪ್ಪಾಗಲಾರದು. ಬಡವ ಮತ್ತು ಶ್ರೀಮಂತನ ಮಧ್ಯೆ ದೊಡ್ಡ ಕಂದಕ ಏರ್ಪಟ್ಟಿದೆ. ಒಂದು ಸೀರೆ ಕೊಟ್ಟರೆ ಅದು ಒಂದು ಕಾರ್ಯಕ್ರಮವೇ ಎಂದು ಹೇಳುವವರಿದ್ದಾರೆ. ಆದರೆ ಇವತ್ತಿಗೂ ಲಕ್ಷಾಂತರ ಮಹಿಳೆಯರು ಅರ್ಧ ಬಟ್ಟೆಯಲ್ಲಿ ಮೈಮುಚ್ಚಿಕೊಂಡಿರುವ ಪರಿಸ್ಥಿತಿ ಇದೆ. ಬರೀ ಕಾಲಿನಲ್ಲಿ ನಡೆಯುವ ಲಕ್ಷಾಂತರ ಮಹಿಳೆಯರಿದ್ದಾರೆ, ಅಂದರೆ ಅವರು ಚಪ್ಪಲಿ ಕೊಂಡುಕೊಳ್ಳಲಿಲ್ಲ ಎಂದಲ್ಲ, ಅವರ ಹತ್ತಿರ ಖರೀದಿ ಮಾಡಲು ಹಣ ಇಲ್ಲ. ಇದು ಮಾನ್ಯ ಸಭಾಪತಿಯವರಿಗೂ ಗೊತ್ತಿದೆ. ಅವರು ಬಡವರ ಬಗ್ಗೆ ಚಿಂತನೆ ಮಾಡಿದ್ದಾರೆ. ಬರೀ ಕಾಲಿನಲ್ಲಿ ಇಡೀ ಜೀವನವನ್ನು ಸವೆಸಿ ಅವನು ಸಾಯುತ್ತಾನೆ, ಆದರೆ ಫ್ಯಾಷನ್‌ಗೋಸ್ಕರ 1000 ಚಪ್ಪಲಿಗಳನ್ನು ತೆಗೆದುಕೊಂಡು ಯಾವತ್ತು ಹಾಕಿಕೊಳ್ಳಲಿ ಎನ್ನುವವರನ್ನು ನೋಡುತ್ತಿದ್ದೇವೆ. ಒಂದು ಸೀರೆಯೂ ಇರುವುದಿಲ್ಲ. ಆದರೆ ಒಬ್ಬರ ಮನೆಯನ್ನು ಜಪ್ತಿ ಮಾಡಿದರೆ 4000 ಸೀರಿಗಳು ಇವೆ. ಅದರಲ್ಲಿ 3000 ರೇಷ್ಮೆ ಸೀರೆಗಳು ಇವೆ. ಅವುಗಳನ್ನು 365 ದಿನಗಳಿಂದ ಭಾಗಿಸಿದಾಗ ಒಂದು ದಿವಸಕ್ಕೆ 5 ಸೀರೆಗಳನ್ನು ಉಟ್ಟುಕೊಳ್ಳಬಹುದು. ಆದರೆ ಅಲ್ಲಿ ಅವಳಿಗೆ ಒಂದೇ ಒಂದು ಹರಿದ ಸೀರೆ, ಅವಳಿಗೆ ಮಾನ ಮುಚ್ಚಿಕೊಳ್ಳುವುದಕ್ಕೂ ಬಟ್ಟೆ ಇಲ್ಲ. ಈ ರೀತಿಯ ಸಮಾಜವನ್ನು ನಾವು ನೋಡುತ್ತಿದ್ದೇವೆ. ಕೋಲೆ ಬಸವನಿಗೆ ಮನೆಯಿಲ್ಲ, ಆದರೆ ಒಬ್ಬೊಬ್ಬರಿಗೆ ನಾಲ್ಕು ಮನೆಗಳು ಇವೆ ಅವುಗಳಲ್ಲಿ ಮೂರು ಮನೆಗಳು ಖಾಲಿಯಿದ್ದು ಒಂದು ಮನೆಯಲ್ಲಿ ವಾಸವಿರುತ್ತಾರೆ. ಇದು ಇವತ್ತಿನ ಚಿತ್ರಣ. ಇದು ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತದೆ. ಅಂತರ ಇರಬೇಕು ನಿಜ. ಏಕೆಂದರೆ ಅವರ ಶ್ರಮದಿಂದ ಅವರು ಮೇಲೆ ಬಂದಿರುತ್ತಾರೆ. ಅದರ ಬಗ್ಗೆ ಹೊಟ್ಟೆಕಿಚ್ಚು ಇಲ್ಲ. ಆದರೆ ಅತಿಯಾದ ಅಂತರ

ಇದ್ದಾಗ ಉಗ್ರವಾದಿಗಳು ಅಥವಾ ಸಮಾಜದ ವಿರುದ್ಧ ಪ್ರತಿಭಟಿಸುವ ಸಮಾಜವೇ ಹುಟ್ಟಿಕೊಳ್ಳುತ್ತದೆ ಎಂಬ ಭಯ ನನಗೆ ಇದೆ.

ಇನ್ನು ನಾನು ಕೊನೆಯದಾಗಿ ಫ್ರೆಂಚ್ ಕ್ರಾಂತಿಯ ಬಗ್ಗೆ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಫ್ರೆಂಚ್ ದೊರೆ Louis XIV ಸರ್ವಾಧಿಕಾರ ದಿಂದ ಆಳ್ವಿಕೆ ಮಾಡುವಾಗ ಕ್ಷಾಮ ತಲೆದೋರಿತು. ಲಕ್ಷಾಂತರ ಜನರು ಅರಮನೆ ಕಡೆ ಹೋಗಿ "ಬ್ರೆಡ್, ಬ್ರೆಡ್, ಬ್ರೆಡ್" ಎಂದು ಹಾಹಾಕಾರ ಮಾಡುತ್ತಿದ್ದರು. ಆಗ Louis XIV ನ ಹೆಂಡತಿ ಅವರನ್ನು ನೋಡಿ ಯಾರು ಎಂದು ರಾಜನ್ನು ಕೇಳುತ್ತಾಳೆ. ಆಗ ರಾಜನ್ನು ಹಸಿವಿನಿಂದ ನರಳಿಕೊಂಡು ಬಂದಿದ್ದಾರೆ ಎಂದು ರಾಜನು ಹೇಳುತ್ತಾನೆ. ಆಗ 'ರಾಣಿಯು ಅವರಿಗೆ ಬ್ರೆಡ್ ಏಕೆ ಕೊಡುತ್ತೀರಾ ? ಕೇಕ್ ಕೊಟ್ಟುಬಿಡಿ' ಎಂದು ಹೇಳುತ್ತಾಳೆ.

**ಶ್ರೀ ವೈ.ಎ. ನಾರಾಯಣಸ್ವಾಮಿ :–** ಅವರ ಹೆಂಡತಿ ಹೆಸರೇನು?

**ಶ್ರೀ ಡಿ.ಎಸ್. ವೀರಯ್ಯ:–** ಅದನ್ನು ತಾವು ಚರಿತ್ರೆ ಓದಿ ತಿಳಿದುಕೊಳ್ಳಿ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ Marie Antoinette ಎಂದು ರಾಣಿಯ ಹೆಸರು.

**ಉಪಸಭಾಪತಿಯವರು:–** ಮಾನ್ಯ ಸದಸ್ಯರು ಸಾಮಾಜಿಕ ನ್ಯಾಯದ ಬಗ್ಗೆ ಹೇಳುತ್ತಿದ್ದಾರೆ.

**ಶ್ರೀ ಡಿ.ಎಸ್. ವೀರಯ್ಯ:–** ಆಗ ಅವಳು ರೊಟ್ಟಿ ಏಕೆ ಕೇಕ್ ಕೊಡಿ ಎಂದು ಹೇಳುತ್ತಾಳೆ.

**ಶ್ರೀ ಎಂ.ಸಿ. ನಾಣಯ್ಯ :–** ಮಾನ್ಯ ಸಭಾಪತಿಯವರೇ, ಆಕೆ Louis XIV ನ ಹೆಂಡತಿ ಅಲ್ಲ, Louis XVI ನ ಹೆಂಡತಿ . ಫ್ರೆಂಚ್ ಕ್ರಾಂತಿಯ ಸಂದರ್ಭದಲ್ಲಿ ಅಲ್ಲಿನ ಜನರನ್ನು ಎತ್ತಿ ಕಟ್ಟಿರುವುದರಲ್ಲಿ ಇಬ್ಬರು ಪ್ರಭಾವಿ ಬರಹಗಾರರು ಎಂದರೆ ವಾಟರ್ ಮತ್ತು ರೂಸೋ. ಅವರ ಬರವಣಿಗೆ ಇಡೀ ಫ್ರಾನ್ಸ್‌ನ ಜನರನ್ನು ಎತ್ತಿ ಕಟ್ಟಿತು. ಆ ಸಂದರ್ಭದಲ್ಲಿ ತಿನ್ನಲು ಇಲ್ಲದೇ ಇರುವ ಸಂದರ್ಭದಲ್ಲಿ ನಡೆಯಿತು. ಅಲ್ಲದೇ Louis XVI ಮಜಾಮಾಡಿ

ಕೊಂಡು ಹೋಗುವ ಮನುಷ್ಯ. ಅವನ ಹೆಂಡತಿ Marie Antoinette. My good husband, what's all this ? "people are coming here" ಎಂದು ಹೇಳುತ್ತಾನೆ. "They are asking for bread". ಆಗ ಅವಳು ಹೇಳುತ್ತಾಳೆ. "Oh, they are asking for that dirty thing ! Ask them to go and eat cake". ಆ ಸಂದರ್ಭದಲ್ಲಿ ಅವರು ಮನೆಗೆ ನುಗ್ಗಲಿಲ್ಲ. ಮೊದಲನೆಯ ಚಾರ್ಲ್ಸ್ ಬ್ರಿಟಿಷರನ್ನು behead ಮಾಡಿದರು. ಪ್ರತಿನಿಧಿಸುತ್ತಾನೆ. Louis XVI ಅಧಿಕಾರವನ್ನು ಕಳೆದುಕೊಳ್ಳುತ್ತಾನೆ. ಅಲ್ಲಿ ಪ್ರಚೋದನೆ ವಾಟರ್ ಮತ್ತು ರೂಸೋ ಮಾಡಿರುವಂತಹ ಬರಹಗಾರರು ನಮ್ಮ ದೊಡ್ಡರಂಗೇಗೌಡರಂತಹ ಬರಹಗಾರರು. ಮಾನ್ಯ ದೊಡ್ಡರಂಗೇಗೌಡರಂತಹ ಬರಹಗಾರರು ಪ್ರಚೋದನೆ ಮಾಡುವಂತಹ ಕಾಲ ಬಂದಿದೆ, ಮಾಡಲಿ.

**ಶ್ರೀ ಡಿ.ಎಸ್. ವೀರಯ್ಯ:-** ಮಾನ್ಯ ನಾಣಯ್ಯನವರು ಬಹಳ ಚೆನ್ನಾಗಿ ವಿವರಣೆ ಕೊಟ್ಟಿರುವುದರಿಂದ ಅವರನ್ನು ನಾನು ಅಭಿನಂದಿಸುತ್ತೇನೆ. ಹೀಗೆ ಒಂದು ಸಮಾಜ ರೊಟ್ಟಿಗೆ ಹಾಹಾಕಾರ ಮಾಡಿದರೆ ಇನ್ನೊಂದು ಸಮಾಜ ಕೇಕ್ ಕೊಡುವಂತಹ ಪರಿಸ್ಥಿತಿ ನಿರ್ಮಾಣ ಆಗಬಾರದು. ಅಂದರೆ ಅವರಿಗೆ ಕೇಕ್ ಬಗ್ಗೆ ಗೊತ್ತಿಲ್ಲ, ರೊಟ್ಟಿ ಬಗ್ಗೆ ಮಾತ್ರ ಗೊತ್ತಿರುವುದು. ಆ ರೀತಿ ಸಮಾಜ ನಿರ್ಮಾಣವಾದರೆ ನಾವೆಲ್ಲರೂ ಹೊಣೆಗಾರರಾಗುತ್ತೇವೆ. ಆ ದೃಷ್ಟಿಯಿಂದ ಅಂಬೇಡ್ಕರ್‌ರವರು **"ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಇಲ್ಲದೇ ಇರುವ ರಾಜಕೀಯ ಸಮಾನತೆ ಅರ್ಥ ಇಲ್ಲದೇ ಇರುವಂತಹದ್ದು"** ಎಂದು ಹೇಳಿದ್ದಾರೆ. ಸಂವಿಧಾನವನ್ನು ರಚನೆ ಮಾಡಿ ಸ್ವೀಕರಿಸಿದ್ದೇವೆ, ಆದರೆ ಆ ಸಂವಿಧಾನ ನಿರೀಕ್ಷಿತ ಫಲ ಬಿಡದೇ ಇದ್ದರೆ ಅದು ಸಂವಿಧಾನದ ತಪ್ಪಲ್ಲ, ಆದರೆ ಅದನ್ನು ನಡೆಸಿಕೊಂಡು ಬಂದ ಆಡಳಿತ ಅಥವಾ ವ್ಯವಸ್ಥೆ ಎಂಬ ಮಾತನ್ನೂ ಅಂಬೇಡ್ಕರ್‌ರವರು ಹೇಳಿದ್ದಾರೆ. ಅವೆಲ್ಲವನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಆರ್ಥಿಕ ವ್ಯವಸ್ಥೆಯ ಸುಧಾರಣೆ ತರುವಲ್ಲಿ ಮಾನ್ಯ ಯಡಿಯೂರಪ್ಪನವರು ಅರ್ಥ ಸಚಿವರಾಗಿ ಅರ್ಥಪೂರ್ಣ ಬಜೆಟ್ ಕೊಟ್ಟಿದ್ದಾರೆ. ಅದನ್ನು ಎರಡು ಭಾಗಗಳಾಗಿ ಮಾಡಿ ಕೃಷಿಗೆ ಪ್ರತ್ಯೇಕ ಬಜೆಟ್ ಅನ್ನು ಕೊಟ್ಟಿದ್ದಾರೆ. ನಾನು ಎರಡೂ ಬಜೆಟ್‌ಗಳನ್ನು ಸ್ವಾಗತಿಸುತ್ತೇನೆ.

ಇವೆರಡೂ ಬಜೆಟ್‌ಗಳು ಅನುಷ್ಠಾನವಾಗಬೇಕಾಗಿದ್ದು, ಇದನ್ನು ಮಾಡುವ ಮತ್ತು ಮಾಡಿಸುವ ಕೆಲಸ ಎರಡೂ ಪಕ್ಷಗಳಿಂದ ಆಗಬೇಕಾಗುತ್ತದೆ. ಆ ಕೆಲಸವನ್ನು ನಾವೆಲ್ಲರೂ ಮಾಡಿ ಒಂದು ಅರ್ಥ ತುಂಬೋಣ ಮತ್ತು ಸಮಾಜವನ್ನು ಮೇಲೆತ್ತುವ ಕೆಲಸ ಈ ರೀತಿಯ ಬಜೆಟ್‌ನಿಂದ ಆಗಲಿ ಎಂದು ಹಾರೈಸಿ, ಈ ಸಂಪೂರ್ಣ ಬಜೆಟ್ ಅನ್ನು ನಾನು ಒಪ್ಪಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಉಪಸಭಾಪತಿಯವರು:–** ಪ್ರೊ: ಕೃಷ್ಣಭಟ್‌ರವರು ಮಾತನಾಡಿ.

**ಶ್ರೀ ಅಲ್ಲಮ ಪ್ರಭುಪಾಟೀಲ್:–** ಮಾನ್ಯ ಸಭಾಪತಿಯವರೇ, ಅಜೆಂಡದಲ್ಲಿ ಇರುವಂತೆ ಹೈದರಾಬಾದ್–ಕರ್ನಾಟಕದ ವಿಷಯ ತೆಗೆದು ಕೊಳ್ಳಬೇಕಾಗಿತ್ತು. ಬಹಳ ಪ್ರಾಮುಖ್ಯತೆ ಇದೆ.

**ಉಪಸಭಾಪತಿಯವರು:–** ನಾನು ಅವರನ್ನು ಕರೆದಿದ್ದೇನೆ . ಅವರು ಮಾತನಾಡಲಿ.

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)

**ಪ್ರೊ: ಪಿ.ವಿ. ಕೃಷ್ಣಭಟ್ಟ ನಾಮನಿರ್ದೇಶಿತರು:–** ಮಾನ್ಯ ಸಭಾಪತಿಯವರೇ, ಮೊಟ್ಟಮೊದಲನೆಯದಾಗಿ ಈ ವರ್ಷ ಬಜೆಟ್ ಬಗ್ಗೆ ವಿಸ್ತಾರ ಮತ್ತು ಆರೋಗ್ಯಕರವಾಗಿ ಚರ್ಚೆ ನಡೆಯುತ್ತಿರುವುದಕ್ಕೆ ನಾನು ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಕಳೆದ ವರ್ಷ ಬಜೆಟ್ ಕುರಿತು ಚರ್ಚೆ ನಡೆಯಲಿಲ್ಲ. ಎಲ್ಲವನ್ನೂ ಸಾರಾಸಗಟಾಗಿ ಮಂಜೂರು ಮಾಡುವ ಕ್ರಮ ಕೈಗೊಳ್ಳಬೇಕಾಗಿ ಬಂತು. ಈಗ ವಿಸ್ತಾರವಾಗಿ ಚರ್ಚೆಯಾಗುತ್ತಿದೆ ಮತ್ತು ಎಲ್ಲರೂ ಪ್ರತಿಯೊಂದು ವಿಷಯಗಳ ಬಗ್ಗೆ ಚರ್ಚೆ ಮಾಡಿ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಇದಕ್ಕೆ ತಾವು ಸಭಾಪತಿಯವರಾಗಿ ಆಯ್ಕೆಯಾಗಿರುವುದಕ್ಕೆ ತಮ್ಮ ಸ್ಥಾನ ಬಲದ ಪರಿಣಾಮವೂ ಇರಬಹುದೆಂದು ನಾನು ಭಾವಿಸುತ್ತೇನೆ. ತಮ್ಮ ನೇತೃತ್ವದಲ್ಲಿ ಈ ಆರೊಗ್ಯಕರ ಚರ್ಚೆಯಾಗುತ್ತಿರುವುದಕ್ಕೆ ನಾನು ತಮಗೆ ಮೊದಲನೆಯದಾಗಿ ಅಭಿನಂದಿಸುತ್ತೇನೆ.

ಇನ್ನು ಮಾನ್ಯ ಮುಖ್ಯಮಂತ್ರಿಯವರು ಈ ಬಾರಿ ಕೃಷಿಗೆ ಒಂದು ಪ್ರತ್ಯೇಕ ಬಜೆಟ್ ಅನ್ನು ಮಂಡಿಸಿ ಹೊಸ ಇತಿಹಾಸವನ್ನು ಪ್ರಾರಂಭ ಮಾಡಿದ್ದಾರೆ. ಅದನ್ನು ಟೀಕೆ ಮಾಡಿದವರೂ ಇದ್ದಾರೆ. ಸಾಮಾನ್ಯ ಬಜೆಟ್‌ನಲ್ಲಿ ಬರುವುದನ್ನು ಒಂದು ಜಾಗದಲ್ಲಿ ಶೇಖರಣೆ ಮಾಡಿ ಹೇಳಿದ್ದಾರೆ, ಅದರಲ್ಲಿ ವಿಶೇಷ ಇಲ್ಲ ಎಂದು ಹೇಳಿದವರೂ ಇದ್ದಾರೆ. ಆದರೆ ವಿಶೇಷ ಇದೆ ಅಥವಾ ಇಲ್ಲ ಎನ್ನವುದಕ್ಕಿಂತ ಮುಖ್ಯವಾಗಿ ಕೃಷಿಗೆ ಒಂದು ಪ್ರತ್ಯೇಕ ಬಜೆಟ್ ಅನ್ನು ಮಂಡಿಸಬೇಕು ಎನ್ನುವ ಯೋಚನೆಯೇ ಒಂದು ವಿಶೇಷವಾಗಿದೆ. ಈ ವರ್ಷದ ಬಜೆಟ್‌ನಲ್ಲಿ ಕೃಷಿಗೆ, ರೈತನಿಗೆ, ಅನ್ನದಾತನಿಗೆ ವಿಶೇಷವಾಗಿರುವ ಗಮನವನ್ನು ಹರಿಸಲಾಗಿದೆ ಎನ್ನುವ ಸಂದೇಶವನ್ನು ಈ ಮೂಲಕ ರವಾನಿಸಿದ್ದಾರೆ. ಸ್ವಾತಂತ್ರ್ಯ ಬಂದ 60 ವರ್ಷಗಳಲ್ಲಿ ಕೃಷಿಗೆ ಸಿಗಬೇಕಾದ ಪ್ರಾಧಾನ್ಯತೆ ಸಿಕ್ಕಿಲ್ಲ. ಕೇಂದ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಸ್ವಲ್ಪ ಕೈಗಾರಿಕೆಯ ಬೆಳವಣಿಗೆ ಮೋಹದಲ್ಲಿ ಸಿಲುಕಿದ್ದರಿಂದ, ಕೃಷಿ ಸ್ವಲ್ಪ ನಿಧಾನವಾಗಿ ಅವಗಣನೆಗೆ ತುತ್ತಾಗುತ್ತಾ ಬಂದಿದೆ. ಮಾನ್ಯ ಯಡಿಯೂರಪ್ಪನವರು ಕೃಷಿಗೆ ಪ್ರಮುಖವಾದ ಸ್ಥಾನ ನೀಡಿ, ಕೇಂದ್ರ ಸ್ಥಾನಕ್ಕೆ ಎಳೆದುಕೊಂಡು ಬಂದಿದ್ದಾರೆಂಬ ಸಂದೇಶವನ್ನು ಈ ಮೂಲಕ ನೀಡುತ್ತಿದ್ದಾರೆ. ಇದರಲ್ಲಿ ವಿಶೇಷ ಏನು, ಯಾರು ಬೇಕಾದರೂ ಮಾಡಬಹುದಾಗಿತ್ತು ಎಂದು ಟೀಕೆ ಮಾಡಬಹುದು. ಈ ಸಂದರ್ಭದಲ್ಲಿ ನನಗೆ ಒಂದು ಘಟನೆ ನೆನಪಿಗೆ ಬರುತ್ತಿದೆ. ಕೊಲಂಬಸ್ ಭಾರತವನ್ನು ಹುಡುಕಲು ಸಮುದ್ರ ಮಾರ್ಗವಾಗಿ ಹೊರಟು ಅಮೆರಿಕಾಕ್ಕೆ ತಲುಪಿದ. ಆನಂತರ ಆತನ ರಾಷ್ಟ್ರಕ್ಕೆ ವಾಪಸ್ಸು ಹೋದಾಗ ಎಲ್ಲಾ ಕಡೆ ಆತನಿಗೆ ಸನ್ಮಾನ ಮಾಡಿದರು. ಅಲ್ಲಿನ ಅನೇಕರು ಬಹಳ ಅದ್ಭುತವಾದ ಸಾಧನೆ ಮಾಡಿ, ಅಮೇರಿಕಾವನ್ನು ಆವಿಷ್ಕಾರ ಮಾಡಿದ ಎಂದು ಹೇಳಿದರು. ಆದರೆ ಕೆಲವರು ಇದರಲ್ಲಿ ಕೊಲಂಬಸ್ ವಿಶೇಷ ಏನು? ಅವನು ಹಡಗಿನಲ್ಲಿ ಭಾರತಕ್ಕೆ ಎಂದು ಹೊರಟು ಇನ್ನೆಲ್ಲಿಗೋ ತಲುಪಿದ, ಅವನು ಮಾಡಿದ್ದೂ ಏನು ಇಲ್ಲ ಎಂದು ಟೀಕೆ ಮಾಡಿದರು. ಅವನ ಬಗ್ಗೆ ಕ್ಲಬ್‌ನಲ್ಲಿ ಚರ್ಚೆ ನಡೆಯುತ್ತಿದ್ದಾಗ ಕೊಲಂಬಸ್ ಸಹ ಅಲ್ಲಿ ಇದ್ದ. ಸನ್ಮಾನ್ಯ ಸಭಾಪತಿಯವರೇ ಆತನು ಅದಕ್ಕೆ ಏನೂ ಉತ್ತರವನ್ನು ಕೊಡಲಿಲ್ಲ ಸ್ವಲ್ಪ

ಹೊತ್ತಿನ ನಂತರ ಹಾಗೆಯೇ ಮಾತನಾಡುವಾಗ ಒಂದೆರೆಡು ಕೋಳಿ ಮೊಟ್ಟೆಗಳನ್ನು ತೆಗೆದುಕೊಂಡು ಬಂದು 'ಆ ಕೋಳಿ ಮೋಟ್ಟೆಗಳನ್ನು ನೇರವಾಗಿ ನಿಲ್ಲಿಸುವುದಕ್ಕೆ ನಿಮ್ಮಿಂದ ಸಾಧ್ಯವೆ ಎಂದು ಕೇಳಿದ ಎಲ್ಲರೂ ಕೋಳಿ ಮೊಟ್ಟೆಯನ್ನು ನೇರವಾಗಿ ನಿಲ್ಲಿಸುವುದಕ್ಕೆ ಪ್ರಯತ್ನಪಟ್ಟರು ಆದರೆ ಅದು ಉರಳಿ ಉರುಳಿ ಹೋಗುತಿತ್ತು ಆಗ ಕೋಲಂಬಸ್‌ನಿಗೆ ನೀನು ನಿಲ್ಲಿಸುತ್ತಿಯಾ? ಎಂದು ಪ್ರಶ್ನೆ ಮಾಡಿದರು ಕೋಲಂಬಸ್ ಆ ಮೊಟ್ಟೆಯನ್ನು ತಗೆದುಕೊಂಡು ಟೇಬಲ್ ಮೇಲೆ ಸ್ವಲ್ಪ ಕುಕ್ಕಿದ ಅದು ತಳದಲ್ಲಿ ಸ್ವಲ್ಪ ಚಪ್ಪಟೆಯಾಯಿತು. ಆನಂತರ ನಿಲ್ಲಿಸಿದಾಗ ಅದು ನೇರವಾಗಿ ನಿಂತುಕೊಂಡು ಉಳಿದವರು ಕೋಳಿಮೊಟ್ಟೆಯನ್ನು ಕೆಳಗೆ ಕುಕ್ಕಿ ನಿಲ್ಲಿಸಿದ್ದಿ' ಎಂದು ಆಕ್ಷೆಪಣೆ ಮಾಡಿದರು. ಆಗ ಕೋಲಂಬಸ್ ನೀವೂ ಹೀಗೆ ಮಾಡಿ ನೆರವಾಗಿ ನಿಲ್ಲಿಸಬಹುದಾಗಿತ್ತು ನಾನು ಬೇಡವೆಂದು ಹೇಳಲಿಲ್ಲ ಮೊಟ್ಟೆಯನ್ನು ಕುಕ್ಕದೇ ಹಾಗೇ ನೇರವಾಗಿ ನಿಲ್ಲಿಸಬೇಕೆನ್ನುವ ಷರತ್ತನ್ನು ನಾನು ಹಾಕಿರಲಿಲ್ಲ ನಾನು ಬೇಡವೆಂದು ಹೇಳಲಿಲ್ಲ ಮೊಟ್ಟೆಯನ್ನು ಕುಕ್ಕದೆ ಹಾಗೆ ನೇರವಾಗಿ ನಿಲ್ಲಿಸಬೇಕೆನ್ನುವ ಷರತ್ತನ್ನು ನಾನು ಮಾಡಿದೆ ನಿಮ್ಮ ಕೈಯಲ್ಲಿ ಆಗಲಿಲ್ಲ, ಎಂದು ಹೇಳಿದ ಮಾನ್ಯ ಯಡಿಯೂರಪ್ಪನವರು ಪ್ರಥಮ ಬಾರಿಗೆ ಕೃಷಿ ಆಯವ್ಯಯವನ್ನು ಮಂಡನೆ ಮಾಡುವಂತಹ ಕೆಲಸವನ್ನು ಮಾಡಿದರು. ಅವರಿಗಿಂತ ಮುಂಚೆ ಇದ್ದವರಿಗೆ ಇದು ಹೊಳೆದಿರಲಿಲ್ಲ ಮಾನ್ಯ ಯಡಿಯೂರಪ್ಪನವರನ್ನು ಬಹಳ ದೀರ್ಘಕಾಲದಿಂದ ಬಲ್ಲೆ. ಕೃಷಿ ಆಯವ್ಯಯ ಮಂಡನೆಯನ್ನು ಕೇವಲ ರಾಜಕೀಯ ತಂತ್ರಗಾರಿಕೆಯನ್ನಾಗಿ ಬಳಸಿಕೊಂಡಿಲ್ಲ ಎನ್ನುವುದರ ಬಗ್ಗೆ ನನಗೆ ನಂಬಿಕೆಯಿದೆ. ಏಕೆಂದರೆ ಹಲಾವಾರು ಸಂದರ್ಭಗಳಲ್ಲಿ ಅವರು ರೈತರ ಜೊತೆಯಲ್ಲಿ ಬೇರೆಯುತ್ತಿದ್ದ ರೀತಿ ಅವರ ಭಾವನೆಗಳಿಗೆ ಸ್ಪಂದಿಸುತ್ತಿದ್ದ ರೀತಿ ಮತ್ತು ಎಂತಹ ಸಮಸ್ಯೆ ಇದ್ದರೂ ಸಹ ಅದನ್ನು ಪಕ್ಕಕ್ಕೆ ಸರಿಸಿ ಹೋರಾಟಕ್ಕೆ ಇಳಿಯುತ್ತಿದ್ದ ವೈಖರಿ ಮುಂತಾದ ಹಲವಾರು ಘಟನೆಗಳು ಇವೇ ಅವುಗಳನ್ನು ಹೇಳುತ್ತಾ ಹೋದರೆ ಬಹಳ ಉದ್ದವಾಗುತ್ತದೆ. ಆದರೆ ಒಂದು ಘಟನೆಯನ್ನು ಮಾತ್ರ ನಾನು ಇಲ್ಲಿ ನೆನಪಿಸಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ. ಶಿವಮೊಗ್ಗ ಜಿಲ್ಲೆಯ 'ಸಾಬರಹಳ್ಳಿ' ಯಲ್ಲಿ ವಿಜಯ ದಶಮಿಯ ದಿನ ದೊಡ್ಡ

ಘರ್ಷಣೆಯಾಗಿ ಪೋಲಿಸರು ಲಾಟಿ ಚಾರ್ಜ್ ಮಾಡಿದ್ದರಿಂದ ರೈತರೆಲ್ಲ ಹೆದರಿ ಮನೆಯೊಳಗೆ ಸೇರಿಕೊಂಡಿದ್ದಾರೆ. ಅಲ್ಲಿ ಎಷ್ಟೋಂದು ಭಯಾನಕ ವಾತಾವರಣ ನಿರ್ಮಾಣವಾಗಿತ್ತು ಎಂದರೆ, ಹೆಂಗಸರು ಮನೆಯನ್ನು ಬಿಟ್ಟು ಬರುವುದಕ್ಕೆ ಹೆದರುತ್ತಿದ್ದರು. ಗಂಡಸರು ಊರು ಬಿಟ್ಟುಹೋಗಿದ್ದರು. ವಿಜಯದಶಮಿಯ ದಿವಸ ಮಧ್ಯಾಹ್ನದ ಹೊತ್ತಿಗೆ ಸುದ್ದಿ ಬಂತು ಆಗ ಮಾನ್ಯ ಯಡಿಯೂರಪ್ಪನವರು 'ರೈತರು ಎಷ್ಟೋಂದು ಸಂತ್ರಸ್ಥ ಸ್ಥಿತಿಯಲ್ಲಿದ್ದಾರೆ ನಾವು ಮನೆಯಲ್ಲಿ ಕುಳಿತುಕೊಂಡು ಹಬ್ಬ ಮಾಡುವುದು ಎಷ್ಟರ ಮಟ್ಟಿಗೆ ಸರಿ ನಾವೆಲ್ಲರೊ ಅಲ್ಲಿಗೆ ಹೋಗೋಣ' ಎಂದು ಹೇಳಿದರು. ಆಗ ಮಾನ್ಯ ಯಡಿಯೂರಪ್ಪನವರು, ನಾನು, ಮಾನ್ಯ ಶಂಕರಮೂರ್ತಿಯವರು ಮತ್ತು ಕೃಷ್ಣಮೂರ್ತಿಯವರು ನಾವೆಲ್ಲರೂ ಕಾರಿನಲ್ಲಿ ಅಲ್ಲಿಗೆ ಹೋದೆವು. ಎಲ್ಲರೂ ಭಯದಿಂದ ಮನೆಯೊಳಗೆ ಕುಳಿತುಬಿಟ್ಟಿದ್ದಾರೆ. ಗಂಡಸರೆಲ್ಲ ಮನೆ ಬಿಟ್ಟು ಹೊರಟು ಹೋಗಿದ್ದಾರೆ. ಆಗ ಮಧ್ಯದಲ್ಲಿ ನಿಂತು ಅವರು 'ನಾನು ಯಡಿಯೂರಪ್ಪ ಬಂದಿದ್ದೇನೆ ಯಾರೂ ಹೆದರಿಕೊಳ್ಳಬೇಡಿ, ಮನೆಯಿಂದ ಹೊರಗೆ ಬನ್ನಿ' ಎಂದು ಕರೆದರು ಆಗ ಇಡೀ ಊರಿನ ಜನರೆಲ್ಲ ಹೊರಗೆ ಬಂದರು ಆಗ ಮಾನ್ಯ ಯಡಿಯೂರಪ್ಪನವರು ಅವರಿಗೆ ಭರವಸೆ ಕೊಟ್ಟು ಅವರಲ್ಲಿ ಧೈರ್ಯವನ್ನು ತುಂಬಿ ಆಮೇಲೆ ಮನೆಗೆ ಬಂದು; ಈಗ ಹಬ್ಬ ಆಚರಣೆ ಮಾಡೋಣ, ಈಗ ನನ್ನ ಮನಸ್ಸಿಗೆ ಸಮಾಧಾನವಾಯಿತು ಎಂದು ಹೇಳಿದರು. ನಾನು ಈ ವಿಚಾರಣೆಯನ್ನು ಏತಕ್ಕಾಗಿ ಹೇಳುತ್ತಿದ್ದೇನೆ ಎಂದರೆ ಮಾನ್ಯ ಯಡಿಯೂರಪ್ಪನವರು ಕೃಷಿ ಆಯವ್ಯಯವನ್ನು ಮಂಡಿಸುವಂತಹ ಸಂದರ್ಭದಲ್ಲಿ ಅವರ ಉದ್ದಕ್ಕೂ ಬೆಳೆದುಕೊಂಡು ಬಂದಿರುವಂತಹ ರೈತರನ್ನು ಕುರಿತು ಅವರ ಕಳಕಳಿ ಈ ಆಯವ್ಯಯವಲ್ಲಿ ವ್ಯಕ್ತಗೊಂಡಿದೆ ಎನ್ನುವ ಮಾತನ್ನು ನಾನು ಬೊಟ್ಟು ಮಾಡಿ ತೋರಿಸುವುದಕ್ಕೆ ಪ್ರಯತ್ನಪಡುಸುತ್ತಿದ್ದೇನೆ. ಏಕೆಂದರೆ ಅನೇಕ ಸಂದರ್ಭಗಳಲ್ಲಿ ರಾಜಕೀಯ ಮಟ್ಟದಲ್ಲಿ ಸರಿಯೋ ತಪ್ಪೋ ಎನ್ನುವಂತಹ ವಿಶ್ಲೇಷಣೆಗಳು ನಡೆಯುತ್ತಿವೆ ಆದರೆ ಇದರ ಹಿಂದೆ ಒಂದು ಭಾವನಾತ್ಮಕವಾದ ಅಂಶವೂ ಇದೆ.

ಸನ್ಮಾನ್ಯ ಸಭಾಪತಿಯವರೇ, ಈ ವರ್ಷಕ್ಕೊಂದು ವಿಶೇಷವಾಗಿರುವಂತಹ ಮಹತ್ವವಿದೆ, ಈ ಸದನದಲ್ಲಿ ಆಯವ್ಯಯವನ್ನು ಕುರಿತು ತಜ್ಞ ವಿಶ್ಲೇಷಣೆ ಮಾಡುವಂತಹವರು ಇದ್ದಾರೆ. ಆದ್ದರಿಂದ ಆಯವ್ಯಯದ ಅಂಕಿಅಂಶಗಳ ಗೋಜಿಗೆ ಹೋಗುವುದಿಲ್ಲ. ನಾನು ಕೆಲವು ಸಾಮಾನ್ಯ ಚಿತ್ರಣಗಳ ಬಗ್ಗೆ ಮಾತ್ರ ಮಾತನಾಡುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಮಹಾತ್ಮ ಗಾಂಧಿಯವರು 'ಸರ್ವೋದಯ' ಪುಸ್ತಕವನ್ನು ಬರೆದು ಈ ವರ್ಷಕ್ಕೆ ನೂರು ವರ್ಷಗಳು ಕಳೆಯಿತು ಕೆಲವು ಕಡೆಗಳಲ್ಲಿ ನೂರು ವರ್ಷ ಕಳೆದ ಸಮಾರಂಭವನ್ನು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಆ ರೀತಿಯ ವಿಶೇಷವಾಗಿರುವಂತಹ ಕಾರ್ಯಕ್ರಮಗಳೇನೂ ನಡೆಯಲಿಲ್ಲ. ಮಹಾತ್ಮ ಗಾಂಧೀಯವರು ಪ್ರಾರಂಭದಿಂದಲೂ ಕೃಷಿ ಮತ್ತು ಸಣ್ಣ ಕೈಗಾರಿಕೆಗಳಿಗೆ ನಾವು ವಿಶೇಷವಾಗಿರುವಂತಹ ಒತ್ತು ಕೊಡಬೇಕು ಎನ್ನುವ ಮಾತನ್ನು ಹೇಳುತ್ತಿದ್ದರು. ದೇಶದಲ್ಲಿ ಕೈಗಾರೀಕರಣ ಎನ್ನುವುದು ಆಗಬೇಕು. ಕೈಗಾರೀಕರಣ ಎನ್ನುವುದು ಬಹಳ ಮುಖ್ಯವಾಗಿರುವಂತಹ ಅಂಶ. "Industrialise or perish" ಎನ್ನುವಂತಹ ಮಾತನ್ನು ವಿಶ್ವೇಶ್ವರಯ್ಯನವರು ಹೇಳಿದಾಗ, ಮಹಾತ್ಮ ಗಾಂಧಿಯವರು ''Industrialise and perish" ಎಂದು ಹೇಳಿದ್ದರು. ಇಬ್ಬರೂ ಹೇಳಿದ ಮಾತುಗಳು ನಿಜ, ಕೈಗಾರೀಕರಣದ ಅಗತ್ಯ ಇದೆ ಎಂದು ಸರ್ ಎಂ. ವಿಶ್ವೇಶರಯ್ಯನವರು ಹೇಳಿದರು. ಆಗ ಅದರ ಅಗತ್ಯತೆ ಇತ್ತು ಆದರೆ ಮಾಹಾತ್ಮ ಗಾಂಧಿಯವರು ಅದರ ಇನ್ನೊಂದು ಮುಖವನ್ನು ತೋರಿಸಿದರು. ಕೇವಲ ಕೈಗಾರೀಕರಣ ಸಾಕಾಗುವುದಿಲ್ಲ. ನಮ್ಮ ಕೃಷಿ ಕ್ಷೇತ್ರವನ್ನು ಸಹ ಗಟ್ಟಿ ಮಾಡಬೇಕು ಎನ್ನುವ ಅಂಶ ಅವರ ಮಾತಿನಲ್ಲಿ ಅಡಕವಾಗಿತ್ತು. ಆಗ ಮಹಾತ್ಮ ಗಾಂಧೀಯವರು ಹೇಳಿದಂತಹ ಮಾತುಗಳು ಇವತ್ತಿನ ಗಾಂಧೀಗಳಿಗೆ ಎಷ್ಟರ ಮಟ್ಟಿಗೆ ಗೊತ್ತಿದೆ ಮತ್ತು ಎಷ್ಟರ ಮಟ್ಟಿಗೆ ಆ ಮಾತುಗಳಲ್ಲಿ ನಂಬಿಕೆ ಇದೆ ಎನ್ನುವುದು ನನಗೆ ಗೊತ್ತಿಲ್ಲ ಬಹುಶ: ನಕಲಿ ಗಾಂಧಿಗಳು ಜಾಸ್ತಿ ಆಗಿರುವ ಕಾರಣದ ಹಿನ್ನಲೆಯಲ್ಲಿ ಅಸಲಿ ಗಾಂಧೀಯವರನ್ನು ಇವತ್ತು ಮರೆತು ಬಿಟ್ಟಿದ್ದೇವೆ ಎಂದು ನನಗನ್ನಿಸುತ್ತಿದೆ.

ಸನ್ಮಾನ್ಯ ಸಭಾಪತಿಯವರೇ ಮಾನ್ಯ ಯಡಿಯೂರಪ್ಪನವರು ಮಂಡಿಸಿರುವಂತಹ ಕೃಷಿ ಆಯವ್ಯಯದಿಂದ ಮಹಾತ್ಮ ಗಾಂಧೀಯವರು ಚಿಂತನೆಗೆ ಮನ್ನಣೆ ದೊರಕಿದಂತೆ ಆಗಿದೆ ಎಂದು ನಾನು ಭಾವಿಸುತ್ತೇನೆ ಹಿಂದೆ ಮಾನ್ಯ ನಾಣಯ್ಯನವರು ಆರ್.ಎಸ್.ಎಸ್.ನ್ನು ಟೀಕಿಸುವಂತಹ ಸಂದರ್ಭದಲ್ಲಿ Nathuram Godse ಬಗ್ಗೆ ಉಲ್ಲೇಖ ಮಾಡಿದರಂತೆ. ಆ ಸಂದರ್ಭದಲ್ಲಿ ನಾನು ಸದನದಲ್ಲಿ ಹಾಜರಿರಲಿಲ್ಲ. ನಾನು ಆರ್.ಎಸ್.ಎಸ್. ಹಿನ್ನಲೆಯಿಂದ ಬಂದವನು. ನಾವು ಆರ್.ಎಸ್.ಎಸ್.ನವರು ಪ್ರತಿದಿನ ಪಾತ್ರಃಸ್ಮರಣೆಯಲ್ಲಿ ಗಾಂಧೀಜಿಯವರ ಸ್ಮರಣೆಯನ್ನು ಮಾಡುತ್ತೇವೆ. ಕಾಂಗ್ರೆಸ್‌ನವರು ಮಾಡುತ್ತಾರೋ ಇಲ್ಲವೂ ನನಗೆ ಗೊತ್ತಿಲ್ಲ.

**ಶ್ರೀ ಗೋ. ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ. ಕಾಂಗ್ರೆಸ್‌ನವರು ಬೇರೆ ಗಾಂಧೀಜಿಯವರು ಸ್ಮರಣೆಯನ್ನು ಮಾಡುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ನಾವು ಮಹಾತ್ಮ ಗಾಂಧೀಯವರ ಸ್ಮರಣೆ ಮಾಡುವುದು ಅಷ್ಟೆ ಅಲ್ಲ, ಅವರ ಹೆಸರಿನಲ್ಲಿ ಹಲವಾರು ಸಂಸ್ಥೆಗಳನ್ನು ಪ್ರಾರಂಭ ಮಾಡಿದ್ದೆವೆ. ಆ ಎಲ್ಲ ಸಂಸ್ಥೆಗಳಿಗೆ ಬಾಪೂಜಿಯವರ ಹೆಸರನ್ನು ಇಟ್ಟು ಸಂಸ್ಥೆಗಳನ್ನು ಪ್ರಾರಂಭ ಮಾಡಿದ್ದೇವೆ. ಬೆಳಗ್ಗೆ ಎದ್ದ ಕೂಡಲೇ ರಾಷ್ಟ್ರೀಯ ನಾಯಕರಾದ ಮಹಾತ್ಮ ಗಾಂಧೀಜಿಯವರ ಪೋಟೋಗೆ ನಮಸ್ಕಾರ ಮಾಡಿ ದಿನಚರಿಯನ್ನು ಪ್ರಾರಂಭ ಮಾಡುತ್ತಿದ್ದೇನೆ. ಮಾನ್ಯ ಕೃಷ್ಣಭಟ್‌ರವರು ಬಹಳ ಮಾತನಾಡುತ್ತಿದ್ದಾರೆ,

**ಪ್ರೋ: ಪಿ.ವಿ. ಕೃಷ್ಣಭಟ್ಟ:–** ಸನ್ಮಾನ್ಯ ಸಭಾಪತಿಯವರೇ, ನಾನು ಬಹಳ ಮಾತನಾಡುತ್ತಿಲ್ಲ. ಉಲ್ಲೇಖ ಬಂದ ಹಿನ್ನಲೆಯಲ್ಲಿ ಈ ಮಾತುಗಳನ್ನು ಹೇಳಿತ್ತಿದ್ದೇನೆ.

**ಶ್ರೀ ಗೋ. ಮಧುಸೂದನ್(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ‘panel discussion’ ಗೆ ಹೋದಾಗ ನಮ್ಮ ಕರ್ನಾಟಕದ ಕಾಂಗ್ರೆಸ್ ಪಕ್ಷದ ಬಹಳ ದೊಡ್ಡನಾಯಕರು ಮೈಸೂರಿನ ಸಂಸತ್ ಸದಸ್ಯರು ಮತ್ತು ಈ ಮನೆಯಲ್ಲಿ ಅವರನ್ನು ಸಚಿವರಾಗಿ ಬಹಳಷ್ಟು

ಬಾರಿ ನೋಡಿದ್ದೆವೆ ಅವರನ್ನು ನಾನು 'ನಾವು ಈ ಬಜೆಟ್‌ನ ಹಿಂದೆ ಮಾನ್ಯ ಮನಮೋಹನ ಸಿಂಗ್ ಅವರನ್ನು ಮತ್ತು ಅವರ ಚಿಂತನೆಗಳನ್ನು ಕೊಂಡಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆಯೇ? ಮಾನ್ಯ ಮನಮೋಹನ್ ಸಿಂಗ್‌ರವರಿಗೆ ಇಲ್ಲಿ ಯಾವುದೇ ರೀತಿಯಾದ ಬೆಲೆಯೇ ಸಿಗುತ್ತಿಲ್ಲ ಎನ್ನುವಂತಹ ಮಾತನ್ನು ಕೇಳಿದಾಗ ಅವರು ಬಹಳ ದುಃಖದಿಂದ ಮಾನ್ಯ ಮನಮೋಹನ್ ಸಿಂಗ್‌ರನ್ನು ಬಿಡಿ ಶೀಮತಿ ಇಂದಿರಾ ಗಾಂಧಿಯರನ್ನೇ ನಾವು ಮೆರತು ಬಿಟ್ಟಿದ್ದೇವೆ. ಅವರ ಅಪ್ಪ ಯಾರು ಎನ್ನುವುದೇ ನಮಗೆ ಗೊತ್ತಿಲ್ಲ ನಾವು ಅವರನ್ನೆ ಮರೆತಿರುವಾಗ ನೀವು ಮನಮೋಹನ್ ಸಿಂಗ್ ಅವರ ಬಗ್ಗೆ ಮಾತನಾಡುತ್ತಿದ್ದೀರಿ' ಎನ್ನುವಂತಹ ಮಾತನ್ನು ಇತ್ತೀಚಿಗೆ ಅವರು ಹೇಳಿದ್ದಾರೆ.

**ಶ್ರೀಮತಿ ಮೋಟಮ್ಮ (ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೃಷ್ಣಭಟ್‌ರವರು ಹಿರಿಯರು ಅವರು ಒಂದೆರೆಡು ನಿಮಿಷ ಯೀಲ್ಡ್ ಆದರೆ. ನಾನೊಂದು ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಒಂದೆರಡು ವರ್ಷಗಳ ಹಿಂದೆ ಪ್ರವೀಣ್ ತೊಗಾಡಿಯಾರರು ನಮಗೆ ಗಾಂಧಿವಾದದಲ್ಲಿ ನಂಬಿಕೆ ಇಲ್ಲ. ನಮಗೆ ಹಿಂದುತ್ವದಲ್ಲಿ ಮಾತ್ರ ನಂಬಿಕೆ ಇದೆ. ಹಿಂದುತ್ವದಲ್ಲಿಯೇ ನಾವು ಈ ರಾಷ್ಟ್ರವನ್ನು ಆಳುವುದಕ್ಕೆ ಮುಂದಾಗುತ್ತೇವೆ; ಎನ್ನುವಂತಹ ಮಾತನ್ನು ಹೇಳಿದ್ದಾರೆ ಪ್ರೋ: ಕೃಷ್ಣಭಟ್ಟ ರವರು ಪ್ರತಿದಿನ ಬೆಳಿಗ್ಗೆ ಮಾಹಾತ್ಮ ಗಾಂಧಿಯವರು ಸ್ಮರಣೆ ಮಾಡುತ್ತೇ ವೆಂದು ಹೇಳಿದ ಹಿನ್ನಲೆಯಲ್ಲಿ ನಾನು ಈ ಮಾತನ್ನು ಹೇಳಿದೆ. ಇಲ್ಲಿ ಮಾನ್ಯ ಕೃಷ್ಣಭಟ್‌ರವರು ಹೇಳುತ್ತಿರುವುದು ಸರಿಯೋ ಅಥವಾ ಮಾನ್ಯ ಪ್ರವೀಣ ತೊಗಾಡಿಯಾರವರು ಹೇಳುತ್ತಿರುವುದು ಸರಿಯೋ ಎನ್ನುವುದು ನಮ್ಮ ಜಿಜ್ಞಾಸೆಯಾಗಿದೆ.

**ಪ್ರೊ: ಕೃಷ್ಣಭಟ್ಟ:–** ಸನ್ಮಾನ್ಯ ಸಭಾಪತಿಯವರೆ ಮಾನ್ಯ ವಿರೋಧ ಪಕ್ಷದ ನಾಯಕರ ಜೊತೆಗೆ ನಾನು ಈ ಕುರಿತು ಚರ್ಚೆ ಮಾಡಬಲ್ಲೆ ಆದರೆ ಗಾಂಧೀಜಿಯವರಿಗೆ ಹಿಂದುತ್ವದಲ್ಲಿ ಬಹಳ ನಂಬಿಕೆಯಿತ್ತು ಅವರೇ ನಾನೊಬ್ಬ ಹಿಂದು ಎಂದು ಬಹಳ ಆಭಿಮಾನದಿಂದ ಹೇಳಿಕೊಳ್ಳುತ್ತಿದ್ದರು

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ ಮಹಾತ್ಮ ಗಾಂಧೀಜಿಯವರು ಜಾತ್ಯಾತೀತವಾದಕ್ಕೆ ಅಂಟಿಕೊಂಡಿದ್ದರು.

**ಪ್ರೊ: ಕೃಷ್ಣಭಟ್ಟ:–** ಸನ್ಮಾನ್ಯ ಸಭಾಪತಿಯವರೇ ಗಾಂಧೀಜಿಯವರು ಯಾವ ಹಿಂದುತ್ವದ ಬಗ್ಗೆ ಹೇಳುತ್ತಿದ್ದಾರೆ ನಾವೂ ಅದೇ ಹಿಂದುತ್ವದ ಬಗ್ಗೆ ಹೇಳುವುದು. ಅದರ ಬಗ್ಗೆ ಅವರು ಚಿಂತೆ ಮಾಡುವುದು ಬೇಡ ಕೃಷಿ ಭಾರತದ ಬೆನ್ನೆಲಬು ಎನ್ನುವಂತಹ ಮಾತನ್ನು ನಾವು ಅರ್ಥಶಾಸ್ತ್ರದ ಪುಸ್ತಕಗಳಲ್ಲಿ ಓದಿದ್ದೇವೆ. ಇದು ಒಂದು ರೀತಿಯ ಬಾಯಿ ಉಪಚಾರದ ಮಾತಾಗಿದೆ. ಕರ್ನಾಟಕ ರಾಜ್ಯದಲ್ಲಿ ಈ ವರ್ಷದ ಮಟ್ಟಿಗೆ ಕೃಷಿಗೆ ನಿಜವಾದ ರೀತಿಯಲ್ಲಿ ಪ್ರಾಮುಖ್ಯತೆಯನ್ನು ನೀಡುವಂತಹ ಪ್ರಯತ್ನವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆಂದು ಹೇಳುವುದಕ್ಕೆ ಸಂತಸ ಪಡುತ್ತೇನೆ. ಅವರು ಯಾವ ಯಾವ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ಎನ್ನುವುದು ನಮಗೆ ಗೊತ್ತಾಗಿದೆ ಇತ್ತೀಚಿನ ವರ್ಷಗಳಲ್ಲಿ ಕೃಷಿ ಕ್ಷೇತ್ರ ಬಹಳ ಗಂಭೀರವಾಗಿರುವಂತಹ ಸಮಸ್ಯೆಗಳನ್ನು ಎದುರಿಸುತ್ತಿದೆ, ಕಳೆದ 10 ವರ್ಷಗಳಲ್ಲಿ ರೈತರು ಆತ್ಮಹತ್ಯಗೆ ಸಂಬಂಧಪಟ್ಟ ಅಂಕಿಅಂಶಗಳನ್ನು ನೋಡುತ್ತಿದ್ದೆ.

**(6–00 ಗಂಟೆ)**

1997 ರಿಂದ 2008 ರವೆರೆಗೆ 1,99,132 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಹಾರಾಷ್ಟ್ರ ರಾಜ್ಯದಲ್ಲಿಯೂ ರೈತರ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಬಹಳ ದೊಡ್ಡ ಪ್ರಮಾಣದಲ್ಲಿದೆ. ಮಹಾರಾಷ್ಟ್ರದಲ್ಲಿ ಸುಮಾರು 24,000 ಆಂಧ್ರಪ್ರದೇಶ ರಾಜ್ಯದಲ್ಲಿ ಸುಮಾರು 13,000 ಮತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ 12,000 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಾರ್ಷಿಕ ಯೋಜನೆಗಳು ನಡೆಯುತ್ತವೆ. ಅದೇ ರೀತಿ ಕೃಷಿಗೋಸ್ಕರವೇ ಒಂದಷ್ಟು ಅನುದಾನವನ್ನು ಬಿಡುಗಡೆ ಮಾಡತಕ್ಕಂಥಾದ್ದು ನಡೆಯುತ್ತವೆ. ಆದರೆ ಈ ಸಮಸ್ಯೆಯ ಮೂಲ ಕಾರಣವೇನು ಎನ್ನುವಂಥಾದ್ದನ್ನು ಪತ್ತೆ ಮಾಡುವಂತಹ, ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳತಕ್ಕಂಥ ಪ್ರಯತ್ನ

ಇದುವರೆಗೂ ಆಗಿಲ್ಲ. ಬಹಳ ದೊಡ್ಡದಾದ ಒಂದು ಕಾರಣವೇನೆಂದರೆ ಕೃಷಿಯ ಮೇಲೆ ಆಗುತ್ತಿರುವಂತಹ ವೆಚ್ಚ ಮತ್ತು ಕೃಷಿಗೆ ಏನು ವೆಚ್ಚವಾಗುತ್ತದೆ ಅದಕ್ಕೆ ಸರಿಯಾಗಿರತಕ್ಕಂಥ ಒಂದು ಬೆಲೆ ರೈತನಿಗೆ ಸಿಗದೇ ಇರತಕ್ಕಂಥಾದ್ದು. ರೈತ ಸಾಲ ಮಾಡಿಕೊಂಡು ಸಾಲದ ಚಕ್ರದಲ್ಲಿ ಸಿಕ್ಕಿ ಬೀಳುತ್ತಾನೆ. ಅವನಿಗೆ ಬೇರೆ ಏನೂ ಮಾರ್ಗವಿಲ್ಲದೇ ಪರಿಹಾರ ಸಿಗದ ಸ್ಥಿತಿಯಲ್ಲಿ ಅವನು ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಮಟ್ಟಕ್ಕೂ ಸಹ ಹೋಗುತ್ತಾನೆ. ಕೃಷಿಯ ಉತ್ಪನ್ನಗಳಿಗೆ ಸರಿಯಾದಂಥ ಬೆಲೆ ಸಿಗುವಂತ ವ್ಯವಸ್ಥೆ ಇವತ್ತಿನ ದಿವಸ ಆಗಬೇಕಾಗಿದೆ. ಅದರ ಜೊತೆಗೆ ಬಹಳ ಮುಖ್ಯವಾಗಿರತಕ್ಕಂಥ ಒಂದು ಸಂಗತಿ ಎಂದರೆ ಕೃಷಿಯ ಉತ್ಪನ್ನದ ಮೇಲೆ ಆಗುತ್ತಿರುವಂಥ ವೆಚ್ಚವನ್ನು ನಾವು ಕಡಿಮೆ ಮಾಡಬೇಕಾಗಿದೆ ಮತ್ತು ರೈತನಿಗೆ ಬೇಕಾಗಿರತಕ್ಕಂಥ ಲಾಭದಾಯಕವಾದ ಬೆಲೆ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕಾಗಿದೆ. ಒಂದು ಸಂಗತಿಯನ್ನು ನಾವೆಲ್ಲರೂ ಗಮನಿಸಬೇಕು. ನಾನು ಯಾವುದೇ ಪಕ್ಷದ ವಕ್ತಾರನಂತೆ ಮಾತನಾಡುವುದಿಲ್ಲ. ಸಾಮಾನ್ಯವಾಗಿ ಇಲ್ಲಿನ ಚಿಂತನೆಗಳಲ್ಲಿ ಕೇವಲ ಪಕ್ಷದ ನಿಲುವು ಮಾತ್ರವಲ್ಲದೇ ಸಮಗ್ರವಾಗಿರತಕ್ಕಂಥ ಒಂದು ವಿಚಾರವನ್ನಿಟ್ಟುಕೊಂಡು ಯೋಚನೆ ಮಾಡಬೇಕೆನ್ನುವುದು ನಮ್ಮೆಲ್ಲರ ಅಭಿಪ್ರಾಯವಾಗಿದೆ. ಇದರಲ್ಲಿ ಬಹಳ ಮುಖ್ಯವಾಗಿರತಕ್ಕಂಥ ಎರಡು ಸಂಗತಿಗಳಿವೆ. ಒಂದು ನಮ್ಮ ಕೃಷಿಯ ಮೇಲೆ ರೈತನಿಗೆ ಆಗುತ್ತಿರುವಂಥ ವೆಚ್ಚದ ಹೊರೆ ಮತ್ತು ಅದಕ್ಕೆ ತಕ್ಕಂಥ ಒಂದು ಲಾಭದಾಯಕವಾದ ಬೆಲೆ ಸಿಗದೇ ಇರುವಂಥಾದ್ದು. ಎರಡನೆಯದಾಗಿ ಇದಕ್ಕಿಂತ ಬಹಳ ಗಂಭೀರವಾದ ಸಮಸ್ಯೆ ಎಂದರೆ ಕ್ರಮೇಣ ನಮ್ಮ ಕೃಷಿಯ ಮೇಲೆ ಈ ಬಹುರಾಷ್ಟ್ರೀಯ ಕಂಪನಿಗಳ ಹಿಡಿತ ಯಾವ ರೀತಿಯಲ್ಲಿ ಸ್ಥಾಪನೆ ಆಗುತ್ತಿದೆ ಎನ್ನುವಂಥಾದ್ದು. ಇವತ್ತು ಬೀಜಗಳಿಗೋಸ್ಕರವಾಗಿ ಬಹುರಾಷ್ಟ್ರೀಯ ಕಂಪನಿಗಳನ್ನು ಆಧರಿಸಿರಕ್ಕಂಥಾದ್ದು. ಆ ಬೀಜಗಳಿಗೋಸ್ಕರವಾಗಿ ಬೇಕಾಗಿರತಕ್ಕಂಥ chemical fertilizersನಿಂದ ಉಂಟಾಗುತ್ತಿರ ತಕ್ಕಂಥ ಜಮೀನಿನ ಸವೆತ ಮತ್ತು ರೋಗಗಳು, ಅದಕ್ಕೆ ಬೇಕಾಗಿರತಕ್ಕಂಥ disinfectants, ಅದರಿಂದಾಗಿ ಉಂಟಾಗುತ್ತಿರತಕ್ಕಂಥ ರೋಗಗಳು. ಈ ಒಂದು ವಿಷ ವರ್ತುಲದಲ್ಲಿ ಇವತ್ತಿನ ದಿವಸ ನಮ್ಮ ಕೃಷಿ

ಸಿಕ್ಕಿ ಬೀಳುತ್ತಿದೆ. ಇದು ಕೇವಲ ರೈತನಿಗೆ ಲಾಭದಾಯಕವಾದ ಬೆಲೆಯನ್ನು ಕೊಡುವಂಥ ಪ್ರಶ್ನೆ ಮಾತ್ರವಲ್ಲ. ನಮ್ಮ ಕೃಷಿಯಿಂದ ಉಂಟಾಗುತ್ತಿರತಕ್ಕಂಥ ನಮ್ಮ ಕೃಷಿ ಉತ್ಪನ್ನಗಳನ್ನು ವಿಷರಹಿತವಾಗಿ ಮಾಡತಕ್ಕಂಥ ನಿಟ್ಟಿನಲ್ಲಿ ಇವತ್ತಿನ ದಿವಸ ನಾವು ಯೋಚನೆ ಮಾಡಬೇಕಾಗಿದೆ.

ಸಾವಯವ ಕೃಷಿಯ ಒಂದು ಬಹು ದೊಡ್ಡ ಪ್ರಯೋಗ ನಡೆಯುತ್ತಿದೆ. ವಿಶೇಷವಾಗಿ ತೀರ್ಥಹಳ್ಳಿಯಲ್ಲಿ ಶ್ರೀ ಪುರುಷೋತ್ತಮರಾವ್ ರವರು ಏನು ಒಂದು ದೊಡ್ಡ ಸಾಧನೆಯನ್ನು ಮಾಡಿದರು, ಈ ನಿಟ್ಟಿನಲ್ಲಿ ಬಹಳ ಅದ್ಭುತವಾದ ಪ್ರಯೋಗವನ್ನು ಅವರು ಮಾಡಿದರು. ಸಾವಯವ ಕೃಷಿಯ ಒಂದು ಆಂದೋಲನವನ್ನು ಅವರು ಇವತ್ತಿನ ದಿವಸ ನಿರ್ಮಾಣ ಮಾಡಿದರು. ಇಡೀ ರಾಜ್ಯದಲ್ಲಿ ಇವತ್ತಿನ ದಿವಸ ಅನೇಕ ಕೃಷಿಕರು ಈ ಸಾವಯವ ಕೃಷಿಯನ್ನು ಅನುಸರಣೆ ಮಾಡುತ್ತಿದ್ದಾರೆ. ಸಾವಯವ ಕೃಷಿಯ ಅನುಸರಣೆಯಿಂದ ಭೂಮಿಯ ಸಾರವನ್ನು ನಾವು ರಕ್ಷಣೆ ಮಾಡಬಹುದು, ಆಹಾರದ ಗುಣಮಟ್ಟವನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯ ರೋಗ ನಿರೋಧಕಗಳೇನಿದೆ, ಈ ವಿಷಕಾರಕ ವಸ್ತುವನ್ನು ಯಾವುದಿದೆ ಇವುಗಳ ಔಷಧಿಯನ್ನು ನಾವು ತಡೆಗಟ್ಟುವುದಕ್ಕೆ ಸಾಧ್ಯವಿದೆ. ಆದ್ದರಿಂದ ಈ ಸಾವಯವ ಕೃಷಿಗೆ ವಿಶೇಷವಾದ ಮನ್ನಣೆ ಇವತ್ತು ಸಿಗಬೇಕಾದ ಅವಶ್ಯಕತೆ ಇದೆ. ಸನ್ಮಾನ್ಯ ಮುಖ್ಯಮಂತ್ರಿಗಳು 200 ಕೋಟಿ ರೂಪಾಯಿಗಳನ್ನು ಇದಕ್ಕೋಸ್ಕರವಾಗಿ ಮೀಸಲಾಗಿಟ್ಟಿದ್ದಾರೆ. ಆದರೆ ನಾನು ಹೇಳುವುದೇನೆಂದರೆ, ಈ ಒಂದು ಚಳುವಳಿಯನ್ನು ಇನ್ನಷ್ಟು ಬಲಪಡಿಸುವುದಕ್ಕೋಸ್ಕರವಾಗಿ, ಸಾವಯವ ಕೃಷಿಯ ಈ ಆಂದೋಲನಕ್ಕೋಸ್ಕರವಾಗಿ ಏನು ಹಣವನ್ನು ನಿಗದಿಗೊಳಿಸಲಾಗಿದೆ ಇದನ್ನು ಇನ್ನು ಸ್ವಲ್ಪ ಹೆಚ್ಚಿಗೆ ಮಾಡತಕ್ಕಂಥ ಅಗತ್ಯವಿದೆ. ಕೃಷಿಯ ಉತ್ಪನ್ನಗಳಿಗೆ ಸರಿಯಾಗಿರತಕ್ಕಂಥ ಬೆಲೆ ಸಿಗದೇ ಇರತಕ್ಕಂಥಾದ್ದು ಇನ್ನೊಂದು ಸಮಸ್ಯೆಯಾಗಿದೆ.

ನಾನು ಹಳ್ಳಿಯಿಂದಲೇ ಬಂದವನು. ಅನೇಕ ವರ್ಷಗಳಿಂದ ನನಗೆ ಸಂಪರ್ಕ ಸ್ವಲ್ಪ ಕಡಿಮೆಯಾಗಿದೆ. ಇತ್ತೀಚಿನ ದಿನಗಳಲ್ಲಿ ನಾನು ಹೆಚ್ಚಿಗೆ ಹಳ್ಳಿಯ ಕಡೆಗೆ ಹೋಗುತ್ತಿದೇನೆ. ಇವತ್ತು ಹಳ್ಳಿಗಳಲ್ಲಿ ಕಂಡು ಬರುತ್ತಿರುವ ಬಹಳ

ಮುಖ್ಯವಾಗಿರತಕ್ಕಂಥ ಸಮಸ್ಯೆ ಎಂದರೆ, ಈಗ ಹಳ್ಳಿಗಳಲ್ಲಿ ಯಾರೂ ಯುವಕರು ಇಲ್ಲ. ಅವರೆಲ್ಲರೂ ವಲಸೆ ಹೋಗುತ್ತಿದ್ದಾರೆ. ಉತ್ತರ ಕರ್ನಾಟಕದ ಕೆಲವು ಹಳ್ಳಿಗಳಿಗೆ ನಾನು ಹೋಗಿ ಬಂದೆ. ಅಲ್ಲಿ ಬುದ್ಧಿವಂತರು, ವಿದ್ಯಾವಂತರು ಹೆಚ್ಚಿಗೆ ಇದ್ದಾರೆ. ಅವರೆಲ್ಲರೂ ನೌಕರಿಗೋಸ್ಕರ ನಗರ ಪ್ರದೇಶಗಳಿಗೆ ಹೋಗಿದ್ದಾರೆ. ಅವರಿಗೆ ಸುಮಾರು 15 ರಿಂದ 20 ಎಕರೆ ಜಮೀನಿದೆ ಮತ್ತು ವಯಸ್ಸಾದ ತಂದೆ–ತಾಯಿ ಇದ್ದಾರೆ. ಆದರೆ ಈ ಜಮೀನನ್ನು ನೋಡಿಕೊಳ್ಳುವವರು ಯಾರೂ ಇಲ್ಲ. ಅನೇಕರಿಗೆ ಅವರ ಕಷ್ಟವೇನೆಂದರೆ, ಜಮೀನಿನಲ್ಲಿ ಬೆಳಗ್ಗಿನಿಂದ ಸಂಜೆಯವರೆಗೂ ದುಡಿದರೂ ಕೂಡಾ ಒಂದು ದಿವಸಕ್ಕೆ ಸಿಗುವ ಕೂಲಿಯೂ ಸಹ ಸಿಗುವುದಿಲ್ಲವೆಂದು ಹೇಳುತ್ತಾರೆ ಇನ್ನು ಕೆಲವರು ನನಗೆ ಈ ರೀತಿ ಹೇಳಿದರು. “ನಮ್ಮ ಜಮೀನನ್ನು ನಾವು ಬೇರೆಯವರಿಗೆ ವಹಿಸಿಕೊಡಲು ತಯಾರಿದ್ದೇವೆ. ನಾವು ಬೆಳಗ್ಗಿನಿಂದ ಸಾಯಂಕಾಲದವರೆಗೆ ಇಲ್ಲಿ ಕೆಲಸವನ್ನು ಮಾಡುತ್ತೇವೆ. ನಮಗೆ ಕೂಲಿಯನ್ನು ಕೊಡಿ ಸಾಕು” ಎಂದು ಹೇಳುತ್ತಾರೆ. ಈ ರೀತಿ ಹೃದಯ ವಿದ್ರಾವಕವಾದ ಸ್ಥಿತಿ ಇವತ್ತಿನ ದಿವಸ ಕೃಷಿಗೆ ಸಂಬಂಧಿಸಿದಂತೆ ನಿರ್ಮಾಣವಾಗಿದೆ. ನಾವು ಇವತ್ತಿನ ದಿವಸ ಕೃಷಿಯನ್ನು ಬಲಪಡಿಸದೇ ಹೋದರೆ ಮುಂದಿನ ದಿನಗಳಲ್ಲಿ ಬಹಳ ಗಂಭೀರವಾದ ಸಮಸ್ಯೆ ಎದುರಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ನಿರ್ಮಾಣವಾಗಿರತಕ್ಕಂಥ ಇನ್ನೊಂದು ಬಹಳ ಗಂಭೀರವಾದ ಸಮಸ್ಯೆ ಎಂದರೆ ಗ್ರಾಮದಲ್ಲಿರತಕ್ಕಂಥ ಹುಡುಗರಿಗೆ ಇವತ್ತಿನ ದಿವಸ ಮದುವೆಯಾಗುತ್ತಿಲ್ಲ. ಅವರುಗಳಿಗೆ ಮದುವೆಯಾಗಲು ಹೆಣ್ಣುಮಕ್ಕಳು ಸಿಗುತ್ತಿಲ್ಲ. ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಬಹುಶಃ ಪರಿವಾರ ನಿಯೋಜನೆಯ ಪರಿಣಾಮ ಇರಬಹುದು ಎಂದು ಕಾಣುತ್ತದೆ. ಇರತಕ್ಕಂಥ ಹೆಣ್ಣುಮಕ್ಕಳು ನಗರ ಜೀವನದ ಆಕರ್ಷಣೆಗೋಸ್ಕರವಾಗಿ ನಗರದಲ್ಲಿರುವವರನ್ನು ಮದುವೆಯಾಗಲು ಮುಂದು ಬರುತ್ತಾರೆ. ಈ ಸಮಸ್ಯೆಗೆ ಪರಿಹಾರ ವನ್ನು ಹುಡುಕುವುದಕ್ಕೋಸ್ಕರವಾಗಿಯೇ ಏನಾದರೂ ಮಾಡಬೇಕೆಂದು ಉತ್ತರ ಕರ್ನಾಟಕದಲ್ಲಿ ಇತ್ತೀಚಿನ ದಿವಸಗಳಲ್ಲಿ ಮದುವೆಯಾಗದೇ ಇರತಕ್ಕಂಥ ಗಂಡುಮಕ್ಕಳ ಸಮ್ಮೇಳನವೇ ನಡೆಯಿತು.

ಬಹಳ ಮುಖ್ಯವಾಗಿರತಕ್ಕಂಥ ಸಂಗತಿ ಏನೆಂದರೆ, ಹೇಗೆ Englandನಲ್ಲಿ ಒಂದು ಕಾಲದಲ್ಲಿ ಕೈಗಾರೀಕರಣದ ಸಂದರ್ಭದಲ್ಲಿ ಸಮಸ್ಯೆ ನಿರ್ಮಾಣವಾಗತ್ತೋ, "Deserted village" ಎನ್ನುವಂಥ ಒಂದು ಕವನವನ್ನು Oliver Goldsmith ಆವತ್ತಿನ ದಿವಸ ಬರೆದಿದ್ದ. ಇವತ್ತು ನಮ್ಮ ಹಳ್ಳಿಗಳು 'deserted' ಆಗುತ್ತಿವೆ. ನಗರಾಭಿಮುಖವಾಗಿರತಕ್ಕಂಥ ವಲಸೆ ಇವತ್ತಿನ ದಿವಸ ಒಂದೇ ಸಮನೆ ಆಗುತ್ತಿದೆ. ನಗರಾಭಿಮುಖವಾಗಿರತಕ್ಕಂಥ ಈ ವಲಸೆ ಇದೆಯಲ್ಲಾ, ಇದು ಕೇವಲ ಕೃಷಿಯ ಸಮಸ್ಯೆ ಮಾತ್ರವಲ್ಲ, ಇದೊಂದು civilisational problem. ನಾವು ನೋಡುತ್ತಿರುವ ಹಾಗೆ ಭಾರತ ದೇಶಕ್ಕೆ ಕೃಷಿಗೆ ಸಂಬಂಧಿಸಿದಂತೆ ಬಹಳ ದೀರ್ಘ ಕಾಲದ ಒಂದು ಇತಿಹಾಸವಿದೆ. ಕೃಷಿಯಿಂದಾಗಿ ನಿರ್ಮಾಣ ವಾಗುತ್ತಿರುವ ಜೀವನ ಮೌಲ್ಯಗಳಿಗೂ ಮತ್ತು ಕೈಗಾರೀಕರಣದಿಂದಾಗಿ ನಿರ್ಮಾಣವಾಗುತ್ತಿರುವ ಜೀವನ ಮೌಲ್ಯಗಳಿಗೂ ಬಹಳ ಅಗಾಧವಾಗಿರುವ ವ್ಯತ್ಯಾಸವಿದೆ. ಒಂದು ಸಂಗತಿಯನ್ನು ತಾವೆಲ್ಲರೂ ಗಮನಿಸಬೇಕು. ದೀರ್ಘ ಕಾಲದವರೆಗೂ ಇದರಲ್ಲಿ ಪರಕೀಯ ಶಾಸನವಿದ್ದಾಗಲೂ ಕೂಡ, ಇಲ್ಲಿ ಸರಿಯಾಗಿರತಕ್ಕಂಥ ಯಾವುದೇ ರಕ್ಷಣಾ ವ್ಯವಸ್ಥೆ ಇಲ್ಲದೇ ಇದ್ದರೂ ಕೂಡ ನಮ್ಮ ಗ್ರಾಮಗಳಲ್ಲಿ ಅಪರಾಧಗಳ ಸಂಖ್ಯೆ ಹೆಚ್ಚಿಗೆ ಇರಲಿಲ್ಲ. ಬಹಳ ಶಾಂತ ವಾಗಿರತಕ್ಕಂಥ, ಸುವ್ಯವಸ್ಥಿವಾಗಿರತಕ್ಕಂಥ, ಒಂದು ಸುಸಂಸ್ಕೃತವಾಗಿರತಕ್ಕಂಥ ಜೀವನ ವ್ಯವಸ್ಥೆ ಇತ್ತು. ಆದರೆ ಆಧುನಿಕ ದಿನಗಳಲ್ಲಿ ಎಲ್ಲೆಲ್ಲಿ ನಗರಗಳು ಹೆಚ್ಚಿಗೆ ಆಗುತ್ತಾ ಹೋಗುತ್ತಿವೆ, ನಗರಗಳು ಹೆಚ್ಚಿಗೆ ಆದಂತೆ ಅಪರಾಧಗಳ ಸಂಖ್ಯೆಗಳು ಹೆಚ್ಚಾಗುತ್ತಿರುವ ಸನ್ನಿವೇಶವನ್ನು ಇವತ್ತಿನ ದಿವಸ ನಾವು ಕಾಣುತ್ತಿದ್ದೇವೆ. ಆದ್ದರಿಂದ ಭಾರತದ ಮಟ್ಟಿಗೆ ಹೇಳಬೇಕೆಂದರೆ, ಕೃಷಿ ಎನ್ನುವುದು ಕೇವಲ ಒಂದು ಆರ್ಥಿಕ ಉತ್ಪಾದನೆಯ ವ್ಯವಸ್ಥೆ ಮಾತ್ರವಲ್ಲ, ಇದೊಂದು ಸಂಸ್ಕೃತಿಯ ಒಂದು ಆಧಾರ ಭೂಮಿ, ಸಂಸ್ಕೃತಿಯ ನೆಲೆಗಟ್ಟು. ಕೃಷಿಯ ಆಧಾರದ ಮೇಲೆ ಭಾರತೀಯ ಸಂಸ್ಕೃತಿಯ ಒಂದು ವೈಶಿಷ್ಟ್ಯ ವೇನೆಂದರೆ, ನಾವು ಪ್ರಕೃತಿಯನ್ನು ಕೇವಲ ನಮ್ಮ ಅವಶ್ಯಕತೆಗಳನ್ನು ಒದಗಿಸತಕ್ಕಂಥ ಒಂದು ಸಂಪನ್ಮೂಲವೆಂದು ಪರಿಗಣಿಸಿಲ್ಲ.

ಪಾಶ್ಚಿಮಾತ್ಯ ಸಂಸ್ಕೃತಿಯ ನೆಲೆಗಟ್ಟು ಬೇರೆ. Francis Bacon ಎನ್ನುವವನು ಒಂದು ಕಡೆ ಒಂದು ಮಾತನ್ನು ಹೇಳುತ್ತಾನೆ:

**" Nature does not reveal her secrets. She will**

**Have to be twisted and tortured to make her**

**Reveal her secrets."**

'ಪ್ರಕೃತಿ' ಎನ್ನುವುದು ನಮ್ಮ ಮನುಷ್ಯನ ಉಪಭೋಗಕ್ಕೆ ಇರತಕ್ಕಂಥ ಒಂದು ಸಂಗತಿ. ಅವಳ ರಹಸ್ಯಗಳನ್ನು ಹೊರಗಡೆಗೆ ತೆಗೆದು ಅದನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಹೇಳುತ್ತಾನೆ. ಆದರೆ ನಾವು ಈ ಮಾತನ್ನು ಹೇಳಲಿಲ್ಲ. ನಾವು 'ಪ್ರಕೃತಿ' ಎಂದರೆ ನಮ್ಮ ತಾಯಿ ಇದ್ದಂತೆ, ತಾಯಿಯಿಂದ ನಾವು ಪೋಷಣೆಯನ್ನು ಪಡೆಯುತ್ತೇವೆಂದು ಹೇಳುತ್ತೇವೆ. ಶ್ರೀಮತಿ ಇಂದಿರಾಗಾಂಧಿ ಯವರು ಸಹ Rio de Janario ನಲ್ಲಿ ಒಂದು ಸಮ್ಮೇಳನಕ್ಕೆ ಹೋದಾಗ ಅವರು ಇದೇ ಮಾತನ್ನು ಹೇಳಿದರು. ವೇದ ಕಾಲದಿಂದಲೂ ಸಹ ನಾವು ಈ ಮಾತನ್ನು ಹೇಳುತ್ತಾ ಬಂದಿದ್ದೇವೆ. "ಮಾತಾ ಭೂಮಿಃ ಪುತ್ರೋಹಂ ಪೃಥಿವ್ಯಾಃ" ಎನ್ನುವಂತ ಮಾತನ್ನು ಹೇಳುತ್ತಾ ಬಂದಿದ್ದೇವೆ. ಇದು ನಮ್ಮ ಸಂಸ್ಕೃತಿಯ ಆಧಾರಭೂತವಾಗಿರತಕ್ಕಂಥ ಒಂದು ಚಿಂತನೆ. ಇದರ ಆಧಾರದ ಮೇಲೆ ನಾವು ಒಂದು ಸಂಸ್ಕೃತಿಯನ್ನು ಬೆಳೆಸಿದ್ದೇವೆ. ಇವತ್ತು ಕೃಷಿ ಕೇವಲ ಒಂದು ಆರ್ಥಿಕ ವ್ಯವಸ್ಥೆಯಾಗಿ ಒಂದು urbanward migration ಮಾತ್ರ ಆಗುತ್ತಿಲ್ಲ, ನಮ್ಮ ಇಡೀ ಜೀವನ ರಚನೆಯನ್ನು, ಜೀವನ ವ್ಯವಸ್ಥೆಯನ್ನು, ಮೌಲ್ಯಗಳನ್ನು ಇದು ಇವತ್ತಿನ ದಿವಸ ಏರುಪೇರು ಮಾಡುತ್ತಿದೆ. ಈ ನಿಟ್ಟಿನಲ್ಲಿ ನಮ್ಮ ಕೃಷಿಯನ್ನು ಅದರಲ್ಲಿಯೂ ಕೂಡ ಸ್ವಾಭಾವಿಕವಾಗಿರತಕ್ಕಂಥ ಸಾವಯವ ಕೃಷಿಯನ್ನು ಭದ್ರಪಡಿಸತಕ್ಕಂಥ ಅವಶ್ಯಕತೆ ತುಂಬಾ ಗಂಭೀರವಾಗಿದೆ. ಇವತ್ತು ಕೃಷಿ ಅನಾಥವಾಗುತ್ತಿದೆ ಇದು ಪರಾವಲಂಬನೆಗೆ ತುತ್ತಾಗುತ್ತಿದೆ. ಬೀಜಗಳಿಗೋಸ್ಕರವಾಗಿ ನಾವು ವಿದೇಶವನ್ನು ಅವಲಂಬಿಸುತ್ತಿದ್ದೇವೆ ಗೊಬ್ಬರಕ್ಕೋಸ್ಕರ ಕೆಮಿಕಲ್ ಫ್ಯಾಕ್ಟರಿಗಳನ್ನು ಅವಲಂಬಿಸುತ್ತಿದ್ದೇವೆ ಕೃಷಿಯನ್ನಾದರಿಸಿ ಇದ್ದಂಥ ಜನ ಇವತ್ತು ತಮ್ಮ ಜೀವನ ನಡೆಸುವುದಕ್ಕೆ ಆಗದೇ ನಗರಗಳಿಗೆ ಬರುತಿದ್ದಾರೆ Pesticides, insecticides ಗಳಿಂದಾಗಿ ಇಡೀ ವಾತಾವರಣ ಹಾಳಾಗುತ್ತಿದೆ ನೆಲ ವಿಷಯುಕ್ತವಾಗುತ್ತದೆ,

ಗಾಳಿ ವಿಷಯುಕ್ತವಾಗುತ್ತಿದೆ. ಶುದ್ದವಾಗಿರುವಂಥ ನೀರು ಇವತ್ತು ಸಿಗದೇ ಇರುವಂತಹ ವಾತಾವರಣ ಸೃಷ್ಠಿಯಾಗಿದೆ ದಕ್ಷಿಣ ಕನ್ನಡದಲ್ಲಿ ಎಂಡೋ ಸಲ್ಫಾನ್‌ನಿಂದ ಉಂಟಾಗಿರುವಂಥ ರೋಗಗಳು ಬಗ್ಗೆ ವಿಸ್ತೃತವಾಗಿರುವಂಥ ವರ್ಣನೆ ಬಂದಿದೆ. ಮಾನ್ಯ ಶೋಭಾಕರಂದ್ಲಾಜೆಯವರು ಮೊನ್ನೆ ಅಲ್ಲಿಗೆ ಹೋಗಿ ಆ ಜನರ ಕಷ್ಟಗಳಿಗೆ ಸ್ಪಂದಿಸಿದ್ದಾರೆ, ಅವರ ಸಮಸ್ಯೆಗಳನ್ನು ಕೈಗೆತ್ತಿಕೊಂಡಿದ್ದಾರೆ, ಅವರಲ್ಲಿ ದೈರ್ಯವನ್ನು ತುಂಬಿದ್ದಾರೆ, ಅವರ ಮೇಲೆ ಈಗಾಗಲೇ ಏನು ಪೊಲೀಸ್ ದೂರನ್ನು ಕೊಟ್ಟಿದ್ದಾರೋ ಅವು ಯಾವುದನ್ನು ಲೆಕ್ಕಿಸದೆ ಅವರ ಪರವಾದ ಹೋರಾಟಕ್ಕೋಸ್ಕರ ನಿಂತಿದ್ದಾರೆ. ಅವರು ಈ ಹೋರಾಟವನ್ನು ಕೈಗೆತ್ತಿಕೊಂಡಿರುವುದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ chemical fertilizers, insecticides ನಿಂದ ಆಗುತ್ತಿರುವ ಸಮಸ್ಯೆಯಿಂದ ನಾವು ಹೊರಗಡೆ ಬರಬೇಕಾದರೆ ಇದಕ್ಕಿರುವುದು ನಮ್ಮ ಸ್ವಾಭಾವಿಕವಾದಂಥ ಕೃಷಿ ಪದ್ದತಿ ಈ ಸಂದರ್ಭದಲ್ಲಿ ನಾವು ಶ್ರೀ ಪುರುಷೋತ್ತಮರಾಯರನ್ನು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಅವರು ಸ್ವಾಭಾವಿಕ ಕೃಷಿ ಆಂದೋಲನವನ್ನು ಪ್ರಾರಂಭ ಮಾಡಿದ್ದಾರೆ. ಇದನ್ನು ಇನ್ನಷ್ಟು ಬಲಪಡಿಸುವ ನಿಟ್ಟಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಕ್ರಮ ಕೈಗೊಂಡಿದ್ದಾರೆ. ನಾನು ಇದನ್ನು ವ್ಯಾಪಕವಾಗಿ ರಾಜ್ಯ ಮಟ್ಟದಲ್ಲಿ ಚಳುವಳಿಯಲ್ಲಿ ರೂಪದಲ್ಲಿ ತರುವುದಕ್ಕೋಸ್ಕರ ಇದಕ್ಕೆ ಬೇಕಾಗಿರುವ ಸೌಲಭ್ಯವನ್ನು ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಬೇಕಾಗಿರುವಂಥ ಒಂದು support system ಅನ್ನು ಇವತ್ತು ನಿರ್ಮಾಣ ಮಾಡಬೇಕಾಗಿದೆ. ನಮ್ಮ ಮುಂದೆ ಇರುವಂಥಹ ಇನ್ನೊಂದು ಗಂಭೀರವಾದ ಸಮಸ್ಯೆ ಏನೆಂದರೆ ಕೃಷಿಗೆ ಸಂಬಂಧಪಟ್ಟಿರತಕ್ಕ ಬೀಜದ ವ್ಯಾಪಾರ. ಬೀಜದ ವ್ಯಾಪಾರದಲ್ಲಿ ದೊಡ್ಡ ದೊಡ್ಡ ಸಂಸ್ಥೆಗಳು ಕೃಷಿಯ ಮೇಲೆ ತಮ್ಮ ನಿಯಂತ್ರಣ ಸಾಧಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿವೆ. ಇದರ ಹಿಂದೆ ದೊಡ್ಡ ದೊಡ್ಡ ಆರ್ಥಿಕ ಶಕ್ತಿಗಳೂ ಇವೆ. ಅವು ರಾಜಕೀಯ ನಿರ್ಣಯಗಳನ್ನು ಹೇಗೆ ತಮ್ಮ ಪರವಾಗಿ ಮಾಡಿಸಿಕೊಳ್ಳುತ್ತವೆ ಎನ್ನುವ ವಿಷಯ ಇಲ್ಲಿರುವ ಎಲ್ಲರಿಗೂ ಗೊತ್ತು ಎಂದು ನಾನು ಭಾವಿಸುತ್ತೇನೆ. ಈ ಕುರಿತು ವಿಸ್ತೃತವಾಗಿ ಉಲ್ಲೇಖ ಮಾಡುವುದಕ್ಕೆ ಹೋಗವುದಿಲ್ಲ. ದುರಾದೃಷ್ಟದ ಸಂಗತಿ ಎಂದರೆ, ನಮ್ಮ ಕೇಂದ್ರ ಸರ್ಕಾರ ಇದಕ್ಕೆ ಕೊಡಬೇಕಾದಷ್ಟು ಗಮನವನ್ನು ಕೊಡದೇ ಇರುವುದು. ಕೇಂದ್ರದಲ್ಲಿ Biotechnology Regulatory Bill ಎನ್ನುವಂಥದ್ದೇನು ಬರುತ್ತಿದೆಯೋ ಅದರಲ್ಲಿ, ಬಹುರಾಷ್ಟ್ರಿಯ ಕಂಪನಿಗಳ ಬೀಜಗಳ ವಿರುದ್ದ

ಮಾತನಾಡುವುದೇ ಶಿಕ್ಷಾರ್ಹ ಅಪರಾಧ ಎನ್ನುವ ಹಾಗೆ ಬಿಂಬಿಸುವ ಅಂಶಗಳಿವೆ. ಇದು ನಮ್ಮ ಕೃಷಿಯನ್ನು ಆವರಿಸುವಂತಹ ಗಂಭೀರವಾದ ಸಮಸ್ಯೆ ಎಂದು ಭಾವಿಸಿ ಇದರ ಕಡೆ ಹೆಚ್ಚು ಗಮನ ಕೊಡಬೇಕು ಎಂದು ಹೇಳಬಯಸುತ್ತೇನೆ. ಇನ್ನೊಂದು ಸಮಸ್ಯೆ ಕಡೆಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಸೆಳೆಯ ಬಯಸುತ್ತೇನೆ. ಇತ್ತೀಚಿನ ದಿನಗಳಲ್ಲಿ ಅಡಿಕೆ ಬೆಳೆಗಾರರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಡಿಕೆ ಮಲೆನಾಡಿನ ಭಾಗದಲ್ಲಿರುವ ವಿಶೇಷ ಉತ್ಪನ್ನವಾಗಿದೆ. ಅಡಿಕೆ ಬೆಳೆಗಾರರು ಸಾಕಷ್ಟು ಸಮೃದ್ಧವಾಗಿ, ಉತ್ತಮವಾಗಿರವಂಥ ಜೀವನವನ್ನು ನಿರ್ವಹಣೆ ಮಾಡುತ್ತಿದ್ದರು. ಅಡಿಕೆ ಬೆಳೆಗಾರರ ಪಾತ್ರ ಇಲ್ಲದೇ ಹೋದರೂ ಕೂಡ ಅಡಿಕೆಯನ್ನು ಗುಟ್ಕಾದ ತಯಾರಿಗೋಸ್ಕರ ಬಳಸಿಕೊಳ್ಳುವಂಥ ಕೈಗಾರಿಕೆ ಅಥವಾ ವ್ಯಾಪಾರದ ವ್ಯವಸ್ಥೆ ಬಂತು. ಅಡಿಕೆ ಬೆಲೆ ಜಾಸ್ತಿಯಾಗಿ ಅದರ ಲಾಭ ಅಡಿಕೆ ಬೆಳೆಗಾರರಿಗೂ ಆಯಿತು. ಗುಟ್ಕಾವನ್ನು ನಿಷೇಧ ಮಾಡುವಂತಹ ಸರ್ಕಾರದ ಕ್ರಮದಲ್ಲಿ ತಪ್ಪಿಲ್ಲ. ಗುಟ್ಕಾದಿಂದ ಇವತ್ತು ಅನೇಕ ರೋಗಗಳು ಉತ್ಪನ್ನವಾಗುತ್ತಿದ್ದು ಇದನ್ನು ತಡೆಗಟ್ಟಬೇಕು ಎಂದು ವಿಜ್ಞಾನಿಗಳು ಮತ್ತು ವೈದ್ಯರು ಹೇಳುತ್ತಿದ್ದಾರೆ. ಆದರೆ, ಏಕಾಏಕಿಯಾಗಿ ಅಡಿಕೆ ಬೆಳೆಗಾರರು ಮತ್ತು ವ್ಯಾಪಾರಗಾರರು ತುಂಬಾ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರ ರಕ್ಷಣೆಗಾಗಿ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಿ ಇದಕ್ಕೆ ಬೆಂಬಲ ಬೆಲೆ ಕೊಡುತ್ತಾರೆಂದು ಅಪೇಕ್ಷಿಸುತ್ತೇನೆ. ಅಡಿಕೆ ಬೆಳೆಗಾರರ ಈ ಸಮಸ್ಯೆಯನ್ನು ಬಗೆಹರಿಸಲು ಕೆಲವರು ದಾರಿಯನ್ನು ಕಂಡುಕೊಂಡಿದ್ದಾರೆ. ಒಂದು, ತಾತ್ಕಾಲಿಕವಾಗಿರುವಂಥ ಪರಿಹಾರ. ಅಂದರೆ, ಸರ್ಕಾರ ಇದಕ್ಕೆ ಬೆಂಬಲ ಬೆಲೆ ಕೊಡಬೇಕು. ಆದರೆ ಸರ್ಕಾರ ಯಾವಾಗಲೂ ಬೆಂಬಲ ಕೊಡುತ್ತಿರುವುದಕ್ಕೆ ಆಗುವುದಿಲ್ಲ. ಇದಕ್ಕೆ ಶಾಶ್ವತವಾದ ಪರಿಹಾರ ಎಂದರೆ, ಅಡಿಕೆಯನ್ನು ವಿವಿಧ ಬಗೆಯಲ್ಲಿ ಉಪಯೋಗ ಮಾಡುವುದು. ಈ ನಿಟ್ಟಿನಲ್ಲಿ ಅನೇಕ ಪ್ರಯೋಗಗಳು ನಡೆದಿವೆ. ಧರ್ಮಸ್ಥಳದ ಸಂಸ್ಥೆ ಕಡೆಯಿಂದ ಅಡಿಕೆಯನ್ನು ಯಾವ ಯಾವ ಉದ್ದೇಶಗಳಿಗೆ ಬಳಸಿಕೊಳ್ಳಬಹುದೆಂಬ ಪ್ರಯೋಗಗಳು ನಡೆದಿವೆ. ಗುಟ್ಕಾದಲ್ಲಿ, carcinogenic ಅಂಶಗಳು ಯಾವುದಿದೆಯೋ ಅದನ್ನು ತೆಗೆದು ಹಾಕಿ, ಉಳಿದಂತೆ ಗುಟ್ಕಾವನ್ನು ಬಳಸುವ ನಿಟ್ಟಿನಲ್ಲಿ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಆದರೆ, ಆ ಕೆಮಿಕಲ್ಸನ್ನು ತೆಗೆದು ಹಾಕಿದರೆ ಈಗಿರುವಷ್ಟು ಆಕರ್ಷಣೆ ಇರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ಬಹುಶಃ ಆ ಕಿಕ್ ಇರಲಿಕ್ಕಿಲ್ಲ. ಅಡಿಕೆಯ ಪರ್ಯಾಯ ಬಳಕೆಯ ನಿಟ್ಟಿನಲ್ಲಿ ಮಾನ್ಯ ನಾಣಯ್ಯನವರಿಗೆ ಹೆಚ್ಚು ತಿಳಿದಿರಬಹುದೆಂದು ನಾನು ಭಾವಿಸುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸದಸ್ಯರು ಎರಡು ಪ್ರಮುಖವಾದ ವಿಚಾರವನ್ನು ಎತ್ತಿದ್ದಾರೆ. ನಾಳೆ ನಾನು ಮಾತನಾಡುವಾಗ ಅದರ ಬಗ್ಗೆ ಹೇಳುತ್ತೇನೆ. ಒಂದು, ಸಾಯವಯ ಕೃಷಿ, our traditional system of cultivation plus the fertility ಮತ್ತು ಇದರ ಜೊತೆ demand and supply ಬಗ್ಗೆ ನಾವು ಯೋಚನೆ ಮಾಡಬೇಕಿದೆ. ನಮ್ಮ ದೇಶದ ಜನಸಂಖ್ಯೆಗೆ ಅನುಗುಣವಾಗಿ ನಾವು ಆಹಾರ ಪದಾರ್ಥಗಳನ್ನು ಉತ್ಪಾದಿಸಬೇಕಾಗುತ್ತದೆ. ನಮ್ಮ ದೇಶದಲ್ಲಿ ಸುಮಾರು 112 ಕೋಟಿ ಜನಸಂಖ್ಯೆ ಇದೆ. ಈ 112 ಕೋಟಿ ಜನರಲ್ಲಿ ಪ್ರತಿಯೊಬ್ಬರಿಗೂ ಆಹಾರ ಕೊಡಬೇಕು ಎನ್ನುವ, right to Food Act ಏನಿದೆ ಅದು ಸಂಸತನಲ್ಲಿ ಬರುತ್ತಿದೆ. ಆದರೆ, Right to Food Act ಇದನ್ನು ಸಂಸತ್ತಿನಲ್ಲಿ ತರುವುದಕ್ಕೆ ಮೀನ–ಮೇಷ ಎಣಿಸುವಂಥ ಪರಿಸ್ಥಿತಿ ಏಕೆ ಬಂತು ಎಂಬ ಬಗ್ಗೆ ಯೋಚನೆ ಮಾಡಬೇಕು. ಅದಕ್ಕೆ ಕಾರಣವೇನೆಂದರೆ, ಒಂದು ಸಲ ಈ ವಿಧೇಯಕವನ್ನು ತಂದಾದಮೇಲೆ ಪ್ರತಿಯೊಬ್ಬನಿಗೂ ಆಹಾರ ಕೊಡಬೇಕಾಗಿರುವಂಥದ್ದು ರಾಜ್ಯ ಸರ್ಕಾರದ ಕರ್ತವ್ಯವಾಗುತ್ತದೆ ಮತ್ತು ಅದನ್ನು ಪಡೆದುಕೊಳ್ಳುವುದು ಜನರ ಹಕ್ಕಾಗುತ್ತದೆ. ನಾವು Right to Employment Act ಎಂದು ಮಾಡಿದ್ದೇವೆ. ಈಗ Right to food Act ಬರುತ್ತಿದೆ. ಈ ವಿಧೇಯಕವನ್ನು ತರಲು ಏಕೆ ಹಿಂದೇಟು ಹಾಕುತ್ತಾರೆಂದರೆ, ನಮ್ಮ ಜನಸಂಖ್ಯೆಗೆ ಆಧಾರವಾಗಿ ನಮಗೆ ಬೇಕಾಗಿರುವಂಥ, ಅಂದರೆ 112 ಕೋಟಿ ಜನರಿಗೆ ಕೊಡುವುದಕ್ಕೆ ಅವಶ್ಯಕವಾಗಿ ಬೇಕಾಗುವಂಥ ಆಹಾರ ಪದಾರ್ಥದ ಪ್ರಮಾಣ ಎಷ್ಟೆಂದರೆ 425 ಮಿಲಿಯನ್ ಟನ್. ಆದರೆ ನಮ್ಮ ಇವತ್ತಿನ ಆಹಾರ ಉತ್ಪಾದನೆ ಎಷ್ಟಿದೆ? ನಾವು ಸ್ವಾವಲಂಬಿಗಳೆಂದು ಹೇಳಿಕೊಳ್ಳುತ್ತೇವೆ. India has become self-sufficient. ನಾವು Begging bowl ಎತ್ತಿಕೊಂಡು ಹೊರಗೆ ಹೋಗಬೇಕಾದಂಥ ಪರಿಸ್ಥಿತಿ ಇಲ್ಲ. Our Godowns are full of buffer stock. ಸುಮಾರು 80 ಮಿಲಿಯನ್ ಟನ್ ಆಹಾರ ಪದಾರ್ಥಗಳನ್ನು ಪ್ರತಿವರ್ಷ ಶೇಖರಣೆ ಮಾಡಬೇಕು ಎನ್ನುವುದು ನಮ್ಮ ಗುರಿಯಾಗಿದೆ. ಅಷ್ಟು ಪ್ರಮಾಣದ ಆಹಾರ ಪದಾರ್ಥಗಳನ್ನು ಸಂಗ್ರಹ ಮಾಡಲು ನಮ್ಮಲ್ಲಿ ಮಳಿಗೆಗಳು ಇಲ್ಲ. ಆದರೆ, 225 ಮಿಲಿಯನ್ ಟನ್‌ನಿಂದ 230 ಮಿಲಿಯನ್ ಟನ್ ಆಹಾರ ಪದಾರ್ಥಗಳನ್ನು ನಾವು ಉತ್ಪಾದನೆ

ಮಾಡುತ್ತಿದ್ದೇವೆ. ಆದರೆ ಪ್ರತಿಯೊಬ್ಬನಿಗೆ ಆಹಾರ ಕೊಡಬೇಕು ಎಂದರೆ, Our requirement is about 425 million tons of food grains. ಈ ಹಿನ್ನೆಲೆಯಲ್ಲಿ ಸಾವಯವ ಕೃಷಿ ಮತ್ತು The productivity part of it; ಆ productivity part of it ಬಂದ ಕೂಡಲೇ productivity plus fertility of the soil ಬರುತ್ತದೆ. ಇದನ್ನು ಮಾಡುವಾಗ, there should be a balance between productivity and fertility. And what we require is the balancing factor. ನಮ್ಮ ರಾಜ್ಯಕ್ಕೆ ಎಷ್ಟು ಆಹಾರ ಪದಾರ್ಥ ಬೇಕು? ನಮ್ಮಲ್ಲಿರುವ 6 ಕೋಟಿ ಜನರಿಗೋಸ್ಕರ ಏನು ಆಹಾರ ಪ್ರಮಾಣದ ಅವಶ್ಯಕತೆ ಇದೆಯೋ ಅದನ್ನು ಬೇರೆಯವರಿಂದ ಪಡೆದುಕೊಳ್ಳದೆ ಸರಿದೂಗಿಸಲು How much of food grains we require now ? I am not ready to say that traditional system is not required. Traditional system is necessary to have fertility of the soil. That means you need have to balance. If you want production as well as fertility then you need have to balance it. Minus the balance, you can't have production. This is one part of it. ಅಡಿಕೆಗೆ ಸಂಬಂಧಪಟ್ಟ ಹಾಗೆ ಒಂದು ವಿಷಯ ಹೇಳುತ್ತೇನೆ. ಸುಪ್ರೀಂ ಕೋರ್ಟ್‌ನವರು ಗುಟ್ಕಾ ಎಂದು ಏನು ಹೇಳುತ್ತೇವೆಯೋ ಅದನ್ನು ಬ್ಯಾನ ಮಾಡಲಿಲ್ಲ. Gutka as such has not been banned per se. They have banned only the plastic component. The Supreme Court said that you can't have it in plastic packets. Plastic component ನ್ನು ಬಳಸ ಕೂಡದು ಎಂದು ಹೇಳಿದ ಮೇಲೆ automatically the consumption has come down. ಏಕೆಂದರೆ, ಮುಂಚೆ ಅದನ್ನು ಸುಲಭವಾಗಿ carry ಮಾಡುತ್ತಿದ್ದರು. ಗುಟ್ಕಾ ಪ್ಯಾಕೆಟ್ಟನ್ನು ಬಿಚ್ಚಿ ಸುಲಭವಾಗಿ ಬಾಯಿಗೆ ಹಾಕಿಕೊಳ್ಳುತ್ತಿದ್ದರೋ ಅದನ್ನು ಈಗ ಮಾಡುವು ದಕ್ಕಾಗುವುದಿಲ್ಲ. ಹಾಗಾದರೆ ಪ್ಲಾಸ್ಟಿಕನ ಬದಲಾಗಿ ಏನನ್ನು ಬಳಸಬೇಕು? It should be either in the form of a small bottle or in the form of small paper sachet. If paper is used, the question of longevity arises. ಪ್ಲಾಸ್ಟಿಕ್ ಎಂದು ಹೇಳತಕ್ಕಂಥ ಒಂದು ಕಾಂಪೋನೆಂಟನಲ್ಲಿ ಈ ಗುಟ್ಕಾ ಎಂದು ಹೇಳತಕ್ಕಂಥದ್ದು ಮತ್ತು ಅಡಿಕೆಯ ಕಾಂಪೋನೆಂಟ್ ಎಂದು ಹೇಳತಕ್ಕಂಥದ್ದು to what level it has come down from the consumption point of view? ಆದ್ದರಿಂದ ನಾನು ಹೇಳುತ್ತಿದ್ದೇನೆ, One is demand and another is supply.

ಅಡಿಕೆ ಎಂದು ಹೇಳಿದ ಕೂಡಲೇ ಇದನ್ನು Food grains ಗೆ ಟ್ರಾನ್ಸಫರ್ ಮಾಡಿ ಸಾವಯವ ಕೃಷಿ, ಅದರ ಜೊತೆಗೆ productivity plus the fertility… what answer?

**ಪ್ರೊ: ಪಿ.ವಿ. ಕೃಷ್ಣಭಟ್:–** ಮಾನ್ಯ ಸಭಾಪತಿಯವರೇ, ನಾನು ಏನು ವಿಷಯಗಳನ್ನು ಹೇಳುತ್ತಿದ್ದೆ ಅದಕ್ಕೆ ಪೂರಕವಾಗಿರತಕ್ಕಂಥ ಬಹಳಷ್ಟು ಸಂಗತಿಗಳನ್ನು ಮಾನ್ಯ ನಾಣಯ್ಯನವರು ಈಗ ಹೇಳಿಬಿಟ್ಟಿದ್ದಾರೆ. ಹಾಗಾಗಿ ನನ್ನ ಕೆಲಸವನ್ನು ಅವರು ಸುಲಭ ಮಾಡಿದ್ದಾರೆ. ಇಲ್ಲಿ ಎರಡು ಸಂಗತಿಗಳಿವೆ. ಒಂದನೆಯದು, ಅಡಿಕೆಯ ಈ ಒಂದು ಗುಟ್ಕಾ ವ್ಯವಸ್ಥೆಯಲ್ಲಿ plastic sachet ಒಂದು ಪ್ರಶ್ನೆ. ಈ ಗುಟ್ಕಾದಲ್ಲಿ carcinogenic element ಇದೆ ಎನ್ನುವಂಥದ್ದು ಮತ್ತೊಂದು ಪ್ರಶ್ನೆ. Carcinogenic ಇದೆ ಎಂದರೆ ನಿಶ್ಚಿತವಾಗಿ ಅದನ್ನು ಬ್ಯಾನ್ ಮಾಡಲೇಬೇಕು. ಯಾವುದೇ ಕಾರಣಕ್ಕೂ carcinogenic ಇರುವುದನ್ನು ತೆಗೆದು ಹಾಕಲೇಬೇಕು. ಜನರ ಆರೋಗ್ಯದ ಜೊತೆಯಲ್ಲಿ ಚೆಲ್ಲಾಟ ಆಡುವುದು ಸರಿಯಲ್ಲ. ಆದರೆ sachet ದೃಷ್ಟಿಯಿಂದ alternative ಗಳನ್ನು ಹುಡುಕಬೇಕಾಗುತ್ತದೆ. ಆ ಪ್ರಯತ್ನ ನಡೆಯಬೇಕು. ಅದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದು ಬಹಳ ಮುಖ್ಯವಾಗಿರತಕ್ಕಂಥ ಪ್ರಶ್ನೆ. ಒಂದು ಕಡೆ ಇವತ್ತು ನಮಗೆ ಆಧುನಿಕವಾಗಿರ ತಕ್ಕಂಥ ಕೃಷಿ ಪದ್ಧತಿಗಳು ಮತ್ತು disinfectants, fertilizer ಇದನ್ನು ಬಿಟ್ಟರೆ ನಮ್ಮ ಆಹಾರದ ಉತ್ಪಾದನೆ ಕಡಿಮೆಯಾಗಿಬಿಡುತ್ತದೆ ಎಂಬ ಕಲ್ಪನೆ ಇದೆ. ಮತ್ತೊಂದು ಕಡೆ ಈ ಆಹಾರ ಉತ್ಪಾದನೆ ಏನಾಗುತ್ತದೆ ಇದರಿಂದ ನಮ್ಮ ಆರೋಗ್ಯದ ಮೇಲೆ ಎಷ್ಟು ಗಂಭೀರವಾಗಿರತಕ್ಕಂಥ ಪರಿಣಾಮ ಬೀರುತ್ತಿದೆ ಮತ್ತು ನಮ್ಮ ಭೂಮಿಯ ಫಲವತ್ತತೆ ಇದರಿಂದ ಕ್ರಮೇಣ ನಶಿಸಿ ಹೋಗುತ್ತಿದೆ ಎನ್ನುವುದು ಮತ್ತೊಂದು ಕಡೆ. ಇವೆರಡರ ನಡುವೆ ನಾವು ಸಮತೋಲನ ವನ್ನು ಮಾಡಬೇಕಾಗುತ್ತದೆ. ಆ ಸಮತೋಲನಕ್ಕೆ ಇರತಕ್ಕಂಥ ಒಂದೇ ದಾರಿ ಎಂದರೆ ಸ್ವಾಭಾವಿಕವಾಗಿರತಕ್ಕಂಥ ಕೃಷಿ ಪದ್ಧತಿಯನ್ನು ನಾವು ಕ್ರಮೇಣವಾಗಿ ಜಾಸ್ತಿ ಮಾಡಬೇಕು. ಏಕಾಏಕಿ ನಾಳೆ ಬೆಳಿಗ್ಗೆ, ಇವತ್ತಿನ ದಿವಸ ಬದಲಾವಣೆ ಮಾಡಿಬಿಡಿ fertilizer ಎಲ್ಲಾ ತೆಗೆದು ಹಾಕಿ ಎಂದು ಮಾಡುವುದಕ್ಕೆ

ಆಗುವುದಿಲ್ಲ. ಆದರೆ, ಆದಷ್ಟು ಶೀಘ್ರವಾಗಿ ಆಹಾರದ ಉತ್ಪಾದನೆ ಕಡಿಮೆಯಾಗುತ್ತದೆ ಎನ್ನುವ ಕಾರಣಕ್ಕಾಗಿ ವಿಷಯುಕ್ತವಾಗಿರತಕ್ಕಂಥ ಆಹಾರವನ್ನು ಜನರಿಗೆ ಕೊಡುವಂಥದ್ದು ಬಹಳ ದೊಡ್ಡ ಅಪರಾಧವಾಗುತ್ತದೆ. ಅದು ಕೇವಲ ವಿಷಯುಕ್ತವಾಗಿರತಕ್ಕಂಥ ಆಹಾರ ಮಾತ್ರವಲ್ಲ ಅದೊಂದು ವಿಷ ವರ್ತುಲ. ಒಂದರ ಪರಿಣಾಮ ಮತ್ತೊಂದರ ಮೇಲೆ ಆಗುತ್ತಾ ಹೋಗುತ್ತದೆ. ಹೀಗಾಗಿ ಇಡೀ ವ್ಯವಸಾಯದ ಮೇಲೆ ಇರತಕ್ಕಂಥ ನಿಯಂತ್ರಣವನ್ನು ನಾವು ಕಳೆದುಕೊಳ್ಳುತ್ತೇವೆ. ಈ ನಿಟ್ಟಿನಲ್ಲಿ ಸರ್ಕಾರ ಕ್ರಮವನ್ನು ಕೈಗೊಂಡಿತು. ಆದರೆ, ರಾಜ್ಯಾಪಾಲರು ಅದಕ್ಕೆ ಅನುಮತಿ ಕೊಡದಿರುವ ಕಾರಣಕ್ಕಾಗಿ ಆ ವಿಧೇಯಕವನ್ನು ತಡೆಹಿಡಿದಿದೆ ಮತ್ತು ಇವತ್ತು ಕೇಂದ್ರ ಸರ್ಕಾರಕ್ಕೆ ಹೋಗಿದೆ. ಗೋಹತ್ಯೆ ನಿಷೇದವನ್ನು ಮಾಡತಕ್ಕಂಥದ್ದು ಅತ್ಯಂತ ಅಗತ್ಯವಾಗಿರತಕ್ಕಂಥ ಸಂಗತಿ. ಗೋವು ಕೇವಲ ಹಾಲು ಕೊಡತಕ್ಕಂಥ ಒಂದು ಪ್ರಾಣಿಯಲ್ಲ. ಗೋವು ಎಲ್ಲಾ ದೃಷ್ಟಿಯಿಂದಲೂ ಬಹಳ ಉಪಯುಕ್ತಕರವಾಗಿರತಕ್ಕಂಥದ್ದು. ಕೃಷಿ ಮತ್ತು ಗೋವು ಪಾಲನೆ ಇವೆರಡೂ ಕೂಡ ಪರಸ್ಪರ ಪೂರಕವಾಗಿರುವಂಥದ್ದು. ಇವತ್ತಿನ ದಿವಸ ಎತ್ತುಗಳಿಲ್ಲ. ರೈತ ಟ್ರ್ಯಾಕ್ಟರ್ ಮೇಲೆ ಅವಲಂಬಿತವಾಗಬೇಕಾಗುತ್ತದೆ. ಒಂದು ಎತ್ತು, ದನವನ್ನು ಸಾಕಿಗೊಂಡರೆ ರೈತ ಮನೆಯಲ್ಲಿಯೇ ಗೊಬ್ಬರ ಮಾಡಿಕೊಳ್ಳಬಹುದು. ಕೃಷಿ ಮತ್ತು ಗೋ ರಕ್ಷಣೆ ನಿಕಟವಾಗಿರತಕ್ಕಂಥ ಅವಿನಾಭಾವ ಸಂಬಂಧ ಇದೆ. ಈಗಾಗಲೇ ಗೋವಿನ ರಕ್ಷಣೆಗಾಗಿ ಅನೇಕ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಆದರೆ, ಸರ್ಕಾರ ಒಂದು ಸಂಗತಿಯ ಬಗ್ಗೆ ಗಮನ ಕೊಡಬೇಕಾಗಿರುವುದೇನೆಂದರೆ, ಇವತ್ತು ಹಳ್ಳಿಗಳಲ್ಲಿ ರೈತರು ಗೋವನ್ನು ಸಾಕುತ್ತಾರೆ. ಅವುಗಳನ್ನು ಮೇಯಿಸುವುದಕ್ಕೆ ಜಾಗವಿಲ್ಲ. ಗೋಮಾಳಗಳನ್ನು ಇವತ್ತಿನ ದಿವಸ ಅತಿಕ್ರಮಣ ಮಾಡಿಕೊಂಡಿರುವಂಥದ್ದು, ಬೇರೆಯವರು ಕಬಳಿಸಿರುವಂಥದ್ದು ನಡೆದಿದೆ. ಈ ಗೋಮಾಳಗಳ ಸಂರಕ್ಷಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ವಿಧಾನ ಮಂಡಲದಲ್ಲಿ ಗೋ ರಕ್ಷಣೆಯನ್ನು ಮಾಡತಕ್ಕಂಥ ನಿರ್ಣಯವನ್ನು ಪಾಸ್ ಮಾಡಿತು. ಆದರೆ, ಸನ್ಮಾನ್ಯ ರಾಜ್ಯಪಾಲರು ಯಾವ ಕಾರಣಕ್ಕಾಗಿ ತಡೆಹಿಡಿದಿದ್ದಾರೆಂಬುದು ಗೊತ್ತಿಲ್ಲ. ಅವರು ಗಾಂಧಿವಾದಿ ಎಂದು

ಹೇಳಿಕೊಳ್ಳುತ್ತಾರೆ, ಪ್ರತಿ ದಿವಸ ನಾನು ಗೋ ಪೂಜೆಯನ್ನು ಮಾಡುತ್ತೇನೆಂದು ಹೇಳುತ್ತಾರೆ. ಆದರೆ, ಅವರು ಅದಕ್ಕೆ ಒಪ್ಪಿಗೆ ಕೊಡದೆ ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದಾರೆ. ನಾನು ನಮ್ಮ ವಿರೋಧ ಪಕ್ಷದ ನಾಯಕರಿಗೆ ಕೇಳಿಕೊಳ್ಳುತ್ತೇನೆ. ಇದನ್ನು ಸಂಕೋಚದ ದೃಷ್ಟಿಯಿಂದ ವಿಚಾರ ಮಾಡಬೇಡಿ. ವ್ಯಾಪಕವಾಗಿ ದೇಶದ ಆರ್ಥಿಕ ದೃಷ್ಟಿಯಿಂದ ಇದರ ಅಗತ್ಯ ಏನಿದೆ ಎಂದು ತಿಳಿದುಕೊಂಡು ಕೇಂದ್ರದ ಮೇಲೂ ಪ್ರಭಾವ ಬೀರಿ ಇದಕ್ಕೆ ಬೇಗ ಒಪ್ಪಿಗೆ ಸಿಗುವ ಹಾಗೆ ಮಾಡಿಕೊಡಿ.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ಗೋವು ಎನ್ನತಕ್ಕಂಥ ಪದದ ವ್ಯಾಖ್ಯಾನ ಏನು? ಗೋವು ಎಂದು ಹೇಳತಕ್ಕಂಥದ್ದು ನಿಜ. ಗೋವನ್ನು ನಮ್ಮ ತಾಯಿ ಎಂದು ಕರೆಯುತ್ತೇವೆ, ಮಾತೆ ಎಂದು ಕರೆಯುತ್ತೇವೆ, ಗೋಮಾತೆ ಎಂದು ಕರೆಯುತ್ತೇವೆ. ರಾಜ್ಯಾಂಗದ 48ನೇ ವಿಧಿಯಲ್ಲಿರುವ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಯಾವುದಕ್ಕೆ ಹೇಳಿದ್ದಾರೆ. ಗೋವಿನ ಬಗ್ಗೆ ಹೇಳಿರತಕ್ಕಂಥದ್ದನ್ನು ಅವರು ಎಲ್ಲಾ ಜಾನುವಾರುಗಳಿಗೂ ಅನ್ವಯಿಸುತ್ತಾರೆಯೇ?

**Dr.V.S. ACHARYA:** IT is applicable to milch cattle.

**ಶ್ರೀ ಎಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಾನು ಅದನ್ನೆ ಅವರಿಗೆ ಹೇಳಿದೆ. ಅವರು ಗೋವು ಎಂದು ಹೇಳತಕ್ಕಂಥದ್ದನ್ನು if it has got application only to milch cattle, ನಾವೆಲ್ಲರೂ ಅದನ್ನು ಒಪ್ಪಿಕೊಳ್ಳಲೇ ಬೇಕು. ನಮ್ಮ ಹಳೇ ಕಾಯ್ದೆಯೂ ಅದೇ. ಆದರೆ, ಅವರು ತಂದಿರತಕ್ಕಂಥ ಕಾಯ್ದೆ ಗೋವು ಎಂದು ಹೇಳತಕ್ಕಂಥದ್ದರಲ್ಲಿ all cattles… ಇದರ ಬಗ್ಗೆ ವಿಚಾರ ಬಂದಾಗ ನಾವು ಚರ್ಚೆ ಮಾಡೋಣ. ಇದರ ಬಗ್ಗೆ ಮುಂಚೆಯೂ ಚರ್ಚೆ ಮಾಡಿದ್ದೇವೆ. ಗೋವು ಎಂದು ಹೇಳತಕ್ಕಂಥದ್ದು, ಕಾಮಧೇನು ಎಂದು ಹೇಳತಕ್ಕಂಥದ್ದು ಯಾವುದು? ಹಾಲು ಕೊಡತಕ್ಕಂಥ milch cattle ಮತ್ತು 12 ವರ್ಷದ ಒಳಗಡೆ ಇರತಕ್ಕಂಥ ಕರುಗಳು. ಇದು ನಮ್ಮ ಹಳೆಯ ಕಾನೂನು. 1967 ರ ಕಾನೂನಿಗೂ ಅವರು ತಂದಿರತಕ್ಕಂಥ ಈ ಕಾನೂನಿಗೂ

ಇರುವ ವ್ಯತ್ಯಾಸವನ್ನೇ ನಾನು ಅವತ್ತು ಹೇಳಿದೆ. ಅವತ್ತು ಚರ್ಚೆಗೆ ನಮಗೆ ಅವಕಾಶ ಸಿಗಲಿಲ್ಲ. ಇದು ಒಂದು ಭಾಗ. ಮಾನ್ಯ ಸದಸ್ಯರು ರಾಜ್ಯಪಾಲರ ಬಗ್ಗೆ ಹೇಳುತ್ತಿದ್ದರು. Why? There is repugnancy. ಕಾನೂನಿನಲ್ಲಿ Repugnancy ಇದೆಯೋ ಇಲ್ಲವೋ, ಮಾನ್ಯ ಮುಖ್ಯಮಂತ್ರಿಗಳು ಈ ವಿಧೇಯಕವನ್ನು ತಂದಾಗ ನಾನು ಗಮನಕ್ಕೆ ತರಬಹುದಿತ್ತು. ಆದರೆ, ನನ್ನ ಮನಸ್ಸಿನಲ್ಲಿರತಕ್ಕಂಥದ್ದು ಗೋವು ಎಂದು ಹೇಳತಕ್ಕಂಥದ್ದನ್ನು milch cattle and draught cattle, ಈ ಎರಡಕ್ಕೆ ನೀವು confine ಮಾಡಿದ್ದರೆ ಇಡೀ ದೇಶದ ಉದ್ದಗಲಕ್ಕೂ ನಾವೆಲ್ಲಾ ಅದರ ಬಗ್ಗೆ ಹೋರಾಟ ಮಾಡಲೇಬೇಕು ಎಂದು ನಾನು ಹೇಳುತ್ತೇನೆ. ಆದರೆ nondraught cattle ಮತ್ತು non-milch cattle which is less than 12 years of age, ಇದರ ವಿಚಾರಕ್ಕೆ ಬಂದಾಗ, ಅದೆಲ್ಲವನ್ನು ಅವರು ಒಟ್ಟಾರೆ ತಂದಾಗ ಇವತ್ತು farming community ಆ ಪರಿಸ್ಥಿತಿಯಲ್ಲಿಲ್ಲ ಎಂದು ನಾನು ಹೇಳುತ್ತೇನೆ. ಅನುಪಯುಕ್ತತೆ ಆಗಿರುವಂತಹ ಸಂದರ್ಭದಲ್ಲಿ ಏನನ್ನು ಮಾಡಬೇಕಾಗುತ್ತದೆ ಎಂಬುದನ್ನು ಹೇಳಿ? Another thing is about the 'Inter-State movement of cattle'. For inter- state movement of cattle, Entry List ಯಾವುದರಲ್ಲಿ ಇದೆ? It is not in the State List. So definitely what happens is, it is repugnant and automatically it has to be reserved for the assent of the president. You don't have the power to ban inter-state movement of cattle. ಇದರ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಇದು ಪಾಸ್ ಆಗಿಬಿಟ್ಟಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳೇ, ಈಗಲೂ milch cattle ಎಂದು ಹೇಳುತ್ತಾರೆ, draught cattle ಎಂದು ಹೇಳುತ್ತಾರೆ. ಇದನ್ನು ಯಾರಾದರೂ ವಿರೋಧ ಮಾಡುವುದಾದರೆ ನಾವೆಲ್ಲರೂ ಒಟ್ಟಾರೆ ಸೇರಿ ವಿರೋಧ ಮಾಡೋಣ. ಆದರೆ, ಅದರೊಳಗೆ ಎಲ್ಲವನ್ನು ಒಟ್ಟಾಗಿ ತೆಗೆದುಕೊಂಡು ಬಂದಾಗ ಎಲ್ಲೋ ಸಂದರ್ಭದಲ್ಲಿ ಕಾಣುತ್ತದೆ, from the point of view of the Agriculturists and the farmers, ನಿಜವಾಗಿಯೂ ನಾವು ರೈತ ಸಮುದಾಯಕ್ಕೆ ಸಹಾಯ ಮಾಡುವುದರ ಬದಲು ರೈತ ಸಮುದಾಯಕ್ಕೆ ನಾವು ಬಹಳಷ್ಟು

ದೊಡ್ಡದಾಗಿರತಕ್ಕಂಥ ಅಪವಾದವನ್ನು ಮಾಡಿ ಅವರು ಬದುಕುವುದಕ್ಕೆ ಆಗದಿರುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತೇವೆ. ದಯವಿಟ್ಟು ಮರೆತುಬಿಡಬೇಡಿ.

**ಡಾ: ಎಸ್.ಆರ್. ಲೀಲಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿ ಯವರೇ, ಕೃಷಿ ಮತ್ತು ಗೋ ಸಂರಕ್ಷಣೆ ಇವೆರಡಕ್ಕೂ ಇರುವಂತಹ ಅವಿನಾಭಾವ ಸಂಬಂಧದ ಸಮಗ್ರ ದೃಷ್ಟಿಯ ಬಗ್ಗೆ ಮಾತನಾಡುತ್ತಿದ್ದಾರೆ. ಆ ಸಂದರ್ಭದಲ್ಲಿ prohibition on cow slaughter was brought. ನಾವು ಆರ್ಟಿಕಲ್ ವಿಚಾರದ ಬಗ್ಗೆ ಮಾತನಾಡುತ್ತಿದ್ದೇವೆ. ಅದರಲ್ಲಿ, "Slaughter of cows and calves and other milch and draught cattle" ಎಂದು ಇದೆ. ಅಂದರೆ, ಎಮ್ಮೆಯೂ ಕೂಡ milch cattle. ಆದ್ದರಿಂದ ಅದು ಬಂದಿದೆ. Draught cattle ಕೂಡ ಅದೇ ಬರುತ್ತದೆ. ಅದನ್ನು ಮಾಡಬಹುದು. We are for it. ಇನ್ನು ಮೇಲೆ ಮೇಕೆಯೂ ಯಾರು ತಿನ್ನಬೇಡಿ. ಕುರಿಯನ್ನು ಮಾರುವುದು ಬೇಡ, ಕತ್ತೆಯನ್ನು ಸಾಯಿಸುವುದು ಬೇಡ. ಅದನ್ನೆ ನಾವು ಹೇಳುತ್ತಿರುವುದು. ಇದರಲ್ಲಿ ಮತ್ತೊಂದು ವಿಷಯವೇನೆಂದರೆ, ಹಸು ಒಂದು ಕಾಲಕ್ಕೆ ಹಾಲು ಕೊಡುವುದನ್ನು ನಿಲ್ಲಿಸುತ್ತದೆ. ಈಗ ಸಮಗ್ರ ಕೃಷಿ ದೃಷ್ಟಿಯಿಂದ ನೋಡಿದಾಗ, ಅದರ ಸಗಣಿ ಇದೆಯಲ್ಲಾ ಅದರ ಬಗ್ಗೆ ಮಾತನಾಡುತ್ತಿರುವಂಥದ್ದು. ಇವತ್ತು ನಾವು ರಾಸಾಯನಿಕ ಗೊಬ್ಬರಗಳನ್ನು ಹಾಕಿ, ಭೂಮಿಯ ಫಲವತ್ತತೆ ಹೋಗುತ್ತಿರುವುದರಿಂದ ಅದನ್ನು ಉಳಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ ಎಂದು ಮಾನ್ಯ ನಾಣಯ್ಯನವರು ಹೇಳಿದ್ದಾರೆ. ನಾಟಿ ಹಸುಗಳ breed ಎಂದು ಆರ್ಟಿಕಲ್ 48 ರಲ್ಲಿ special mention ಇದೆ–"Special breeds of India". ಇದರಲ್ಲಿರುವಂಥದ್ದನ್ನು ಈ ನಾಟಿ ಹಸುಗಳ ಗಂಜಲ ಮತ್ತು ಸಗಣಿ ಇದೆಯಲ್ಲಾ ಇದು ಭೂಮಿಗೆ ಅಮೃತಪ್ರಾಯವಾಗಿರು ವುದು ಎಂದು ಇವತ್ತು ಎಲ್ಲಾ ಕಡೆ ಸಿದ್ದವಾಗಿದೆ. ಸುಭಾಷ್ ಪಾಳೇಕರ್ ಅಂಥವರೆಲ್ಲಾ ಅದರ ಬಗ್ಗೆ ಸಾಕಷ್ಟು ಪ್ರಯೋಗವನ್ನೇ ಮಾಡಿದ್ದಾರೆ. ಈ ದೃಷ್ಟಿಯಿಂದ ನಾವು ನೋಡಿದ್ದೇ ಆದರೆ ಬರೀ Milch cattle ಅಷ್ಟೆ ಅಲ್ಲ, ನಾವು ಎಲ್ಲಾ ಪ್ರಾಣಿಗಳನ್ನು ರಕ್ಷಣೆ ಮಾಡಬೇಕಾಗಿದೆ

ಎನ್ನುವುದು ಸ್ಪಷ್ಟವಾಗುತ್ತದೆ. ಅದರಲ್ಲೂ ಅದು ಕೃಷಿಗೆ ಪೂರಕ ಎನ್ನುವ ದೃಷ್ಟಿಯಿಂದ ಮತ್ತು ಮಾನವೀಯ ದೃಷ್ಟಿಯಿಂದ ನೋಡಿದರೆ ಅದು ಹಾಲು ಕೊಡುವುದಕ್ಕೆ ನಿಲ್ಲಿಸಿದ ಮೇಲೆ ಕಡಿಯಬಹುದು ಎಂಬ ಭಾವನೆ ತಪ್ಪು. It is repugnant to human feeling. Please understand this.

**(6–30 ಗಂಟೆ)**

**ಶ್ರೀ ಎಂ.ಸಿ. ನಾಣಯ್ಯ :** ಈಗ ನಾವು 32 ಲಕ್ಷ ಲೀಟರ್ ಹಾಲನ್ನು ಕರ್ನಾಟಕ ರಾಜ್ಯದಲ್ಲಿ ಉತ್ಪತ್ತಿಯನ್ನು ಮಾಡುತ್ತಿದ್ದೇವೆ. ನಾವು ರಾಷ್ಟ್ರಕ್ಕೆ ಒಂದು ಮಾದರಿಯಾಗಿರುವಂತಹ Karnataka Milk Federation ಸ್ಥಾಪನೆ ಮಾಡಿದ್ದೇವೆ. ಅದರ ಮೂಲಕ ಬರುವಂತಹ ಎಲ್ಲಾ ಐಟಂಗಳನ್ನು ಅದು ಬೆಣ್ಣೆಯಾಗಲಿ, ಸ್ವೀಟ್ ಆಗಲಿ ಮತ್ತೊಂದು ಆಗಲಿ ಎಲ್ಲವನ್ನು ಅಲ್ಲಿ ಮಾಡುತ್ತಿದ್ದೇವೆ. ನಿಮಗೆ ಈ ಒಂದು productivity ಬರಬೇಕಾದರೆ ಯಾವುದರ ಮೂಲಕ ಅಂದರೆ, ಅದು ಜರ್ಸಿ, Holstein ಆ ಒಂದು ತಳಿಗಳನ್ನು ತರತಕ್ಕಂತದ್ದರಲ್ಲಿ ಮಾಡುತ್ತಿದ್ದೇನೆ. ಆ ತಳಿಗಳಲ್ಲಿ ಹಸು ಒಂದು ಭಾಗ. ಆ ಹಸುಗಳಿಂದ ಬರತಕ್ಕಂತಹದ್ದು, ಕರುಗಳು. ದಯವಿಟ್ಟು ಆ ಕರುಗಳನ್ನು ಏನು ಮಾಡುತ್ತೀರಿ? ಭಾವನಾತ್ಮಕವಾಗಿರುವಂತಹ ಈ ವಿಚಾರವನ್ನು ಪ್ರಸ್ತಾಪ ಮಾಡುವುದಾದರೆ..,

**ಡಾ॥ ಎಸ್.ಆರ್. ಲೀಲಾ:–** ಮಾನ್ಯ ಸಭಾಪತಿಯವರೇ, ಈಗ ನಾವು ಏನು ಮಾಡುತ್ತಿದ್ದೇವೆ ಎನ್ನುವುದು ಎಲ್ಲರಿಗೂ ಸ್ಪಷ್ಟವಾಗಿದೆ. ಇದನ್ನು ಬದಲಿಸಬೇಕೆನ್ನುವುದು ನಮ್ಮ ಉದ್ದೇಶ. ಅದಕ್ಕೆ ಪೂರಕವಾಗಿ ಮಾತನಾಡೋಣ. ನಮಗೆ ನಾವೇ ಅನ್ಯಾಯ ಮಾಡಿಕೊಳ್ಳುತ್ತಿದ್ದೇವೆ. ಇದನ್ನು ಸರಿ ಮಾಡಿಕೊಳ್ಳಬೇಕೆನ್ನುವುದು ನನ್ನ ಅಭಿಪ್ರಾಯ .

**ಶ್ರೀ ಎಂ.ಸಿ. ನಾಣಯ್ಯ:–** ನಿಮಗೆ ನಿಷ್ಟೆ ಇದೆ. ಎರಡು ಕಾಲುಗಳಿರುವಂತಹ ತಿನ್ನುವಂತಹ ಬಾಯಿಗಳು ಏನಿವೆ, ಈಗ ನಮ್ಮ ಜನಸಂಖ್ಯೆ 120 ಕೋಟಿ ಆಗಿದೆ. ತಿನ್ನುವಂತಹ ಬಾಯಿಗಳಿಗೆ ಕೊಡಲಿಕ್ಕೆ ನಮಗೆ ಇಲ್ಲದೇ

ಇರತಕ್ಕಂತಹ ಪರಿಸ್ಥಿತಿ ನಿರ್ಮಾಣ ಮಾಡುವ ಹಂತದಲ್ಲಿ ನಾವು ಇದ್ದು, ಇದರ ಬಗ್ಗೆ ವಿಚಾರ ಮಾಡಿ.

**ಡಾ॥ ಎಸ್.ಆರ್. ಲೀಲಾ:–** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ನಾನು ಒಂದೇ ಒಂದು ಉದಾಹರಣೆಯನ್ನು ಕೊಡಲಿಕ್ಕೆ ಬಯಸುತ್ತೇನೆ. ಕಳೆದ ವರ್ಷ 45 ಲಕ್ಷ ಟನ್ ಆಹಾರ ನಾಶವಾಯಿತು. ಅದನ್ನು ಇಲಿಗಳು, ಹೆಗ್ಗಣಗಳು ತಿಂದುಕೊಂಡು ಹೋದವು. ನಾವು ಅದನ್ನು ಕೊಟ್ಟಿದ್ದೇವೆಯೇ? ನಾವು ಇವತ್ತು ನಮಗೆ ಬೇಕಾಗಿರುವುದು ಉತ್ಪಾದನೆಗಿಂತ ಹೆಚ್ಚಾಗಿ ನಾವು ಏನು produce ಮಾಡುತ್ತೇವೆ, ಅದನ್ನು ಉಳಿಸಿಕೊಂಡು ಹೋಗಬೇಕಾಗುತ್ತದೆ. ಇವತ್ತು ಆಹಾರ ಧಾನ್ಯಗಳು ಕಡಿಮೆ ಬರುತ್ತಿದ್ದರೆ, it is because of future price and wrong food policy, not because of we are not producing. ಆದ್ದರಿಂದ, ಅದನ್ನು ಸಹ ನಾವು ಅರ್ಥ ಮಾಡಿಕೊಳ್ಳೋಣ.

**ಡಾ॥ ವಿ.ಎಸ್. ಆಚಾರ್ಯ ಸಭಾನಾಯಕರು:–** ಮಾನ್ಯ ಸಭಾಪತಿ ಯವರೇ, ಮಾನ್ಯ ಸದಸ್ಯರಾದ ಶ್ರೀಯುತ ಯಂ.ಸಿ. ನಾಣಯ್ಯನವರು ಪ್ರಸ್ತಾಪ ಮಾಡಿದಂತಹ ವಿಚಾರ;

> "**Article 48:** Organization of agriculture and Animal husbandary The State shall endeavour to Organize agriculture and animal husbandry on Modern and scientific lines and shall, in Particular , take steps for preserving and Improving the breeds, and prohibiting the slaughter, of cows and calves and other milch And draught cattle ."

ಎಮ್ಮೆ ಮತ್ತು ದನ ನಮ್ಮ ದೇಶದಲ್ಲಿ ಹಾಲು ಕೊಡುವಂತಹ ಜಾನುವಾರುಗಳು ಎಂದು ಪ್ರಸಿದ್ಧಿ ಪಡೆದಿವೆ. ಅದನ್ನು ತಾವೂ ಒಪ್ಪುತ್ತೀರಿ. 'Draught' ಏರುವಂತಹದ್ದು ಎತ್ತು ಮತ್ತು ಕೋಣ. ಇವುಗಳು ಭಾರವನ್ನು ಎಳೆಯುವಂತಹವುಗಳು.

**ಶ್ರೀ ಎಂ.ಸಿ. ನಾಣಯ್ಯ** :ಎಲ್ಲಿಯವರೆಗೆ draught cattle ಉಳಿದುಕೊಳ್ಳುತ್ತದೆ. ಎಲ್ಲಿಯವರೆಗೆ ಎಳೆಯುವಂತಹ ಶಕ್ತಿ ಇದೆ, ಉಳಿಮೆ ಮಾಡುವಂತಹ ಶಕ್ತಿ ಇದೆ. ಆದಾದ ಮೇಲೆ ಏನು ಮಾಡಬೇಕೆಂಬುದರ ಬಗ್ಗೆ ಸಂವಿಧಾನದಲ್ಲಿ ಬಹಳ ಯೋಚನೆ ಮಾಡಿದ್ದಾರೆ.

**ಡಾ|| ವಿ.ಎಸ್. ಆಚಾರ್ಯ:–** ಅದಕ್ಕೆ ಅವರು ಉಪಯೋಗ ಮಾಡಿ ದಂತಹ ಪದ milch and draught cattle ಎಂದು ಮಾಡಿದ್ದಾರೆ. 'Animals' ಎಂದು ಬರೆಯಲಿಲ್ಲ. ಎರಡನೆಯದಾಗಿ, ಅವರು ಏನು ಹೇಳಿದರು ಎಂದರೆ ಸಗಣಿ ಮತ್ತು ಅದರ ಗಂಜಲ, ಸ್ವಾಸ್ಥ್ಯ ಮತ್ತು ಆರೋಗ್ಯಕ್ಕೆ ಬಹಳ ಪುಷ್ಠಿಕರವಾದುದು. ನೀವು ಈ ಬಗ್ಗೆ ವಿಚಾರ ಮಾಡಬೇಕು. Drunkle Draft ನಲ್ಲಿ Sanitation and phytosanitation ಬಗ್ಗೆ ತಾವು ಓದಿರಬಹುದು. Phytosanitation ಏನಿದೆ, ಅದು ನಾವು ತಿನ್ನುವಂತಹ ಆಹಾರ ಇರಬಹುದು, ಆ ಒಂದು cell body ಯ ಒಳಗೆ ಈ pesticide ಮತ್ತೊಂದು ರಸಾಯನಿಕ ಗೊಬ್ಬರದ ಅಂಶಗಳು ಹೋಗಿ, ಅದರಿಂದ ದೀರ್ಘ ಕಾಲೀನ ಮನುಷ್ಯರಿಗೆ, ಪ್ರಾಣಿಗಳ ತಳಿಗಳಿಗೆ ಇವರೆಲ್ಲಿರಿಗೂ ಆಗುತ್ತಿರುವ ತೊಂದರೆಗಳ ಬಗ್ಗೆ ಆ Phytosanitation ಹೇಳುತ್ತದೆ. ಅದರಲ್ಲಿ 'progressively unless we reduce chemical fertilizers, this congrenital manlformations and genetic disorder are likely to happen' ಎಂದು ಹೇಳುತ್ತದೆ. ಇದನ್ನು ಧೀರ್ಘ ಕಾಲ ಯೋಚನೆ ಮಾಡಬೇಕೆಲ್ಲವೇ? ನಮ್ಮ ರಫ್ತಿಗೆ ಒಂದು ಷರತ್ತು ಏನೆಂದರೆ; your products must be phytosanitic. ನಮ್ಮ ಹತ್ತಿರ Phytosanitation ಎಂದು ಅದನ್ನು ಅಳತೆ ಮಾಡುವಂತಹ ಸಾಧನವೇ ಇರಲಿಲ್ಲ. ಭಾರತ ದೇಶದ ಸುಮಾರು 17 ರಾಜ್ಯಗಳಲ್ಲಿ ನಾವು ಈಗ ಏನು ಕಾನೂನು ಮಾಡಿದ್ದೇವೆ, ಅದೇ ರೀತಿಯ ಕಾನೂನು ಇದೆ. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಆರ್.ಸಿ. ಲಹೋಟಿಯವರ 2005 ತೀರ್ಪಿನಲ್ಲಿ ಅದನ್ನು ಎತ್ತಿ ಹಿಡಿದಿದ್ದಾರೆ. Cattle ಅನ್ನು ಎತ್ತಿ ಹಿಡಿದಿದ್ದಾರೆ. Milch and draught cattle ಬಗ್ಗೆ ಏನು ನಮ್ಮ ಕಾಯಿದೆಯನ್ನು ಮಾಡಿದೆ, ಅದನ್ನು ಮಾಡಿದೆ. ಭಾರತದಲ್ಲಿ ಅತೀ ಹೆಚ್ಚು punishment ಇದರ ಬಗ್ಗೆ ಇದ್ದರೆ, ಅದು

ಜಮ್ಮು-ಕಾಶ್ಮೀರ್‌ನ ಸರ್ಕಾರದಲ್ಲಿದೆ, ಅದರಲ್ಲಿ 10 ವರ್ಷದ imprisonment ಅದರಲ್ಲಿದೆ. ಮದ್ಯ ಪ್ರದೇಶದಲ್ಲಿದೆ, ಗುಜರಾತ್‌ನಲ್ಲಿದೆ, ಹರಿಯಾಣದಲ್ಲಿದೆ. ಅವರ ವಿಚಾರಗಳನ್ನು ಸುಪ್ರೀಂ ಕೋರ್ಟಿನಲ್ಲಿ 7 ಜನರ ವಿಭಾಗೀಯ ಪೀಠ ಎತ್ತಿ ಹಿಡಿದಿದ್ದಾರೆ, ಅದನ್ನು ನಾವು ತಂದಿದ್ದೇವೆಯೇ ವಿನಃ ಒಂದು ಅಕ್ಷರ ಹೆಚ್ಚು-ಕಡಿಮೆಯಿಲ್ಲ. ಮತ್ತೆ interstate trade ಬಗ್ಗೆ it is Conditional, not absolute. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹೋಗುವುದು ಇದ್ದರೆ, ನಾವು ಅದನ್ನು ಕೊಡುತ್ತಿಲ್ಲ. Druaght cattle ಎಂದು agriculture animal ಹೋಗುವುದಾದರೆ ನಮ್ಮದೇನೂ ನಿರ್ಭಂಧವಿಲ್ಲ. ಅದಕ್ಕೆ ಬೇಕಾದಂತಹ ಪ್ರಮಾಣಪತ್ರವನ್ನು ಕೊಡಬೇಕು. ಹೀಗಾಗಿ, ಆ ಒಂದು interstate trade ಅದರ ಪ್ರಕಾರ ಅದು ರಾಷ್ಟ್ರಪತಿಗಳಿಗೆ ಬರುತ್ತದೆ ಎಂದರೆ ಅದು ಬರುವುದಿಲ್ಲ. ಈ ವಿಚಾರವಾಗಿ ಕಾನೂನನ್ನು ಬೇರೆ ಬೇರೆ ರಾಜ್ಯಗಳ ರಾಜ್ಯಪಾಲರುಗಳು ಮಾಡಿರುವಂತಹದ್ದಾಗಿದೆ. ನಮ್ಮಲ್ಲಿಯೂ ಸಹ ಅದೇ ರೀತಿ ಮಾಡಿದ್ದೇವೆ.

**ಪ್ರೊ॥ ಪಿ.ವಿ. ಕೃಷ್ಣಭಟ್:** ಮಾನ್ಯ ಸಭಾಪತಿಯವರೇ, ಚರ್ಚೆಗೆ ಬೇರೆ ಬೇರೆ dimensions ಬರುತ್ತವೆನ್ನುವ ಕಾರಣಕ್ಕೋಸ್ಕರ ನಾನು yield ಆಗಿದ್ದೆನು. ಇನ್ನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೇ ನನ್ನ ಭಾಷಣವನ್ನು ಬೇಗ ಮುಗಿಸುತ್ತೇನೆ. ನಾವೆಲ್ಲರೂ ಇಲ್ಲಿ ಬಹಳ ಪ್ರಮುಖರಿದ್ದು, ಇಲ್ಲಿ ಬಹಳ ಮುಖ್ಯವಾದ ವಿಚಾರವನ್ನು ಗಮನಿಸಬೇಕಾಗುತ್ತದೆ. ದೇಶದ ಒಟ್ಟು ಸಮಗ್ರ ಚಿಂತನೆ ಮಾಡುವಂತಹ ಅನೇಕ ಹಿರಿಯರೆಲ್ಲರೂ ಇದ್ದೀರಿ. ಇದನ್ನು ಕೇವಲ legalistic ಆಗಿ ಯೋಚನೆ ಮಾಡುವುದಕ್ಕೆ ಹೋಗುವುದನ್ನು ಬೇಡ. ಇದಲ್ಲಿ ಒಂದು ಕಡೆ ಅದರ legal economic aspects ಇದೆ. Sentimental ಇದೆ. ಸಮಗ್ರವಾಗಿರುವ ಸಾಂಸ್ಕೃತಿಕ ಪ್ರಶ್ನೆಯೂ ಕೂಡ ಇದೆ. ಗೋವಿಗೆ ನಾವು ಎಷ್ಟೊಂದು ಮಹತ್ವವನ್ನು ನಮ್ಮ ಸಂಸ್ಕೃತಿಯಲ್ಲಿ ಏತಕ್ಕೆ ಕೊಡಲಾಗಿದೆ ಎನ್ನುವುದಕ್ಕೆ ಅದಕ್ಕೆ economic ಕಾರಣಗಳಿವೆ. ಇಷ್ಟೊಂದು ಮಹತ್ವದ ಕಾರಣಕ್ಕೋಸ್ಕರವಾಗಿ ನಾನು ಈ ವಿಚಾರವಾಗಿ ಹೇಳುತ್ತಿದ್ದೇನೆ. ನಾವು ಈ ಒಂದು legal ಚರ್ಚೆಗಳಲ್ಲಿ ಕಳೆದ ಆರು ತಿಂಗಳುಗಳಿಂದ ಈ ಒಂದು ಬಿಲ್ ಏನು ಪೆಂಡಿಂಗ್ ಇದೆ, ಈ ನಡುವೆ ಎಷ್ಟೊಂದು ಗೋವುಗಳ

ಹತ್ಯೆಯಾಗಿರಬಹುದು ಎನ್ನುವುದನ್ನು ನೀವು ಲೆಕ್ಕಹಾಕಿ. ನಾವು ಈ ಬಗ್ಗೆ ಒಂದು ಕಾನೂನನ್ನು ಜಾರಿಗೊಳಿಸುವಂತಹದ್ದು ಆದರೆ, ಆಕಸ್ಮಾತ್ ಆಗಿ ಅದರಲ್ಲಿ ಏನಾದರೂ practical problems ಇದ್ದಲ್ಲಿ ಅದನ್ನು exemptions ಕೂಡ ಮಾಡಬಹುದು. ಈ ರೀತಿಯ ತುಂಬಾ ಗಂಭೀರವಾಗಿರುವಂತಹ ಕಾಯಿದೆಗಳಿದ್ದ ಸಂದರ್ಭದಲ್ಲಿ ಸಾಯಿಸುವುದಕ್ಕೂ ಕೂಡ ಅವಕಾಶವನ್ನು ಕೊಡಬೇಕೆಂದು ಈ ವಿಚಾರವಾಗಿ ಸುಪ್ರೀಂ ಕೋರ್ಟಿನಲ್ಲಿಯೂ ಸಹ ಒಂದು ಪ್ರಶ್ನೆ ಬಂದಿದೆ. ಅದರಲ್ಲಿ ದಯಾಮರಣದ ಪ್ರಶ್ನೆ ಬಂದಿದೆ. ಆ ರೀತಿಯ exemption ಪ್ರಶ್ನೆ ಬೇರೆ.

**ಶ್ರೀ ವಿ.ಆರ್. ಸುದರ್ಶನ್ ವಿಧಾನಸಭಾ ಕ್ಷೇತ್ರ:–** ಮಾನ್ಯ ಸಭಾಪತಿ ಯವರೇ,

**ಪ್ರೊ॥ ಪಿ.ವಿ. ಕೃಷ್ಣಭಟ್:–** ಮಾನ್ಯ ಸದಸ್ಯರಾದ ಶ್ರೀಯುತ ಸುದರ್ಶನ್‌ರವರಿಗೆ ನಂತರ ಅವಕಾಶ ಸಿಗುತ್ತದೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

**ಶ್ರೀ ವಿ.ಆರ್. ಸುದರ್ಶನ್:** ಮಾನ್ಯ ಸದಸ್ಯರು ಒಂದೇ ಒಂದು ನಿಮಿಷ yeild ಆಗಬೇಕು.

**ಪ್ರೊ ॥ ಪಿ.ವಿ. ಕೃಷ್ಣಭಟ್ :** ಆಗಬಹುದು.

**ಶ್ರೀ ವಿ.ಆರ್. ಸುದರ್ಶನ್:** ಮಾನ್ಯ ಸಭಾಪತಿಯವರೇ, ಉತ್ತಮವಾದಂತಹ ವಿಷಯವನ್ನು ಪ್ರೊಫೆಸರ್‌ರವರು ತಂದಿದ್ದಾರೆ. ಶ್ರೀಯುತ ನಾಣಯ್ಯನವರು ಸಹ ಅದಕ್ಕೆ ಪ್ರತಿಕ್ರಿಯಿಸಿದ್ದಾರೆ. ಅಭಿಪ್ರಾಯಗಳು ಹೇಗೆ ಇರಬೇಕೆಂದರೆ ತುಪ್ಪ–ಮೊಸರು ತಿನ್ನುವವರ ಅಭಿಪ್ರಾಯ ಎಷ್ಟು ಮುಖ್ಯವೋ ಏನು ಸಗಣಿ ತೆಗೆಯುತ್ತಾರೆ ಅವರ ಅಭಿಪ್ರಾಯ ಮುಖ್ಯವಾಗುತ್ತದೆ. ಇವತ್ತು ಪ್ರತಿ ಹಳ್ಳಿಗಳಲ್ಲೂ ಕೂಡ ಹಾಲು ಉತ್ಪಾದಕರ ಸಹಕಾರ ಸಂಘಗಳು ಬಂದಿವೆ. ಈ ಭಾಗದಲ್ಲಂತೂ ಕೂಡ ಹೆಚ್ಚಿನ ಪ್ರಮಾಣದಲ್ಲಿವೆ. ಬರಗಾಲದ ಸಂದರ್ಭದಲ್ಲಿಯೂ ಕೂಡ ಜನರು ಯಾವುದಾದರಿಂದ ಬದುಕಿದ್ದರೆ ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ರಾಜ್ಯದಲ್ಲಿ ಜೀವನ ಮಾಡುವಂತಹ

ಪರಿಸ್ಥಿತಿ ಸಂದರ್ಭಗಳಿವೆ. ಪ್ರತಿ ಹದಿನೈದು ದಿವಸಕ್ಕೊಮ್ಮೆ ಅವರಿಗೆ ಹಣ ಬರುತ್ತದೆ. ಗಂಡು ಕರುವನ್ನು ಹಾಕಿದರೆ ಎರಡು ದಿವಸವೂ ರೈತರು ಇಟ್ಟುಕೊಳ್ಳುವುದಿಲ್ಲ. ಆ ರೀತಿಯ ಪರಿಸ್ಥಿತಿ ಇದೆ. ಇದು ವಾಸ್ತವಾಂಶ. ಇದನ್ನು ಸಹ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕಾನೂನಿನ ಬಗ್ಗೆ, ಸಂವಿಧಾನದ ಬಗ್ಗೆ ಆಲೋಚನೆ ಮಾಡುವಂತಹ ಸಂದರ್ಭದಲ್ಲಿ ನಿಜವಾದಂತಹ ಸಗಣಿ ಎತ್ತುವವನ ಮತ್ತು ಮೇವು ಅನ್ನು ತರುವವನ ಬಗ್ಗೆಯೂ ಆಲೋಚನೆ ಮಾಡಬೇಕಾಗುತ್ತದೆ. ಇವತ್ತು ಏನಾಗಿದೆ ಎಂದರೆ ಗೋಮಾಳದ ಜಮೀನು ಇರುವುದಿಲ್ಲ. ಈ ವಿಚಾರದಲ್ಲಿ ಹಿಂದಿನವರ ದೂರದೃಷ್ಟಿ ಇತ್ತು. ಪ್ರತಿ ಹಳ್ಳಿಗೆ ಒಂದು ಕೆರೆ, ಆ ಊರಿನಲ್ಲರುವಂತಹ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ 50 ಎಕರೆ ಗೋಮಾಳದ ಜಮೀನು ಇತ್ತು. ಇವತ್ತು ಇದೆಯೇ ಗೋಮಾಳದ ಜಮೀನು? ಅದನ್ನೂ ಕೂಡ ಇವತ್ತು ಗಮನಹರಿಸ ಬೇಕಾಗುತ್ತದೆ. ಅದೇ ವಿಚಾರವಾಗಿ ನಾನು ಹೇಳುತ್ತಿರುವುದು. ಬರಿ ಮೊಸರು ತುಪ್ಪವನ್ನು ತಿಂದುಕೊಂಡು ಇದ್ದರೆ ಸಾಲುವುದಿಲ್ಲ. ಕೈಗೆ ಏನು ಸಗಣಿ ಮಾಡಿಕೊಳ್ಳುತ್ತಾರೆ, ಅವರ ಭಾವನೆಗಳನ್ನೂ ಕೂಡ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

**ಶ್ರೀ ಗೋ. ಮಧುಸೂಧನ್ ಪದವೀಧರರ ಕ್ಷೇತ್ರ:–** ಮಾನ್ಯ ಸಭಾಪತಿ ಯವರೇ, ಸನ್ಮಾನ್ಯ ಸದಸ್ಯರಾದ ಪ್ರೊ॥ ಕೃಷ್ಣಭಟ್‌ರವರು ಈ ಬಗ್ಗೆ ಮಾತನಾಡಿದರು. ಇವತ್ತು ಮದ್ಯಾಹ್ನ 12–00 ಗಂಟೆಗೆ ಸುಪ್ರೀಂಕೋರ್ಟ್ ತೀರ್ಪು ಇದ್ದು 37 ವರ್ಷಗಳಿಂದ ಕೋಮಾದಲ್ಲಿದ್ದಂತಹ ಹೆಣ್ಣುಮಕ್ಕಳಿಗೆ ದಯಾಮರಣದ ಅನುಮತಿಯನ್ನು ನಮ್ಮ ದೇಶದಲ್ಲಿ ಕೊಟ್ಟಿಲ್ಲ. ನಮ್ಮ ದೇಶದಲ್ಲಿ 37 ವರ್ಷಗಳಿಂದ ಹಾಸಿಗೆಯಲ್ಲಿ ಬಿದ್ದಿರುವಂತಹ ಹೆಣ್ಣುಮಕ್ಕಳಿಗೆ ದಯಾಮರಣ ಕೊಡದೇ ಇರುವಂತಹ ಪರಿಸ್ಥಿತಿ ಇದೆ. ನಾವು ಈಗಾಗಲೇ ಲಿಂಗ ತಾರತಮ್ಯದ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದರು. ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿಲ್ಲವೆಂದು ಹೇಳಿದರು. Draught cattle ಗಳಿಗೆ ಅವಕಾಶವನ್ನು ಕೊಟ್ಟುಬಿಟ್ಟರೆ ನಾವು ಆ ಎಲ್ಲಾ ಹಸುಗಳಿಗೆ ಹೋರಿ ಕೊಡಿಸಲಿಕ್ಕೆ ವಿದೇಶಗಳಿಂದ ಹೋರಿಗಳನ್ನು ಕರೆದು

ಕೊಂಡು ಬರುವ ಪರಿಸ್ಥಿತಿ ಬಂದಿತು ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ:** ಮಾನ್ಯ ಸಭಾಪತಿಯವರೆ, ಈ ವಿಚಾರವಾಗಿ ತಾವು ಅಪಾರ್ಥ ಮಾಡಿಕೊಳ್ಳಬೇಡಿ. ಸುಪ್ರೀಂ ಕೋರ್ಟಿನವರು ಏತಕ್ಕೆ ಈ ವಿಚಾರದಲ್ಲಿ ಅನುಮತಿಯನ್ನು ಕೊಡಲಿಲ್ಲವೆನ್ನುವುದನ್ನು ನೀವು ಹೇಳಬೇಡಿ. ಅವರು ಏತಕ್ಕೆ ಕೊಟ್ಟಿಲ್ಲವೆಂದರೆ ಈ ಒಂದು ವಿಚಾರವಾಗಿ ಸುಪ್ರೀಂ ಕೋರ್ಟಿನ ಮೂಲಕ ತೀರ್ಪನ್ನು ಕೊಟ್ಟರೆ ಇದನ್ನು ದುರುಪಯೋಗ ಮಾಡಲಿಕ್ಕೆ ಇರುವಂತಹದ್ದು ರಾಷ್ಟ್ರದ ಉದ್ದಗಲಕ್ಕೂ ನಡೆದವು. ಮಗ ಆಸ್ತಿಯನ್ನು ಕಬಳಿಸುವುದಕ್ಕೋಸ್ಕರ ಅಪ್ಪನನ್ನೆ ಕೊಲೆ ಮಾಡುವಂತಹ ಪರಿಸ್ಥಿತಿ ನಿರ್ಮಾಣ ಆಗಲಿಕ್ಕೆ ಇರುವಂತಹ ಹಂತವೂ ಕೂಡ ಬರಲಿಕ್ಕೆ ಸಾಧ್ಯತೆ ಇಲ್ಲವೇ ಎಂದು ಹೇಳುವಂತಹ ಬಹಳ ದೊಡ್ಡ ಮಾರ್ಮಿಕ ಒಂದು ಪ್ರಶ್ನೆಯನ್ನು ಕೂಡ ಕೇಳಿದರು. It is absolutely misusing of certain things. ಅಮೇರಿಕಾದಲ್ಲಿರತಕ್ಕಂತಹ Oregon ರಾಜ್ಯದಲ್ಲಿ ಮಾತ್ರ ಈ ಒಂದು ಅಧಿಕಾರವನ್ನು ಕೊಟ್ಟಿದ್ದಾರೆ. ಬಾಕಿ ಯಾರೂ ಕೂಡ ಈ ಅಧಿಕಾರವನ್ನು ಕೊಟ್ಟಿರಲಿಲ್ಲ. ಅದಕ್ಕೆ ಇದನ್ನು ತಳಕು ಮಾಡಬೇಡಿ. ಮನುಷ್ಯನನ್ನು ಕೊಲ್ಲುವುದು ಬಹಳ ಸುಲಭ. 15 ನಿಮಿಷದಲ್ಲಿ ಮುಗಿಸಿ ಎಂದು ಹೇಳಿದರೆ ಮುಗಿಸಿಯೇ ಬಿಡುತ್ತಾರೆ. ವ್ಯಾಖ್ಯಾನ ಮಾಡುವಾಗ ಏಕೆ ಎಂಬುದನ್ನು ತಿಳಿದುಕೊಳ್ಳಿ.

**ಪ್ರೊ ಪಿ.ವಿ. ಕೃಷ್ಣಭಟ್:–** ಮಾನ್ಯ ಸಭಾಪತಿಯವರೆ, ಇದು ಬಹಳ ಗಂಭೀರವಾಗಿರುವಂತಹ ವಿಷಯ ಇದೆ. ಇದಕ್ಕೆ ಸುಪ್ರೀಂ ಕೋರ್ಟು ಏಕೆ ಅನುಮತಿಯನ್ನು ಕೊಟ್ಟಿಲ್ಲವೆಂದರೆ, ಇದಕ್ಕೆ ಅನುಮತಿಯನ್ನು ಕೊಟ್ಟಿದ್ದೇ ಆದರೆ ಇದರ ದುರುಪಯೋಗ ಬಹಳಷ್ಟು ಮಟ್ಟಿಗೆ ನಡೆಯುತ್ತದೆ ಎಂಬ ಉದ್ದೇಶದಿಂದ ಇದಕ್ಕೆ ಅನುಮತಿಯನ್ನು ಕೊಟ್ಟಿರುವುದಿಲ್ಲವೆಂದು ಅನ್ನಿಸುತ್ತದೆ. ಹಿಂದೆ ಗೋಹತ್ಯೆ ವಿಷಯದಲ್ಲಿ ಆಗಿರುವುದು ಇದೇ ಆಗಿದೆ. ಉಪಯೋಗಕ್ಕೆ ಬಾರದೇ ಇರುವಂತಹ ದನಗಳನ್ನು ಹತ್ಯೆ ಮಾಡಬಹುದು ಎಂದು ಒಂದು ಸಲ ಹೇಳಿದ ನಂತರ ಇವತ್ತಿನ ದಿವಸ ಅದರ ದುರುಪಯೋಗ ಆಗುತ್ತಿದೆ.

ಹಾಗಾಗಿ ಉಪಯೋಗಕ್ಕೆ ಬರುವಂತಹ ಗೋವುಗಳ ಹತ್ಯೆ ಆಗ ಆಗುವುದಿಲ್ಲ. ಕೇವಲ ಆರ್ಥಿಕವಾಗಿ ಇರುವಂತಹ ಕಾನೂನಿನ ಪ್ರಶ್ನೆ ಮಾತ್ರವಲ್ಲ. ಈ ಸಮಾಜದಲ್ಲಿ ಬೆಳೆದುಕೊಂಡು ಬಂದಿರತಕ್ಕಂಥಹ ನಂಬಿಕೆ ಭಾವನೆ ಪ್ರಶ್ನೆ ಕೂಡ ಇದರಲ್ಲಿ ಅಡಗಿದೆ. ಭೂಮಿಯ ಬಗ್ಗೆ ಈ ಭಾವನೆ ಗೋವಿನ ಬಗ್ಗೆ ಈ ಭಾವನೆ ಇರುವುದರ ಒಂದು ಆರ್ಥಿಕ ಚಿಂತನೆಯೂ ಕೂಡ ಅಡಕವಾಗಿದೆ. ಸಮಗ್ರ ಜೀವನದ ಚಿಂತನೆಯೂ ಕೂಡ ಅಡಕವಾಗಿದೆ. ಅದರ ಹಿಂದೆ ಸಮಗ್ರ ಜೀವನದ ಚಿಂತನೆ ಅಡಕವಾಗಿದೆ. ಇವತ್ತಿನ ದಿವಸ ಈಗ ಅದು ಹೊರಟು ಹೋಗಿದೆ. ತಂದೆ–ತಾಯಿಗಳನ್ನು ಮರೆತು ಅವರನ್ನು ಅನಾಥವಾಗಿ ಮಾಡಿ ವಿದೇಶಕ್ಕೆ ಹೋಗಿ ಅಲ್ಲಿ ನೌಕರಿ ಮಾಡಿಕೊಂಡು ಕೈ ತುಂಬಾ ಹಣ ಗಳಿಸುತ್ತಿರುವಂತಹ ಸ್ಥಿತಿ ನಿರ್ಮಾಣವಾಗಿದೆ. ಸಮಾಜಕ್ಕೆ ಪೋಷಕವಾಗಿರುವಂತಹ ಭಾವನೆಗಳನ್ನು ಬೆಳೆಸದೇ ಹೋದರೆ ಕೇವಲ secular approach ನಿಂದ ಈ ಸಮಾಜದ ಸಮಸ್ಯೆಗಳು ಬಗೆಹರಿಯುವುದಿಲ್ಲ. ಸಮಾಜದ ಭಾವನೆಗಳನ್ನು ಗುರುತಿಸಿ ಇದಕ್ಕೆ ಅನುಗುಣವಾಗಿ ಈ ಕಾನೂನುಗಳನ್ನು ರಚನೆ ಮಾಡಬೇಕು. ತಂದೆ ತಾಯಿಗಳಿಗೆ ಏಕೆ ನಮಸ್ಕಾರ ಮಾಡಬೇಕೆಂಬ ಒಂದು logic ಶುರುವಾದರೆ ಮನುಷ್ಯ–ಮನುಷ್ಯನ ನಡುವೆ ಯಾವುದೇ ಸಂಬಂಧ ಉಳಿಯುವುದಿಲ್ಲ. ಮನುಷ್ಯ, ಪ್ರಕೃತಿಯ ನಡುವೆ, ಮನುಷ್ಯ ಮತ್ತು ಪ್ರಾಣಿಗಳ ನಡುವೆ ಇರಬೇಕಾದಂತಹ ಭಾವನಾತ್ಮಕವಾದ ಸಂಬಂಧದ ಆಧಾರದ ಮೇಲೆ ನಮ್ಮ ಸಾಮಾಜಿಕ ರಚನೆ ನಮ್ಮ ಆರ್ಥಿಕ ರಚನೆ, ನಮ್ಮ ಸಾಮಾಜಿಕ ಸಂಸ್ಕೃತಿಗಳು ನಿರ್ಮಾಣವಾಗಿರುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡು ಸಮಾಜದಲ್ಲಿರಕ್ಕಂತಹ ಪ್ರಮುಖರು ಯೋಚನೆ ಮಾಡಬೇಕಾಗುತ್ತದೆ. ಗೋಮಾಳಗಳನ್ನು ಸಂರಕ್ಷಣೆ ಮಾಡತಕ್ಕಂಥಹ ನಿಟ್ಟಿನಲ್ಲಿ ಸರ್ಕಾರ ವಿಶೇಷ ವಾದ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಇನ್ನು ಶಿಕ್ಷಣದ ಬಗ್ಗೆ ಕೆಲವೇ ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಶಿಕ್ಷಣಕ್ಕೆ ಸಾಕಷ್ಟು ಪ್ರಾಶಸ್ತ್ಯವನ್ನು ಸರ್ಕಾರ ಕೊಟ್ಟಿದೆ. ಕೇಂದ್ರ ಸರ್ಕಾರ ಇವತ್ತಿನ ದಿವಸ ಶಿಕ್ಷಣವನ್ನು ಮೂಲಭೂತವಾದ ಹಕ್ಕನ್ನಾಗಿ ಮಾಡಬೇಕೆಂದು ಪ್ರಯತ್ನ ನಡೆದಿದೆ. ಆದರೆ ಶಿಕ್ಷಣವನ್ನು ಕಾನೂನಿನ ಪುಸ್ತಕದಲ್ಲಿ ಮೂಲಭೂತ ಹಕ್ಕೆಂದು

ಮಾಡುವುದರಿಂದ ಎಲ್ಲರಿಗೂ ಶಿಕ್ಷಣವನ್ನು ತಲುಪಿಸುವುದು ಸಾಧ್ಯವಿಲ್ಲ. ನನಗೆ ಪ್ರತ್ಯಕ್ಷ ಅನುಭವ ಇದೆ. ಒಂದು ಸಲ ನಾನು ಒಂದು ಸ್ಲಂ ಏರಿಯಾದಲ್ಲಿ ಹೋಗಿ ಅಲ್ಲಿನ ಜನಗಳನ್ನು ನಿಮ್ಮ ಮಕ್ಕಳು ಶಾಲೆಗೆ ಹೋಗುತ್ತಿದ್ದಾರಾ ಎಂದು ಕೇಳಿದೆ ಅನೇಕ ಮನೆಗಳಲ್ಲಿ 2–3 ನೇ ಕ್ಲಾಸಿನ ತನಕ ಶಾಲೆಗೆ ಕಳಿಸುತ್ತೇವೆ ನಂತರ ಅವರನ್ನು ಶಾಲೆ ಬಿಡಿಸಿದೆವು. ಆ ಮಕ್ಕಳನ್ನು ಚಾಪೆ, ಬುಟ್ಟಿ ಹೆಣೆಯುವ ಕೆಲಸಕ್ಕೆ ಕಳುಹಿಸುತ್ತಿದ್ದೇವೆ ಎಂದು ಮೇದಾರರು ಹೇಳುತ್ತಾರೆ. ಅವರು ಅಲ್ಲಿಂದ ಮುಂದಕ್ಕೆ ಓದಲು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರಲಿಲ್ಲ. ಏಕೆ ಕಳುಹಿಸುತ್ತಿಲ್ಲವೆಂದು ಕೇಳಿದ್ದಕ್ಕೆ ಅವರು ನಮ್ಮ ಮಕ್ಕಳು ಅಷ್ಟೇನೂ ಬುದ್ಧಿವಂತರಲ್ಲ ಹೆಚ್ಚು ಅಂದರೆ 3–4 ನೇ ತರಗತಿಯವರೆಗೆ ಶಾಲೆಗೆ ಕಳುಹಿಸುತ್ತೇವೆ. ಆ ಶಿಕ್ಷಣದಲ್ಲಿ ಅವರಿಗೆ ಇಂಟರೆಸ್ಟ್ ಇರುವುದಿಲ್ಲ. ಶಾಲೆ ಬಿಟ್ಟು ಬಿಡುತ್ತಾರೆ. ಸ್ವಲ್ಪ ದೊಡ್ಡವರಾದ ಮೇಲೆ ಅವರು ಬೇರೆ ಬೇರೆ ಕಡೆಗೆ ತಿರುಗಿಕೊಳ್ಳುತ್ತಾರೆ. ನಾವು ಬಡವರು ಆ ಮಕ್ಕಳನ್ನು ಅಡಕೆ ಸುಲಿಯುವ ಕೆಲಸಕ್ಕೆ ಕಳುಹಿಸಿದರೆ ಒಂದು ದಿನಕ್ಕೆ 3–4 ರೂಪಾಯಿ ಕೂಲಿ ಸಿಗುತ್ತದೆ. ನಮ್ಮ ಸಂಸಾರ ಸಾಗಿ ಹೊಟ್ಟೆ ಹೊರೆಯುವುದುಕ್ಕೆ ಆಗಿತ್ತದೆ ಎಂದು ಹೇಳಿದರು. ಹೀಗಿರುವಾಗ ನಮ್ಮ ಮಕ್ಕಳು ಓದಿಕೊಂಡು ಏನು ಮಾಡಬೇಕು ಎಂದು ಹೇಳಿದರು. ಈ ವಿದ್ಯಾಭ್ಯಾಸವನ್ನು ಮಾಡುವುದರಿಂದ ನಮಗೆ ಏನೂ ಪ್ರಯೋಜನವಿಲ್ಲವೆಂದು ಹೇಳಿದರೆ ನಾವೂ ಕೂಡ ಅದರ ಕಡೆಗೆ ಇವತ್ತಿನ ದಿವಸ ಯೋಚನೆ ಮಾಡಬೇಕಾಗಿದೆ. ಶಿಕ್ಷಣವನ್ನು, how can we make it relevant to the people? ಈ ದಿಸೆಯಲ್ಲಿ ನಾವು ಯೋಚನೆ ಮಾಡಬೇಕಾಗಿದೆ. ಇವತ್ತು ಪೂರ್ತಿ ನಮ್ಮ ಯೋಚನೆ urban middle class oriented ಯೋಚನೆ ಆಗಿದೆ. ನಮ್ಮ ಮಕ್ಕಳು trim ಆಗಿ uniform ಹಾಕಿಕೊಂಡು Tiffin box ಹೊತ್ತುಕೊಂಡು ಬೆನ್ನ ಹಿಂದೆ ಚೀಲಗಳನ್ನು ಹಾಕಿಕೊಂಡು ಶಾಲೆಗಳಿಗೆ ಹೋಗಿ ಬರುತ್ತಾರೆ. ಆ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಸಿಗುತ್ತದೆಂದು ನಾವು ಭಾವಿಸುತ್ತೇವೆ. ಗ್ರಾಮೀಣ ಕ್ಷೇತ್ರಗಳಲ್ಲಿ ಇರುವಂತಹ ಮಕ್ಕಳಿಗೆ ಆ ಶಿಕ್ಷಣವನ್ನು ಕೊಡುವ ಸ್ಥಿತಿಯಲ್ಲಿ ಇಲ್ಲ. ಮತ್ತು ಅದರಿಂದ ಆ ಮಕ್ಕಳಿಗೆ ಉಪಯೋಗವಾಗುತ್ತದೆ ಎಂದು ಕೂಡ ಅವರಿಗೆ ಅನ್ನಿಸಿಲ್ಲ. ಇದರ ಅರ್ಥ ಈ

ಶಿಕ್ಷಣವನ್ನು ನಾನು universalise ಮಾಡಬಾರದೆಂದು ಹೇಳುತ್ತಿಲ್ಲ, we have to prevent the multiple systems. ಇದಕ್ಕೆ ಬೆಂಗಳೂರಿನಲ್ಲಿರುವಂತಹ ಪ್ರತಿಷ್ಠಿತ ಏರಿಯಾದಲ್ಲಿನ ಮಕ್ಕಳಿಗೆ ಮತ್ತು ಗ್ರಾಮೀಣ ಪ್ರದೇಶದಲ್ಲಿರತಕ್ಕಂಥಹ ಮಕ್ಕಳಿಗೆ common system of schooling ನಿಂದ ಉಪಯೋಗ ಆಗುವುದಿಲ್ಲ. ಜಿಲ್ಲೆ ಜಿಲ್ಲೆಗೆ ಪ್ರತ್ಯೇಕವಾಗಿರತಕ್ಕಂಥಹ planning ಆಗಬೇಕು. ಬೇರೆ ಬೇರೆ ಅವರ ಅವಶ್ಯಕತೆಗಳಿಗೆ, ಚಟುವಟಿಕೆಗಳಿಗೆ ತಕ್ಕಂತೆ ಅದಕ್ಕನುಗುಣವಾದ ಶಿಕ್ಷಣವನ್ನು ಕೊಡುವ ದಿಸೆಯಲ್ಲಿ ಒಂದು ಚಿಂತನೆ ಆಗಬೇಕು. ಸೌಲಭ್ಯಗಳ ವಿಸ್ತರಣೆ ಆಗಬೇಕು. ಶಿಕ್ಷಣವನ್ನು ಹೆಚ್ಚು ಪ್ರಾಸಂಗಿಕಗೊಳಿಸಬೇಕು. Relevant ಆಗಿರುವಂತಹ ಶಿಕ್ಷಣ ಮಕ್ಕಳಿಗೆ ಸಿಗುವ ಪ್ರಯತ್ನ ಆಗಬೇಕಾಗಿದೆ. ಇಲ್ಲಿ ಇರುವಂತಹವರು ಎಲ್ಲರೂ ಕೂಡ ಗಂಭೀರವಾಗಿ ಚಿಂತನೆಯನ್ನು ಮಾಡಬೇಕೆಂದು ನಾನು ಚಿಂತನೆ ಮಾಡುತ್ತೇನೆ. ಪರಿಹಾರ ನನ್ನ ಹತ್ತಿರವೂ ಇಲ್ಲ. ತಾವೆಲ್ಲರೂ ಚಿಂತನೆಯನ್ನು ಮಾಡಿ ಇದಕ್ಕೆ ಒಂದು ಪರಿಹಾರವನ್ನು ಹುಡುಕಬೇಕಾಗಿದೆ. ಇವತ್ತಿನ ದಿವಸ ಇಂಗ್ಲೀಷಿನ ಶಿಕ್ಷಣದ ಬಗ್ಗೆ ಏನು ಮೋಹ ನಿರ್ಮಾಣವಾಗುತ್ತಿದೆ ಇದರಿಂದಾಗಿ ಸಮಾಜದಲ್ಲಿ ಒಂದು ವರ್ಗ ಭೇದ ಜಾಸ್ತಿಯಾಗುತ್ತಿದೆ. Cultural alienation ಇವತ್ತು ಜಾಸ್ತಿಯಾಗುತ್ತಿದೆ. ನಾವು ಹಿಂದೆ ಓದುತ್ತಿದ್ದಾಗ ಕುಮಾರವ್ಯಾಸ ಆಗಿರಲಿ, ರನ್ನ, ಪಂಪ ಆಗಿರಲಿ ಇವರುಗಳ ಪದ್ಯ ಮತ್ತು ಗದ್ಯಗಳ ಬಗ್ಗೆ ಸ್ವಲ್ಪ ಮಟ್ಟಿಗೆ ಪರಿಚಯ ಇರುತ್ತಿತ್ತು. ಆದರೆ ಇಂದಿನ ಮಕ್ಕಳಿಗೆ ಪ್ರಾರಂಭದಿಂದಲೇ ಇಂಗ್ಲೀಷಿನಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಅನೇಕ ಶಾಲೆಗಳಲ್ಲಿ ಮಕ್ಕಳು ಕನ್ನಡದಲ್ಲಿ ಮಾತನಾಡಿದರೆ ಶಾಲೆಯವರು ದಂಡವನ್ನು ಹಾಕುತ್ತಾರೆ. ಮಾತೃ ಭಾಷೆಯಲ್ಲಿ ಮಾತನಾಡುವ ಹಾಗಿಲ್ಲ. ತಾಯಿ–ಮಕ್ಕಳು ಇವತ್ತಿನ ದಿವಸ ಇಂಗ್ಲೀಷಿನಲ್ಲಿ ಮಾತನಾಡುತ್ತಾರೆ, ಸಂಭಾಷಣೆ ಮಾಡುತ್ತಾರೆ. ಇವತ್ತು ಇಂಗ್ಲೀಷ್ ನಮಗೆ ಅವಶ್ಯಕತೆ ಇಲ್ಲವೆಂದು ನಾನು ಹೇಳುತ್ತಿಲ್ಲ. ನಮ್ಮತನವನ್ನು ನಾವು ಉಳಿಸಿಕೊಳ್ಳಬೇಕಾಗಿದೆ. ಅದರ ಜೊತೆಯಲ್ಲಿ, we must become Masters of English, not slaves of English ಈ ನಿಟ್ಟಿನಲ್ಲಿ ಇಂಗ್ಲೀಷನ್ನು ಕಲಿಸುವುದರ ಜೊತೆಗೆ ಕನ್ನಡವನ್ನು ಕಲಿಸುವ ಮತ್ತು ಕನ್ನಡದ ಶಾಲೆಗಳ ಬಗ್ಗೆ ಕೂಡ ಗಮನ ಕೊಡಬೇಕಾಗಿದೆ.

ಇದು ಒಂದು ಸಮಸ್ಯೆಯಾಗಿದೆ. ಕನ್ನಡ ಶಾಲೆಗಳು ಕೂಡ ಉದ್ಧಾರ ಆಗಬೇಕಾಗಿದೆ. ನೀಟಾಗಿ ಯೂನೀಫಾರಂ ಹಾಕಿಕೊಂಡು ಇಂಗ್ಲೀಷ್ ಶಾಲೆಗಳಿಗೆ ಹೋಗತಕ್ಕಂಥಹ ಶ್ರೀಮಂತರ ಮಕ್ಕಳು ಒಂದು ಕಡೆ, ಇನ್ನೊಂದು ಕಡೆಯಲ್ಲಿ ಸರ್ಕಾರಿ ಶಾಲೆಗೆ ಹೊಗುವ ಬಡ ಮಕ್ಕಳು ಇನ್ನೊಂದು ಕಡೆ ಇದೇ ಈ ಒಂದು class distinction, class division ಇವತ್ತು perpetuate ಆಗುತ್ತಿದೆ. We must try to bring common system of schooling. ಒಂದು ಏರಿಯಾದಲ್ಲಿ ಇರತಕ್ಕಂತಹ ಬಡ ಮಕ್ಕಳಾಗಿರಲಿ ಶ್ರೀಮಂತರ ಮಕ್ಕಳಾಗಿರಲಿ, ಬಡವರಾಗಿರಲಿ, ಅಧಿಕಾರಿಗಳಾಗಿರಲಿ, ಕೂಲಿಕಾರರಾಗಿರಲಿ ಆ ಎಲ್ಲಾ ಮಕ್ಕಳೂ ಕೂಡ ಒಂದೇ ಶಾಲೆಗೆ ಹೋಗಬೇಕೆನ್ನು ಈ ಒಂದು ಸಿಸ್ಟಂ ಪರದೇಶಗಳಲ್ಲಿ ಇದೆ ಎಂದು ನಾನು ಕೇಳಿದ್ದೇನೆ. ಅದೇ ರೀತಿಯಲ್ಲಿ ನಮ್ಮಲ್ಲಿ ಈ ಒಂದು common system of schooling ಅನ್ನು ತರುವ ನಿಟ್ಟಿನಲ್ಲಿ ನಾವು ಪ್ರಯತ್ನ ಮಾಡಬೇಕಾಗುತ್ತದೆ. ಏಕಾ ಏಕಿ ಇದೆಲ್ಲಾ ಆಗದೇ ಇರುವ ಕೆಲಸ. ಆದರೆ ಇದನ್ನು ಒಂದು ಮೊದಲನೆಯ ಹೆಜ್ಜೆಯನ್ನಾಗಿ ಸರ್ಕಾರ ತೆಗೆದುಕೊಳ್ಳಬಹುದು. ನಮ್ಮ ಸರ್ಕಾರಿ ಶಾಲೆಗಳ ಒಂದು ಸ್ಥಿತಿಯನ್ನು ಉತ್ತಮ ಪಡಿಸಬೇಕಾಗುತ್ತದೆ. ನಾನು ಓದುತ್ತಿದ್ದಾಗ ಹೈಸ್ಕೂಲಿಗೆ ಹೋಗಬೇಕಾದರೆ ನಮ್ಮ ಮೊದಲ ಆದ್ಯತೆ ಸರ್ಕಾರಿ ಶಾಲೆ ಆಗುತ್ತಿತ್ತು. ಅಲ್ಲಿ ಒಂದು ವೇಳೆ ಸೀಟು ಸಿಕ್ಕದೆ ಹೋದರೆ ನಂತರ ಖಾಸಗಿ ಶಾಲೆಗಳಿಗೆ ಆದ್ಯತೆಯನ್ನು ಕೊಡುತ್ತಿದ್ದೆವು. ಈಗ ಕಡೆಯ ಆದ್ಯತೆಯನ್ನು ಸರ್ಕಾರಿ ಶಾಲೆಗಳಿಗೆ ಕೊಡುತ್ತಿದ್ದಾರೆ. ಆದುದರಿಂದಾಗಿ ಸರ್ಕಾರಿ ಶಾಲೆಗಳ ಸ್ಥಿತಿಯನ್ನು ಉತ್ತಮಪಡಿಸಿ ಇಲ್ಲಿ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಸಿಗುತ್ತದೆ ಎನ್ನುವಂತಹ ಅವಕಾಶ, ವಾತಾವರಣವನ್ನು ನಿರ್ಮಾಣ ಮಾಡಿದ್ದೇ ಆದರೆ ಸಾಮಾಜಿಕ ಭೇದ ಈ ಶಿಕ್ಷಣದಲ್ಲಿ ಏನು ನಿರ್ಮಾಣವಾಗಿತ್ತಿದೆ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಕನ್ನಡದ ಭಾಷೆಯ ಅಭಿವೃದ್ಧಿಯ ದೃಷ್ಟಿಯಿಂದ ಸರ್ಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ ಮತ್ತು ಈ ಬಗ್ಗೆ ಸಾಕಷ್ಟು ಪ್ರಚಾರವೂ ನಡೆಯುತ್ತಿದೆ. ಕನ್ನಡದಲ್ಲಿ ಸಿನಿಮಾವನ್ನು ತಯಾರು ಮಾಡುವುದರಿಂದ ಮತ್ತು ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಿದರೆ ಕನ್ನಡದ ಸ್ಥಿತಿ

ಉತ್ತಮವಾಗುವುದಿಲ್ಲ. ಈ ಕುರಿತು ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸುವುದು ಸ್ವಲ್ಪ ಮಟ್ಟಿಗೆ ಅಗತ್ಯವಾಗುತ್ತದೆ. ಆದರೆ ಈ ಸಮ್ಮೇಳನದಿಂದಲೇ ಕನ್ನಡದ ಅಭಿವೃದ್ದಿ ಆಗುವುದಿಲ್ಲ. ಕನ್ನಡದಲ್ಲಿ ಪುಸ್ತಕಗಳು ಮುದ್ರಣ ವಾಗಬೇಕು. ಅದಕ್ಕೆ ಪೂರಕವಾದ ಅದಕ್ಕೆ ಸಮರ್ಥವಾಗಿ ಬೇಕಾಗಿರತಕ್ಕಂಥಹ ಅನೇಕ ಕ್ರಮಗಳನ್ನು ಮಾಡಬೇಕಾಗಿದೆ. ಕನ್ನಡದ ಮೂಲಕವಾಗಿ ಅತ್ಯಂತ ಆಧುನಿಕವಾದ ಜ್ಞಾನವನ್ನು ಆ ವಿದ್ಯಾರ್ಥಿಗಳಿಗೆ ಒದಗಿಸಬಲ್ಲೆವು ಎನ್ನುವ ಒಂದು ಮನೋಭಾವನೆ ನಿರ್ಮಾಣವಾಗಬೇಕಾಗಿದೆ. ಆ ರೀತಿಯ ಪುಸ್ತಕಗಳನ್ನು ತರಬೇಕಾಗಿದೆ. ಕನ್ನಡದ ಅಭಿವೃದ್ಧಿಗೋಸ್ಕರವಾಗಿ ಕನ್ನಡ ಭಾಷೆಯ ಬೆಳವಣಿಗೆಗೋಸ್ಕರವಾಗಿ ಅದರ ಕನ್ನಡದ ಒಂದು ಪ್ರತಿಷ್ಠಾನವನ್ನು ನಿರ್ಮಾಣ ಮಾಡಬೇಕು.

**ಶ್ರೀ ಗೋ. ಮಧುಸೂಧನ್:–** ನಮ್ಮ ಸ್ನೇಹಿತರೇ....

**ಸಭಾಪತಿಯವರು:–** ಈಗಾಗಲೇ ಸಾಕಷ್ಟು ಸಮಯ ಆಗಿದೆ. ಅವರು ಮುಗಿಸಲಿ ಇನ್ನೂ ಹಲವಾರು ಜನ ಸದಸ್ಯರು ಮಾತನಾಡುವವರಿದ್ದಾರೆ. ನಿಮ್ಮ ಪಕ್ಷದ ಎಲ್ಲಾ ಸಮಯವನ್ನೂ ಅವರಿಗೇ ಕೊಡುವುದಾದರೆ ನನ್ನ ಅಭ್ಯಂತರವಿಲ್ಲ.

**ಶ್ರೀ ಗೋ. ಮಧುಸೂಧನ್:–** ತಮ್ಮ ನೇತೃತ್ವದಲ್ಲಿ ನಾವುಗಳು ಚೈನಾಕ್ಕೆ ಹೋಗಿದ್ದೇವು. ಅಲ್ಲಿ ನಾವು ಒಂದು ಮೆಡಿಕಲ್ ಕಾಲೇಜಿಗೆ ಹೋದೆವು. ನಮ್ಮ ಕಲ್ಪನೆ ಏನು ಇತ್ತು ಎಂದರೆ ಒಂದನೇ ಕ್ಲಾಸಿನಿಂದ English medium ಶಾಲೆಯನ್ನು ಮಾಡಬೇಕೆಂದು ಇದೆ. ಆದರೆ ಚೈನಾದಲ್ಲಿ ಆ ದೊಡ್ಡ ಮೆಡಿಕಲ್ ಕಾಲೇಜಿನಲ್ಲಿ ಕನಿಷ್ಠ 16,000 ಜನ ಮಕ್ಕಳು ಅಲ್ಲಿ ಅಭ್ಯಾಸ ಮಾಡುತ್ತಿದ್ದರು. ಅಲ್ಲಿ ಇರುವ ಇಡೀ ಶಿಕ್ಷಣ ಮತ್ತು ಅಲ್ಲಿ ಇರುವಂತಹ syllabus ಮತ್ತು ಎಲ್ಲಾ ಪುಸ್ತಕಗಳು ಚೈನೀ ಭಾಷೆಯಲ್ಲಿ ಇತ್ತು. ನಾವು ಅಲ್ಲಿ ಹೋಗಿದ್ದಾಗ Anatomy, Physiology ಪುಸ್ತಕಗಳನ್ನು ಉತ್ಸುಕತೆಯಿಂದ ತೆಗೆದು ನೋಡಿದೆವು. ಅದು ಚೈನೀ ಭಾಷೆಯಲ್ಲಿ ಇದ್ದುದರಿಂದಾಗಿ ಒಂದು ಅಕ್ಷರ

ನಮಗೆ ಅರ್ಥವಾಗಲಿಲ್ಲ. ಎಲ್ಲವೂ ಚೈನೀ ಭಾಷೆಯಲ್ಲಿಯೇ ಇತ್ತು. ಅಲ್ಲಿ ಮೆಡಿಕಲ್ ಶಿಕ್ಷಣವನ್ನು ಚೈನಾ ಭಾಷೆಯಲ್ಲಿ ಕೊಡುತ್ತಿದ್ದಾರೆ.

**ಶ್ರೀ ಗೋ. ಮಧುಸೂಧನ್:–** ಅವರು ಮೆಡಿಕಲ್ ಎಜುಕೇಷನ್ ಚೈನಿ ಭಾಷೆಯಲ್ಲಿ ಕೊಡುವುದಕ್ಕೆ ಸಾಧ್ಯವಾದರೆ ನಾವು ಕನ್ನಡ ಮಾಧ್ಯಮದಲ್ಲಿ ಎಲ್ಲಾ ಶಿಕ್ಷಣವನ್ನು ಏಕೆ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ?

**ಶ್ರೀಮತಿ ಮೋಟಮ್ಮ:–** ಅವರು ಚೈನಾ ಭಾಷೆಯಲ್ಲಿ ಎಲ್ಲಾ ಮೆಡಿಕಲ್ ಟರ್ಮ್ ಅನ್ನು ಇಟ್ಟುಕೊಂಡಿರುವುದರಿಂದ ಎಂತಹ ಅನಾಹುತಗಳಾಗುತ್ತವೆಂದು ತಮಗೆ ಗೊತ್ತಿಲ್ಲ ಎಂದು ಕಾಣುತ್ತದೆ. ನಾವು ಚೈನಾಕ್ಕೆ ಹೋದಾಗ ನಮ್ಮ ಗುಂಪಿನಲ್ಲಿನರುವ ಒಬ್ಬ ಶಾಸಕರಿಗೆ loose motion ಸಿವಿಯರ್ ಆಗಿತ್ತು. ಅವರು ಮೆಡಿಕಲ್ ಶಾಪ್ ಗೆ ಹೋಗಿ loose motion tablet ಅನ್ನು ಕೊಡಿ ಅಂದರೆ ಅವರಿಗೆ ಅರ್ಥವೇ ಆಗುತ್ತಿರಲಿಲ್ಲ. ಕೊನೆಗೆ ಅವರು ಹೊಟ್ಟೆ ತೋರಿಸಿ ಹಿಂದೆ ಕೈ ತೋರಿಸುತ್ತಿದ್ದರು. ಆದರೂ ಅವರ ಸನ್ನೆ ಕೂಡ ಅವರಿಗೆ ಅರ್ಥವೇ ಆಗುತ್ತಿರಲಿಲ್ಲ. ಆಮೇಲೆ ಏನೂ ಅರ್ಥ ಆಗದೇ ಇರುವಾಗ ವಾಪಸ್ ಕರೆದುಕೊಂಡು ಬಂದು ಬೇರೆ ಶಾಸಕರೊಬ್ಬರು ಮೆಡಿಕಲ್ ಕಿಟ್ ಅನ್ನು ತಂದಿದ್ದರು ಅವರ ಹತಿರ ಇರುವ loose motion tablet ಅನ್ನು ಕೊಡಬೇಕಾಯಿತು. ಅಂತಹ ಪರಿಸ್ಥಿತಿ ಆಯಿತು. ಚೈನಾ ಭಾಷೆಯಲ್ಲಿ ಮೆಡಿಕಲ್ ಟರ್ಮ್ಸ್ ಇರುವುದರಿಂದ ಎಷ್ಟು ಅನಾಹುತ ಆಗುತ್ತದೆಂದು ಈಗಲಾದರೂ ಅರ್ಥ ಮಾಡಿಕೊಳ್ಳಿ.

**ಶ್ರೀ ಗೋ. ಮಧುಸೂಧನ್:–** ಮಾನ್ಯ ಸಭಾಪತಿಯವರೆ, ಆ ಭಾಷೆಯನ್ನು ನಂಬಿಕೊಂಡು, ಆ ವೈದ್ಯರನ್ನು ನಂಬಿಕೊಂಡು ಅವರು ಅಲ್ಲಿ ಬದುಕುತ್ತಿದ್ದಾರೆ.

**ಶ್ರೀಮತಿ ಮೋಟಮ್ಮ:–** ಆದರೂ ಅದು ಗ್ಲೋಬಲೈಸೇಶನ್ ಯುಗದಲ್ಲಿ ಅನಾಹುತವಲ್ಲವೇ?

**ಸಭಾಪತಿಯವರು:–** ಈಗ ಇರಲಿ ಮೊದಲು ಕೃಷ್ಣಭಟ್ಟರವರು ಭಾಷಣವನ್ನು ಮುಕ್ತಾಯ ಮಾಡಲಿ. ಇವೊತ್ತು ಸಭೆಯನ್ನು ನಾವು 7

ಗಂಟೆಯವರೆಗೆ ನಡೆಸೋಣ ಎಂದು ಅಂದುಕೊಂಡಿದ್ದೇವೆ. ಮಾನ್ಯ ಕೃಷ್ಣಭಟ್ಟರವರ ಭಾಷಣ ಮುಗಿದ ಮೇಲೆ ಶ್ರೀ ಅಲ್ಲಂಪ್ರಭು ಪಾಟೀಲ್‌ರವರು ಮಾತನಾಡುತ್ತಾರೆ. ನಾಳೆಯ ಪ್ರಶ್ನೆ ಏನೆಂದರೆ ನನ್ನ ಹತ್ತರ ನಾಳೆ ಒಂದೇ ದಿವಸ ಇದೆ. ನಿಮ್ಮ ಪಕ್ಷದಿಂದ ನಿಮಗೆ ಫೀಲ್ಡ್ ಮಾಡುವುದಾದರೆ ನನ್ನದೇನೂ ಅಭ್ಯಂತರ ಇಲ್ಲ. ನನ್ನ ಹತ್ತಿರ ನಾಳೆ ಒಂದೇ ಒಂದು ದಿವಸ ಇದೆ. ನಾಳೆ ಕಾಂಗ್ರೆಸ್ ಪಕ್ಷದ ಪ್ರಮುಖರಿಗೆ ಅವಕಾಶ ಕೊಡಬೇಕು, ನಾಳೆ ಜೆ.ಡಿ.ಎಸ್. ಪಕ್ಷದ ಪ್ರಮುಖರಿಗೆ ಅವಕಾಶ ಕೊಡಬೇಕು. ಬಿ.ಜೆ.ಪಿ. ಪಕ್ಷದ ಪ್ರಮುಖರಿಗೂ ಅವಕಾಶ ಮಾಡಿ ಕೊಡಬೇಕು. ನಾಳೆ ನೀವು ರಾತ್ರಿ 10–00 ಗಂಟೆಯವರೆಗೆ ಕುಳಿತುಕೊಳ್ಳಲು ತಯಾರಿದ್ದರೆ ಅದೇ ಸಮಯವನ್ನು ನಾನು ಎಲ್ಲರಿಗೂ ಹಂಚುತ್ತೇನೆ. ಇಲ್ಲ 7–00 ಗಂಟೆಗೆ ಮುಕ್ತಾಯ ಮಾಡಬೇಕೆಂದರೆ ಅದೇ ಸಮಯವನ್ನು ಹಂಚುತ್ತೇನೆ. 5 ಗಂಟೆಗೆ ಮುಕ್ತಾಯ ಮಾಡಬೇಕೆಂದರೆ ಅದೇ ಸಮಯವನ್ನು ಹಂಚುತ್ತೇನೆ. ನಾನು ಸಮಯ ಹಂಚಿದ ಮೇಲೆ ಸಭೆಯಲ್ಲಿ ಇವೊತ್ತು ಇದ್ದ ಹಾಗೆ ಜಾಸ್ತಿ ಜನ ಇದ್ದರೆ ಎಷ್ಟು ಹೊತ್ತು ಬೇಕಾದರು ನಾನು ಸದನ ನಡೆಸುತ್ತೇನೆ. ನಾನು ಒಂದೊಂದು ಪಕ್ಷಕ್ಕೆ ಇಷ್ಟಿಷ್ಟು ಎಂದು ಸಮಯ ನಿಗದಿ ಮಾಡಿದ್ದೇನೆ. ಈಗ ಕೃಷ್ಣಭಟ್‌ರವರು ಜಾಸ್ತಿ ಮಾತನಾಡಿರಬಹುದೆಂದು ಯಾರ ಮನಸ್ಸಿನಲ್ಲಾದರೂ ಇರಬಹುದು. ಬಿ.ಜೆ.ಪಿ.ಗೆ ನಿಗದಿಯಾದ ಸಮಯದಲ್ಲಿ ಅವರ ಸಮಯವನ್ನು ಕಳೆಯುತ್ತೇನೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಮಗೆ ಸಮಯ ಬೇಕಲ್ಲ.

**ಸಭಾಪತಿಯವರು:–** ಎಲ್ಲರಿಗೂ ಸಮಯಾವಕಾಶ ಇದೆ. ನಿಮಗೂ ಏಳೇಳು ನಿಮಿಷ ಸಮಯವನ್ನು ಕೊಟ್ಟಿದ್ದೇನೆ. ಪಕ್ಷೇತರರಾದ ನಿಮ್ಮಿಬ್ಬರಿಗೂ ಏಳೇಳು ನಿಮಿಷ ಸಮಯವನ್ನು ಕೊಟ್ಟಿದ್ದೇನೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ನಮಗೆ ಇನ್ನೂ ಹೆಚ್ಚಿನ ಸಮಯಾವಕಾಶ ಇದೆ.

**ಸಭಾಪತಿಯವರು:–** ನಾನು ನಿಮಗೆ ಏಳೇಳು ನಿಮಿಷ ನಿಗದಿ ಮಾಡಿದ್ದೇನೆ. ಇನ್ನು ಹೆಚ್ಚಿಗೆ ಇದೆ ಎಂದು ತಾವು ಹೇಳುತ್ತಿದ್ದೀರಿ. ಇನ್ನೊಮ್ಮೆ ನಾನು ಸಮಯವನ್ನು ತೆಗೆದು ನೋಡುತ್ತೇನೆ. ಹೆಚ್ಚಿನ ಅವಕಾಶ ನೀಡಿದ್ದರೆ ಆ ಸಮಯವನ್ನು ನೀಡುತ್ತೇನೆ. ಆಯಾ ಪಕ್ಷದ ಸಚೇತಕರಿಂದ ಹೆಸರು ಬಂದರೆ ಅವರನ್ನು ಮಾತನಾಡಲು ನಾನು ಕರೆಯುತ್ತೇನೆ. ಯಾರೇ ಮಾತನಾಡಬೇಕೆಂದರೆ ಅವರವರ ಪಕ್ಷದ ಸಚೇತಕರಿಂದ ಹೆಸರನ್ನು ಕೊಡಿಸಬೇಕು. ಅದರ ಬಗ್ಗೆ ನಾನು ಯಾವುದೇ ತೀರ್ಮಾನ ಕೈಗೊಳ್ಳವುದಿಲ್ಲ. ನಾನು ಸಮಯ ಮಾತ್ರ ತೀರ್ಮಾನ ಮಾಡುತ್ತೇನೆ.

**ಪ್ರೊ. ಪಿ.ವಿ. ಕೃಷ್ಣಭಟ್:–** ಮಾನ್ಯ ಸಭಾಪತಿಯವರೆ, ವಿಶ್ವವಿದ್ಯಾಲಯದ ಶಿಕ್ಷಣದ ದೃಷ್ಟಿಯಿಂದ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ನಾಡಿನಲ್ಲಿ ವಿಶ್ವವಿದ್ಯಾನಿಲಯಗಳ ಸಂಖ್ಯೆ ಹೆಚ್ಚು ಇದೆ. ಕಳೆದ ವರ್ಷದಲ್ಲಿ ಕೆಲವು ಹೊಸ ವಿಶ್ವವಿದ್ಯಾಲಯಗಳು ಕೂಡ ಸ್ಥಾಪನೆಯಾಗಿವೆ. ಸಾಮಾನ್ಯವಾಗಿ ವಿಶ್ವವಿದ್ಯಾಲಯಗಳ concept ಅಂದರೆ ಅದರಲ್ಲಿ ಎಲ್ಲಾ facultyಗಳು ಇರುತ್ತವೆ. ಇವೊತ್ತಿನ ದಿವಸ ಆಧುನಿಕ ಸ್ಥಿತಿಯಲ್ಲಿ interdisciplinary faculty ಯ ವಿಚಾರ ಕೂಡ ನಡೆಯುತ್ತಿದೆ. ಆದರೆ ಈಚಿನ ವರ್ಷಗಳಲ್ಲಿ ಈ monodisciplinary ಯುನಿವರ್ಸಿಟಿಸ್‌ಗಳ ಸಂಖ್ಯೆ ಜಾಸ್ತಿಯಾಗಿದೆ. ಶೈಕ್ಷಣಿಕ ದೃಷ್ಟಿಯಿಂದ ಇದೊಂದು ಬಹಳ ಮುಖ್ಯವಾಗಿ ಸರಿಯಾಗಿರುವಂಥ ಹೆಜ್ಜೆ ಅಲ್ಲ ಎಂದು ನನಗನ್ನಿಸುತ್ತಿದೆ. ಆದ್ದರಿಂದ ಈ Mono University ಗಳ ಪ್ರವೃತ್ತಿಗೆ ತಡೆ ಹಾಕಿ ಯುನಿವರ್ಸಿಟಿಗಳು multi faculty ಆಗಿರಬೇಕು, ಒಂದೊಂದು ವಿಷಯಕ್ಕೆ ಸಂಬಂಧಪಟ್ಟಂತ specializes institutions ಗಳನ್ನು ಮಾಡುವುದಕ್ಕೆ ಅವಕಾಶ ಇರುತ್ತದೆ. ಅದನ್ನು ಮಾಡುವ ದಿಕ್ಕಿನಲ್ಲಿ ಸರ್ಕಾರ ಯೋಚನೆ ಮಾಡಬೇಕು. ಇವೊತ್ತಿನ ದಿವಸ ಮುಖ್ಯವಾಗಿರುವಂಥ ಸಂಗತಿ ಅಂದರೆ ಯುನಿವರ್ಸಿಟಿ ಎಜುಕೇಷನ್ ಮತ್ತು ನಮ್ಮ relevance of the University Education. ಹಿಂದೆ ಯು.ಜಿ.ಸಿ. ಕಮಿಟಿಯು ಒಂದು ಮಾತನ್ನು ಹೇಳಿದೆ. "Most of our young man coming out the Universities, they remain either unemployed or unemployable" ಎಂದು ಹೇಳಿದೆ. ಈ ರೀತಿ

Universities are produciding large number of unemployment persons, who become culturally highly merited. ಉದ್ಯಮಗಳ ಜೊತೆಯಲ್ಲಿ ಅವರಿಗೆ ಸಂಬಂಧ ಇದೆಯೇ? ನಗರಗಳಿಗೆ ಬರುತ್ತಾರೆ. ಸಾಂಸ್ಕೃತಿಕವಾಗಿ ಅವರು ತಮ್ಮ ಬೇರುಗಳಿಂದ ಬೇರ್ಪಡುತ್ತಾರೆ. ಹೀಗಾಗಿ ಒಂದು rootless ಜನರೇಶನ್ ಅನ್ನು ಇವೊತ್ತಿನ ದಿವಸ ವಿಶ್ವವಿದ್ಯಾನಿಲಯಗಳ ಶಿಕ್ಷಣ ನಿರ್ಮಾಣ ಮಾಡುತ್ತಿದೆ. ಇಡೀ ಒಟ್ಟು ವಿಶ್ವವಿದ್ಯಾನಿಲಯದ ಶಿಕ್ಷಣದ ಬಗ್ಗೆ ಮಾನ್ಯ ಸಚಿವರು ನಮ್ಮ ಸಭಾನಾಯಕರು ಆಗಿದ್ದಾರೆಂದು ಬಹಳ ಹೆಮ್ಮೆಯ ವಿಷಯ ಇದೆ. ಆದ್ದರಿಂದ ಈ ಕುರಿತು ಚಿಂತನೆ ಮಾಡಬೇಕು. ಈ ನಿಟ್ಟಿನಲ್ಲಿ ಏನಾದರೂ ವಿಶೇಷ ಆಯೋಗವನ್ನು ತಾವು ನಿರ್ಮಾಣ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರ ಜೊತೆಯಲ್ಲಿ ಇವೊತ್ತು ಅನೇಕ ವಿಷಯಗಳ ಕುರಿತು ನಮ್ಮ ಎಲ್ಲಾ ಜ್ಞಾನದ ಮೂಲಗಳನ್ನು west ದಿಂದ trace ಮಾಡುತ್ತಿದ್ದೇವೆ. Economics ಆಗಿರಲಿ, Sociology ಯಾಗಿರಲಿ, History ಯಾಗಿರಲಿ ಅಥವಾ ಭೌತಿಕ ವಿಜ್ಞಾನವಾಗಿಲಿ, ಭಾರತದಲ್ಲಿ ಈ ಕುರಿತು ಏನು ಚಿಂತನೆ ಇದೆ ಎಂದು ಸಂಶೋಧನೆ ಮಾಡುವಂಥ ಪ್ರಯತ್ನ ಇದುವರೆಗೆ ಬಹಳ ಕಡಿಮೆಯಾಗಿದೆ. ಈ ವಿಷಯದಲ್ಲಿ ಸರ್ಕಾರ ಒಂದು ಆದ್ಯತೆಯನ್ನು ಕೊಡಬೇಕು. ಸರ್ಕಾರ ವಿಶೇಷವಾದಂಥ ಒಂದು ಸಂಸ್ಥೆಯನ್ನಾದರೂ ನಿರ್ಮಾಣ ಮಾಡಬೇಕೆಂದು ನಾನು ಕೋರುತ್ತೇನೆ.

ಇನ್ನೊಂದು ವಿಷಯ ಉಲ್ಲೇಖ ಮಾಡಬೇಕಾಗಿರಕತಕ್ಕಂಥದ್ದು ಅಂದರೆ ಇತ್ತೀಚಿನ ದಿನಗಳಲ್ಲಿ ಕುಲಪತಿಗಳ ನೇಮಕದ ಒಂದು ಪದ್ಧತಿಯ ಬಗ್ಗೆ. ಅನೇಕ ಕುಲಪತಿಗಳ ಮೇಲೆ ಇವೊತ್ತು ಭ್ರಷ್ಟಾಚಾರದ ಆಪಾದನೆಗಳಿವೆ.ಕೆಲವು ಕುಲಪತಿಗಳ ಬಗ್ಗೆ ಅನೇಕ ಕಥೆಗಳು ಸಾಕಷ್ಟು ಹರಡಿಕೊಂಡಿವೆ. ಅವರು ಎಷ್ಟೆಷ್ಟು ಹಣ ಕೊಟ್ಟು ಕುಲಪತಿಗಳಾಗಿದ್ದಾರೆಂದು ಕಥೆಗಳು ಹರಡಿಕೊಂಡಿವೆ. ಇದೊಂದು ಗಂಭೀರವಾದಂಥ ಸಮಸ್ಯೆ ಇದೆ. ಏಕೆಂದರೆ ಈ ಶಿಕ್ಷಣದ ವ್ಯವಸ್ಥೆ ಅಂದರೆ ಒಂದು ರೀತಿ ಗಂಗೋತ್ರಿ ಇದ್ದ ಹಾಗೆ.ಅದೊಂದು ನದಿಯ ಮೂಲ ಇದ್ದ ಹಾಗೆ. ಆ ನದಿಯ ಮೂಲ ಕಲುಷಿತವಾಯಿತೆಂದರೆ ಇಡೀ ಸಮಾಜ ಕಲುಷಿತವಾಗುತ್ತದೆ. ಆದ್ದರಿಂದ ಅದಕ್ಕೆ ತಾವು ಒಂದು ವಿಶೇಷವಾದಂಥ

ವ್ಯವಸ್ಥೆಯನ್ನು ಮಾಡಬೇಕು. ನಿನ್ನೆ ದಿವಸ ಮೈಸೂರಿನಲ್ಲಿ ಸಂಶೋಧಕ ವಿದ್ಯಾರ್ಥಿನಿಯ ಆತ್ಮಹತ್ಯೆಯ ಪ್ರಕರಣ ಇದೆಯಲ್ಲ.. 'Moral turpitude in the Universities and the Education System'.ಇದನ್ನು ತಾವು ಬಹಳ ಗಂಭೀರವಾಗಿ ಪರಿಗಣಿಸಬೇಕು. ಬೇರೆ ಕಡೆಗೆ ಭ್ರಷ್ಟಾಚಾರ ಮಾಡಿದರೆ ಅಷ್ಟು ಗಂಭೀರವಾಗಿ ನಾವು ಪರಿಗಣಿಸದೇ ಇರಬಹುದು ಆದರೆ ಶಿಕ್ಷಣ ಸಂಸ್ಥೆಗಳಲ್ಲಿ ಆಗತಕ್ಕಂಥ ಈ ತರಹದ ಕೃತ್ಯಗಳನ್ನು ಪರಿಶೋಧನೆ ಮಾಡುವುದಕ್ಕೆ ಒಂದು ವಿಶೇಷವಾಗಿರತಕ್ಕಥ ಒಂದು Tribunal, which will give immedietly justice. ಆ ರೀತಿ ಮಾಡತಕ್ಕಂಥ ಒಂದು Tribunal ಅನ್ನು ತಾವು ಸ್ಥಾಪನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇವೊತ್ತು ಶಿಕ್ಷಣ ಒಂದು ಸಂಸ್ಕಾರವನ್ನು ಕೊಡುವಂಥದ್ದರ ಬದಲಿಗೆ ಒಂದು ಮಾರುಕಟ್ಟೆಯ ಸ್ವರೂಪ ಆಗುತ್ತಿದೆ. Commercialization of Education, ಇಂದು ಬಹಳ ಗಂಭೀರವಾದಂಥ ಸಮಸ್ಯೆಯಾಗಿದೆ. ಈ ನಿಟ್ಟಿನಲ್ಲಿ ಬಹಳ ಗಂಭೀರವಾಗಿರುವಂಥ ಒಂದು ಚಿಂತನೆ ಎನ್ನುವಂಥದ್ದನ್ನು ಕೂಡ ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ. ತಾವು ನನಗೆ ಸಮಯವನ್ನು ಕೊಟ್ಟಿದ್ದೀರಿ. ನನ್ನ ಹತ್ತಿರ ಇನ್ನೊಂದಿಷ್ಟು ವಿಷಯಗಳಿವೆ. ಆದರೆ ಹೆಚ್ಚು ಉದ್ದ ಮಾತನಾಡುವುದಕ್ಕೆ ನಾನು ಅಪೇಕ್ಷೆ ಪಡುತ್ತಿಲ್ಲ. ನನಗೆ ಸಮಯ ಕೊಟ್ಟಿದ್ದಕ್ಕೆ ತಮಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

**ಸಭಾಪತಿಯವರು:–** ಧನ್ಯವಾದಗಳು. ಈಗ ಶ್ರೀ ಅಲ್ಲಮ ಪ್ರಭು ಪಾಟೀಲ್. ಮಾನ್ಯ ಸದಸ್ಯರೆ, ಈಗಾಗಲೇ ನಿಮ್ಮ ಪಕ್ಷದ ಪರವಾಗಿ ಎಷ್ಟು ಹೊತ್ತು ಮಾತನಾಡಬೇಕೆಂದು ತಮಗೆ ಹೇಳಿದ್ದಾರೆ. ನನಗೆ ತಾವು ಹತ್ತು ನಿಮಿಷ ಮಾತನಾಡುತ್ತೀರೆಂದು ತಿಳಿಸಿದ್ದಾರೆ. ನೋಡಿ. ಸ್ವಲ್ಪ ಹೆಚ್ಚು ಕಡಿಮೆ ಸಮಯ ತೆಗೆದುಕೊಂಡು ಮಾತನಾಡಿ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಪ್ರೊ.ಕೃಷ್ಣಭಟ್‌ರು 5 ಗಂಟೆಗೆ ಭಾಷಣವನ್ನು ಪ್ರಾರಂಭ ಮಾಡಿದ್ದರು. ಈಗ ಮುಕ್ತಾಯ ಮಾಡಿದ್ದಾರೆ.

**ಸಭಾಪತಿಯವರು:–** ಸಚೇತಕರು ಸ್ವಲ್ಪ ಗಮನಿಸಬೇಕು. ನಾನು ವಿರೋಧ ಪಕ್ಷದವರನ್ನು ಕರೆದಿದ್ದೇನೆ. ಯಾರೂ ಮಾತನಾಡಲು ತಯಾರು ಇರಲಿಲ್ಲ. ಮಾತನಾಡುವುದಿಲ್ಲ, ಮಾತನಾಡುವುದಿಲ್ಲ ಎಂದು ಹೇಳಿದರು. ಹಾಗಾದ ಮೇಲೆ ಸದನ ಮುದೂಡುವುದರ ಬದಲು ಆಡಳಿತ ಪಕ್ಷದ 2–3 ಜನರಿಗೆ ಅವಕಾಶ ಕೊಟ್ಟಿದ್ದೇನೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಪ್ರಶ್ನೆ ಅದು ಇಲ್ಲ. 2 ಗಂಟೆಗಳಿಗಿಂತ ಹೆಚ್ಚು ಅವರು....

**ಸಭಾಪತಿಯವರು:–** ಇಲ್ಲಿ 2–3 ಗಂಟೆಯ ಪ್ರಶ್ನೆ ಇಲ್ಲ. ಒಂದೊಂದು ಪಕ್ಷಕ್ಕೆ ಎಷ್ಟು ನಿಮಿಷ ಎಂದು ನಾನು ಸಮಯ ನಿಗದಿ ಮಾಡಿದ್ದೇನೆ. ಶ್ರೀ ಅಲ್ಲಮ ಪ್ರಭುರವರು ನೂರು ನಿಮಿಷ ಮಾತನಾಡಿದರೂ ನಾನು ಸುಮ್ಮನೆ ಇರುತ್ತೇನೆ. ಆದರೆ ನಿಮ್ಮ ಪಕ್ಷಕ್ಕೆ ನಿಗದಿಯಾದ ಸಮಯದಲ್ಲಿ ನೂರು ನಿಮಿಷ ವಜಾ ಮಾಡಿ ಉಳಿದ ಸಮಯಕ್ಕೆ ನಿಮ್ಮ ನಾಯಕರು ಮಾತನಾಡಲಿ ಎಂದು ಹೇಳುತ್ತೇನೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಮಾನ್ಯ ವೀರಯ್ಯನವರು ಪ್ರಾರಂಭ ಮಾಡಿದಾಗ 5 ಗಂಟೆ ಆಗಿತ್ತು. ಇವರು ಮುಗಿಸುವಾಗ 7 ಗಂಟೆಯಾಗಿದೆ ಎಂದು ತಮ್ಮ ಗಮನಕ್ಕೆ ತಂದೆ ಅಷ್ಟೆ. ಅದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

**ಸಭಾಪತಿಯವರು:–** ನಾನು ಅದನ್ನೆ ಹೇಳಿದ್ದೇನೆ. ಎಲ್ಲರಿಗೂ ಒಂದೇ ನಿಯಮ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೆ,ಯಾರು ಯಾರು ಎಷ್ಟೆಷ್ಟು ಮಾತನಾಡಿದ್ದಾರೆನ್ನುವ ಬದಲು ಯಾವ ಸಂದರ್ಭದಲ್ಲಿ

ಮಾತನಾಡುತ್ತಿದ್ದಾರೆ, ಎಷ್ಟರಮಟ್ಟಿಗೆ ಉಪಯುಕ್ತವಾಗುತ್ತದೆನ್ನುವ ಹಿನ್ನೆಲೆಯಲ್ಲಿ ಬಾಕಿ ಇರತಕ್ಕಂಥ ಸಮಯವನ್ನು ಮಾನ್ಯ ಸಭಾಪತಿಯವರು ನೋಡಿಕೊಂಡು ಆ ಸಮಯವನ್ನು ಹಂಚಿಕೊಂಡು ಮಾಡುವಂಥದ್ದನ್ನು ಮಾಡಲಿ.

**ಸಭಾಪತಿಯವರು:–** ನಾನು ಅದನ್ನೇ ಹೇಳಿದ್ದೇನೆ. ಕಾಂಗ್ರೆಸ್ ಪಕ್ಷದ ಸದಸ್ಯರನ್ನು ಕರೆದಾಗ ಯಾರೂ ಮಾತನಾಡಲಿಲ್ಲ. ಆದ್ದರಿಂದ ಆಡಳಿತ ಪಕ್ಷವನ್ನು ನಾನು ಕರೆದಿದ್ದೇನೆ. ನಾಳೆಯ ದಿವಸ ಹತ್ತು ಗಂಟೆಯವರೆಗೆ ಕುಳಿತುಕೊಳ್ಳೋಣ. ತಾವು ಎಷ್ಟು ಹೊತ್ತು ಮಾತನಾಡಿದರೂ ನಾನು ಕೇಳುವುದಕ್ಕೆ ತಯಾರಿದ್ದೇನೆ.

**(7– ಗಂಟೆ)**

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ತಾವು ನನಗೆ ಮಾತನಾಡಲು ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಎರಡು ಅಭಿಪ್ರಾಯವನ್ನು ಹೇಳುವುದಕ್ಕೆ ಪ್ರಾರಂಭ ಮಾಡುತ್ತೇನೆ. ಈ ದೇಶ ಕೃಷಿ ಪ್ರಧಾನವಾದ ದೇಶ. ರೈತರು ನಮ್ಮ ದೇಶದ ಆರ್ಥಿಕ ಬೆನ್ನೆಲುಬು ಆಗಿರತಕ್ಕಂಥ ಸಂದರ್ಭದಲ್ಲಿ ನಮ್ಮ ಎಲ್ಲಾ ಆರ್ಥಿಕ ಚಟುವಟಿಕೆಗಳು ಕೃಷಿ ಕೇಂದ್ರೀಕೃತವಾಗಿದ್ದು ಇದರ ಪ್ರಾಮುಖ್ಯತೆಯನ್ನು ಕೂಡ ಹೆಚ್ಚಿಸಿರತಕ್ಕಂಥದ್ದು ಕೇಂದ್ರ ಸರ್ಕಾರ ಹಿಡಿದು ಎಲ್ಲಾ ರಾಜ್ಯ ಸರ್ಕಾರಗಳು ಮಂಡಿಸತಕ್ಕಂಥ ಮುಂಗಡ ಪತ್ರದ ಕೇಂದ್ರಬಿಂದು ಕೃಷಿಯಾಗಿರತಕ್ಕಂಥದ್ದು. ಮುಂಗಡ ಪತ್ರದ ಜೀವನಾಡಿ ಬೇಸಾಯವಾಗಿದೆ. ಆದರೆ ಇವೊತ್ತು ನಮ್ಮ ಮುಖ್ಯಮಂತ್ರಿಗಳು ಕೃಷಿಗೆ ಪ್ರತ್ಯೇಕವಾದಂಥ ಒಂದು ಬಜೆಟ್ ಅನ್ನು ಮಂಡಿಸಿ ಸುಮಾರು 40 ಪುಟಗಳ ಹಸಿರು ಪುಸ್ತಕವನ್ನು ನಮ್ಮ ಕೈಗೆ ಕೊಟ್ಟಿದ್ದಾರೆ. ಇವೊತ್ತು ಮುಖ್ಯಮಂತ್ರಿಗಳು ಪ್ರಥಮ ಬಾರಿಗೆ ಕೃಷಿಯನ್ನು ಬಜೆಟ್‌ದ ಮುಖ್ಯವಾಹಿನಿಯಿಂದ ಕೃಷಿ ವಲಯವನ್ನು ಬೇರ್ಪಡಿಸಿ ಇಡೀ ರೈತ ಸಮೂಹವನ್ನು ಕಡೆಗಣಿಸಿದ್ದಾರೆನ್ನುವ ಭಾವನೆ ನನ್ನದಾಗಿದೆ. ಏಕೆಂದರೆ ಒಗ್ಗಟ್ಟಿನಲ್ಲಿ ಬಹಳಷ್ಟು ಶಕ್ತಿ ಇದೆ ಎಂದು ಹಿಂದಿನಿಂದಲೂ ಬಂದಿರತಕ್ಕಂಥದ್ದು. ಆದರೆ ಎಲ್ಲವನ್ನು ಕ್ರೋಢೀಕೃತಗೊಂಡಿರತಕ್ಕಂಥ ಒಂದು ಮುಂಗಡ ಪತ್ರದಿಂದ

ಈ ಕೃಷಿಯನ್ನು ಮುಖ್ಯವಾಹಿನಿಯಿಂದ ಹೊರಗೆ ಇಟ್ಟಿರತಕ್ಕಂಥದ್ದು ಬಹಳ ವಿಷಾದದ ಸಂಗತಿ. ನಮ್ಮ ಹಳ್ಳಿಗಳಲ್ಲಿ ಒಂದುಗಾದೆ ಇದೆ. ಅದೇನೆಂದರೆ "ತುಂಬಿದ ಕೊಡ ತುಳುಕುವುದಿಲ್ಲ" ಸರ್ಕಾರ ಈ ಕೃಷಿ ಬಜೆಟ್ ಅನ್ನು ಮಂಡಿಸತಕ್ಕಂಥ ಸಂದರ್ಭದಲ್ಲಿ ಇವೊತ್ತು ಮುಖ್ಯಮಂತ್ರಿಗಳು ತಮ್ಮ ಮನೆಯಿಂದ ಸಾಕಷ್ಟು ಜನರ ಸಂಗಡ ಮೆರವಣಿಗೆಯೊಂದಿಗೆ ವಿಧಾನಸೌಧಕ್ಕೆ ಬರತಕ್ಕಂಥ ಸಂದರ್ಭದಲ್ಲಿ ನನಗೆ ಒಂದು ಭಾವನೆ ಬರುತ್ತಿದೆ. ಖಾಲಿ ಕೊಡ ಹೆಚ್ಚಿನ ಶಬ್ದ ಮಾಡುತ್ತದೆ ಎನ್ನುವಂಥ ರೀತಿಯಲ್ಲಿ ಹೆಚ್ಚಿನ ಶಬ್ದವನ್ನು ಮಾಡಿಕೊಂಡು ಮಾನ್ಯ ಮುಖ್ಯಮಂತ್ರಿಗಳು ಬಂದು ಖಾಲಿ ಬಜೆಟ್ ಅನ್ನು ಮಂಡಿಸಿದ್ದಾರೆನ್ನು ವಂಥ ಮಾತನ್ನು ನಾನು ಇವೊತ್ತು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಸರ್ಕಾರ ಇವೊತ್ತು ಮೂರು ವರ್ಷಗಳ ಆಡಳಿತದ ಅವಧಿಯಲ್ಲಿ ಎಷ್ಟು ರೈತ ವಿರೋಧಿ ಇದೆ ಎಂದು ತೋರಿಸಿಕೊಟ್ಟಿದೆ. ಈ ಸರ್ಕಾರದ ಆಡಳಿತದ ಅವಧಿಯಲ್ಲಿ ಸುಮಾರು 806ಜನ ರೈತರ ಆತ್ಮಹತ್ಯೆಯಾಗಿದೆ. ರೈತರ ಪರವಾಗಿರತಕ್ಕಂಥ ಬಜೆಟ್ ಅನ್ನು ಮಂಡಿಸತಕ್ಕಂಥ ಸನ್ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಒಬ್ಬ ರೈತನ ಮನೆಗೆ ಹೋಗಿ ಸಾಂತ್ವನ ಹೇಳಿದಂಥ ಉದಾಹರಣೆಗಳಿಲ್ಲ. ಒಂದು ವೇಳೆ ಉದಾಹರಣೆಗಳಿದ್ದರೆ ತಾವು ಉತ್ತರವನ್ನು ಕೊಡುವಾಗ ಹೇಳಿ. ಆ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿ ಪರಿಹಾರವನ್ನು ನೀಡುತ್ತೇವೆಂದು ಏನು ಸರ್ಕಾರದವರು ಹೇಳಿದ್ದಾರೆ ಅದರ ಬಗ್ಗೆ ಹಳ್ಳಿಯಲ್ಲಿರತಕ್ಕಂಥ ಪರಿಹಾರ ಸಮಿತಿಯವರು ಸೇರಿ ಸಾಕಷ್ಟು ರೈತರಿಗೆ ಪರಿಹಾರಧನವನ್ನು ನೀಡಿಲ್ಲ. ಅದಕ್ಕೆ ಮುಖ್ಯವಾದ ಕಾರಣವೇನೆಂದರೆ ಇವೊತ್ತು ಬಹಳಷ್ಟು ಹಳ್ಳಿಗಳಲ್ಲಿ ತಂದೆಯವರ ಹೆಸರಿಗೆ ಜಮೀನು ಇರುತ್ತದೆ. ಆದರೆ ಮಗ ಒಕ್ಕಲುತನವನ್ನು ಮಾಡುತ್ತಿರುತ್ತಾನೆ. ಮಗ ಅಲ್ಲಿ ಇಲ್ಲಿ ಸಾಲವನ್ನು ಮಾಡಿ ಕೃಷಿಯನ್ನು ಮಾಡುತ್ತಿರುವಂಥ ಸಂದರ್ಭದಲ್ಲಿ ನಿಸರ್ಗದ ಪೆಟ್ಟಿನಿಂದ ಅವನ ಬೆಳೆ ಹಾನಿಯಾಗುತ್ತದೆ. ಕಳೆದ ಬಾರಿ ನಮ್ಮ ಗುಲಬರ್ಗಾ ಭಾಗದಲ್ಲಿ ಗೊಡ್ಡು ತೊಗರಿ ಬೀಜವನ್ನು ನೀಡಿದಂಥ ಸಂದರ್ಭದಲ್ಲಿ ಯಾವುದೇ ಬೇಳೆಕಾಳುಗಳು ಬರಲಿಲ್ಲ. ಅಂತಹ ಸಂದರ್ಭದಲ್ಲಿ ಅವನಿಗೆ ಪೆಟ್ಟು ಬಿದ್ದಾಗ ಸಾಲ

ಮಾಡಿದಂಥ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆದರೆ ಪರಿಹಾರ ಕೊಡತಕ್ಕಂಥ ಸಂದರ್ಭದಲ್ಲಿ ಅಧಿಕಾರಿಗಳು ತೊಂದರೆ ಕೊಡುತ್ತಾರೆ. ಕಾರಣವೇನೆಂದರೆ ಸತ್ತಿರತಕ್ಕಂಥ ರೈತನ ಹೆಸರಿನಲ್ಲಿ ಜಮೀನು ಇರುವುದಿಲ್ಲ. ಬ್ಯಾಂಕನಲ್ಲಿ ಸಾಲ ಕೂಡ ಇರುವುದಿಲ್ಲ. ತಂದೆಯ ಹೆಸರಿನಲ್ಲಿ ಜಮೀನು ಇರುತ್ತದೆ. ಆ ಜಮೀನು ತಂದೆಯ ಹೆಸರಿನಲ್ಲಿರುತ್ತದೆ. ಆ ರೈತನ ಹೆಸರಿನಲ್ಲಿ ಜಮೀನು ಇರುವುದಿಲ್ಲವೆಂದು ಅವರಿಗೆ ಪರಿಹಾರ ನೀಡಲು ಬರುವುದಿಲ್ಲ ಎಂದು ಪರಿಹಾರವನ್ನು ನಿರಾಕರಣೆ ಮಾಡುತ್ತಿರುವುದರಿಂದ ಅದೊಂದು ಪರಿಹಾರ ನಿರಾಕರಣೆ ಸಮಿತಿ ಎಂದು ಹೆಸರುವಾಸಿಯಾಗಿದೆ. ಕಳೆದ ಮೂರು ವರ್ಷದಲ್ಲಿ ಆದಂಥ ಸುಮಾರು 806 ರೈತರ ಆತ್ಮಹತ್ಯೆ ಪ್ರಕರಣದಲ್ಲಿ ಹೆಚ್ಚಿನ ಪರಿಹಾರವನ್ನು ಇಂದಿಗೂ ನೀಡಲು ಆಗಿಲ್ಲ. ಆದ್ದರಿಂದ ಈ ಕಡೆಗೆ ಸರ್ಕಾರ ಹೆಚ್ಚಿನ ಗಮನವನ್ನು ಹರಿಸಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಈ ಸರ್ಕಾರ ಹೇಳುವುದೊಂದು ಮಾಡುವುದೊಂದು ಎನ್ನುವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವೊತ್ತು ಸರ್ಕಾರ ಪ್ರತ್ಯೇಕವಾದ ಕೃಷಿ ಬಜೆಟ್ ಅನ್ನು ಮಂಡಿಸಿದ್ದೇನೆಂದು ಹೇಳಿ ಅದರ ಪ್ರತಿಯನ್ನು ರೈತರಿಗೆ, ಮಾಧ್ಯಮದವರಿಗೆ, ಮತ್ತು ರಾಜ್ಯದೆಲ್ಲರಿಗೂ ಕೊಟ್ಟಿದೆ. ಮಾನ್ಯ ಸಭಾಪತಿಯವರೆ ಇವೊತ್ತು ಇವರ ಕಾಲದಲ್ಲಿ ಏನು ಕೃಷಿಭೂಮಿ ಪರಿವರ್ತನಾ ಪ್ರಕ್ರಿಯೆ ಆಗಿದೆ ಅದು ಯಾವುದೇ ಸರ್ಕಾರದಲ್ಲಿ ಆಗಿಲ್ಲ ಎನ್ನುವಂಥ ವಿಷಯವನ್ನು ಇಂದು ಹೇಳಲಿಚ್ಚಿಸುತ್ತೇನೆ. ಅದರ ಪರಿಣಾಮದಿಂದಾಗಿ ರಾಜ್ಯದಲ್ಲಿನ ಬಹಳಷ್ಟು ಕೃಷಿಯ ಪ್ರದೇಶ ಕಡಿಮೆಯಾಗುತ್ತಿದೆ. ಈ ಸರ್ಕಾರದ ಕಾಲದಲ್ಲಿ ಭೂಪರಿವರ್ತನೆ ಪ್ರಕ್ರಿಯೆಯಾಗಿ ಬಹಳಷ್ಟು ಭೂಹಿಡುವಳಿ ಜಮೀನು ಕಡಿಮೆಯಾಗಿದೆ. ಒಂದು ಭೂಬ್ಯಾಂಕ್ ಎಂದು ರಚನೆ ಮಾಡಿ ಫಲವತ್ತಾದ ಭೂಮಿಯನ್ನು ಜೋಳ, ಗೋಧಿ, ಹೆಸರು, ಉದ್ದು, ಶೇಂಗಾ ಬೆಳೆಯತಕ್ಕಂಥ ಅನೇಕ ಫಲವತ್ತಾದ ಭೂಮಿಗಳು ಅದು ಬಳ್ಳಾರಿಯಲ್ಲಾಗಿರಬಹುದು, ಗುಲಬರ್ಗಾ ಜಿಲ್ಲೆಯ ಕೀಣಗಿ ಗ್ರಾಮದಲ್ಲಿ ಆಗಿರಬಹುದು, ಬಿಜಾಪುರದಲ್ಲಿ ಆಗಿರತಕ್ಕಂಥ ನಿರಾಣಿಯವರ ಮೇಲೆ ಅನೇಕ ರೈತರು ಹಲ್ಲೆ ಮಾಡತಕ್ಕಂಥ ಸಂದರ್ಭ ಬಂದಿತ್ತು.

ಕೃಷಿಯೋಗ್ಯ ಜಮೀನನ್ನು ಇತರೆ ಕಾರ್ಯಗಳಿಗೆ ಉಪಯೋಗಿಸಬಾರದೆಂದು ಸುಪ್ರೀಂ ಕೋರ್ಟಿನ ಒಂದು ಆದೇಶವಿದ್ದರೂ ಕೂಡ ಈ ಸರ್ಕಾರದಲ್ಲಿ ಇವೊತ್ತು ಕೃಷಿಭೂಮಿಯನ್ನು ತೆಗೆದುಕೊಂಡು ಜಮೀನು ಕಣ್ಮರೆಯಾಗುತ್ತಿದೆ. ಲೇಔಟ್ ಮತ್ತು ಟೆಕ್ ಪಾರ್ಕ್‌ಗಳಿಗೆ ಈ ಜಮೀನನ್ನು ಮಾರಿಕೊಳ್ಳುತ್ತಿದ್ದಾರೆ. ಸರ್ಕಾರ ಆ ಸುಪ್ರೀಂ ಕೋರ್ಟಿನ ಆದೇಶವನ್ನಾದರು ಗಮನದಲ್ಲಿಟ್ಟುಕೊಂಡು ರೈತರ ಫಲವತ್ತಾದ ಭೂಮಿಯನ್ನು ತೆಗೆದುಕೊಳ್ಳುವುದಿಲ್ಲವೆಂದು ಒಂದು ಘೋಷಣೆಯನ್ನು ಇವೊತ್ತು ಮಾಡಬೇಕಾಗಿದೆ. ಇವೊತ್ತು ಜೋಳ ಬೆಳೆಯತಕ್ಕಂಥ ಭೂಮಿಯನ್ನು ಬಿಟ್ಟುಕೊಡುವುದಿಲ್ಲವೆಂದು ರೈತರು ಹೋರಾಟ ಮಾಡಿದರೂ ಕೂಡ ಅನೇಕ ಒತ್ತಡಗಳನ್ನು ತಂದು ಅವರ ಒಂದು ಜಮೀನನ್ನು ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಂಡಿರತಕ್ಕಂಥ ಉದಾಹರಣೆಗಳು ಹೆಚ್ಚಾಗಿವೆ.

ಮಾನ್ಯ ಸಭಾಪತಿಯವರೆ, ಇವೊತ್ತು ರೈತರಿಗೆ ಕಡಿಮೆ ದರದಲ್ಲಿ ಬಡ್ಡಿ ಕೊಡುತ್ತೇನೆನ್ನುವ ಒಂದು ಘೋಷಣೆಯನ್ನು ಸರ್ಕಾರ ಮಾಡಿದೆ. ಕಡಿಮೆ ಬಡ್ಡಿದರದಲ್ಲಿ ಸಾಲ ಕೊಡುತ್ತೇನೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಬಹಳಷ್ಟು ಬಡಾಯಿ ಕೊಚ್ಚಿಕೊಳ್ಳುತ್ತಿದ್ದಾರೆ. ಆದರೆ ವಾಸ್ತವದ ಸಂಗತಿ ಏನೆಂದರೆ ಘೋಷಿಸಿರತಕ್ಕಂಥ ಶೇಕಡ ಒಂದರ ಬಡ್ಡಿ ದರದ ಸಾಲ ಏನಿದೆ ಅದು ಇವೊತ್ತಿನ ವರೆಗೆ ರೈತರು ತೀರಿಸತಕ್ಕಂಥದ್ದಾಗಿಲ್ಲ. ಕೇವಲ ಹನ್ನೆರಡು ತಿಂಗಳಲ್ಲಿ ಸಾಲವನ್ನು ತೀರಿಸಿದವರಿಗೆ ಮಾತ್ರ ಶೇಕಡ ಒಂದರ ಬಡ್ಡಿ ಅನುಕೂಲವಾಗುತ್ತದೆ. ಯಾರು ಒಂದು ವರ್ಷದಲ್ಲಿ ಸಾಲವನ್ನು ತೀರಿಸುವುದಿಲ್ಲ ಅವರಿಗೆ ಶೇಕಡ 18ರಷ್ಟು ಬಡ್ಡಿ ಬೀಳುತ್ತದೆ. ಇಲ್ಲಿಯವರೆಗೆ ಕೋ–ಆಪರೇಟಿವ್ ಸೊಸೈಟಿಗಳ ಲೆಕ್ಕವನ್ನು ತೆಗೆದು ನೋಡಿದರೆ ಯಾರು ಕೂಡ ಹನ್ನೆರಡು ತಿಂಗಳಲ್ಲಿ ಸಾಲವನ್ನು ಮರುಪಾವತಿಸಿಲ್ಲ. ಶೇಕಡ 90ರಷ್ಟು ರೈತರು ಇವೊತ್ತಿನವರೆಗೆ ಹನ್ನೆರಡು ತಿಂಗಳಲ್ಲಿ ಸಾಲವನ್ನು ಮರುಪಾವತಿಸಿಲ್ಲ. ಆದರೆ ಸರ್ಕಾರ ಇವೊತ್ತು ನಾನು ಶೇಕಡ ಒಂದರಷ್ಟು ಬಡ್ಡಿಯಿಂದ ಸಾಲವನ್ನು ಕೊಟ್ಟಿದ್ದೇವೆಂದು ಬಹಳ ದೊಡ್ಡದು ಮಾಡಿ ಹೇಳುತ್ತಿದ್ದಾರೆ. ಸರ್ಕಾರಕ್ಕೆ, ಮಾನ್ಯ ಮುಖ್ಯಮಂತ್ರಿಯವರಿಗೆ ರೈತರ ಮೇಲೆ ಏನಾದರು ಕನಿಕರ

ಇದ್ದರೆ ದಯಮಾಡಿ ಅದನ್ನು ಮೂರು ವರ್ಷಗಳಿಗಾದರು ಮುಂದುವರೆಸಲಿ. ಇಲ್ಲದೆಹೋದರೆ ಅವರು ಸಾಲ ತೀರುವವರಗೆ ಶೇಕಡ ಒಂದೆರಷ್ಟು ಬಡ್ಡಿ ಎಂದು ಘೋಷಣೆ ಮಾಡಿದರೆ ನಿಜವಾಗಿಯೂ ಕೂಡ ರೈತನ ಮಗನಾಗಿ, ರೈತ ಮುಖ್ಯಮಂತ್ರಿ ಎಂದು ಹೇಳಿಕೊಂಡಂತಾಗುತ್ತದೆ. ಇಲ್ಲದೆ ಹೋದರೆ ಸುಮ್ಮನೆ ಬಡಾಯಿ ಕೊಚ್ಚಿಕೊಳ್ಳತಕ್ಕಂಥದ್ದು, ರೈತನನ್ನು ಹೊರಗೆ ಇಟ್ಟು ಬಜೆಟ್ ಮಂಡನೆ ಮಾಡಿರತಕ್ಕಂಥದ್ದು ಬೊಗಳೆ ಮಾತನ್ನು ಹೇಳಿದಂತಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ನಿಜವಾಗಿ ರೈತರ ಬಗ್ಗೆ ಕಳಕಳಿ, ಕಾಳಜಿ ಇದ್ದರೆ ಸಹಕಾರ ಸಂಘಗಳಿಗೆ ತುಂಬಬೇಕಾಗಿರತಕ್ಕಂಥ ಹಣವನ್ನು ನೀಡಲಿ. ಇವೊತ್ತು ಸಾಕಷ್ಟು ಸೊಸೈಟಿಗಳು ಬಂದ್ ಆಗತಕ್ಕಂಥ ಸ್ಥಿಯಲ್ಲಿದ್ದು ಯಾರೂ ಕೂಡ ಸಾಲವನ್ನು ಕೊಡತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ಆದಕಾರಣ ಈ ಒಂದು ಅಂಶವನ್ನು ನಾಳೆ 9ನೇ ತಾರೀಖು ಮಾನ್ಯ ಮುಖ್ಯಮಂತ್ರಿಯವರು ಬಜೆಟ್‌ಗೆ ಸಂಬಂಧಪಟ್ಟಂತೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಅದನ್ನು ಮುಂದುವರೆಸಿ ಮೂರು ವರ್ಷದ ವರೆಗೆ ಈ ಒಂದು ಬಡ್ಡಿ ದರವನ್ನು ತುಂಬಲಿಕ್ಕೆ ಅನುಕೂಲ ಮಾಡಿಕೊಡುವಂತೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಸಭಾಪತಿಯವರೆ, ಇವೊತ್ತು ನಂಜುಂಡಪ್ಪ ವರದಿಯ ಅನುಷ್ಠಾನಕ್ಕೆ 2800 ಕೋಟಿ ರೂಪಾಯಿಗಳ ಹಣವನ್ನು ಇಟ್ಟಿದ್ದರು. ಆದರೆ ಅದರಲ್ಲಿ 2010-11ನೇ ಸಾಲಿನಲ್ಲಿ ಕೇವಲ 900ಕೋಟಿ ರೂಪಾಯಿ ಮಾತ್ರ ಖರ್ಚಾಗಿದೆ. ಇನ್ನುಳಿದಿರತಕ್ಕಂಥ ಹಣವನ್ನು ಇವೊತ್ತು ಸರ್ಕಾರಕ್ಕೆ ಒದಗಿಸಲಿಕ್ಕಾಗಲಿಲ್ಲ. ಯಾವ ಹಿಂದುಳಿದ ಅಭಿವೃದ್ಧಿಗಾಗಿ ಸಾಕಷ್ಟು ಪ್ರಚಾರ ವನ್ನು ಮಾಡಿ ಸುಮಾರು ಮೂರು ಬಾರಿ ಗುಲಬರ್ಗಾದಲ್ಲಿ ಸಚಿವ ಸಂಪುಟದ ಸಭೆಯನ್ನು ಮಾಡಿ 40-50 ಘೋಷಣೆಗಳನ್ನು ಮಾಡಿ ಇಲ್ಲಿಯವರೆಗೆ ಯಾವುದೇ ರೀತಿಯಿಂದ ಅಭಿವೃದ್ಧಿಯಾಗತಕ್ಕಂಥ, ರೈತರ ಪರವಾಗಿ ಕೆಲಸ ಮಾಡತಕ್ಕಂಥ ಕೆಲಸ ಕಾರ್ಯಗಳು ಆಗಿಲ್ಲ. ಇವೊತ್ತು ತೊಗರಿ ಕಣಜವಾಗಿರುವಂಥ ಗುಲಬರ್ಗಾ ಜಿಲ್ಲೆಗೆ ಸಾಕಷ್ಟು ರೈತರು ವಿಷವನ್ನು ಕುಡಿದು ಆತ್ಮಹತ್ಯೆ ಮಾಡಿಕೊಂಡಿರುವಂಥ ಸಂದರ್ಭವನ್ನು ತಾವೆಲ್ಲರೂ

ದೂರದರ್ಶದನಲ್ಲಿ ನೋಡಿದ್ದೀರಿ, ಪತ್ರಿಕೆಗಳಲ್ಲಿ ಕೂಡ ಬಂದಿದ್ದನ್ನು ನೋಡಿದ್ದೀರಿ. ಆ ರೈತರ ಅನುಕೂಲಕ್ಕಾಗಿ ಯಾವುದೇ ಘೋಷಣೆಯಾಗಿಲ್ಲ. ನಮ್ಮ ಹಿಂದಿನ ಸರ್ಕಾರದಲ್ಲಿ ಅಂದರೆ ಶ್ರೀ ಎಸ್.ಎಂ. ಕೃಷ್ಣಾರವರ ಸರ್ಕಾರದಲ್ಲಿ, ಶ್ರೀ ಧರ್ಮಸಿಂಗ್‌ರವರ ಸರ್ಕಾರದಲ್ಲಿ ಸುಮಾರು ಹನ್ನೆರಡು bridge cum barrage ಗಳನ್ನು ಕೃಷ್ಣ ಮತ್ತು ಭೀಮಾ ನದಿಗೆ ಅಡ್ಡಲಾಗಿ ಕಟ್ಟಿದ್ದಾರೆ. ಈ ಒಂದು ರೈತರ ಬಜೆಟ್‌ನಲ್ಲಿ ನಾವು ಆ ಒಂದು ಭೀಮಾ ಮತ್ತು ಕೃಷ್ಣಾ ನದಿಗೆ ಎಲ್ಲೆಲ್ಲಿ bridge cum barrage ಆಗಿವೆ ಅಲ್ಲಿ ಪಕ್ಕದಲ್ಲಿ ಕರೆಂಟ್ ಕಂಬಗಳನ್ನು ಎಳೆದು ರೈತರಿಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಹಾಕಿಕೊಟ್ಟರೆ ಆ ನಿಂತ ನೀರನ್ನು ಉಪಯೋಗ ಮಾಡಿಕೊಳ್ಳಲು ರೈತರಿಗೆ ಅನುಕೂಲವಾಗುತ್ತದೆ. ಯಾವ ರೀತಿ Industrial ಭೂಬ್ಯಾಂಕ್ ಮಾಡಿದ್ದೀರಿ ಅದೇ ರೀತಿ ಇವೊತ್ತು ರೈತರ ಸಲುವಾಗಿ ಭೂಮಿಗಳನ್ನು ಖರೀದಿ ಮಾಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಕೊಟ್ಟು ಆ ಪಂಪ್‌ಸೆಟ್ ಮೂಲಕ ಅವರಿಗೆ ನೀರನ್ನು ಒದಗಿಸಿಕೊಟ್ಟರೆ ನಿಜವಾಗಿಯೂ ರೈತರ ಬಗ್ಗೆ ಕಳಕಳಿ ಇರತಕ್ಕಂಥ ಈ ಸರ್ಕಾರ ಎಂದು ಇವೊತ್ತು ನಾವು ಶಹಬ್ಬಾಸ್‌ಗಿರಿ ಕೊಡತಕ್ಕಂಥ ಪ್ರಸಂಗ ಬರುತ್ತಿತ್ತು. ಆದರೆ ಇವೊತ್ತಿನವರೆಗೆ ಅದರ ಬಗ್ಗೆ ವಿಚಾರ ಮಾಡಲಿಲ್ಲ. 12 bridge cum barrage ಗಳು ಏನು ನೀರು ತುಂಬಿಕೊಂಡು ನಿಂತಿವೆ ಅವು ಸುಮ್ಮನೆ ನಿಂತಿಲ್ಲ ಅದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚಾಗಿ ಇಂದು ನೀರು ನಿಂತುಕೊಂಡಿದೆ. ಆ ನೀರನ್ನು ಉಪಯೋಗ ಮಾಡತಕ್ಕಂಥ ರೀತಿಯಲ್ಲಿ, ರೈತರಿಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಯಾವುದಾದರೊಂದು ಘೋಷಣೆಯನ್ನು ಈ ಬಜೆಟ್‌ನಲ್ಲಿ ಮಾಡಬೇಕಾಗಿತ್ತು. ಆ ದಿಸೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸ ಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೆ, ಇನ್ನು ಇವರು ಅಧಿಕಾರಕ್ಕೆ ಬಂದ ದಿನದಿಂದಲೇ ತನ್ನದೇ ಆದಂಥ ಶಾಸಕರ ಪಿತೂರಿಗಳಿಗೆ ರಾಜ್ಯದ ಅಭಿವೃದ್ಧಿಗೆ ತಿಲಾಂಜಲಿಯನ್ನಿಟ್ಟಿದಾರೆ. ಇವೊತ್ತು ಅವು ಒಂದು ಅಂಶದ ಅಭಿವೃದ್ಧಿಯಲ್ಲಿ ಮುಂದೆ ಬಂದಿದ್ದಾರೆ. ಅದೇನೆಂದರೆ ಸಾಲ ಮಾಡುವ ಪ್ರಗತಿ ಎಂದು ಈ

ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಸುಮಾರು 18ಸಾವಿರ ಕೋಟಿ ರೂಪಾಯಿ ಸಾಲ ಪ್ರಸ್ತಾಪವನ್ನು ಮಾಡಿದ್ದಾರೆ. ಆದರೆ ಇವೊತ್ತು ರಾಜ್ಯದ ಒಟ್ಟು ಸಾಲ ಸುಮಾರು 1 ಲಕ್ಷ ಕೋಟಿ ರೂಪಾಯಿಗೂ ಮೀರುತ್ತದೆ. ಇದೊಂದು ಸರ್ಕಾರ ಜನರಿಗೆ ನೀಡಿರತಕ್ಕಂಥ ಉಡುಗೊರೆ. ಈ ಸರ್ಕಾರ ನೀರಾವರಿಗೆ ಖರ್ಚು ಮಾಡುತ್ತೇವೆನ್ನತಕ್ಕಂಥ ಮಾತನ್ನು ಹೇಳಿದೆ. ಆದರೆ ಹೇಳಿರುವ ಅರ್ಧದಷ್ಟು ಕೂಡ ನೀರಾವರಿಗೆ ಹಣವನ್ನು ಖರ್ಚು ಮಾಡಿಲ್ಲ. ಇವೊತ್ತು ಸರ್ಕಾರ ಹಿಂದುಳಿದ ಭಾಗದ ಅನೇಕ ಕಡೆ ಹಣವನ್ನು ಖರ್ಚು ಮಾಡಿಲ್ಲ ಎನ್ನುವಂಥ ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇವೊತ್ತು ಗುತ್ತಿಗೆದಾರರಿಗೆ ಕೊಡುವ ಸಾವಿರಾರು ಕೋಟಿ ರೂಪಾಯಿಯ ಹಣ ಲೋಕೋಪಯೋಗಿ ಇಲಾಖೆಯಲ್ಲಿ ಬಾಕಿ ಇದೆ ಎಂದು ಚರ್ಚೆಯಲ್ಲಿ ಭಾಗವಹಿಸಿದ ತಮಗೆಲ್ಲರಿಗೂ ಗೊತ್ತಿದೆ. ಸುಮಾರು ಒಂದು ಸಾವಿರದ ಎಂಟನೂರು ಕೋಟಿ ರೂಪಾಯಿಗಳು ಲೋಕೋಪಯೋಗಿ ಇಲಾಖೆಯಲ್ಲಿ ಗುತ್ತಿಗೆದಾರರಿಗೆ ಕೊಡಬೇಕಾದ ಹಣ ಬಾಕಿ ಉಳಿದಿದೆ. ಆ ಹಣ ಬಿಡುಗಡೆಯಾಗದ ಕಾರಣ ಸುಮಾರು 3–4ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಯಾವ ರೀತಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಅದೇ ರೀತಿ ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಂಡಿರುವ ಸಂದರ್ಭ ಇದೆ. ಇವೊತ್ತು ಕೆಲಸ ಮಾಡಿ ಮೂರು ವರ್ಷಗಳಾದರೂ ಕೂಡ 50–54 ಆಗಲೀ 30–54 ಆಗಲೀ ಇವೊತ್ತಿನವರೆಗೆ ಸರ್ಕಾರ ಹಣ ಕೊಡಲಿಕ್ಕಾಗಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದನ್ನು ಮಾನ್ಯ ಲೋಕೋಪಯೋಗಿ ಇಲಾಖಾ ಸಚಿವರು ಕೂಡ ಒಪ್ಪಿಕೊಂಡಿದ್ದಾರೆ. ಆ ಬಾಕಿಯಲ್ಲಿನ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ  ಆ ಭಾಗಕ್ಕೆ ಮತ್ತು ಕೆಲಸ ಮಾಡಿದ ಗುತ್ತಿಗೆದಾರರಿಗೆ ಅನುಕೂಲವಾಗುವಂಥ ರೀತಿಯಲ್ಲಿ ಇವೊತ್ತು ಕೆಲಸ ಆಗಬೇಕಾಗಿದೆ.

ಮಾನ್ಯ ಸಭಾಪತಿಯವರೆ, ಇನ್ನು ರಾಜ್ಯದ ಬಡ ವರ್ಗದ ಜನತೆಗೆ ಮೂರು ರೂಪಾಯಿಗೆ ಒಂದು ಕೆ.ಜಿ.ಗೆ ಅಕ್ಕಿ ಕೊಡತಕ್ಕಂಥ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಚುನಾವಣೆಯಲ್ಲಿ ಕೊಟ್ಟಿದ್ದರು. ಆ

ಘೋಷಣೆಯಂತೆ ಮೂರು ರೂಪಾಯಿ ಕೆ.ಜಿ.ಯ ಅಕ್ಕಿಯು ಇಲ್ಲಿಯವರೆಗೆ ಸಮರ್ಪಕವಾಗಿ ಸಿಗುತ್ತಿಲ್ಲ. ಇವೊತ್ತಿನವರೆಗೆ ಬಿ.ಪಿ.ಎಲ್. ಮತ್ತು ಎ.ಪಿ.ಎಲ್. ಕಾರ್ಡ್‌ಗಳು ಯಾವುದೇ ಹಳ್ಳಿಗೆ ಸರಿಯಾದ ರೀತಿಯಲ್ಲಿ ತಲುಪತಕ್ಕಂಥದ್ದು ಆಗಿಲ್ಲ. ಆದಕಾರಣ ಆ ಕೆಲಸವನ್ನು ಕೂಡ ಸರ್ಕಾರ ಮಾಡಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೆ, ಇವೊತ್ತು ರೈತರ ಹೆಸರಿನಲ್ಲಿ ಪ್ರಮಾಣ ಮಾಡತಕ್ಕಂಥ ಸಂದರ್ಭದಲ್ಲಿ ಹಸಿರು ಶಾಲನ್ನು ಹೊದ್ದುಕೊಂಡಿರತಕ್ಕಂಥ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಥಮವಾಗಿ ಇಲ್ಲಿಯವರೆಗೆ ಉಚಿತವಾಗಿ ವಿದ್ಯುತ್ ಅನ್ನು ಕೊಡುತ್ತೇವೆನ್ನುವಂಥ ಮಾತನ್ನು ಹೇಳಿಕೊಂಡಿದ್ದಾರೆ. ಆದರೆ ಇಲ್ಲಿಯವರೆಗೆ ಉಚಿತವಾಗಿ ವಿದ್ಯುತ್ ಅನ್ನು ಕೊಡತಕ್ಕಂಥ ಸಂದರ್ಭ ಒದಗಿಸಿಲ್ಲ. ಹಳ್ಳಿಗಳಲ್ಲಿ ಬೆಳಿಗ್ಗೆ ಎರಡು ಗಂಟೆ ಮತ್ತು ಸಾಯಂಕಾಲ ಒಂದು ಗಂಟೆ ಲೋಡ್ ಶೆಡ್ಡಿಂಗ್ ಅನ್ನು ಹಳ್ಳಿಗಳಲ್ಲಿ ತರುವುದರಿಂದ ರೈತರಿಗೆ ನೀರಾವರಿ ಸೌಲಭ್ಯಕ್ಕಾಗಿ, ಬೇಸಿಗೆಯಲ್ಲಿ ಕುಡಿಯವ ನೀರಿಗೆ, ಪರೀಕ್ಷೆ ಕಾಲವಾದ್ದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಅದಕ್ಕೆ ಹೆಚ್ಚಿನ ಹಣವನ್ನು ಕೊಟ್ಟು ರೈತರಿಗೆ ವಿದ್ಯುತ್ ಅನ್ನು ಒದಗಿಸತಕ್ಕಂಥ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಇವೊತ್ತು ಬಹಳಷ್ಟು ರೈತರು ಉಚಿತವಾಗಿ ಬೇಡ, ಹಣ ತೆಗೆದುಕೊಂಡು ಸರಿಯಾದ ವಿದ್ಯುತ್ ಅನ್ನು ಕೊಟ್ಟರೆ ಸಾಕು ಎಂದು ಹೇಳುತ್ತಿರುವ ಪರಿಸ್ಥಿತಿ ಇದೆ. ನಮ್ಮಲ್ಲಿರತಕ್ಕಂಥ ಸಾಕಷ್ಟು ಜನ ರೈತರು, ಭೀಮಾ ನದಿಗೆ, ಕೃಷ್ಣಾ ನದಿಗೆ ಪಂಪ್‌ಸೆಟ್‌ಗಳನ್ನು ತಂದು ಹಣ ಖರ್ಚು ಮಾಡಿ ವಿದ್ಯುತ್ ಇಲ್ಲದೆ ಪಂಪ್‌ಸೆಟ್‌ಗಳನ್ನು ಮಾರಿ ಗುಲಬರ್ಗಾ ನಗರದಲ್ಲಿ ಬೇರೆ ಬೇರೆ ಕಡೆ ಮನೆ ಮಾಡಿಕೊಂಡು ಹೋಗತಕ್ಕಂಥ ಪರಿಸ್ಥಿತಿ ಒದಗಿ ಬಂದಿದೆ. ಅಂತಹವರನ್ನು ಉಳಿಸಿಕೊಳ್ಳತಕ್ಕಂಥ ರೀತಿಯಲ್ಲಿ ಇವೊತ್ತಿನ ಕೆಲಸ ಆಗಬೇಕಾಗಿದೆ.

ಮಾನ್ಯ ಸಭಾಪತಿಯವರೆ, ಇನ್ನು 2011–12ನೇ ಸಾಲಿನಲ್ಲಿ ಇಲ್ಲಿಯವರೆಗೆ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಸೈಕಲ್‌ಗಳನ್ನು ಕೊಟ್ಟಿಲ್ಲ. ತಕ್ಷಣ ಅದನ್ನು ಕೊಡತಕ್ಕಂಥ ಕೆಲಸ ಆಗಬೇಕೆಂದು ಒತ್ತಾಯಿಸುತ್ತೇನೆ.

ಇವೊತ್ತು ನಿಜವಾಗಿಯೂ ರೈತರ ಬಗ್ಗೆ ಕಳಕಳಿ ಇರತಕ್ಕಂಥ ಸರ್ಕಾರ ಬಹಳಷ್ಟು ಕತ್ತಲೆಯಲ್ಲಿರತಕ್ಕಂಥ ರೈತರಿಗೆ ಹೆಚ್ಚಿನ ಸಾಲಸೌಲಭ್ಯಗಳನ್ನು ಕೊಟ್ಟು ಅವರಿಗೆ ಅನೇಕ ರೀತಿಯಿಂದ ಸವಲತ್ತುಗಳನ್ನು ಕೊಟ್ಟು ನಿಜವಾಗಿಯೂ ರೈತರ ಪರವಾದ ಬಜೆಟ್ ಮಂಡನೆ ಮಾಡಿದಂಥ ಸರ್ಕಾರ ಎಂದು ಶ್ಲಾಘನೆಯನ್ನು ಪಡೆಯಬೇಕು. ಗುಲಬರ್ಗಾ ಭಾಗದಲ್ಲಿರತಕ್ಕಂಥ ತೊಗರಿ ಬೆಳೆಯ ರೈತರಿಗೆ  ಮತ್ತು ಇನ್ನಿತರ ಬೆಳೆಗಳನ್ನು ಬೆಳೆಯತಕ್ಕಂಥ ರೈತರಿಗೆ ಅನುಕೂಲ ಮಾಡಿಕೊಡಬೇಕು. ನಾನು ಸ್ವತ: ಥೈಲ್ಯಾಂಡ್‌ನಿಂದ 3000 ರೂಪಾಯಿ ಒಂದು ತೊಲಿ ಪಪ್ಪಾಯಿ ಬೀಜವನ್ನು ತಂದು ಹಾರ್ಟಿಕಲ್ಚರ್ ಮಾಡಿದ್ದೇನೆ. ಆಗ ಮೊದಲನೆ ಬಾರಿ ದರ ಚೆನ್ನಾಗಿತ್ತು. ನಮಗೆ ಬಹಳಷ್ಟು ಚೆನ್ನಾಗಿ ಲಾಭ ಆಯಿತು. ನಂತರ ಅದನ್ನು ಬೀದಿಗೆ ತಂದು ಹಾಕತಕ್ಕಂಥ ಪರಿಸ್ಥಿತಿ ಬಂತು ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಯಾವುದೇ ಬೆಳೆಯನ್ನು ಬೆಳೆದಿರತಕ್ಕಂಥದ್ದಕ್ಕೆ ಒಂದು ದರ ಎಂದು ಇದೆ. ರೈತರು ಬೆಳೆದಂಥ ಬೆಳೆಗೆ ಇಲ್ಲಿಯವರೆಗೆ ಯಾವುದೇ ಒಂದು ಬೆಂಬಲ ಬೆಲೆ ಅಥವಾ ನಿಗದಿತ ಬೆಲೆ ನಿಗದಿಯಾಗಿಲ್ಲ. ನಾವು ಆಡಳಿತ ಪಕ್ಷದವರು, ವಿರೋಧ ಪಕ್ಷದವರು ಎಲ್ಲರೂ ಸೇರಿ ರೈತರ ಬಗ್ಗೆ ಕಳಕಳಿ ಇರತಕ್ಕಂಥ, ರೈತ ಕುಟುಂಬದಿಂದ ಬಂದಿರತಕ್ಕಂಥ ನಾವೆಲ್ಲರೂ ಕೂಡ ನಿಜವಾಗಿಯೂ ಅವರು ಬೆಳೆದಿರತಕ್ಕಂಥದ್ದಕ್ಕೆ ಅನುಕೂಲ ಕಲ್ಪಿಸಬೇಕು. ಇವೊತ್ತು ಅಡಿಕೆ ಬೆಳೆಗೆ ತೊಂದರೆಯಾಗಿದೆ, ಆಲುಗಡ್ಡೆ ಬೆಳೆಗೆ ತೊಂದರೆಯಾಗಿದೆ, ಟೊಮಾಟೊ ಬೆಳೆಗೆ ತೊಂದರೆಯಾಗಿದೆ, ತೊಗರಿ ಬೆಳೆಗೆ ತೊಂದರೆಯಾಗಿದೆ, ಜೋಳ ಬೆಳೆಯುವುದಕ್ಕೆ ತೊಂದರೆಯಾಗಿದೆ. ಎಲ್ಲಾ ಬೆಳೆಗಳ ಬೆಲೆ ಇವೊತ್ತು ಕುಸಿಯುತ್ತಿದೆ. ಇಂತಹ ಒಂದು ಸಂದರ್ಭ ಇರುವುದರಿಂದ ಎಲ್ಲರೂ ವಿಚಾರ ಮಾಡಿ, ಚಿಂತನೆ ಮಾಡಿ, ರೈತರ ಉಳಿವಿಗಾಗಿ, ರೈತರ ಏಳಿಗೆಗಾಗಿ ಶ್ರಮಿಸಿ ಒಂದು ನಿರ್ಧಾರಕ್ಕೆ ಬರಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಂಥ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

**ಸಭಾಪತಿಯವರು:–** ಇವೊತ್ತಿನ ದಿವಸ ಬಜೆಟ್ ಬಗ್ಗೆ ಕೊನೆಯದಾಗಿ ಚರ್ಚೆ ಮಾಡುವವರು ಶ್ರೀ ಟಿ.ಜಾನ್. ಮಾನ್ಯ ಸದಸ್ಯರೆ ತಮಗೆ ಎಷ್ಟು ಸಮಯ ಬೇಕೆಂದು ಹೇಳಿದರೆ ಅನುಕೂಲವಾಗುತ್ತದೆ. ಮಾನ್ಯ ಸದಸ್ಯರಾದ ಅಲ್ಲಂಪ್ರಭುರವರು ಹತ್ತು ನಿಮಿಷ ಎಂದು ಹೇಳಿ ಅಷ್ಟರಲ್ಲಿಯೇ ತಮ್ಮ ಮಾತುಗಳನ್ನು ಮುಕ್ತಾಯ ಮಾಡಿದರು. ಸ್ವಲ್ಪ ಹೆಚ್ಚು ಕಡಿಮೆ ಆಗುತ್ತದೆ ಪರವಾಗಿಲ್ಲ. ಅದನ್ನು ಅವರು ಮಾಡಿದ್ದಾರೆ, ನನಗೆ ಸಂತೋಷವಾಯಿತು. ಅದನ್ನು ನಾನು ಅಪ್ರಿಶಿಯೇಟ್ ಮಾಡುತ್ತೇನೆ. ಅವರು ಸಮಯಕ್ಕೆ ಸರಿಯಾಗಿ ಮುಕ್ತಾಯ ಮಾಡಿದ್ದಾರೆ.

**ಶ್ರೀ ಆರ್.ವಿ. ವೆಂಕಟೇಶ:–** ಮಾನ್ಯ ಸಭಾಪತಿಯವರೆ, ಆಡಳಿತ ಪಕ್ಷದವರು ಜಾಸ್ತಿ ಅವಕಾಶವನ್ನು ತೆಗೆದುಕೊಂಡರೆ ನಮಗೆ ಕಡಿಮೆ ಅವಕಾಶ ಸಿಗುತ್ತದೆ.

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ₹ 326 ಕೋಟಿ ಮತ್ತು ಕ್ರಿಶ್ಚಿಯನ್ ಪಂಗಡಗಳ ಅಭಿವೃದ್ಧಿಗೆ ₹ 50 ಕೋಟಿ 2011–12ರ ಆಯವ್ಯಯದಲ್ಲಿ ಮೀಸಲಿರಿಸಿದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಯಾರೇ ಒಳ್ಳೆಯ ಕೆಲಸವನ್ನು ಮಾಡಿದರೆ ಅವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆಂದು ಹೇಳಬೇಕು. ನಾನು ನೇರವಾಗಿ ಹೇಳುವಂಥ ವ್ಯಕ್ತಿ. ಮುಚ್ಚುಮರೆಯಿಂದ ಹೇಳುವಂಥ ವ್ಯಕ್ತಿ ಅಲ್ಲ. ಇರುವುದನ್ನು ಇದ್ದ ಹಾಗೆ ಹೇಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ನಾವು ಇದ್ದದ್ದನ್ನು ಇದ್ದಹಾಗೆ ಹೇಳುತ್ತೇವೆ. ಯಾರೇ ಒಳ್ಳೆ ಕೆಲಸವನ್ನು ಮಾಡಿದರೆ ಅಭಿನಂದಿಸುತ್ತೇವೆ. ಕೊರಳಿಗೆ ಹಾರ ಹಾಕಿ ಸನ್ಮಾನ ಮಾಡುತ್ತೇವೆ.

**ಶ್ರೀ ಟಿ. ಜಾನ್:–** ಮಾನ್ಯ ಸಭಾಪತಿಯವರೆ, ಮೊಟ್ಟ ಮೊದಲು ನಮ್ಮ ಕರ್ನಾಟಕ ಸರ್ಕಾರ ಕ್ರಿಶ್ಚಿಯನ್ ಪಂಗಡಗಳ ಅಭಿವೃದ್ಧಿಗೆ 50 ಕೋಟಿ ರೂಪಾಯಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ

ಮೀಸಲಿರಿಸಿದೆ. ಆದರೆ ಕ್ರಿಶ್ಚಿಯನರ ಅಭಿವೃದ್ಧಿಯ ಬಗ್ಗೆ ಸರಕಾರದ ಗುರಿಯಾಗಿರುವುದಾದರೆ, ಮೀಸಲಿರಿಸಿದ ₹ 50 ಕೋಟಿಯನ್ನು ಒಂದು ಕ್ರಿಶ್ಚಿಯನ್ ಅಭಿವೃದ್ದಿ ಮಂಡಳಿಯನ್ನು ರಚಿಸಿ ಅದರ ಮೂಲಕ ಸದರಿ ಮೊತ್ತವನ್ನು ಹಂಚುವುದಾದರೆ ಮಾತ್ರ ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿಯಾಗಬಹುದು.

**ಸಭಾಪತಿಯವರು:–** ಫೈನ್. ಅದು ಒಳ್ಳೆಯ ಸಲಹೆ.

**ಶ್ರೀ ಟಿ. ಜಾನ್:–** ಮಾನ್ಯ ಸಭಾಪತಿಯವರೆ, ಅದು ಅಲ್ಲದೇ ಮೀಸಲಿರಿಸಿದ ₹ 50 ಕೋಟಿಯನ್ನು ಯಾವ ರೀತಿಯಲ್ಲಿ ಉಪಯೋಗಿಸ ಬೇಕೆಂಬ ಬಗ್ಗೆ ಮಾಹಿತಿ ನೀಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಫೈನ್. ಅದು ಸರಿ ಇದೆ. ಅವರು ಸರಿಯಾಗಿ ಹೇಳುತ್ತಿದ್ದಾರೆ.

**ಶ್ರೀ ಟಿ. ಜಾನ್:–** ಮಾನ್ಯ ಸಭಾಪತಿಗಳೆ, ನಾನು ಕೊಡಗು ಜಿಲ್ಲೆಯ ಬಗ್ಗೆ ಮಾತ್ರ ಈಗ ಮಾತನಾಡುತ್ತಿದ್ದೇನೆ. ಈಗ ಸಮಯದ ಅಭಾವ ಇರುವುದರಿಂದ ಕರ್ನಾಟಕದ ಯಾವುದೇ ಜಿಲ್ಲೆಯ ಬಗ್ಗೆ ಈಗ ಮಾತನಾಡುವುದಕ್ಕೆ ನಿಂತಿಲ್ಲ. ಬರೀ ಕೊಡಗಿನ ಕೆಲವು ವಿಚಾರಗಳನ್ನು ಮಾತ್ರ ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೆ, ಮಾನ್ಯ ಜಾನರವರು ಮತ್ತು ನಾಣಯ್ಯನವರು ಬರೀ ಬೇರೆಯವರ ಆತಿಥ್ಯದ ಬಗ್ಗೆ ಹೇಳುತ್ತಿರುವುದರಿಂದ ನಿಮ್ಮ ನಿಜವಾದ ಕೊಡಗಿನ ಆತಿಥ್ಯವನ್ನು ಸದನದ ಸದಸ್ಯರಿಗೆ ಕೊಡುವುದರ ಬಗ್ಗೆ ಹೇಳುತ್ತಿಲ್ಲವಲ್ಲ.

**ಶ್ರೀ ಟಿ. ಜಾನ್:–** ಮಾನ್ಯ ಸಭಾಪತಿಯವರೆ, ಮಾನ್ಯ ನಾಣಯ್ಯನವರು ಇಡೀ ಪ್ರಪಂಚದ ಬಗ್ಗೆ ಮಾತನಾಡುತ್ತಿದ್ದಾರೆ. ನಾನು ಮಾತ್ರ ಕೊಡಗು ಜಿಲ್ಲೆಯ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ. ಏಕೆಂದರೆ ನಮ್ಮ ಇಬ್ಬರು ಶಾಸಕರಿದ್ದಾರೆ. ಅವರು ಮಂತ್ರಿಯಾಗಬೇಕೆನ್ನುವ ಆಸೆಯಲ್ಲಿ

ಅಭಿವೃದ್ಧಿ ವಿಚಾರ ಮರೆತುಹೋಗಿದೆಯೇ ಏನೋ ಗೊತ್ತಿಲ್ಲ. ಅಥವಾ ಮಾನ್ಯ ಮುಖ್ಯಮಂತ್ರಿಯವರನ್ನು ಅಭಿವೃದ್ಧಿಯ ಬಗ್ಗೆ ಕೇಳಿದರೆ ಮುಖ್ಯಮಂತ್ರಿಯವರಿಗೇನಾದರು ಬೇಸರ ಆದರೆ, ಮಂತ್ರಿ ಪದವಿ ತಪ್ಪಿ ಹೋಗುತ್ತದೆ ಏನೋ ಎಂದು ಅವರಿಗೆ ಭಯ ಇರಬಹುದು.

**ಸಭಾಪತಿಯವರು:–** ಅವರ ಲಾಜಿಕ್ ಚೆನ್ನಾಗಿದೆ. ಅವರು ಕೊಡಗಿನ ಬಗ್ಗೆ ಮಾತನಾಡುತ್ತಿದ್ದಾರೆ. ಚೆನ್ನಾಗಿ ಮಾತನಾಡುತ್ತಿದ್ದಾರೆ, ಮಾತನಾಡಲಿ.

**ಶ್ರೀ ಟಿ. ಜಾನ್:–** ಸಭಾಧ್ಯಕ್ಷರು ಕೂಡ ನಮ್ಮ ಶಾಸಕರು. ಸಭಾಪತಿಯವರಾದ ಶ್ರೀ ಶಂಕರಮೂರ್ತಿಯವರು ಕೂಡ ನಮ್ಮ ಜಿಲ್ಲೆಯಿಂದ ಆರಿಸಿ ಬಂದಂಥವರು.

**ಸಭಾಪತಿಯವರು:–** ನಾನು ಸಹ ಕೊಡಗು ಜಿಲ್ಲೆಯ ಪ್ರತಿನಿಧಿ. ನನ್ನ ಪದವೀಧರರ ಕ್ಷೇತ್ರಕ್ಕೆ ಕೊಡಗು ಕೂಡ ಸೇರುತ್ತದೆ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೆ, ನೀವು ಕೊಡಗಿನ ಅಳಿಯಂದಿರು, ಮಾನ್ಯ ಸಭಾನಾಯಕರು ಕೊಡಗಿನ ಅಳಿಯಂದಿರು ಅದು ಹೇಗೆಂದು ನನಗೆ ಅರ್ಥ ಆಗುತ್ತಿಲ್ಲ. ಮಾನ್ಯ ನಾಣಯ್ಯನವರೆ ತಮಗೇನಾದರು ಗೊತ್ತಿದೆಯೇ?

**ಶ್ರೀ ಎಂ.ಸಿ. ನಾಣಯ್ಯ:–** ವಿಶಾಲ ಹೃದಯ ಇರುವಂಥ ಜನ ಯಾವಾಗಲೂ ವಿಶಾಲ ಸಂಬಂಧವನ್ನು ಬೆಳೆಸಿಕೊಳ್ಳುತ್ತಾರೆ. ವಿಶಾಲ ಹೃದಯ ಇಲ್ಲದವರಿಗೆ ಆ ಸಂಬಂಧಗಳು ಸಿಕ್ಕುವುದಿಲ್ಲ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾನಾಯಕರಿಗೆ ಆ ವಿಶಾಲ ಹೃದಯಕ್ಕೆ ಸಂಬಂಧಿಸಿದ ಅಭ್ಯಾಸಗಳು ಅಥವಾ ಹವ್ಯಾಸಗಳೇನಾದರು ತಮಗೆ ಇದೆಯೇ ?

**ಶ್ರೀ ಟಿ. ಜಾನ್:–** ಮಾನ್ಯ ಸಭಾಪತಿಯವರೆ, ಕೊಡಗು ಜಿಲ್ಲೆಯ ರಸ್ತೆಗಳ ಅಭಿವೃದ್ಧಿಗೆ ₹ 50 ಕೋಟಿ ಮೀಸಲಿರಿಸಿರುವುದನ್ನು ₹ 100 ಕೋಟಿಗೆ ಏರಿಸಬೇಕೆಂದು ಒತ್ತಾಯ ಮಾಡುತ್ತೇನೆ. ಕೊಡಗು ಜಿಲ್ಲೆಯ ಸಂಪೂರ್ಣ

ರಸ್ತೆಗಳು ಹಾಳಾಗಿವೆ. ಅದು ಅಲ್ಲದೇ ಕೊಡುಗು ಜಿಲ್ಲೆಯಲ್ಲಿ ಸೂಕ್ತವಾದ ಜಿಲ್ಲಾಧಿಕಾರಿಗಳ ಕಟ್ಟಡವಿಲ್ಲ. ಹಾಲಿ ಕಛೇರಿಯು Archaeological Departmentಗೆ ಸೇರಿದ್ದಾಗಿರುತ್ತದೆ. ಸದರಿ ಕಟ್ಟಡವು ನೂರಾರು ವರ್ಷಗಳ ಹಿಂದಿನದಾಗಿರುತ್ತದೆ. ಸದರಿ ಕಟ್ಟಡವನ್ನು Archaeological Department ಗೆ ಹಸ್ತಾಂತರಿಸಬೇಕೆಂಬ ಪ್ರಸ್ತಾಪವನ್ನು ಸಲ್ಲಿಸಲಾಗಿರುತ್ತದೆ. ಆದ್ದರಿಂದ ಕೊಡಗು ಜಿಲ್ಲೆಗೆ ಜಿಲ್ಲಾಧಿಕಾರಿಗಳ ಕಛೇರಿ ನಿರ್ಮಾಣ ಮಾಡಲು ಸೂಕ್ತ ಸ್ಥಳ ಹಾಗೂ ಅನುದಾನವನ್ನು ಒದಗಿಸಿ ಕಾರ್ಯ ಪ್ರವೃತ್ತರಾಗಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಡಾ|| ವಿ.ಎಸ್. ಆಚಾರ್ಯ ಸಭಾ ನಾಯಕರು:–** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಗೆ 25 ಕೋಟಿ ರೂಪಾಯಿಗಳನ್ನು ಪ್ರತ್ಯೇಕವಾಗಿ ಮಂಜೂರು ಮಾಡಲಾಗಿದೆ.

**ಶ್ರೀ ಟಿ. ಜಾನ್:–** ಅಂದರೆ ಈ ವರ್ಷದ ಬಜೆಟ್ನಲ್ಲಿ ಅದು ಇಲ್ಲ.

**ಡಾ|| ವಿ.ಎಸ್. ಆಚಾರ್ಯ:–** ಕಳೆದ ವರ್ಷದ್ದೇ ಈ ವರ್ಷನು ಮುಂದುವರೆಯುತ್ತದೆ. It will be carried forward. ಅದು 10 ಮತ್ತು 11ನೇ ಸಾಲಿನ ಬಜೆಟ್‌ನಲ್ಲಿದೆ.

**ಶ್ರೀ ಎಂ.ಸಿ. ನಾಣಯ್ಯ :–** ಮಾನ್ಯ ಸಭಾಪತಿಯವರೇ, ಅಲ್ಲಿ ಒಂದು Government Workshop ಇತ್ತು. ನಮ್ಮ Saint Michael ಶಾಲೆಯ ಪಕ್ಕದಲ್ಲಿಯೇ ಓದು Government Workshop ಇದೆ. ಈಗ ಅದು ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಅದು ಸುಮಾರು ಒಂದು ಎಕರೆ ಹತ್ತು ಗುಂಟೆ ಜಾಗವಿದೆ, ಬಹುಶಃ ಈ ಜಾಗವನ್ನು ಗುರುತು ಮಾಡಿ, ಆ ಜಾಗವನ್ನು ಮಂಜೂರಾತಿ ಮಾಡಬೇಕೆಂದು ಹೇಳಿ ಜಿಲ್ಲಾಧಿಕಾರಿಗಳು ಸಹ ಆ ಕ್ಷೇತ್ರವನ್ನು ಮೀಸಲಿಟ್ಟಿದ್ದಾರೆಂದು ತಿಳಿದು ಬಂದಿದೆ. ಆದರೆ ಆ ಆದೇಶ ಸರ್ಕಾರಕ್ಕೆ ಹೋಗಿರಬಹುದು, ಅದು ಇಲಾಖೆಯಿಂದ ಅನುಮತಿ ಪಡೆದುಕೊಂಡು ಹೋಗಬೇಕಾಗಿದೆ.

**ಸಭಾಪತಿಯವರು:–** ಮಾನ್ಯ ಟಿ. ಜಾನ್‌ರವರು ಈ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದು ಎಷ್ಟು ಉಪಯೋಗವಾಯಿತು ನೋಡಿ. ಜಾಗವು ಸಿಗುತ್ತದೆ, ಜೊತೆಗೆ ಮೀಸಲಿಟ್ಟಿರುವಂತಹ ಹಣವು ಸಹ ಉಪಯೋಗವಾಗುತ್ತದೆ.

**ಶ್ರೀ ಟಿ. ಜಾನ್:–** ಮಾನ್ಯ ಸಭಾಪತಿಯವರೇ, ಹಲವು ವರ್ಷಗಳಿಂದ ಕೊಡಗು ಜಿಲ್ಲೆಯ ಎಲ್ಲಾ ಸರ್ಕಾರಿ ಕಛೇರಿಗಳ ದುರಸ್ತಿ ಮಾಡದೇ ಇರುವುದರಿಂದ ಜಿಲ್ಲೆಯ ಎಲ್ಲಾ ಸರ್ಕಾರಿ ಕಛೇರಿಗಳನ್ನು ದುರಸ್ತಿ ಪಡಿಸಲು ಪ್ರತ್ಯೇಕವಾದ ಅನುದಾನವನ್ನು ಒದಗಿಸಿ ಕಾರ್ಯ ಪ್ರವೃತ್ತರಾಗಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಡಾ॥ ವಿ.ಎಸ್. ಆಚಾರ್ಯ:–** ಮಾನ್ಯ ಸಭಾಪತಿಯವರೇ, ನೂರಾರು ವರ್ಷಗಳಿಂದ ಜಿಲ್ಲಾಧಿಕಾರಿಗಳ ಕಛೇರಿ ಇಲ್ಲ, ಎಲ್ಲಾ ನಾವು ಬಂದ ಮೇಲೆಯೇ ಮಾಡಬೇಕೆಂದು ನೀವು ತೀರ್ಮಾನ ಮಾಡಿದಂತೆ ಕಾಣಿಸುತ್ತಿದೆ. ಮಾನ್ಯ ಟಿ. ಜಾನ್ ರವರು ಸಹ ಇಷ್ಟು ವರ್ಷ ಮಂತ್ರಿಗಳಾಗಿದ್ದರು. I am asking in a lighter vein.

**ಶ್ರೀ ಟಿ. ಜಾನ್:–** ಮಾನ್ಯ ಸಭಾಪತಿಯವರೇ, ನಾವು ಇಷ್ಟು ವರ್ಷ ಮಾಡುವುದಕ್ಕೆ ಆಗಲಿಲ್ಲವೆಂದು ನಿಮಗೆ ಈಗ ಅಧಿಕಾರವನ್ನು ಕೊಟ್ಟಿರುವುದು.

(ಗೊಂದಲ)

ನಮ್ಮ ಹಾಗೆಯೇ ನೀವು ಮಾಡಿದರೆ ಏನು ಪ್ರಯೋಜನ? ನಾವು 60 ವರ್ಷದಿಂದ ಮಾಡಿಲ್ಲ.....

**ಡಾ॥ ಎ.ಹೆಚ್. ಶಿವಯೋಗಿಸ್ವಾಮಿ (ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎಷ್ಟು ಸತ್ಯ ಹೇಳುತ್ತಿದ್ದಾರೆ ನೋಡಿ.

**ಸಭಾಪತಿಯವರು:–** ಅವರು ಹೇಳುವುದಕ್ಕೆ ಬಿಡಿ, ಮಧ್ಯ ನೀವು ಏಕೆ ಬಾಯಿ ಹಾಕುತ್ತೀರಿ? ಅವರು ಅಪರೂಪಕ್ಕೆ ಮಾತನಾಡುತ್ತಿದ್ದಾರೆ.

**ಶ್ರೀ ಟಿ. ಜಾನ್:–** ಮಾನ್ಯ ಸಭಾಪತಿಯವರೇ, ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ, 60 ವರ್ಷದಲ್ಲಿ ಕಾಂಗ್ರೆಸ್ ಬಹಳ ದೊಡ್ಡ ಕೆಲಸ ಮಾಡಿದೆ ಎಂದು ಹೇಳುತ್ತಾರೆ. ಮೊನ್ನೆ ದಿವಸ ಪ್ರಶ್ನೋತ್ತರ ಸಮಯದಲ್ಲಿ 60 ವರ್ಷದಲ್ಲಿ ನಾವು ಮಾಡಿರುವಂಥದ್ದರ ಬಗ್ಗೆ ಹೇಳಿದ್ದೇನೆ. ಈ 60 ವರ್ಷದಲ್ಲಿ ನಾವು ಮಾಡಿದ್ದಕ್ಕಿಂತ ಜಾಸ್ತಿ ಅನ್ಯಾಯವನ್ನು ತಾವುಗಳು ಮಾಡಿರುವುದು ಎಲ್ಲರಿಗೂ ತಿಳಿದಿರುವಂತಹ ವಿಷಯವಾಗಿದೆ. ಅಂದರೆ ಅವರವರ ಸ್ವಂತಕ್ಕೆ ಮಾಡಿಕೊಂಡಿದ್ದಾರೆ ಹೊರತು ರಾಜ್ಯಕ್ಕಾಗಲಿ, ಪ್ರಜೆಗಳಿಗಾಗಲಿ ಏನು ಮಾಡಿಲ್ಲವೆಂದು ನಾನು ಹೇಳುತ್ತಿರುವುದು.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, 60 ವರ್ಷ ಕಳೆದರೂ ಸಹ ಕೊಡಗಿನಲ್ಲಿ ಜಿಲ್ಲಾಧಿಕಾರಿಗಳ ಕಟ್ಟಡವಿಲ್ಲ. ಆದರೆ ಈಗ ಆಗುತ್ತಿದೆ.

**ಶ್ರೀ ಟಿ. ಜಾನ್:–** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯು ಪ್ರವಾಸಿ ತಾಣವಾಗಿದ್ದು, ಜಿಲ್ಲೆಗೆ ದಿನ ನಿತ್ಯ ನೂರಾರು ಪ್ರವಾಸಿಗರು ಬರುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಕುಡಿಯುವ ನೀರಿನ ಅಭಾವ ಕಂಡು ಬಂದಿದೆ. ಇದಕ್ಕೆ ಒಂದು ಪರಿಹಾರ ಕಲ್ಪಿಸುವಲ್ಲಿ ಇದುವರೆವಿಗೂ ಸಾಧ್ಯವಾಗದಿರುವುದು ವಿಷಾದನೀಯ ಸಂಗತಿಯಾಗಿದೆ.

**ಸಭಾಪತಿಯವರು:–** ಮಾನ್ಯ ಜಾನ್ ಅವರನ್ನು appreciate ಮಾಡಬೇಕು. ಏಕೆಂದರೆ, ಅವರಿಗೆ ಕನ್ನಡ ಅಷ್ಟು ಚೆನ್ನಾಗಿ ಬರುವುದಿಲ್ಲ, ಆದಕಾರಣ ಅವರಿಗೆ ಕನ್ನಡ ಮಾತನಾಡುವುದಕ್ಕೆ ಕಷ್ಟವಾಗುತ್ತಿದೆ. ಆದರೂ ಸಹ ಅವರು ಕನ್ನಡದಲ್ಲಿ ಬರೆದುಕೊಂಡು ಬಂದು ಮಾತನಾಡುತ್ತಿದ್ದಾರೆ. ಅದಕ್ಕಾಗಿ ನಾವು ಅವರನ್ನು ಅಭಿನಂದಿಸಬೇಕು.

**ಶ್ರೀ ಟಿ. ಜಾನ್:–** ಮಡಿಕೇರಿ ನಗರಕ್ಕೆ ಕುಡಿಯುವ ನೀರಿನ ಯೋಜನೆ ಬಗ್ಗೆ ದಿನಾಂಕ:6–12–2010ರಂದು 30 ಕೋಟಿ ರೂಪಾಯಿಗಳನ್ನು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ.

ಆದರೆ ಇದುವರೆವಿಗೂ ಯಾವುದೇ ಕೆಲಸ ಆಗಿಲ್ಲ. ಒಂದು ಹಿಟಾಚಿ ಮೆಷಿನ್, ಒಂದು ಲಾರಿ ಮತ್ತೊಂದು ಟ್ರ್ಯಾಕ್ಟರ್ ಮಾತ್ರ ಅಲ್ಲಿದೆ. ಗುತ್ತಿಗೆ ಕೊಟ್ಟಿದೆ ಎಂದು ಹೇಳುತ್ತಾರೆ, ಆದರೆ ಅದು ಎಲ್ಲಿ ಏನಾಯಿತು ಎಂದು ಯಾರಿಗೂ ಇದೂವರೆವಿಗೂ ಸರಿಯಾಗಿ ಗೊತ್ತಿಲ್ಲ. ಆದುದರಿಂದ ಆ ವಿಚಾರದಲ್ಲಿ ಹಣವನ್ನು ಕೊಡಲೆ ಬಿಡುಗಡೆ ಮಾಡಬೇಕೆಂದು ಒತ್ತಾಯಿಸುತ್ತೇನೆ. ಅದೇ ರೀತಿ ಸೋಮವಾರಪೇಟೆ ಪಟ್ಟಣ, ಕುಶಾಲನಗರ, ವೀರಾಜಪೇಟೆ, ಗೋಣಿಕೊಪ್ಪಲು, ಪೊನ್ನಂಪೇಟೆ ಮತ್ತು ನಾಪೊಕ್ಲುವಿನಲ್ಲಿ ಈ ಕೂಡಲೇ ಕುಡಿಯುವ ನೀರಿನ ಯೇಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಒತ್ತಾಯಿಸುತ್ತಿದ್ದೇನೆ.

ಕೊಡಗು ಜಿಲ್ಲೆಗೆ ಹೆಚ್ಚಿನ ಪ್ರವಾಸಿಗರು ಬರುತ್ತಿರುವುದರಿಂದ ಜಿಲ್ಲೆಯಲ್ಲಿ ತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಸೂಕ್ತ ವ್ಯವಸ್ಥೆಯ ಇಲ್ಲದಾಗಿದೆ. ಆದ್ದರಿಂದ ಸರ್ಕಾರವು ಈ ಕೂಡಲೇ ಸ್ಪಂದಿಸಿ ಇದಕ್ಕೆ ಸಂಬಂಧಪಟ್ಟಂತೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತಿದ್ದೇನೆ.

ಮಾನ್ಯ ಸಭಾಪತಿಗಳೆ, ಕೊಡಗು ಮಲೆನಾಡು ಜಿಲ್ಲೆಯಾಗಿದ್ದನ್ನು ಪರಿಗಣಿಸಿ ಕೊಡಗಿನ ಸರ್ವತೋಮುಖ ಅಭಿವೃದ್ಧಿಗೆ ಪ್ರತ್ಯೇಕ ಪ್ಯಾಕೇಜನ್ನು ನೀಡಬೇಕಾಗಿ ಒತ್ತಾಯಿಸುತ್ತಿದ್ದೇನೆ.

ಮಾನ್ಯಸಭಾಪತಿಗಳೆ, ಕೊಡಗು ಜಿಲ್ಲೆಯಲ್ಲಿ ಹೆಚ್ಚಿನ ಕೈಗಾರಿಕಾ ಘಟಕಗಳು ಇಲ್ಲದಿದ್ದರೂ, ಕೊಡಗು ಜಿಲ್ಲೆಗೆ ಸಮರ್ಪಕವಾದ ವಿದ್ಯುತ್ ಪೂರೈಕೆ ಇಲ್ಲದಿರುವುದು ಸರ್ಕಾರದ ದ್ವಿಮುಖ ನೀತಿಯಾಗಿದೆ. ಹಾಗೂ ಇದರ ಬಗ್ಗೆ ಯಾವುದೇ ಪ್ರಸ್ತಾಪ ಇಲ್ಲದಿರುವುದು ಕೊಡಗಿನ ಜನತೆಯನ್ನು ಸರ್ಕಾರವು ಕಡೆಗಣಿಸುತ್ತಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಆದ್ದರಿಂದ ಮಾನ್ಯ ಸಭಾಪತಿಗಳೆ, ಕೊಡಗು ಜಿಲ್ಲೆಗೆ ಸಮರ್ಪಕವಾದ ವಿದ್ಯುತ್ ಪೂರೈಕೆಯನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ನಾವು ನಮ್ಮ ಇಡೀ ಜಿಲ್ಲೆಗೆ ಒಂದು ವರ್ಷಕ್ಕೆ ಖರ್ಚು ಮಾಡುತ್ತಿರುವಂತಹ ವಿದ್ಯುಚ್ಛಕ್ತಿ

ಏನಿದೆ, ಅಷ್ಟು ವಿದ್ಯುಚ್ಛಕ್ತಿ ರಾಜ್ಯಕ್ಕೆ ಒಂದು ದಿವಸಕ್ಕೆ ಖರ್ಚು ಮಾಡುತ್ತಿರುವಂತಹ ವಿದ್ಯುಚ್ಛಕ್ತಿಗೆ ಸಮ. ಈಗ ಅವರು 160 ಮಿಲಿಯನ್ ಯೂನಿಟ್ ಎಂದು ಹೇಳುತ್ತಿದ್ದಾರೆ.

120–127 ಮಿಲಿಯನ್ ಯುನಿಟ್ಸ್ ಸರಾಸರಿ ಮಳೆ ಬಂದಾಗ 110–113 ಮಿಲಿಯನ್ ಯುನಿಟ್ಸ್‌ಗೆ ಇಳಿಯಿತು. 113 ಮಿಲಿಯನ್ ಯುನಿಟ್ಸ್ ಪ್ರತಿ ವರ್ಷ ನಮ್ಮ consumption ಇದೆ. Coorg is the least power consumed district. That is one. ಇನ್ನು ಎರಡನೆಯದು ನೀವು ಎಲ್ಲಾ 31 ಜಿಲ್ಲೆಗಳನ್ನು ತೆಗೆದುಕೊಳ್ಳಿ ಯಾವುದಾದರೊಂದು ಜಿಲ್ಲೆ. ಶೇಕಡ ನೂರರಷ್ಟು ಕಲೆಕ್ಷನ್ ಆಗಿರತಕ್ಕಂಥ ಜಿಲ್ಲೆ ಇದ್ದರೆ ಅದು ಕೊಡಗು ಜಿಲ್ಲೆ. ಅಲ್ಲಿ industries ಇಲ್ಲ. ಈ ಹಿನ್ನೆಲೆಯಲ್ಲಿ ನನ್ನ ಕಾಲದಲ್ಲಿ ಅಂದು "ಸಿಂಗ್" ಎಂದು ಹೇಳತಕ್ಕಂಥವರು Chairman ಆಗಿದ್ದರು. ಶೇಕಡ ನೂರರಷ್ಟು ಕಲೆಕ್ಷನ್ ಆಗಿರತಕ್ಕಂಥ ಜಿಲ್ಲೆಗೆ ಯಾವುದಾದರೊಂದು incentives ಕೊಡುತ್ತೀರಾ ಎಂದು ಕೇಳಿದರೆ ಅವರು "ನಮ್ಮಲ್ಲಿ ಒಂದು ಪದ್ಧತಿ ಇದೆ ಆ ಪ್ರಕಾರ "we are going to give hundred per cent supply of electricity without any loadshedding to Coorg district" ಎಂದು ಹೇಳಿದರು. ಅದು ಸುಮಾರು ವರ್ಷಗಳ ವರೆಗೆ ಬಂದಿತ್ತು. ಅದು ಕಾರ್ಯಗತ ಮಾಡಿಕೊಂಡು ಬಂದರು. ಆದರೆ ಈಗ ಅದನ್ನು ಮಾಡುತ್ತಿಲ್ಲ. ನಾನು 2–3 ಬಾರಿ ಏತಕ್ಕೋಸ್ಕರ ಅದನ್ನು ಮಾಡುತ್ತಿಲ್ಲವೆಂದು ಕೇಳಿದ್ದೇನೆ. ಬಹಶ: ಅಧಿಕಾರಿಗಳು ಕೆಲವು ಸಂದರ್ಭದಲ್ಲಿ ಅಲ್ಲಿ ಇಲ್ಲಿ ಮಾಡಿಕೊಂಡು ಹೋಗುತ್ತಿದ್ದಾರೆ. Even this has not been done. ಅದರ ಬಗ್ಗೆ ಮನಹರಿಸಿ ಅಷ್ಟೆ ಬಾಕಿ ಏನೂ ಇಲ್ಲ. ಈಗ 'Cultural Tourism' ಮಾಡಬೇಕು, 'Eco Tourism' ಮಾಡಬೇಕು ಆದರ 'Mass Tourism' ಆಗುತ್ತಿರುವುದು it is nothing but cultural alienation and cultural encroachment. ಅದರ ಬಗ್ಗೆ ಗಮನಹರಿಸಬೇಕಾಗಿರತಕ್ಕಂಥದ್ದು ಬಹಳ ಮುಖ್ಯ. ಅವರು ಹೇಳಿದ್ದಕ್ಕಷ್ಟೇ Supplement ಮಾಡಿದ್ದೇನೆ.

**ಶ್ರೀ ಟಿ. ಜಾನ್:–** ಮಾನ್ಯ ಸಭಾಪತಿಗಳೆ, ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ನೀಡುವ ₹ 15 ಕೋಟಿ ಸಾಲವನ್ನು ಕನಿಷ್ಠಪಕ್ಷ ₹ 25 ಕೋಟಿಗಳಿಗೆ ಏರಿಸಬೇಕೆಂದು ಒತ್ತಾಯಿಸುತ್ತಿದ್ದೇನೆ.

ಮಾನ್ಯ ಸಭಾಪತಿಗಳೆ, ಕೊಡಗು ಜಿಲ್ಲೆಯಲ್ಲಿ ಭತ್ತದ ಬೆಳೆ ಬೆಳೆಯಲು ಸೂಕ್ತವಾದ ಹವಾಮಾನ ಹಾಗೂ ಗದ್ದೆಗಳು ಕೂಡ ಹೆಚ್ಚಾಗಿವೆ. ಆದರೆ, ಭತ್ತವನ್ನು ಬೆಳೆದು ಬೆಳೆ ತೆಗೆಯುವಾಗ ಸೂಕ್ತ ಮಾರುಕಟ್ಟೆ ಮತ್ತು ಬೆಲೆಯಿಲ್ಲದೆ ಕೃಷಿಕ ನಷ್ಟ ಅನುಭವಿಸುತ್ತಿದ್ದಾನೆ. ಇದರಿಂದ ಜಿಲ್ಲೆಯಲ್ಲಿ ಭತ್ತದ ಬೆಳೆಯನ್ನು ಬೆಳೆಯಲು ಯಾರು ಮುಂದೆ ಬರುತ್ತಿಲ್ಲ. ಆದ್ದರಿಂದ ಜಿಲ್ಲೆಯಲ್ಲಿ ಭತ್ತದ ಬೆಳೆಯನ್ನು ಬೆಳೆಯುವ ಕೃಷಿಕನಿಗೆ ಪ್ರೋತ್ಸಾಹ ಧನವನ್ನು ಘೋಷಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಮಾನ್ಯ ಸಭಾಪತಿಗಳೆ, ಕಾಡು ಪ್ರಾಣಿ ದಾಳಿಗೆ ಮೃತಪಟ್ಟ ಕುಟುಂಬಕ್ಕೆ ₹ 2 ಲಕ್ಷ ರೂಪಾಯಿ ನಿಗದಿಪಡಿಸಿರುವುದು ತೀರಾ ಕಮ್ಮಿಯಾಗಿದೆ. ಕನಿಷ್ಠ ಪಕ್ಷ ₹ 5 ಲಕ್ಷಕ್ಕೆ ಏರಿಸಬೇಕೆಂದು ಒತ್ತಾಯಿಸುತ್ತಿದ್ದೇನೆ. ಅದೇ ರೀತಿ ಮಾನ್ಯ ಸಭಾಪತಿಗಳೆ ಕಾಡು ಪ್ರಾಣಿಗಳ ಹಾವಳಿಯಿಂದ ಆಗುವ ಬೆಳೆ ನಷ್ಟಕ್ಕೆ ನೀಡುವ ಪರಿಹಾರ ಮೊತ್ತವನ್ನು ₹ 25,000ಕ್ಕೆ ಹೆಚ್ಚಿಸಲಾಗಿದೆಯೆಂದು ಪ್ರಸ್ತಾಪ ಮಾಡಿರುವಿರಿ. ಆದರೆ ಮಲೆನಾಡು ಪ್ರದೇಶಗಳಲ್ಲಿ ಆಗಿಂದಾಗ್ಗೆ ಕಾಡು ಪ್ರಾಣಿಗಳ ಹಾವಳಿಯಿಂದ ಬೆಳೆ ನಷ್ಟವಾಗುತ್ತಿರುತ್ತದೆ. ಆದ್ದರಿಂದ ಆದ ಬೆಳೆ ನಷ್ಟವನ್ನು ಸಮೀಕ್ಷೆ ಮಾಡಿ ಅದಕ್ಕೆ ತಕ್ಕಂತೆ ಪರಿಹಾರವನ್ನು ನೀಡಿ ರೈತರಿಗೆ ಸಹಾಯ ಮಾಡಬೇಕೆಂದು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

ಮಾನ್ಯ ಸಭಾಪತಿಗಳೆ, ಮಡಿಕೇರಿ ದಸರಾ ಹಬ್ಬವನ್ನು ನಾಡ ಹಬ್ಬವನ್ನಾಗಿ ಆಚರಿಸುತ್ತಿರುವುದರಿಂದ ಸದರಿ ದಸರಾ ಹಬ್ಬವು ಅತೀ ವಿಜೃಂಭಣೆಯಿಂದ ನಾಡಿನ ಜನತೆಯೂ ಆಚರಿಸುತ್ತಿದ್ದಾರೆ. ಇದನ್ನು ವೀಕ್ಷಿಸಲು ರಾಜ್ಯ ಎಲ್ಲಾ ಕಡೆಯಿಂದ ಸಾವಿರಾರು ಪ್ರವಾಸಿಗರು ಆಗಮಿಸುತ್ತಿದ್ದಾರೆ. ಆದ್ದರಿಂದ ಮಡಿಕೇರಿ ದಸರಾ ಆಚರಣೆಗೆ ಆಯವ್ಯಯದಲ್ಲಿ

ಅನುದಾನವನ್ನು ನಿಗದಿ ಪಡಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಮಡಿಕೇರಿಯಲ್ಲಿ ನಡೆಯ ತಕ್ಕಂಥ ನಾಡಹಬ್ಬಕ್ಕೆ ಪ್ರತಿವರ್ಷ ಸರ್ಕಾರ ಅನುದಾನ ಕೊಡುತ್ತಿದೆ. ಅದು ತಮಗೆ ಗೊತ್ತಿರಬಹುದು.

**ಶ್ರೀ ಟಿ. ಜಾನ್:–** ಮಾನ್ಯ ಸಭಾಪತಿಯವರೆ, ಅದು ನನಗೆ ಗೊತ್ತಿದೆ. ಆದರೆ ಅದು ಸಿಗುತ್ತದೋ, ಇಲ್ಲವೋ, ಸಿಗುತ್ತದೋ ಇಲ್ಲವೋ, ಎನ್ನುವ ಗ್ಯಾರಂಟಿ ಇಲ್ಲ. ಅದಕ್ಕೊಂದು ಗ್ಯಾರಂಟಿಯಾಗಿ 5–10–15 ಕೋಟಿನೊ ಎಂದು  ಬಜೆಟ್‌ನಲ್ಲಿ ನಿಗದಿಪಡಿಸಿದರೆ ಒಳ್ಳೆಯದೆಂದು ಹೇಳುತ್ತಿದ್ದೇನೆ.

**ಶ್ರೀ ವಿ.ಆರ್. ಸುದರ್ಶನ್:–** ಮಾನ್ಯ ಸಭಾಪತಿಯವರೆ, ಹೇಗೆ ಮೈಸೂರು ದಸರಾಕ್ಕೆ ಹಣ ನಿಗದಿಯಾಗುತ್ತಿದೆ, ಅದೇ ರೀತಿ ಮಡಿಕೇರಿ ನಾಡ ಹಬ್ಬಕ್ಕೂ ಹಣ ನಿಗದಿಯಾಗಬೇಕೆಂದು ಅಲ್ಲವೇ?

**ಶ್ರೀ ಟಿ. ಜಾನ್:–** ಹೌದು.

**ಶ್ರೀ ಎಂ.ಸಿ. ನಾಣಯ್ಯ :–** ಮಾನ್ಯ ಸಭಾಪತಿಯವರೆ, ಸರ್ಕಾರ ಒಂದು ವಿಚಾರವನ್ನು ದಯಮಾಡಿ ಆಲೋಚನೆ ಮಾಡಬೇಕು. ನಾವು ಎಷ್ಟು ಅವಶ್ಯಕತೆ ಇದೆಯೋ ಆ ಅವಶ್ಯಕತೆಗನುಗುಣವಾಗಿ ಕೊಡಬೇಕಾಗಿರತಕ್ಕಂಥದ್ದು ಒಂದು ಭಾಗ. ನಾಡ ಹಬ್ಬ ಎಂದು ಹೇಳತಕ್ಕಂಥ ಸಂದರ್ಭದಲ್ಲಿ ಎಲ್ಲವನ್ನೂ ಕೂಡ ಸರ್ಕಾರದ ಹಣದಿಂದಲೇ ನಡೆಸಬೇಕೆನ್ನುವ ನಮ್ಮ ಚಿಂತನೆ ಇದೆಯಲ್ಲ ಅದನ್ನು ಹೊರಗೆ ಇಡಬೇಕಾಗುತ್ತದೆ. ಅದರಲ್ಲಿ ಎಲ್ಲರ ಜವಾಬ್ದಾರಿಕೆ, ಎಲ್ಲರ ಪಾಲು ಬೇಕು. ಅದರ ಮಧ್ಯದಲ್ಲಿ ಸರ್ಕಾರದಿಂದ ಅದಕ್ಕೂ ಕೂಡ ನಾವು ಹಣವನ್ನು ಕೇಳಬೇಕಾಗುತ್ತದೆ. ನಾನು ಮಂತ್ರಿಯಾಗಿದ್ದಾಗ ಎಷ್ಟು ಬೇಕೆಂದು ನಿಗದಿ ಮಾಡುತ್ತಿದ್ದೆ. ವರ್ಷದಿಂದ ವರ್ಷಕ್ಕೆ 20–25–30–40 ಲಕ್ಷ ಕೊಡುತ್ತಿದ್ದೆ. ದಯಮಾಡಿ ನಾನು ಒಂದು ವಿಚಾರವನ್ನು ಹೇಳುತ್ತೇನೆ. ದಯಮಾಡಿ ಯಾರೂ ಅಪಾರ್ಥ ಮಾಡಿಕೊಳ್ಳಬಾರದು. ಅದು ನನ್ನ ಜಿಲ್ಲೆ ಇರಲಿ ಬೇರೆ ಜಿಲ್ಲೆ ಇರಲಿ ಯಾವ ಹಣವನ್ನು ಇಡುತ್ತೇವೆ ಅದು

ಸದ್ವಿನಿಯೋಗ ಮಾಡುವಂಥದ್ದು ಬಹಳ ಮುಖ್ಯ. ಇದು ಕಡೆಗೆ ದುರುಪಯೋಗ ಆಗತಕ್ಕಂಥ ಪರಿಸ್ಥಿತಿಯ ಬಗ್ಗೆ ದಯಮಾಡಿ ಗಮನಹರಿಸ ಬೇಕಾಗುತ್ತದೆ. ಶ್ರೀಮತಿ ಶೋಭಾರವರಿಗೆ ಇದರ ಬಗ್ಗೆ ಬಹಳ ಚೆನ್ನಾಗಿ ಗೊತ್ತಿದೆ. ಏಕೆಂದರೆ ಅವರು ಮೈಸೂರಿನ ಜವಾಬ್ದಾರಿಯನ್ನು ಹೊತ್ತಿದ್ದವರು. ಆ ಸಂದರ್ಭದಲ್ಲಿ ಹಣವನ್ನು ಹೇಗೆಲ್ಲಾ ದುರುಪಯೋಗ ಆಗುತ್ತದೆ ಎನ್ನುವಂಥದ್ದರ ಬಗ್ಗೆ ಅವರಿಗೂ ಸಾಕಷ್ಟು ಮಾಹಿತಿ ಇದೆ. ಇದರ ಬಗ್ಗೆ ನೀವು ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಸರ್ಕಾರದ ಹಣ ಇದೆಯಲ್ಲ ಅದು ಈ ತರಹದ ಚಿಲ್ಲಾಟಕ್ಕೆ ಉಪಯೋಗವಾಗುವಂಥದ್ದಾಗ ಬಾರದು. ಜನರ ಪಾತ್ರ ಅದರಲ್ಲಿ ಹೆಚ್ಚಿಗೆ ಇರಬೇಕೆಂದು ನಮ್ಮೆಲ್ಲರ ಅಭಿಪ್ರಾಯವಾಗಬೇಕು. ಸರ್ಕಾರ ಹಣ ಕೊಡುತ್ತಿದೆ. ಅದನ್ನು ನೀವು ಹೆಚ್ಚು ಮಾಡಬೇಕೆಂದರೆ ಎಷ್ಟು ಹೆಚ್ಚು ಎಂದು ನಿಮ್ಮ ಅನುಗುಣಕ್ಕೆ ತಕ್ಕಂತೆ ಸರ್ಕಾರ ಕೊಡಲಿ.

ಮಾನ್ಯ ಸಭಾಪತಿಯವರೆ, ಮಾನ್ಯ ನಾಣಯ್ಯನವರು ಹೇಳಿದ್ದು ಸರಿ. ನಾನು ಪ್ರತಿ ವರ್ಷ ನಿಗದಿ ಮಾಡಿ ಎಂದು ಹೇಳಿದರೆ ಸರ್ಕಾರ ಮಾಡುತ್ತದೆಯೇ? ನಾನು ಹೇಳಿದ್ದೆಲ್ಲಾ ಸರ್ಕಾರ ಅಲ್ಲಿ ಪಾಸ್ ಮಾಡುತ್ತದೆಯೇ? ಏನೂ ಇಲ್ಲ. ಕೊನೆಗೆ ಅವರು ನನಗೆ 5–10 ಲಕ್ಷ ಕೊಟ್ಟರೆ ಕೊಡಬಹುದು, ಇಲ್ಲದಿದ್ದರೆ ಬಿಡಬಹುದು. ನಾವು ಕೇಳುವುದು ಕೇಳಬೇಕಷ್ಟೆ.

**ಶ್ರೀ ಎಸ್.ಆರ್. ಪಾಟೀಲ್** :– ಮಾನ್ಯ ಜಾನ್‌ರವರೆ, ಏಕೆ ಚಿಂತೆ ಮಾಡುತ್ತೀರಿ? ನೀವು ಕೇಳಿದರೆ ಕೊಡುತ್ತಾರೆ.

**ಶ್ರೀ ಟಿ. ಜಾನ್** :– ಕೇಳಿದರೆ ಕೊಡುತ್ತಾರೆ ಅದು ವಿಚಾರ ಬೇರೆ. ಆದರೆ 5–10 ಲಕ್ಷ ಎಂದು ನಿಗದಿ ಪಡಿಸಿದರೆ ಧೈರ್ಯವಾಗಿ ಮುಂದಕ್ಕೆ ಕೆಲಸ ಮಾಡಬಹುದು. ಕೊನೆಗೆ ದಸರಾ ಆದಮೇಲೆ ಗ್ರ್ಯಾಂಟ್ ಬರುತ್ತದೆ. ಅವರಿಗೆ ಮುಂದೆ ದುಡ್ಡು ಬರುತ್ತದೋ ಇಲ್ಲವೋ ಎಂದು ಸಂದೇಹ ಇರುತ್ತದೆ. ಅದು ಇರಬಾರದೆಂದು ನನ್ನ ಕೋರಿಕೆಯಷ್ಟೆ. ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಕೊಡಗು ಜಿಲ್ಲೆಗೆ ದಿನಾಂಕ 15–11–2010 ರಂದು ಕೊಡಗು

ಜಿಲ್ಲೆಯ ಹೆಬ್ಬಾಲೆ ಗ್ರಾಮದ ಚಿಕ್ಕಳುವಾರದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಶಂಕುಸ್ಥಾಪನೆಯನ್ನು ನೆರವೇರಿಸಲು ಬಂದಾಗ ಜಿಲ್ಲೆಯ ಅಭಿವೃದ್ಧಿಗೆ ₹ 100 ಕೋಟಿಯನ್ನು ಕೇಳಿದಾಗ ನೂರು ಕೋಟಿ ಏಕೆ, 500 ಕೋಟಿಯನ್ನು ಬಿಡುಗಡೆ ಮಾಡುತ್ತೇವೆಂದು ಘೋಷಣೆ ಮಾಡಿದ್ದಾರೆ. ಆದರೆ ಘೋಷಣೆಯು ಇನ್ನೂ ಅನುಷ್ಠಾನಗೊಂಡಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಜನತೆಗೆ ನೀಡಿದ ವಾಗ್ದಾನವನ್ನು ಈಡೇರಿಸಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ತಕ್ಷಣವೇ ಬಿಡುಗಡೆ ಮಾಡಬೇಕಾಗಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಮಾನ್ಯ ಸಭಾಪತಿಗಳೆ, ಸರ್ಕಾರವು ಈ ಕೂಡಲೇ ಕೊಡಗು ಜಿಲ್ಲೆಯ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯಪ್ರವೃತ್ತರಾಗದೆ ಇದ್ದರೆ ಅಲ್ಲಿನ ಕೆಲವೊಂದು ಪ್ರತ್ಯೇಕವಾದಿಗಳ ಬೇಡಿಕೆಗೆ ಸರ್ಕಾರವೇ ಪರೋಕ್ಷವಾಗಿ ಕುಮ್ಮಕ್ಕು ನೀಡಿದಂತಾಗುತ್ತದೆ. ಆದ್ದರಿಂದ ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಮೊನ್ನೆ ದಿನಾಂಕ 3ನೇ ತಾರಿಖು ನಮ್ಮ ಲೋಕಲ್ ಪತ್ರಿಕೆಯಲ್ಲಿ ಬಂದಂಥ ಒಂದು ಸುದ್ದಿ ಇದೆ. "ಕತ್ತಲೆಯಲ್ಲಿ ಕುಸಿದ ಶಾಲೆ ಕೊಠಡಿ". ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ 2ನೇ ಘಟನೆ. 'ಮೃತ್ಯೂಕೂಪದಲ್ಲಿ' ವಿದ್ಯಾಮಂದಿರ. ಅಲ್ಲಿನ ಹಳೆಯ ಬಿಲ್ಡಿಂಗ್ ಕುಸಿದು ಬಿದ್ದಿದೆ. ಅಲ್ಲಿ ರಾತ್ರಿ ಹೊತ್ತು ಇರುವುದರಿಂದ ಮಕ್ಕಳು ಯಾರೂ ಇರಲಿಲ್ಲ. ಇಲ್ಲದಿದ್ದರೆ ಅಲ್ಲಿನ ಮಕ್ಕಳಿಗೆ ಅಪಾಯ ಆಗುತ್ತಿತ್ತು. ಇದು ಬರೀ ಒಂದು ಶಾಲೆಗೆ ಮಾತ್ರ ಅನ್ವಯಿಸುವುದಿಲ್ಲ. ಬಹಳಷ್ಟು ಶಾಲೆಗಳು ಅಲ್ಲಿ ಬೀಳುವ ಅಂಚಿನಲ್ಲಿವೆ. ಅವುಗಳನ್ನು ಆದಷ್ಟು ಬೇಗ ದುರಸ್ಥಿ ಮಾಡಿಸಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತ ನನಗೆ ಎರಡು ಮಾತುಗಳನ್ನಾಡಲು ಅನುಮತಿ ಕೊಟ್ಟಂಥ ತಮ್ಮೆಲ್ಲರಿಗೂ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ದೊಡ್ಡರಂಗೇಗೌಡರು ನಾಳೆ ಮಾತನಾಡಿದರೆ ಒಳ್ಳೆಯದೆಂದು ಎಲ್ಲರೂ ಹೇಳುತ್ತಿದ್ದಾರೆ. ದೊಡ್ಡರಂಗೇಗೌಡರು ಬಹಳ ಸ್ವಾರಸ್ಯವಾಗಿ ಸ್ವಲ್ಪ ಮಾತುಗಳಲ್ಲಿ ಜಾಸ್ತಿ ವಿಷಯಗಳನ್ನು ತಿಳಿಸುತ್ತಾರೆ. ಅವರಿಗೆ ನಾಳೆ ಅವಕಾಶ ಕೊಡೋಣ. ಸದನವನ್ನು ನಾಳೆ 11–00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಾಯಂಕಾಲ 7 ಗಂಟೆ 46 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಂಗಳವಾರ ದಿನಾಂಕ 8ನೇ ಮಾರ್ಚ್ 2011ರಂದು ಬೆಳಿಗ್ಗೆ 11–00 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)**